ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ನಮ್ಮ ದಿನನಿತ್ಯದ ಜೀವನದಲ್ಲಿ ಹಲವಾರು ಅನಾರೋಗ್ಯಕ್ಕೆ ಕಾರಣವಾಗಬಲ್ಲ ಭೋಜನವಿಧಾನಗಳಿವೆ. ಇವುಗಳನ್ನು ಸರಿಪಡಿಸಿಕೊಳ್ಳುವುದು ಸ್ವಾಸ್ಥ್ಯರಕ್ಷಣೆಗೆ ಅವಶ್ಯಕ

ಆಳ-ಅಗಲ ಸುಪ್ರೀಂ ಕೋರ್ಟ್ ಮಹಿಳಾ ನ್ಯಾಯಮೂರ್ತಿ ಒಬ್ಬರೇ!

ತಮಿಳುನಾಡಲ್ಲಿ ಪಂಚಕೋನ ಹಣಾಹಣಿ 8
ಮೀಸಲು ಮಿತಿ ಮರುಪರಿಶೀಲನೆ: ವಿಚಾರಣೆ ಶುರು 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
50,395 ▼	14,929 ▼	₹46,260 (ಬೆಂಗಳೂರು)	₹69,000 (ಬೆಂಗಳೂರು)	72.46 ▲

ಕೋವಿಡ್ ಎರಡನೇ ಅಲೆಯ ಮುನ್ಸೂಚನೆ • ಮಾರ್ಗಸೂಚಿ ಪಾಲಿಸದಿದ್ದರೆ ದಂಡ: ಬಿಎಸ್‌ವೈ

ರಾತ್ರಿ ಕರ್ಫ್ಯೂ: 17 ರ ಬಳಿಕ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆಯ ಮುನ್ಸೂಚನೆ ಖಚಿತವಾಗಿದ್ದು, ಇದಕ್ಕೆ ಕಡಿವಾಣ ಹಾಕಲು ಸಾರ್ವಜನಿಕರು ಸಹಕರಿಸದಿದ್ದರೆ, ದಂಡ ವಿಧಿಸುವುದು ಅನಿವಾರ್ಯ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎಚ್ಚರಿಕೆ ನೀಡಿದ್ದಾರೆ.



ವಿಧಾನಸೌಧದಲ್ಲಿ ಸೋಮವಾರ ತಜ್ಞರ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ಕೋವಿಡ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಮನವಿ ಮಾಡಿದರು.

ಕೋವಿಡ್ ಸೋಂಕು ಮತ್ತೆ ಹೆಚ್ಚುತ್ತಿರುವುದರಿಂದ ಇದೇ 17 ರಂದು ಪ್ರಧಾನಿ ನರೇಂದ್ರ ಮೋದಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಮಾಲೋಚನೆ ನಡೆಸಲಿದ್ದಾರೆ. ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿರುವ ಕಡೆಗಳಲ್ಲಿ ರಾತ್ರಿ ಕರ್ಫ್ಯೂ ವಿಧಿಸಬೇಕೇ ಎಂಬ ಬಗ್ಗೆ ಆ ಸಭೆಯ ಬಳಿಕ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಬೀದರ್, ಕಲಬುರ್ಗಿ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿವೆ. ಪಾಸಿಟಿವ್ ಪ್ರಕರಣಗಳು ಹೆಚ್ಚು ಇರುವ ಜಿಲ್ಲೆಗಳಲ್ಲಿ ಕೋವಿಡ್ ಲಸಿಕೆ ನೀಡಲು ಸಲಹೆ ಕೊಡಲಾಗಿದೆ ಎಂದು ಯಡಿಯೂರಪ್ಪ ತಿಳಿಸಿದರು.

ಸಾರ್ವಜನಿಕರು ಕೋವಿಡ್ ಮಾರ್ಗಸೂಚಿಯನ್ನು ಎಷ್ಟು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ ಎನ್ನುವುದನ್ನು ಇನ್ನು ಒಂದು ವಾರ ಗಮನಿಸುತ್ತೇವೆ. ಮಾಸ್ಕ್ ಧರಿಸುವುದೂ ಸೇರಿದಂತೆ ಮಾರ್ಗಸೂಚಿ ನಿಯಮಗಳನ್ನು ಪಾಲಿಸಬೇಕು. ಇಲ್ಲವಾದರೆ ದಂಡ ವಿಧಿಸಲಾಗುವುದು. ಜಾತ್ರೆಗಳು, ಸಾರ್ವಜನಿಕ ಸಮಾರಂಭಗಳಲ್ಲಿ ಜನರು ಮಾಸ್ಕ್ ಹಾಕುತ್ತಿಲ್ಲ. ಅಂತರ ಕಾಯ್ದುಕೊಳ್ಳುತ್ತಿಲ್ಲ ಎಂದು ಯಡಿಯೂರಪ್ಪ ಬೇಸರ ವ್ಯಕ್ತಪಡಿಸಿದರು.

ಲಸಿಕೆ ಪ್ರಮಾಣ ಹೆಚ್ಚಳಕ್ಕೆ ಕ್ರಮ: ಕಳೆದ 14 ದಿನಗಳಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದೆ. ಹೆಚ್ಚು ಪಾಸಿಟಿವ್ ಪ್ರಕರಣಗಳು ಇರುವ ಜಿಲ್ಲೆಗಳಲ್ಲಿ ಲಸಿಕೆ ನೀಡಿಕೆ ಪ್ರಮಾಣ ಹೆಚ್ಚಿಸಲು ಸಭೆಯಲ್ಲಿ ಅಧಿಕಾರಿಗಳು ಸಲಹೆ ನೀಡಿದರು. ಇದಕ್ಕೆ ಒಪ್ಪಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ತಾಂತ್ರಿಕ ಸಲಹಾ ಸಮಿತಿ ಸದಸ್ಯರಾದ ಡಾ.ಸಿ.ಎನ್. ಮಂಜುನಾಥ್, ಡಾ.ಸುದರ್ಶನ್, ಡಾ.ರವಿ, ಪ್ರೊ.ಗಿರಿಧರ್‌ಬಾಬು, ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿಗಳು, ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಮತ್ತು ಹಿರಿಯ ಅಧಿಕಾರಿಗಳು ಹಾಜರಿದ್ದರು.

ಮುನ್ನೆಚ್ಚರಿಕೆ ಕ್ರಮಗಳು

- ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವಿಕೆ ನಿಯಮ ಉಲ್ಲಂಘಿಸಿದರೆ ದಂಡ
- ಕೌಟುಂಬಿಕ, ಧಾರ್ಮಿಕ, ರಾಜಕೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರ ಸಂಖ್ಯೆ ಕುರಿತು ಮಾರ್ಗಸೂಚಿ ಪ್ರಕಾರ ಕಟ್ಟುನಿಟ್ಟಿನ ನಿಯಂತ್ರಣ
- ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಲಸಿಕೆ ಹಾಕಲು ತುರ್ತು ಕ್ರಮ
- ಮತದಾರರ ಪಟ್ಟಿ ಆಧರಿಸಿ, ಹಿರಿಯ ನಾಗರಿಕರನ್ನು ಗುರುತಿಸಿ ಲಸಿಕೆ ಹಾಕುವುದು
- ಗ್ರಾಮೀಣ ಪ್ರದೇಶ ಹಾಗೂ ಕೊಳೆಗೇರಿಗಳಲ್ಲಿ ಲಸಿಕೆ ಪ್ರಮಾಣ ಹೆಚ್ಚಿಸುವುದು.
- ಎಲ್ಲ ಇಲಾಖೆಗಳು ಹಾಗೂ ರೋಟರಿ, ಲಯನ್ಸ್ ಕ್ಲಬ್‌ಗಳಂತಹ ಸೇವಾ ಸಂಸ್ಥೆಗಳ ಸಹಯೋಗ ಪಡೆದು ಲಸಿಕೆ ಕಾರ್ಯಕ್ರಮ
- ಕೋವಿಡ್ ಪರೀಕ್ಷೆ ಪ್ರಮಾಣ ಹೆಚ್ಚಿಸುವುದು.
- ಸಂಪರ್ಕಿತರನ್ನು ಪತ್ತೆ ಹಚ್ಚುವ ಕಾರ್ಯವನ್ನು ಚುರುಕುಗೊಳಿಸುವುದು
- ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ನಿಗದಿತ ಸಂಖ್ಯೆ ಮೀರಿ ಪ್ರಯಾಣಿಕರನ್ನು ಕರೆದೊಯ್ಯಲು ನಿರ್ಬಂಧ

ಒಂದೇ ದಿನ 26 ಸಾವಿರಕ್ಕೂ ಹೆಚ್ಚು ಪ್ರಕರಣ

ನವದೆಹಲಿ: ದೇಶದಾದ್ಯಂತ ಸೋಮವಾರ ಒಂದೇ ದಿನ 26,291 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ. ಇದು ಕಳೆದ 85 ದಿನಗಳಲ್ಲೇ ಗರಿಷ್ಠ ಪ್ರಕರಣಗಳಾಗಿವೆ. ಮಹಾರಾಷ್ಟ್ರದಲ್ಲೇ 16,620 ಪ್ರಕರಣಗಳು ಪತ್ತೆಯಾಗಿವೆ. ಕೇರಳದಲ್ಲಿ 1,792 ಮತ್ತು ಪಂಜಾಬ್‌ನಲ್ಲಿ 1,492 ಪ್ರಕರಣಗಳು ದೃಢಪಟ್ಟಿವೆ. ಇದರಿಂದ ದೇಶದಲ್ಲಿ ಸೋಂಕಿತರ ಸಂಖ್ಯೆ 1.13 ಕೋಟಿ ದಾಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಸೋಮವಾರ 118 ಮಂದಿ ಸಾವಿಗೀಡಾಗಿದ್ದಾರೆ. ಇವರಲ್ಲಿ ಮಹಾರಾಷ್ಟ್ರದ 50 ಮಂದಿ, ಪಂಜಾಬ್‌ನ 20 ಮತ್ತು ಕೇರಳದ 15 ಮಂದಿ ಸೇರಿದ್ದಾರೆ. ಇದರಿಂದ, ಸಾವಿಗೀಡಾದವರ ಸಂಖ್ಯೆ 1.58 ಲಕ್ಷ ದಾಟಿದೆ. ಕಳೆದ ಐದು ದಿನಗಳಿಂದ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆಯೂ 2.19 ಲಕ್ಷ ದಾಟಿದೆ ಎಂದು ತಿಳಿಸಿದೆ.

ಮಹಾರಾಷ್ಟ್ರ, ಪಂಜಾಬ್, ಕರ್ನಾಟಕ, ಗುಜರಾತ್ ಮತ್ತು ತಮಿಳುನಾಡಿನಲ್ಲಿ ಪ್ರತಿ ದಿನ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿವೆ. ಹೊಸ ಪ್ರಕರಣಗಳಲ್ಲಿ ಶೇಕಡ 78.14ರಷ್ಟು ಈ ಐದು ರಾಜ್ಯಗಳಲ್ಲಿ ಪತ್ತೆಯಾಗಿವೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಇನ್ನಷ್ಟು ಸುದ್ದಿಗಳು | 4, 9

ಸ್ಪರ್ಧೆ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕಮಾಟಗೇರಿಯ ಗ್ರಾಮದೇವತೆ ದೇವಸ್ಥಾನದಲ್ಲಿ ಸೋಮವಾರ ನಡೆದ ಹೋರಿ ಬೆದರಿಸುವ ಸ್ಪರ್ಧೆಯನ್ನು ಸಾವಿರಾರು ಜನ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ/ಸತೀಶ ಬಡಿಗೇರ್

ಕಳಪೆ ಬೆಲ್ಲ ಜಪ್ತಿ ಮಾಡಿದ ಆಹಾರ ಸುರಕ್ಷತಾ ಅಧಿಕಾರಿಗಳು

ಮಂಡ್ಯ ಬೆಲ್ಲ ತಿರಸ್ಕರಿಸಿದ ಕೇರಳ

• ಎಂ.ಎನ್.ಯೋಗೇಶ್

ಮಂಡ್ಯ: ‘ಪಡಿತರ ಯೋಜನೆಯಡಿ ಕೇರಳದಲ್ಲಿ ವಿತರಣೆಯಾಗುತ್ತಿದ್ದ ‘ಮಂಡ್ಯ ಬೆಲ್ಲ’ವನ್ನು, ಮಾನವ ಬಳಕೆಗೆ ಯೋಗ್ಯವಲ್ಲ ಎಂಬ ಕಾರಣ ನೀಡಿ ಅಲ್ಲಿಯ ಸರ್ಕಾರ ತಿರಸ್ಕರಿಸಿದೆ. ಗುಜರಾತ್ ಈಗಾಗಲೇ ಮಂಡ್ಯ ಬೆಲ್ಲ ಖರೀದಿಯನ್ನು ನಿಷೇಧಿಸಿದ್ದು, ಕೇರಳ ಎರಡನೇ ರಾಜ್ಯವಾಗಿದೆ.

‘ಸಕ್ಕರೆ ನಾಡು’ ಎಂದು ಕರೆಸಿಕೊಳ್ಳುವ ಮಂಡ್ಯ ಜಿಲ್ಲೆ ಈಗ ಕಳಪೆ ಗುಣಮಟ್ಟದ, ರಾಸಾಯನಿಕಯುಕ್ತ ಬೆಲ್ಲ ಉತ್ಪಾದನೆಗೆ ಕುಖ್ಯಾತಿ ಪಡೆಯುತ್ತಿದೆ. ಕೇರಳದಲ್ಲಿ ಪಡಿತರ ಯೋಜನೆಯಡಿ ವಿತರಣೆಗೆ ‘ಮಂಡ್ಯ ಬೆಲ್ಲ’ ಎಂಬ ಬ್ರ್ಯಾಂಡ್‌ನಡಿ ಎಪಿಎಂಸಿ ವರ್ತಕರು ಬೆಲ್ಲ ಕಳುಹಿಸುತ್ತಿದ್ದರು. ಇಲ್ಲಿಯವರೆಗೆ 20 ಸಾವಿರ ಟನ್ ಬೆಲ್ಲ ಮಾರಾಟ ಮಾಡಲಾಗಿದೆ.

‘ಬೆಲ್ಲ ತಯಾರಿಕೆಯಲ್ಲಿ ನಿಷೇಧಿತ ರಾಸಾಯನಿಕ ಹಾಗೂ ಸಕ್ಕರೆ ಬಳಸಲಾಗಿದೆ ಎಂಬ ಅಂಶ ಪತ್ತೆಯಾಗಿರುವುದರಿಂದ ಮಂಡ್ಯ ಬೆಲ್ಲ ಖರೀದಿಯನ್ನು ಕೇರಳ ಸರ್ಕಾರ ಸ್ಥಗಿತಗೊಳಿಸಿದೆ. ಬೆಲ್ಲ ಕೊಂಡೊಯ್ದಿದ್ದ ನೂರಾರು ಲಾರಿಗಳು ವಾಪಸ್ ಬಂದಿವೆ’ ಎಂದು ಹೆಸರು ಹೇಳಲಿಚ್ಛಿಸದ ಎಪಿಎಂಸಿ ವರ್ತಕರೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

ಎಪಿಎಂಸಿ ಗೋದಾಮಿನಲ್ಲಿ ಚೀಲದಲ್ಲಿ ಕಳಪೆ ಬೆಲ್ಲ ಸಂಗ್ರಹಿಸಿಟ್ಟಿರುವುದು

ಮೂರು ದಿನಗಳ ಹಿಂದಷ್ಟೇ ಎಪಿಎಂಸಿ ಗೋದಾಮುಗಳ ಮೇಲೆ ಆಹಾರ ಸುರಕ್ಷತಾ ಅಧಿಕಾರಿಗಳು ದಾಳಿ ನಡೆಸಿದ್ದು ಕಳಪೆ ಬೆಲ್ಲ ಜಪ್ತಿ ಮಾಡಿದ್ದಾರೆ. ಕಳಪೆ ಬೆಲ್ಲ ತಯಾರಿಸುತ್ತಿದ್ದ ಆಲೆಮನೆಗಳು ಹಾಗೂ ಮಾರಾಟ ಮಾಡುತ್ತಿದ್ದ ಟ್ರೇಡಿಂಗ್ ಕಂಪನಿಗಳ ಬಾಗಿಲು ಮುಚ್ಚಿಸಿದ್ದಾರೆ.

> ಎಪಿಎಂಸಿ ಗೋದಾಮುಗಳಲ್ಲಿ ಪತ್ತೆಯಾದ ಬೆಲ್ಲದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು
> **ನಾಗರಾಜು,** ಆಹಾರ ಸುರಕ್ಷತಾ ಅಧಿಕಾರಿ

ಬೆಲ್ಲದ ದಂಧೆ: ‘ಮಂಡ್ಯ ಬೆಲ್ಲ’ ಹೆಸರಿನಲ್ಲಿ ವರ್ತಕರು ಹಾಗೂ ಕೆಲ ಆಲೆಮನೆ ಮಾಲೀಕರು ದೊಡ್ಡ ಮಟ್ಟದ ದಂಧೆ ನಡೆಸಿರುವುದು ಬೆಳಕಿಗೆ ಬಂದಿದೆ. ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಿಂದ ಕಳಪೆ ಬೆಲ್ಲ ತರಿಸಿ, ಅದಕ್ಕೆ ಸಕ್ಕರೆ, ರಾಸಾಯನಿಕ ಸೇರಿಸಿ ಪುನರ್ ಉತ್ಪಾದಿಸಿ ‘ಮಂಡ್ಯ ಬೆಲ್ಲ’ ಬ್ರ್ಯಾಂಡ್ ಹೆಸರಲ್ಲಿ ಮಾರಲಾಗಿದೆ ಎಂದು ಮೂಲಗಳು ತಿಳಿಸಿವೆ.

7ನೇ | ಪುಟ ನೋಡಿ

ಪಂಚಮಸಾಲಿ ಶ್ರೀ ಧರಣಿ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿಗೆ ಒತ್ತಾಯಿಸಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಸುದೀರ್ಘ 64 ದಿನಗಳ ಹೋರಾಟಕ್ಕೆ ಸೋಮವಾರ ತೆರೆ ಬಿದ್ದಿದೆ.

ಬೇಡಿಕೆ ಈಡೇರಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದ್ದಾರೆ. ಅಧಿವೇಶನದಲ್ಲಿ ಕೊಟ್ಟ ಮಾತನ್ನು ತಪ್ಪುವುದಿಲ್ಲ ಎಂಬ ವಿಶ್ವಾಸದಿಂದ ಧರಣಿಯನ್ನು ತಾತ್ಕಾಲಿಕವಾಗಿ ಅಂತ್ಯಗೊಳಿಸಿದ್ದೇವೆ’ ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ‘ಪ್ರಜಾವಾಣಿ’ಗೆ ತಿಳಿಸಿದರು.

8ನೇ | ಪುಟ ನೋಡಿ

‘ಪೆಟ್ರೋಲ್, ಡೀಸೆಲ್ ಜಿಎಸ್‌ಟಿ ವ್ಯಾಪ್ತಿಗೆ ಇಲ್ಲ’

ನವದೆಹಲಿ (ಪಿಟಿಐ): ಕಚ್ಚಾ ತೈಲ, ಪೆಟ್ರೋಲ್, ಡೀಸೆಲ್, ವಿಮಾನ ಇಂಧನ (ಎಟಿಎಫ್) ಮತ್ತು ನೈಸರ್ಗಿಕ ಅನಿಲವನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರುವ ಪ್ರಸ್ತಾವ ಈ ಹಂತದಲ್ಲಿ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

‘ಈ ಉತ್ಪನ್ನಗಳನ್ನು ಜಿಎಸ್‌ಟಿ ವ್ಯವಸ್ಥೆಯ ಅಡಿ ತರುವುದು ಯಾವಾಗಿನಿಂದ ಎಂಬ ಬಗ್ಗೆ ಜಿಎಸ್‌ಟಿ ಮಂಡಳಿ ಶಿಫಾರಸು ಮಾಡಬೇಕು ಎಂದು ಕಾನೂನು ಹೇಳುತ್ತದೆ. ಆದರೆ, ರಾಜ್ಯಗಳಿಗೂ ಪ್ರಾತಿನಿಧ್ಯ ಇರುವ ಜಿಎಸ್‌ಟಿ ಮಂಡಳಿಯು ಇದುವರೆಗೆ ಈ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎಂಬ ಶಿಫಾರಸು ಮಾಡಿಲ್ಲ’ ಎಂದು ನಿರ್ಮಲಾ ಅವರು ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ವಿವರಿಸಿದ್ದಾರೆ.

ಆದಾಯ ಸಂಗ್ರಹದ ಮೇಲೆ ಆಗುವ ಪರಿಣಾಮ ಸೇರಿದಂತೆ ಎಲ್ಲ ಬಗೆಯ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು, ಈ ಉತ್ಪನ್ನಗಳನ್ನು ಯಾವಾಗಿನಿಂದ ಜಿಎಸ್‌ಟಿ ವ್ಯವಸ್ಥೆ ಅಡಿಯಲ್ಲಿ ತರಬಹುದು ಎಂಬುದನ್ನು ಜಿಎಸ್‌ಟಿ ಮಂಡಳಿಯು ಪರಿಶೀಲಿಸಬಹುದು ಎಂದೂ ಅವರು ತಿಳಿಸಿದ್ದಾರೆ.

ಲೀಟರ್ ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕವು ಒಂದು ವರ್ಷದ ಹಿಂದೆ ₹ 19.98 ಇದ್ದಿದ್ದು ₹ 32.90ಕ್ಕೆ ಏರಿದೆ, ಡೀಸೆಲ್ ಮೇಲಿನ ಎಕ್ಸೈಸ್ ಸುಂಕವು ವರ್ಷದ ಹಿಂದೆ ₹ 15.83 ಇದ್ದಿದ್ದು ₹ 31.8ಕ್ಕೆ ಹೆಚ್ಚಳವಾಗಿದೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದ್ದಾರೆ.

ಮುಷ್ಕರ: ಬ್ಯಾಂಕಿಂಗ್ ಸೇವೆಗಳಿಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಗೆ (ಯುಎಫ್‌ಬಿಯು) ಸೇರಿದ ಎಲ್ಲ ಒಂಬತ್ತು ಸಂಘಟನೆಗಳು ಬ್ಯಾಂಕ್ ಮುಷ್ಕರಕ್ಕೆ ಬೆಂಬಲ ನೀಡಿವೆ. ಇದರಿಂದಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಶಾಖೆಗಳಲ್ಲಿ ಹಣ ವರ್ಗಾವಣೆ, ಸ್ವೀಕೃತಿ, ಸಾಲ ಮಂಜೂರಾತಿ, ಚೆಕ್ ಕ್ಲಿಯರೆನ್ಸ್ ನಂತಹ ಸೇವೆಗಳಿಗೆ ಸೋಮವಾರ ಅಡ್ಡಿಯಾಯಿತು.

ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಸಗೀಕರಣ ಪ್ರಸ್ತಾವ ವಿರೋಧಿಸಿ ನಡೆದ ಮುಷ್ಕರದಲ್ಲಿ ಉನ್ನತ ಮಟ್ಟದ ಅಧಿಕಾರಿಗಳನ್ನು ಹೊರತುಪಡಿಸಿ, ಇನ್ನುಳಿದ ಬಹುತೇಕ ಸಿಬ್ಬಂದಿ ಭಾಗವಹಿಸಿದ್ದರು. ಕೇಂದ್ರ ಸರ್ಕಾರದ ಮಾಲೀಕತ್ವದಲ್ಲಿ ಇರುವ ಎರಡು ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಪ್ರಸ್ತಾವ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿದೆ.

12ನೇ | ಪುಟ ನೋಡಿ

ಬಾಟ್ಲಾ ಹೌಸ್ ಪ್ರಕರಣ: ಅರಿಜ್ ಖಾನ್‌ಗೆ ಗಲ್ಲು ಶಿಕ್ಷೆ

ನವದೆಹಲಿ: 2008ರ ಬಾಟ್ಲಾ ಹೌಸ್ ಎನ್‌ಕೌಂಟರ್ ಪ್ರಕರಣದಲ್ಲಿ ಅಪರಾಧಿಯಾಗಿದ್ದ ಇಂಡಿಯನ್ ಮುಜಾಹಿದೀನ್ ಉಗ್ರ ಸಂಘಟನೆಯ ಸಹಚರ ಅರಿಜ್ ಖಾನ್ ಅಲಿಯಾಸ್ ಜುನೈದ್‌ಗೆ ಗಲ್ಲು ಶಿಕ್ಷೆ ವಿಧಿಸಿ ದೆಹಲಿ ನ್ಯಾಯಾಲಯ ತೀರ್ಪು ನೀಡಿದೆ. 9

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-6

‘ಹುಲಿ ಸೆರೆಯ ಬಳಿಕ ಕೊಡಗು ಭೇಟಿ’ 5
‘ನಾಡಗೀತೆ ಸಮಯ: ಶೀಘ್ರ ನಿರ್ಣಯಿಸಿ’ 7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ — **ಸುದ್ದಿ ಸ್ವಾರಸ್ಯ**
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



PANKAJAKASTHURI for life. for ayurveda Since 1988

ತೀವ್ರವಾದ ಮೊಣಕಾಲು ನೋವಿನಿಂದ ಸಂಪೂರ್ಣವಾಗಿ ಶಾಂತ ಸ್ಥಿತಿಗೆ ತಲುಪಲು ಸಹಾಯ ಮಾಡಿದ ಆರ್ಥೋಹರ್ಬ್‌ಗೆ ಧನ್ಯವಾದಗಳು.

ಸುಮಾರು ಎರಡು ವರ್ಷಗಳ ಕಾಲ ಸಹಿಸಿಕೊಂಡೆ, ಮೊಣಕಾಲು ಮತ್ತು ಬೆನ್ನು ನೋವಿನ ತೊಂದರೆ. ಕುಳಿತುಕೊಳ್ಳಲು, ಎದ್ದೇಳಲು, ನಡೆಯಲು ಮತ್ತು ವಾಹನ ಚಲಾಯಿಸಲು ಸಾಧ್ಯವಾಗದ ಕಠಿಣ ಪರಿಸ್ಥಿತಿ. ಆವಾಗ ಸಂಬಂಧಿಯೊಬ್ಬರು ಪಂಕಜಕಸ್ತೂರಿ ಆರ್ಥೋಹರ್ಬ್ ಮಾತ್ರೆಗಳನ್ನು ತೆಗೆದುಕೊಳ್ಳಲು ಸೂಚಿಸಿದರು. 6 ತಿಂಗಳು ನಿರಂತರ ಬಳಕೆಯ ನಂತರ, ನನ್ನ ಕಷ್ಟಗಳು ಬದಲಾಯಿತು. ಬೆಳಿಗ್ಗೆ ಸುಮಾರು 4 ಕಿಮೀ ನಡೆಯುತ್ತೇನೆ. ಮೆಟ್ಟಲುಗಳನ್ನು ಏರಿ ಇಳಿಯಲು ಮತ್ತು ವಾಹನ ಚಲಾಯಿಸಲು ಯಾವುದೇ ತೊಂದರೆ ಇಲ್ಲ. ಆರ್ಥೋಹರ್ಬ್ ಮಾತ್ರೆಗಳನ್ನು ನಿರಂತರವಾಗಿ ತೆಗೆದುಕೊಳ್ಳಲು ಪ್ರಾರಂಭಿಸಿದ ನಂತರ ನಾನು ಈ ಸಾಂತ್ವಾನ ಸ್ಥಿತಿಗೆ ಜಾರಿದೆ. ಆರ್ಥೋಹರ್ಬ್‌ಗೆ ಧನ್ಯವಾದಗಳು.

ಅರುಣ್ ಕುಮಾರ್
ವಯಸ್ಸು : 66,
ಮೈಸೂರು

ಇದು ಆರ್ಥೋಹರ್ಬ್ ನಿಂದ ಸಂತೃಪ್ತರಾದ ಲಕ್ಷಗಟ್ಟಲೆ ಗ್ರಾಹಕರಲ್ಲಿ ಉಪಯೋಗಿಯೊಬ್ಬರ ಅನುಭವ. ಎಷ್ಟೇ ದಿನದಿಂದ ಕೀಲು ನೋವಿದ್ದರೂ, ಆರ್ಥೋಹರ್ಬ್ ಟ್ಯಾಬ್ಲೆಟ್ಸ್ ನಿಂದ ಅದನ್ನು ನಿಯಂತ್ರಿಸಬಹುದು ಎಂದು ಇದರಿಂದ ರುಜುವಾತಾಗುತ್ತದೆ. ಕೆಮಿಕಲ್‌ಗಳಿಲ್ಲ, ಅಡ್ಡ ಪರಿಣಾಮಗಳಿಲ್ಲ, ಪಥ್ಯ ಇಲ್ಲ.

ಹೆಚ್ಚಿನ ವಿವರಗಳಿಗೆ, ಸಂಪರ್ಕಿಸಿ : 99019 46194

ಎಲ್ಲಾ ವೈದ್ಯಕೀಯ, ಆಯುರ್ವೇದ, ಅಪೊಲೊ ಫಾರ್ಮಸಿ ಮತ್ತು ಮೆಡ್‌ಪ್ಲಸ್ ಅಂಗಡಿಗಳಲ್ಲಿ ಸಿಗುತ್ತದೆ

ಸೇವನೆಯ ಪ್ರಮಾಣ: ಆರಂಭದಲ್ಲಿ, ದಿನಕ್ಕೆ 3 ಬಾರಿ 2 ಮಾತ್ರೆಗಳು ಊಟದ ನಂತರ ಪ್ರತಿದಿನ. ನೋವು ಕಡಿಮೆಯಾದ ಮೇಲೆ ದಿನಕ್ಕೆ ಎರಡುಬಾರಿ 2 ಮಾತ್ರೆಗಳು ಊಟದ ನಂತರ ಪ್ರತಿದಿನ

ಪಂಕಜಕಸ್ತೂರಿ ಆರ್ಥೋಹರ್ಬ್ ಮಾತ್ರೆಗಳು & ತೈಲ

ದಿನನಿತ್ಯ ಆರ್ಥೋಹರ್ಬ್ ಬಳಸಿ, ಕೀಲು ನೋವಿಗೆ ಗುಡ್‌ಬೈ ಹೇಳಿ.

Pankajakasthuri Herbals India (P) Ltd. • Ph: 0472 289 5301/6301 • info@pkhil.com • www.pankajakasthuri.in

ಆರ್ಥೋಹರ್ಬ್‌ನ ಫಲಿತಾಂಶವು ವ್ಯಕ್ತಿಯಿಂದ ವ್ಯಕ್ತಿಗೆ ಅವರ ಆರೋಗ್ಯ ಪರಿಸ್ಥಿತಿ ಮತ್ತು ರೋಗದ ಅವಧಿಯನ್ನು ಆಧರಿಸಿ ಬದಲಾಗಬಹುದು. ನಿಮ್ಮ ವೈದ್ಯರ ಸಲಹೆಯನ್ನು ಸಹ ನೀವು ಪಡೆಯಬಹುದು. ಇದು ನಿಜವಾದ ಅನುಭವದ ಮರು ಸೃಷ್ಟಿಯಾಗಿದೆ.

ಮೈದಾನ ಹೊಸದು, ಆಟ ಅದೇ

ಆಟದಲ್ಲಿ ಗೆಲ್ಲಲು ಬೇಕಾಗುತ್ತದೆ
ಕೌಶಲ್ಯ
ಪ್ರತಿಭೆ
ಅಭ್ಯಾಸ

ಇ-ಕ್ರೀಡೆ ಗೆಲ್ಲಲು ಕೂಡಾ ಇದು ಬೇಕಾಗುತ್ತದೆ
ಕೌಶಲ್ಯ
ಪ್ರತಿಭೆ
ಅಭ್ಯಾಸ

ಎರಡರಲ್ಲೂ ವ್ಯತ್ಯಾಸ ಬರೀ ನಿಮ್ಮ ಮನಸಿನಲ್ಲಿ

ಈ ಆಟವು ಹಣಕಾಸಿನ ಅಪಾಯದ ಒಂದು ಅಂಶವನ್ನು ಒಳಗೊಂಡಿರುತ್ತದೆ ಮತ್ತು ವ್ಯಸನಕಾರಿಯಾಗಿರಬಹುದು. ದಯವಿಟ್ಟು ಜವಾಬ್ದಾರಿಯುತವಾಗಿ ಮತ್ತು ನಿಮ್ಮ ಸ್ವಂತ ಅಪಾಯದಲ್ಲಿ ಆಟವಾಡಿ. ಷರತ್ತುಗಳು ಅನ್ವಯ. ಕೇವಲ 18+ ವರ್ಷ.

MPL

ಮಂಗಳವಾರದ ಉಷ್ಣಾಂಶ 32° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬಿಸಿಲಿನ ವಾತಾವರಣ. ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಒಣಹವೆ.

ಬುಧವಾರ	ಗುರುವಾರ	ಶುಕ್ರವಾರ
32° 16°	31° 18°	31° 18°

ಸೂರ್ಯೋದಯ: 6:20 ಸೂರ್ಯಾಸ್ತ : 6:30 ಚಂದ್ರೋದಯ: ಬೆ. 7:40 ಚಂದ್ರಾಸ್ತ: ರಾ. 7:50 ಸೋಮವಾರದ ಹವಾಮಾನ : ಗರಿಷ್ಠ 31° ಕನಿಷ್ಠ 18°

ಎಚ್‌ಎಎಲ್ ರಸ್ತೆ– ಭಿತ್ತಿಪತ್ರ ಪ್ರದರ್ಶಿಸಿ ಸ್ಥಳೀಯರಿಂದ ದಿಢೀರ್ ಪ್ರತಿಭಟನೆ

ತಂಪೆರೆಯುತ್ತಿದ್ದ 8 ಮರಗಳ ಹನನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ರಸ್ತೆಯಲ್ಲಿ ಸಂಚರಿಸುವವರಿಗೆ ತಂಪಾದ ಅನುಭವ ನೀಡುತ್ತಿದ್ದ ಎಂಟು ಮರಗಳನ್ನು ಬಿಬಿಎಂಪಿ ಭಾನುವಾರ ಕಡಿದಿದೆ. ಸುರಂಜನದಾಸ್ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿಗಾಗಿ ಮರ ಕಡಿದಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಮರಗಳ ಹನನವನ್ನು ವಿರೋಧಿಸಿ ಸ್ಥಳೀಯರು ಸೋಮವಾರ ದಿಢೀರ್ ಪ್ರತಿಭಟನೆ ನಡೆಸಿದರು. ಬಿಸಿಲನ್ನೂ ಲೆಕ್ಕಿಸದೆ ಮಧ್ಯಾಹ್ನದವರೆಗೆ ಭಿತ್ತಿಪತ್ರ ಪ್ರದರ್ಶಿಸಿ ಧರಣಿ ನಡೆಸಿದರು.

₹45 ಕೋಟಿ ವೆಚ್ಚದ ಈ ಕಾಮಗಾರಿ ಸಲುವಾಗಿ ಒಟ್ಟು 48 ಮರಗಳನ್ನು ತೆರವುಗೊಳಿಸುವುದಕ್ಕೆ ಬಿಬಿಎಂಪಿ ತೀರ್ಮಾನಿಸಿತ್ತು. ಬಳಿಕ ಮಾರ್ಗದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು 16 ಮರಗಳನ್ನು ಕಡಿಯುವುದನ್ನು ತಪ್ಪಿಸಲು ಕ್ರಮ ಕೈಗೊಂಡಿತ್ತು. ಏಳು ಮರಗಳನ್ನು ಸ್ಥಳಾಂತರ ಮಾಡಿತ್ತು. ಅಂತಿಮವಾಗಿ ಭಾರಿ ಗಾತ್ರದ 25 ಮರಗಳನ್ನು ಕಡಿಯಲು ಮುಂದಾಗಿತ್ತು. ಇದರಲ್ಲಿ ಈಗಾಗಲೇ ಎಂಟು ಮರಗಳನ್ನು ಎರಡು ದಿನಗಳಲ್ಲಿ ಕಡಿಯಲಾಗಿದೆ.

'ನಾನು ಶನಿವಾರ ಸಂಜೆ ಇಲ್ಲಿನ ರಸ್ತೆಯಲ್ಲಿ ಬರುವಾಗ ಅಂಚೆ ಕಚೇರಿ ಬಳಿ ಭಾರಿ ಗಾತ್ರದ ಮರವನ್ನು ಕಡಿದಿದ್ದರು. ಇದನ್ನು ನೋಡಿ ಅವಕ್ಕಾಗಿದ್ದೆ. ಭಾನುವಾರ ರಾತ್ರೋ ರಾತ್ರಿ ಮರಗಳನ್ನು ಕಡಿದಿದ್ದಾರೆ. ಸೋಮವಾರ ಬೆಳಿಗ್ಗೆ ನೋಡುವಾಗ ಇಲ್ಲಿ ಎಂಟು ಮರಗಳು ಧರೆಗುರುಳಿವೆ' ಎಂದು ವಿನಾಯಕ ನಗರದ ನಿವಾಸಿ ಸ್ವಾತಿ ದಾಮೋದರ್ 'ಪ್ರಜಾವಾಣಿ' ಬಳಿ ಬೇಸರ ತೋಡಿಕೊಂಡರು.

ಎಚ್‌ಎಎಲ್ ರಸ್ತೆ ಪಕ್ಕದ ಮರಗಳನ್ನು ಕಡಿದಿದ್ದನ್ನು ಖಂಡಿಸಿ ಸ್ಥಳೀಯರು ಸೋಮವಾರ ಪ್ರತಿಭಟನೆ ನಡೆಸಿದರು

ಅಭಿವೃದ್ಧಿ ಹೆಸರಿನಲ್ಲಿ ಇನ್ನಷ್ಟು ಮರಗಳನ್ನು ಕಡಿದರೆ ಭವಿಷ್ಯ ಹೇಗಿರಬಹುದು. ನಮಗೆ ಗ್ರೇಡ್ ಸಪರೇಟರ್ ಬೇಡ. ಮರಗಳು ಉಳಿಯಬೇಕು

ವಂಶಿಕೃಷ್ಣ, ಸುದ್ದಗುಂಟೆಪಾಳ್ಯ ನಿವಾಸಿ

ಎಚ್‌ಎಎಲ್ ರಸ್ತೆಯಲ್ಲಿ ಸಿಗ್ನಲ್‌ರಹಿತ ಕಾರಿಡಾರ್ ನಿರ್ಮಾಣಕ್ಕೆ 2017ರಲ್ಲೇ ಬಿಬಿಎಂಪಿ ಯೋಜನೆ ರೂಪಿಸಿತ್ತು. ಈ ಕಾಮಗಾರಿಗಾಗಿ ಎಚ್‌ಎಎಲ್ ರಸ್ತೆ ಪಕ್ಕದ ಮರಗಳನ್ನು ಕಡಿಯಲಾಗುತ್ತದೆ ಎಂಬ ಸುದ್ದಿ ತಿಳಿದು ಸ್ಥಳೀಯರು 2017ರ ಆ.13ರಂದು ಮಾನವ ಸರಪಣಿ ರಚಿಸಿ ಭಾರಿ ಪ್ರತಿಭಟನೆ ನಡೆಸಿದ್ದರು. ಆ ಬಳಿಕ ಬಿಬಿಎಂಪಿ ಈ ಯೋಜನೆಯನ್ನು ಮುಂದುವರಿಸಿರಲಿಲ್ಲ. ಈಗ ಮತ್ತೆ ಹಳೆ ಯೋಜನೆಯನ್ನು ಜಾರಿಗೆ ತರಲು ಮುಂದಾಗಿದೆ.

'ನಮಗೆ ಗ್ರೇಡ್ ಸಪರೇಟರ್‌ಗಿಂತ ಇಲ್ಲಿನ ಮರಗಳೇ ಮುಖ್ಯ. ಇವು ಒಂದೆರಡು ವರ್ಷಗಳಲ್ಲಿ ಬೆಳೆದವುಗಳಲ್ಲ. ರಾತ್ರೋರಾತ್ರಿ ಈ ಮರಗಳನ್ನು ಕಡಿಯುವುದು ಸುಲಭ. ರಾತ್ರೋ ರಾತ್ರಿ ಮರಗಳನ್ನು ಬೆಳೆಸಲು ಸಾಧ್ಯವೇ' ಎಂದು ಪ್ರಶ್ನಿಸುತ್ತಾರೆ ಇಲ್ಲಿಗೆ ಸಮೀಪದ ಅನ್ನಸಂದ್ರಪಾಳ್ಯ ನಿವಾಸಿ ಸ್ವಸ್ತಿಕ್ ಮಣಿ.

'ನಾವು ಹೈಕೋರ್ಟ್ ಆದೇಶದ ಪ್ರಕಾರ ತಜ್ಞರ ಸಮಿತಿ ರಚಿಸಿ ಅದರ ಶಿಫಾರಸಿನ ಆಧಾರದಲ್ಲೇ ಮರಗಳನ್ನು ಕಡಿಯುವುದಕ್ಕೆ ಅನುಮತಿ ನೀಡಿದ್ದೇವೆ' ಎಂದು ಬಿಬಿಎಂಪಿಯ ಉಪಅರಣ್ಯಸಂರಕ್ಷಣಾಧಿಕಾರಿ ರಂಗಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಇಲ್ಲಿ ಒಂದು ಮರ ಕಡಿದರೆ ಮೂರು ಸಸಿಗಳನ್ನು ನೆಟ್ಟು ಬೆಳೆಸಲು ಕ್ರಮ ಕೈಗೊಂಡಿದ್ದೇವೆ. ಇಲ್ಲಿನ ರಸ್ತೆಗಳ ಪಕ್ಕದಲ್ಲಿ ಈಗಾಗಲೇ ಸಸಿಗಳನ್ನು ನೆಟ್ಟಿದ್ದೇವೆ. ನಗರದಲ್ಲಿ ಅಭಿವೃದ್ಧಿ ಕಾಮಗಾರಿ ಸಲುವಾಗಿ ಕಡಿಯಬೇಕಾಗಿ ಬರುವ ಮರಗಳಿಗೆ ಪ್ರತಿಯಾಗಿ ಬೇರೆ ಕಡೆ ಸಸಿ ಬೆಳೆಸಲು ವಿಶೇಷ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದ್ದೇವೆ' ಎಂದರು.

'ಸಾರ್ವಜನಿಕರ ಗಮನಕ್ಕೆ ಬಾರದಂತೆ ಮರಕಡಿಯಲು ಅನುಮತಿ ನೀಡಿರುವುದು ಬಿಬಿಎಂಪಿಯ ತಪ್ಪು. ಅಭಿವೃದ್ಧಿ ಕಾರ್ಯಗಳೇನಿದ್ದರೂ ಜನರಿಗಾಗಿ ಇರಬೇಕು. ರಾತ್ರೋ ರಾತ್ರಿ ಮರಗಳನ್ನು ಕಡಿದಿದ್ದನ್ನು ನೋಡಿ ಸುಮ್ಮನಿರಲು ಸಾಧ್ಯವಿಲ್ಲ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಕುಂದ ಗೌಡ ತಿಳಿಸಿದರು. ಇಲ್ಲಿನ ಮರಗಳನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ಎಎಪಿ ಕೂಡಾ ಕೈ ಜೋಡಿಸಿದೆ.

'ಭಿತ್ತಿಪತ್ರದ ಮೂಲಕ ಮಾಹಿತಿ ನೀಡಲಿ'

'ತಜ್ಞರ ಅಭಿಪ್ರಾಯ ಪಡೆದು ಸಾಧ್ಯವಾದಷ್ಟು ಮರಗಳನ್ನು ಉಳಿಸಲು ಕ್ರಮ ಕೈಗೊಂಡಿವುದಾಗಿ ಬಿಬಿಎಂಪಿ ಹೇಳುತ್ತದೆ. ಆದರೆ, ಯಾವೆಲ್ಲ ಮರಗಳನ್ನು ಕಡಿಯಲಾಗುತ್ತದೆ ಎಂಬ ಬಗ್ಗೆ ಸ್ಥಳೀಯರಿಗೆ ಅರಿವೇ ಇರುವುದಿಲ್ಲ. ಎಲ್ಲರೂ ಬಿಬಿಎಂಪಿ ವೆಬ್‌ಸೈಟ್ ನೋಡುವುದಿಲ್ಲ. ಕಾಮಗಾರಿಗಾಗಿ ಯಾವ ಮರವನ್ನು ಕಡಿಯಲಾಗುತ್ತದೆ ಎಂಬ ಬಗ್ಗೆ ಅದರ ಬಳಿ ಭಿತ್ತಿಪತ್ರ ಅಂಟಿಸುವ ಮೂಲಕ ಜನರಿಗೆ ಮಾಹಿತಿ ನೀಡಬೇಕು. ಮಹಾರಾಷ್ಟ್ರದಲ್ಲಿ ಈ ಮಾದರಿಯನ್ನು ಅನುಸರಿಸಲಾಗುತ್ತಿದೆ' ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಸಲಹೆ ನೀಡಿದರು.

'ಇನ್ನುಳಿದ ಮರಗಳನ್ನು ಉಳಿಸಿಕೊಳ್ಳುತ್ತೇವೆ'

'ಸ್ಥಳೀಯರ ಅರಿವಿಗೇ ಬಾರದೇ ಎಂಟು ಮರಗಳನ್ನು ಬಿಬಿಎಂಪಿಯವರು ಕಡಿದುಬಿಟ್ಟಿದ್ದಾರೆ. ಆದರೆ, ಇನ್ನುಳಿದ ಮರಗಳನ್ನು ಕಡಿಯುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ಈ ಕುರಿತು ಕಾನೂನು ಹೋರಾಟಕ್ಕೂ ಸಿದ್ಧತೆ ನಡೆಸುತ್ತಿದ್ದೇವೆ' ಎಂದು ಸ್ವಾತಿ ತಿಳಿಸಿದರು.

ಜೊಮ್ಯಾಟೊ ಪ್ರಕರಣ; ಗ್ರಾಹಕಿ ಮೇಲೂ ಎಫ್‌ಐಆರ್

ಬೆಂಗಳೂರು: ಆಹಾರ ಪೂರೈಕೆ ತಡವಾಗಿದ್ದ ಕಾರಣಕ್ಕೆ ನಡೆದಿದೆ ಎನ್ನಲಾದ ಹಲ್ಲೆ ಪ್ರಕರಣದಲ್ಲಿ ಗ್ರಾಹಕಿ ಇಂದ್ರಾಣಿ ಅವರ ಮೇಲೂ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜೊಮ್ಯಾಟೊ ಕಂಪನಿ ಡೆಲಿವರಿ ಬಾಯ್ ಕಾಮರಾಜ್ ನನ್ನ ಮುಖಕ್ಕೆ ಗುದ್ದಿ ಹಲ್ಲೆ ಮಾಡಿದ್ದಾನೆ' ಎಂದು ಆರೋಪಿಸಿ ಇಂದ್ರಾಣಿ ಇತ್ತೀಚೆಗೆ ಠಾಣೆಗೆ ದೂರು ನೀಡಿದ್ದರು. ಇದಕ್ಕೆ ಪ್ರತಿದೂರು ನೀಡಿರುವ ಕಾಮರಾಜ್, 'ಗ್ರಾಹಕಿಯೇ ಸುಖಾಸುಮ್ಮನೇ ಜಗಳ ತೆಗೆದು, ನನ್ನ ಮೇಲೆಯೇ ಹಲ್ಲೆ ಮಾಡಿದ್ದಾರೆ. ಚಪ್ಪಲಿಯಿಂದ ಹೊಡೆದಿದ್ದಾರೆ' ಎಂದು ಆರೋಪಿಸಿದ್ದಾರೆ.

ಎರಡೂ ಪ್ರಕರಣಗಳ ತನಿಖೆ ಆರಂಭಿಸಿರುವ ಪೊಲೀಸರು, ಇಬ್ಬರ ಹೇಳಿಕೆಯನ್ನೂ ದಾಖಲಿಸಿಕೊಂಡಿದ್ದಾರೆ. ಆಹಾರ ಪೂರೈಕೆ ಸಂದರ್ಭದಲ್ಲಿ ಏನಾಯಿತು? ಎಂಬುದನ್ನು ತಿಳಿಯಲು ಘಟನಾ ಸ್ಥಳದಲ್ಲಿದ್ದ ಸಿ.ಸಿ. ಟಿ.ವಿ. ಕ್ಯಾಮೆರಾ ಪರಿಶೀಲನೆ ನಡೆಸುತ್ತಿದ್ದಾರೆ.

ನಿಧನ ವಾರ್ತೆ

ಇನ್‌ಸ್ಪೆಕ್ಟರ್ ಕೆ.ಸಿ. ಜಗದೀಶ್

ಬೆಂಗಳೂರು: ಜ್ಞಾನಭಾರತಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿ ಹಿರಿಯ ಇನ್‌ಸ್ಪೆಕ್ಟರ್ ಕೆ.ಸಿ. ಜಗದೀಶ್ (53) ಅನಾರೋಗ್ಯದಿಂದಾಗಿ ಭಾನುವಾರ (ಮಾ. 14) ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಯೋಜನೆ (ಪಶ್ಚಿಮ) ವಿಭಾಗ, ಜಂಟಿ ಆಯುಕ್ತರ (ಪಶ್ಚಿಮ)ರವರ ಕಚೇರಿ ಆವರಣ, 2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560020

ಸಂಖ್ಯೆ : ಕಾಪಾಅ/ಪಿ-ಡಬ್ಲ್ಯೂ/ಟೆಂಡರ್/19/2020-21 ದಿನಾಂಕ: 15-03-2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ (ಪಶ್ಚಿಮ) ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಅಸ್ತಿತ್ವದಲ್ಲಿರುವ ಜಾಹೀರಾತು ಫಲಕಗಳನ್ನು (ಅಂದಾಜು ಪ್ರಮಾಣ 218 ಸಂಖ್ಯೆ) ಅಗತ್ಯವಿರುವ ಅಟ್ಟಣಿಯೊಂದಿಗೆ, ಗ್ಯಾಸ್ ಕಟರ್/ ವಿದ್ಯುತ್ ಕಟರ್ ಬಳಸಿ ''**ಎಲ್ಲಿದೆಯೋ ಹೇಗಿದೆಯೋ**'' ಆಧಾರದಲ್ಲಿ ಸುತ್ತಲಿನ ಕಟ್ಟಡ ಮತ್ತಿತರ ಆಸ್ತಿ–ಪಾಸ್ತಿಗಳಿಗೆ ಹಾನಿಯಾಗದಂತೆ ತೆಗೆದುಹಾಕುವುದು ಮತ್ತು ತೆಗೆದುಹಾಕಲಾದ ಭಗ್ನಾವಶೇಷಗಳನ್ನು ಉಸ್ತುವಾರಿಯಲ್ಲಿರುವ ಅಭಿಯಂತರವರ ಸೂಚನೆಯಂತೆ ತಕ್ಷಣವೇ ದೊಡ್ಡದು, ಚಿಕ್ಕದ್ದು ಸೇರಿದಂತೆ ಪ್ರತಿಯೊಂದು ಅವಶೇಷಗಳನ್ನು ಸಾಗಣಿಕೆ ಮಾಡುವುದು. ವೆಚ್ಚವು ಅಟ್ಟಣಿಗೆ, ತುಂಡು ಮಾಡುವುದು ಮತ್ತು ವಿಲೇವಾರಿ ಅಂಶಗಳನ್ನು ಒಳಗೊಂಡಿರಬೇಕು. ಮೀಸಲಾತಿ ವರ್ಗ: **ಸಾಮಾನ್ಯ**. ಸ್ಟ್ಯಾಂಡರ್ಡ್ ಬಿಡ್ ದಾಖಲೆ: **ಕೆಡಬ್ಲ್ಯೂ**-1. ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ: **02 ತಿಂಗಳು.**	ಎಲ್ಲಿದೆಯೋ ಹೇಗಿದೆಯೋ ಆಧಾರದಂತೆ	1,00,000/-

ಕನಿಷ್ಟ ನಿಗದಿತ ದರವು ಪ್ರತಿ ಕೆ.ಜಿಗೆ **ರೂ.8.20** ಗಳಿಂದ ಕಡಿಮೆ ಇರಬಾರದು (ಅನ್ವಯವಾಗುವ ತೆರಿಗೆಯನ್ನು ಹೊರತುಪಡಿಸಿ).

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಿಂದ **ದಿನಾಂಕ: 18.03.2021**ರ ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.03.2021ರಂದು ಸಂಜೆ 4.00 ಗಂಟೆಯವರೆಗೆ.** (3) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **31.03.2021ರ ಸಂಜೆ 4.30 ಗಂಟೆಗೆ ಸಾಧ್ಯವಾದಲ್ಲಿ ಈ ಮೇಲಿನ ಕಚೇರಿಯಲ್ಲಿ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ (ಪಶ್ಚಿಮ) ವಿಭಾಗ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಿ.ಡಿ ಪ್ರಕರಣ: ಎಸ್‌ಐಟಿಗೆ 'ಎಫ್‌ಐಆರ್' ಬಲ

'ಹನಿಟ್ರ್ಯಾಪ್' ಆಯಾಮದಲ್ಲಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ಪ್ರಕರಣ ಸಂಬಂಧ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ದೂರಿನಡಿ ಸದಾಶಿವ ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಜವಾಬ್ದಾರಿಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಲಾಗಿದೆ. ವಿಚಾರಣೆಗಷ್ಟೇ ಸೀಮಿತವಾಗಿದ್ದ ಎಸ್‌ಐಟಿಗೆ 'ಎಫ್‌ಐಆರ್' ಬಲ ಬಂದಿದ್ದು, 'ಹನಿಟ್ರ್ಯಾಪ್' ಆಯಾಮದಲ್ಲಿ ತನಿಖೆ ಚುರುಕುಗೊಂಡಿದೆ.

ತಮ್ಮ ಆಪ್ತರಾದ ಮಾಜಿ ಶಾಸಕ ಎಂ.ವಿ. ನಾಗರಾಜು ಮೂಲಕ ಪೊಲೀಸರಿಗೆ ದೂರು ನೀಡಿದ್ದ ರಮೇಶ ಜಾರಕಿಹೊಳಿ, 'ಸಿ.ಡಿ. ಷಡ್ಯಂತ್ರದಲ್ಲಿ ಹಲವು ಜನರಿದ್ದು, ಅವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಿ' ಎಂದಿದ್ದರು.

ದೂರಿನನ್ವಯ, ಅಪರಾಧ ಸಂಚು (ಐಪಿಸಿ 34), ಕ್ರಿಮಿನಲ್ ಪಿತೂರಿ (ಐಪಿಸಿ 120ಬಿ), ಬೆದರಿಸಿ ಸುಲಿಗೆಗೆ ಯತ್ನ (ಐಪಿಸಿ 385), ಸಹಿ ನಕಲು ಮಾಡಿದ (ಐಪಿಸಿ 465) ಹಾಗೂ ಗೌರವ ಹಾಳು ಮಾಡಲು ನಕಲು ಮಾಡಿದ (ಐಪಿಸಿ 469) ಆರೋಪದಡಿ ಎಫ್‌ಐಆರ್ ದಾಖಲಾಗಿತ್ತು. ಈಗ ಅದೇ ಎಫ್‌ಐಆರ್ ಆಧರಿಸಿ ಎಸ್‌ಐಟಿ ತನಿಖೆ ಶುರು ಮಾಡಿದೆ.

ಜಾಹೀರಾತು ಕಂಪನಿ ಮೇಲೆ ದಾಳಿ: ಪ್ರಕರಣದಡಿ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದಿದ್ದ ಎಸ್‌ಐಟಿ ತಂಡ, ಕುಮಾರಕೃಪಾ ರಸ್ತೆಯಲ್ಲಿರುವ ಜಾಹೀರಾತು ಕಂಪನಿಯೊಂದರ ಮೇಲೆ ದಾಳಿ ಮಾಡಿ, ದಾಖಲೆ ಪರಿಶೀಲಿಸಿತು.

'ಸಿ.ಡಿ ತಯಾರಿಗೂ ಮುನ್ನ ಜಾಹೀರಾತು ಕಂಪನಿಯಲ್ಲಿ ವಿಡಿಯೊ ಸಂಕಲನ ಮಾಡಿರುವ ಮಾಹಿತಿ ಲಭ್ಯವಾಗಿತ್ತು. ಅದೇ ಕಾರಣಕ್ಕೆ ಕಚೇರಿ ಮೇಲೆ ದಾಳಿ ಮಾಡಿ ಹಲವು ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಅವುಗಳ ಪರಿಶೀಲನೆ ನಡೆಸಬೇಕಿದೆ' ಎಂದು ಮೂಲಗಳು ಹೇಳಿವೆ.

ಮೂವರು ವಶಕ್ಕೆ: ಸಿ.ಡಿಯಲ್ಲಿರುವ ಯುವತಿ, ಅವರ ಸ್ನೇಹಿತರ ಜೊತೆ ಒಡನಾಟ ಹೊಂದಿದ್ದರು ಎನ್ನಲಾದ ಮೂವರನ್ನು ಎಸ್‌ಐಟಿ ಅಧಿಕಾರಿಗಳು ಸೋಮವಾರ ವಶಕ್ಕೆ ಪಡೆದಿದ್ದಾರೆ. ಆಡುಗೋಡಿಯಲ್ಲಿರುವ ಸಿಸಿಬಿಯ ವಿಶೇಷ ಕೊಠಡಿಯಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಗೊತ್ತಾಗಿದೆ.

ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾಗದ ಎಫ್‌ಐಆರ್

ಸಿ.ಡಿ. ಬಗ್ಗೆ ನಾಗರಿಕ ಹಕ್ಕು ಹೋರಾಟ ಸಮಿತಿಯ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ನೀಡಿರುವ ದೂರಿನ ವಿಚಾರಣೆ ನಡೆಸುತ್ತಿರುವ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, ಇದುವರೆಗೂ ಎಫ್‌ಐಆರ್ ದಾಖಲಿಸಿಕೊಂಡಿಲ್ಲ.

ಇದರ ನಡುವೆಯೇ ರಮೇಶ ಜಾರಕಿಹೊಳಿ ನೀಡಿದ್ದ ದೂರಿನಡಿ ಸದಾಶಿವನಗರದಲ್ಲಿ ಎಫ್‌ಐಆರ್ ದಾಖಲಾಗಿದ್ದು, ಅದರ ತನಿಖೆಯನ್ನು ಎಸ್‌ಐಟಿ ಆರಂಭಿಸಿದೆ. ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾದರೆ, ಅದು ಸಹ ಎಸ್‌ಐಟಿಗೆ ಹಸ್ತಾಂತರವಾಗುವ ಸಾಧ್ಯತೆ ಇದೆ.

'ಹೇಳಿಕೆ ನೀಡುವಂತೆ ಯುವತಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ನಂತರವೇ ಮುಂದಿನ ಕ್ರಮ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸ್ವಯಂಪ್ರೇರಿತ ದೂರು ದಾಖಲು

ಧಾರವಾಡ: 'ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಹಿಳಾ ಆಯೋಗವೂ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲಿದೆ' ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಶ್ಯಾಮಲಾ ಎಸ್. ಕುಂದರ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಸಂಜೆ ನಡೆದ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿ.ಡಿಯಲ್ಲಿರುವ ಯುವತಿ ಸದ್ಯ ರಾಜ್ಯ ಮಹಿಳಾ ಆಯೋಗದಲ್ಲಿ ದೂರು ಸಲ್ಲಿಸಿದ್ದಾರೆ. ಅಲ್ಲಿ ವಿಚಾರಣೆ ನಡೆಯಲಿದೆ. ಅವರಿಗೆ ಸಹಕಾರಿಯಾಗಿಯೇ ನಾವು ಕೆಲಸ ಮಾಡುತ್ತೇವೆ. ಯಾವುದೇ ರಾಜಿ ಇಲ್ಲ' ಎಂದು ಭರವಸೆ ನೀಡಿದರು.

ಮುಚ್ಚಳಿಕೆ ಷರತ್ತು ಉಲ್ಲಂಘಿಸಿದ್ದಕ್ಕೆ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಚ್ಚಳಿಕೆ ಷರತ್ತು ಉಲ್ಲಂಘಿಸಿದ್ದಕ್ಕಾಗಿ ನಗರದ ಪೊಲೀಸರು, ಆರೋಪಿಯೊಬ್ಬನನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

'ಅಪರಾಧ ಪ್ರಕರಣವೊಂದರಲ್ಲಿ ಬಂಧಿತನಾಗಿ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿ ಜಬಿ ಅಲಿಯಾಸ್ ಜಬೀವುಲ್ಲಾ, 'ಯಾವುದೇ ರೀತಿಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ. ಸಾರ್ವಜನಿಕರಿಗೆ ತೊಂದರೆ ಕೊಡುವುದಿಲ್ಲ' ಎಂದು ಮುಚ್ಚಳಿಕೆ ಬರೆದುಕೊಟ್ಟು ಜಾಮೀನು ಪಡೆದುಕೊಂಡಿದ್ದ. ಆತನ ಹೆಸರು ಠಾಣೆಯ ರೌಡಿ ಪಟ್ಟಿಯಲ್ಲೂ ಇತ್ತು' ಎಂದು ಡಿ.ಜೆ. ಹಳ್ಳಿ ಠಾಣೆ ಪೊಲೀಸರು ಹೇಳಿದರು.

'ಜಾಮೀನು ಮೇಲೆ ಬಿಡುಗಡೆಯಾದ ಮೇಲೆ ಆರೋಪಿ ಪುನಃ ಅಪರಾಧ ಕೃತ್ಯ ಎಸಗಲಾರಂಭಿಸಿದ್ದ. ಸಾರ್ವಜನಿಕರಿಗೂ ತೊಂದರೆಯನ್ನುಂಟು ಮಾಡುತ್ತಿದ್ದ. ಹೀಗಾಗಿ, ಭದ್ರತಾ ಕಾಯ್ದೆಯಡಿ ಆತನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಮುಚ್ಚಳಿಕೆ ಷರತ್ತು ಉಲ್ಲಂಘಿಸಿದ್ದಕ್ಕಾಗಿ ಆರೋಪಿಯನ್ನು ಬಂಧಿಸಿದ ಮೊದಲ ಪ್ರಕರಣ ಇದಾಗಿದೆ' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 16ರಿಂದ 18ರವರೆಗೆ ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಮಲ್ಲಸಂದ್ರ, ಚಿಕ್ಕಸಂದ್ರ, ಎವೈಆರ್ ಬಡಾವಣೆ, ಸಪ್ತಗಿರಿ ಕಾಲೇಜು, ಜಗದೀಶ ಬಡಾವಣೆ, ರಮೇಶ ರಸ್ತೆ, ಪ್ರಶಾಂತ ನಗರ, ವಿಜಯ ಆಸ್ಪತ್ರೆ, ಮುತ್ತುರಾಯ ಸ್ವಾಮಿ ದೇವಸ್ಥಾನ, ಎಂ.ಟಿ. ಎಸ್. ಕಾಲೊನಿ, ಟಿ. ದಾಸರಹಳ್ಳಿ, ಪೈಪ್‌ಲೈನ್ ರಸ್ತೆ, ಭುವನೇಶ್ವರಿ ನಗರ, ಕಲ್ಯಾಣನಗರ, ಮಹೇಶ್ವರಮ್ಮ ದೇವಸ್ಥಾನ, ಅಯ್ಯಪ್ಪ ಕನ್ವೆನ್ಷನ್ ಹಾಲ್, ಆಫೀಸರ್ ಮಾಡೆಲ್ ಕಾಲೊನಿ, ಎಜಿಬಿಜಿ ಬಡಾವಣೆ ಸುತ್ತಮುತ್ತಲಿನ ಪ್ರದೇಶ.

ಬ್ಯಾಂಕ್ ನೌಕರರ ಪ್ರತಿಭಟನೆ

ಬೆಂಗಳೂರು: ರಾಷ್ಟ್ರವ್ಯಾಪಿ ಕರೆ ನೀಡಿರುವ ಮುಷ್ಕರ ಬೆಂಬಲಿಸಿ ನಗರದಲ್ಲೂ ಬ್ಯಾಂಕ್ ನೌಕರರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ನೌಕರರು, ಬ್ಯಾಂಕ್‌ಗಳ ಖಾಸಗೀಕರಣ ಖಂಡಿಸಿ ಘೋಷಣೆಗಳನ್ನು ಕೂಗಿದರು.

'2 ಬ್ಯಾಂಕ್‌ಗಳನ್ನು ಖಾಸಗೀಕರಣ ಮಾಡುವುದಾಗಿ ಬಜೆಟ್‌ನಲ್ಲಿ ಹೇಳಿದ್ದ ಕೇಂದ್ರ ಸರ್ಕಾರ, ಇದೀಗ 4 ಬ್ಯಾಂಕ್‌ಗಳನ್ನು ಖಾಸಗೀಕರಣ ಮಾಡಲು ಯತ್ನಿಸುತ್ತಿದೆ. ಈ ಕ್ರಮವನ್ನು ಖಂಡಿಸುತ್ತೇವೆ' ಎಂದು ಪ್ರತಿಭಟನಕಾರರು ಹೇಳಿದರು.

'ಬ್ಯಾಂಕ್‌ಗಳ ಖಾಸಗೀಕರಣ ಮಾಡಿದರೆ, ಸಾರ್ವಜನಿಕರ ಹಣವೆಲ್ಲವೂ ಖಾಸಗಿಯವರ ಪಾಲಾಗಲಿದೆ. ದೇಶದ ಆರ್ಥಿಕ ವ್ಯವಸ್ಥೆಗೆ ಮುಳುವಾಗಲಿದೆ. ಜನರ ಹಣಕ್ಕೆ ಯಾವುದೇ ಭದ್ರತೆಯೂ ಇರುವುದಿಲ್ಲ. ಹೀಗಾಗಿ, ಬ್ಯಾಂಕ್ ಖಾಸಗೀಕರಣ ಕ್ರಮವನ್ನು ಕೇಂದ್ರ ಸರ್ಕಾರ ಕೈಬಿಡಬೇಕು' ಎಂದು ಒತ್ತಾಯಿಸಿದರು.

ಮುಷ್ಕರದಿಂದಾಗಿ ನಗರದ ಬ್ಯಾಂಕ್‌ಗಳು ಬಂದ್ ಆಗಿದ್ದವು. ನಿರಂತರ ರಜೆ ನಂತರ ಸೋಮವಾರ ಬ್ಯಾಂಕ್ ತೆರೆಯಬಹುದೆಂದು ಬಂದಿದ್ದ ಗ್ರಾಹಕರಿಗೆ ನಿರಾಸೆ ಉಂಟಾಯಿತು. ಹಣ ಪಡೆಯಲು ಬಂದಿದ್ದ ಹಿರಿಯ ನಾಗರಿಕರು ಬ್ಯಾಂಕ್ ಎದುರು ಗಂಟೆಗಟ್ಟಲೇ ಕಾದು ವಾಪಸು ಹೋದರು.

ಆಶಾ ಕಾರ್ಯಕರ್ತೆಯರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಈ–ಸಮೀಕ್ಷೆ: ಸೂಕ್ತ ಸಂಭಾವನೆಗೆ ಆಗ್ರಹ

ಬೆಂಗಳೂರು: 'ಈ–ಸಮೀಕ್ಷೆ ಮಾಡಲು ಸೂಕ್ತ ಸಂಭಾವನೆ ನೀಡಬೇಕು' ಎಂದು ಒತ್ತಾಯಿಸಿ ಬಿಬಿಎಂಪಿ ವ್ಯಾಪ್ತಿಯ ಆಶಾ ಕಾರ್ಯಕರ್ತೆಯರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಪ್ರತಿಭಟನಕಾರರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಹಾಗೂ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತೆಯರು ನಿತ್ಯವೂ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ–ಸಮೀಕ್ಷೆ ಮಾಡಲು ಬೇಕಾದ ಮೊಬೈಲ್, ಟ್ಯಾಬ್ ಹಾಗೂ ಇಂಟರ್‌ನೆಟ್ ವ್ಯವಸ್ಥೆಯೂ ಇಲ್ಲ' ಎಂದು ದೂರಿದರು.

'ಆಶಾ ಕಾರ್ಯಕರ್ತೆಯರು ವಿಶ್ರಾಂತಿ ಇಲ್ಲದೇ ಕೊರೊನಾ ಸೋಂಕಿನ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ಅವರನ್ನೇ ಈ–ಸಮೀಕ್ಷೆಗೂ ಬಳಸಿಕೊಳ್ಳಲಾಗುತ್ತಿದೆ. ಇದಕ್ಕೆ ಕನಿಷ್ಠ ಸಂಭಾವನೆಯನ್ನೂ ನಿಗದಿ ಮಾಡಿಲ್ಲ' ಎಂದರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ದೂರವಾಣಿ / ಫ್ಯಾಕ್ಸ್: 080–27934470, 080–27935412,
ವೆಬ್‌ಸೈಟ್: www.hoskote.tpa.gov.in ಇಮೇಲ್: hoskote.pa@gmail.com
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು (ಗ್ರಾ) ಜಿಲ್ಲೆ

ಸಂಖ್ಯೆ: ಹೊಯೋಪ್ರಾ/ಭೂಉಬ/10/2020–21 ದಿನಾಂಕ: 15.03.2021

ಸಾರ್ವಜನಿಕ ಪ್ರಕಟಣೆ

ವಿಷಯ : ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ.ಸಂ	ಭೂ ಮಾಲೀಕರು / ಜಿ.ಪಿ.ಎ. ದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗುಂ
1	ಶ್ರೀ ರಾಮಸ್ವಾಮಿ; ಶ್ರೀ ಮುನೇಗೌಡ; ಶ್ರೀ ಸುರೇಶ; ಶ್ರೀ ದೇವರಾಜ; ಶ್ರೀ ಲೋಕೇಶ್ ಬಿನ್ ಲೇಟ್ ಗಂಗಪ್ಪ	ಹೊಸಕೋಟೆ	ನಂದಗುಡಿ	ವೆಂಕಟಾಪುರ	10/5	01–15
2					10/6	01–18
3					11 ರ ಪೈಕಿ	01–07
ಒಟ್ಟು						**04–00**

ಷರಾ:– ಸದರಿ ಜಮೀನುಗಳ ಅಕ್ಕಪಕ್ಕ ಅನೇಕ ಗೋದಾಮುಗಳು, ಕೈಗಾರಿಕೆ, ವಾಣಿಜ್ಯ ಸಂಸ್ಥೆಗಳು ಬಂದಿದ್ದು, ನಮ್ಮ ಜಮೀನುಗಳು ರಾಷ್ಟ್ರೀಯ ಹೆದ್ದಾರಿ 75 (4) ಹೊಂದಿಕೊಂಡಿದ್ದು, ನಾವು ಈ ಜಮೀನುಗಳಲ್ಲಿ ಕೈಗಾರಿಕೆ ಸ್ಥಾಪಿಸಿ ಹಲವು ಸಾರ್ವಜನಿಕರಿಗೆ ಉದ್ಯೋಗ ನೀಡಿ ದೇಶದ ಆರ್ಥಿಕತೆಯನ್ನು ಬಲ ಪಡಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/405/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಟಗಾರನ ಸೋಗಿನಲ್ಲಿ ಕಳವು; ಬಂಧನ

ಬೆಂಗಳೂರು: ಕ್ರಿಕೆಟ್ ಆಟಗಾರನ ಸೋಗಿನಲ್ಲಿ ಮೈದಾನದಲ್ಲಿ ಸುತ್ತಾಡಿ ಸಾರ್ವಜನಿಕರ ಮೊಬೈಲ್‌ಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಎಂ.ರವಿ (29) ಎಂಬಾತನನ್ನು ಜಾಲಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಬಸವೇಶ್ವರನಗರ ನಿವಾಸಿ ರವಿ, ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಚೇರಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಲಾಕ್‌ಡೌನ್‌ನಿಂದಾಗಿ ಕೆಲಸ ಹೋಗಿತ್ತು. ನಂತರ ಸಭೆ–ಸಮಾರಂಭಗಳಲ್ಲಿ ಅಲಂಕಾರದ ಕೆಲಸ ಮಾಡುತ್ತಿದ್ದ. ಅವನಿಂದ 4.50 ಲಕ್ಷ ಮೌಲ್ಯದ 38 ಮೊಬೈಲ್‌ಗಳಲ್ಲಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಜಪ್ತಿ ಮಾಡಲಾದ ಮೊಬೈಲ್‌ಗಳು

'ಮೊಬೈಲ್‌ಗಳನ್ನು ಮಾರಾಟ ಮಾಡುತ್ತಿದ್ದಾಗ ಬಂಧಿಸಲಾಗಿದೆ. ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನ, ಮಲ್ಲೇಶ್ವರ, ಜಯನಗರ, ಜಾಲಹಳ್ಳಿ, ಬಾಗಲಗುಂಟೆ ಹಾಗೂ ಇತರೆಡೆ ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದರು.

ಸ್ನೇಹಿತನ ಜೊತೆ ಸೇರಿ ಹತ್ಯೆ

ಬೆಂಗಳೂರು: ವರ್ತೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಚಂದ್ರಶೇಖರ್ (40) ಎಂಬುವವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಅವರ ಪತ್ನಿ ಪುಷ್ಪಾವತಿ (38) ಹಾಗೂ ಆಕೆಯ ಸ್ನೇಹಿತ ಮನು (42) ಎಂಬುವವರನ್ನು ಬಂಧಿಸಿದ್ದಾರೆ.

'ಆರೋಪಿ ಪುಷ್ಪಾವತಿ ಹಾಗೂ ಮನು ಸಲುಗೆಯಿಂದ ಇದ್ದರು. ತಮ್ಮ ಸಲುಗೆಗೆ ಅಡ್ಡಿಪಡಿಸಿದ್ದರೆಂಬ ಕಾರಣಕ್ಕೆ ಚಂದ್ರಶೇಖರ್ ಅವರನ್ನು ಫೆ. 21ರಂದು ಕೊಲೆ ಮಾಡಿದ್ದರು' ಎಂದು ವರ್ತೂರು ಪೊಲೀಸರು ಹೇಳಿದರು.

ತಲೆಗೆ ಪೆಟ್ಟಾಗಿ ಮನೆಯಲ್ಲೇ ವಿಶ್ರಾಂತಿ: 'ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ತಲೆ ಸುತ್ತಿ ಬಿದ್ದಿದ್ದ ಚಂದ್ರಶೇಖರ್ ತಲೆಗೆ ತೀವ್ರ ಪೆಟ್ಟಾಗಿತ್ತು. ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದ ಅವರು ಎರಡ್ಮೂರು ವರ್ಷಗಳಿಂದ ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದರು.'

'ಇಂಥ ಸಂದರ್ಭದಲ್ಲೇ ಪುಷ್ಪಾವತಿ, ಪಕ್ಕದ ಮನೆಯ ಮನು ಜೊತೆ ಸ್ನೇಹ ಬೆಳೆಸಿದ್ದಳು. ಅದೇ ವಿಚಾರವಾಗಿ ದಂಪತಿ ನಡುವೆ ಹಲವು ಬಾರಿ ಜಗಳ ಆಗಿತ್ತು. ಅದೇ ವಿಚಾರವನ್ನು ಮನು ಬಳಿ ಪ್ರಸ್ತಾಪಿಸಿದ್ದ ಪುಷ್ಪಾವತಿ, ಪತಿಯನ್ನು ಹತ್ಯೆ ಮಾಡಲು ಸಂಚು ರೂಪಿಸಿದ್ದಳು' ಎಂದೂ ಪೊಲೀಸರು ಹೇಳಿದರು.

ಅಸಹಜ ಸಾವೆಂದು ಕಥೆ ಕಟ್ಟಿದ್ದಳು: 'ಫೆ. 21ರಂದು ಮನೆಯಲ್ಲೇ ಚಂದ್ರಶೇಖರ್ ಮೇಲೆ ದಾಳಿ ಮಾಡಿದ್ದ ಆರೋಪಿಗಳು, ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಕೊಂದಿದ್ದರು' ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ಡ್ರಗ್ಸ್ ಆರೋಪಿಗಳಿಗೆ ಆಶ್ರಯ: ನೋಟಿಸ್

ಬೆಂಗಳೂರು: ಡ್ರಗ್ಸ್ ಪ್ರಕರಣಗಳಲ್ಲಿ ಬಂಧಿತರಾಗಿರುವ ವಿದೇಶಿ ಪ್ರಜೆಗಳಿಗೆ ನಗರದಲ್ಲಿ ಆಶ್ರಯ ನೀಡಿದ್ದ ಮನೆ ಹಾಗೂ ಫ್ಲ್ಯಾಟ್ ಮಾಲೀಕರಿಗೆ ಪೊಲೀಸರು ನೋಟಿಸ್ ನೀಡುತ್ತಿದ್ದಾರೆ.

ಇತ್ತೀಚಿನ ಡ್ರಗ್ಸ್ ಪ್ರಕರಣದಲ್ಲಿ ನೈಜೀರಿಯಾದ ಕೆಲ ಪ್ರಜೆಗಳು ಸಿಕ್ಕಿಬಿದ್ದಿದ್ದರು. ಹೊರ ರಾಜ್ಯ ಹಾಗೂ ಹೊರ ದೇಶಗಳ ಪೆಡ್ಲರ್ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಅವರು, ನಗರಕ್ಕೆ ಡ್ರಗ್ಸ್ ತರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಡ್ರಗ್ಸ್ ಪೂರೈಸುತ್ತಿದ್ದರು.

ಇದೇ ಆರೋಪಿಗಳು ನಗರದಲ್ಲಿ ನೆಲೆಸಿ ಕೃತ್ಯ ಎಸಗುತ್ತಿದ್ದರು. ಕೇಳಿದಷ್ಟು ಬಾಡಿಗೆ ನೀಡಿ ಮನೆ ಹಾಗೂ ಫ್ಲ್ಯಾಟ್‌ಗಳಲ್ಲಿ ವಾಸವಿದ್ದರು. ಆರೋಪಿಗಳ ಹಿನ್ನೆಲೆ ಹಾಗೂ ಕೆಲಸದ ಬಗ್ಗೆ ಮಾಲೀಕರು ಯಾವುದೇ ಮಾಹಿತಿ ಪಡೆಯುತ್ತಿರಲಿಲ್ಲ. ಇದು ಆರೋಪಿಗಳಿಗೆ ಮತ್ತಷ್ಟು ಅನುಕೂಲವಾಗಿತ್ತು. ಅದೇ ಕಾರಣಕ್ಕೆ ಪೊಲೀಸರು, ಇದೀಗ ಮಾಲೀಕರಿಗೆ ನೋಟಿಸ್ ನೀಡುತ್ತಿದ್ದಾರೆ. ನಿಗದಿತ ದಿನದೊಳಗೆ ಉತ್ತರ ನೀಡದಿದ್ದರೆ, ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

'ಯಾವುದೇ ವಿದೇಶಿ ಪ್ರಜೆಯಿದ್ದರೂ ಸೂಕ್ತ ದಾಖಲೆ ಪಡೆದು ಹಾಗೂ ದೇಶಕ್ಕೆ ಬಂದಿರುವ ಕಾರಣ ತಿಳಿದು ಬಾಡಿಗೆ ನೀಡಬೇಕು. ಬಾಡಿಗೆ ನೀಡಿದ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಬಾಡಿಗೆದಾರರ ಚಲನವಲನ ಬಗ್ಗೆಯೂ ನಿಗಾ ವಹಿಸಬೇಕು. ಡ್ರಗ್ಸ್ ತಡೆಗೆ ಪೊಲೀಸರ ಜೊತೆ ಸಹಕರಿಸಬೇಕು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ 'ಪ್ರಜಾವಾಣಿ'ಗೆ ತಿಳಿಸಿದರು.

ಇನ್‌ಸ್ಪೆಕ್ಟರ್ ವಿಕ್ಟರ್‌ಗೆ ನ್ಯಾಯಾಂಗ ಬಂಧನ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿರುವ ಬೆಂಗಳೂರು ಮಹಾನಗರ ಕಾರ್ಯಪಡೆ (ಬಿಎಂಟಿಎಫ್) ಇನ್‌ಸ್ಪೆಕ್ಟರ್ ವಿಕ್ಟರ್ ಸೈಮನ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಾರ್ಚ್ 9ರಂದು ವಿಕ್ಟರ್ ಅವರ ಮನೆ ಮೇಲೆ ದಾಳಿಮಾಡಿದ್ದ ಎಸಿಬಿ ಅಧಿಕಾರಿಗಳು ಶೋಧ ನಡೆಸಿದ್ದರು. ತನಿಖೆಗೆ ಸಹಕರಿಸದ ಆರೋಪದ ಮೇಲೆ ಮಾ.10ರಂದು ಅವರನ್ನು ಬಂಧಿಸಲಾಗಿತ್ತು. ಸೋಮವಾರದವರೆಗೂ ವಿಚಾರಣೆಗಾಗಿ ಆರೋಪಿ ಅಧಿಕಾರಿಯನ್ನು ಎಸಿಬಿ ತನಿಖಾ ತಂಡದ ವಶಕ್ಕೆ ನೀಡಿ ನ್ಯಾಯಾಲಯ ಆದೇಶ ಹೊರಡಿಸಿತ್ತು.

ಸೋಮವಾರ ಮಧ್ಯಾಹ್ನ ವಿಕ್ಟರ್ ಅವರನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯದ ಎದುರು ಎಸಿಬಿ ಅಧಿಕಾರಿಗಳು ಹಾಜರುಪಡಿಸಿದರು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶ ಹೊರಡಿಸಿದರು.

ಟೋಯಿಂಗ್‌ನಲ್ಲಿ ಅಕ್ರಮ: ಕ್ರಮಕ್ಕೆ ಒತ್ತಾಯ

ಬೆಂಗಳೂರು: 'ನಿಲುಗಡೆ ನಿರ್ಬಂಧಿಸಿರುವ ಸ್ಥಳಗಳಲ್ಲಿ ನಿಲ್ಲಿಸಿರುವ ವಾಹನಗಳ ಟೋಯಿಂಗ್ ಮಾಡುವ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದು, ಹಿರಿಯ ಅಧಿಕಾರಿಗಳು ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಲಂಚಮುಕ್ತ ಕರ್ನಾಟಕ ನಿರ್ಮಾಣ ವೇದಿಕೆಯ ರಾಜ್ಯ ಘಟಕದ ವಿ.ಆರ್. ಮರಾಠೆ ಒತ್ತಾಯಿಸಿದರು.

'ಟೋಯಿಂಗ್ ಮಾಡಲು ಬಳಸುವ ವಾಹನಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳ ಅನುಮತಿ ಪಡೆಯದೆ ಅತಿ ಹೆಚ್ಚು ಮಾರ್ಪಾಡು ಮಾಡಿ ಕಾನೂನುಬಾಹಿರವಾಗಿ ಬಳಸಲಾಗುತ್ತದೆ. ಸಂಚಾರ ಪೊಲೀಸ್ ಅಧಿಕಾರಿಗಳಾಗಲಿ, ಸಾರಿಗೆ ಇಲಾಖೆ ಅಧಿಕಾರಿಗಳಾಗಲಿ ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಮೋಟಾರು ವಾಹನ ಕಾಯ್ದೆ 1988ರ ಕಲಂ 52 (1)ರ ಪ್ರಕಾರ ಯಾವುದೇ ರೀತಿಯ ವಾಹನಗಳನ್ನು ನೋಂದಣಿ ಪ್ರಮಾಣ ಪತ್ರದಲ್ಲಿನ ಮಾನದಂಡಗಳಿಗೆ ವ್ಯತಿರಿಕ್ತವಾಗಿ ಮಾರ್ಪಾಡು ಮಾಡುವಂತಿಲ್ಲ' ಎಂದೂ ಹೇಳಿದರು.

ಕೋವಿಡ್: ಟೋಕನ್ ವಿತರಣೆ ಸ್ಥಗಿತ, ನಮ್ಮ ಮೆಟ್ರೊ ಪ್ರಯಾಣಿಕರಿಗೆ ಮುಂದುವರಿದ ಕಷ್ಟ

ಸ್ಮಾರ್ಟ್ ಕಾರ್ಡ್ ಕೊರತೆ: ಪ್ರಯಾಣಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣದಿಂದ ಟೋಕನ್ ವಿತರಣೆಯನ್ನು ನಿಲ್ಲಿಸಿರುವ ಬೆಂಗಳೂರು ಮೆಟ್ರೊ ರೈಲು ನಿಗಮವು ಈಗ ಸಮರ್ಪಕವಾಗಿ ಸ್ಮಾರ್ಟ್‌ಕಾರ್ಡ್ ಕೂಡ ಪೂರೈಸದ ಕಾರಣ ತೊಂದರೆ ಅನುಭವಿಸಬೇಕಾಗಿದೆ ಎಂದು ಪ್ರಯಾಣಿಕರು ದೂರಿದ್ದಾರೆ.

‘ಗೊರಗುಂಟೆಪಾಳ್ಯ ಮೆಟ್ರೊ ರೈಲು ನಿಲ್ದಾಣದಲ್ಲಿ ಇಂದು ಬೆಳಿಗ್ಗೆ ಹೋದಾಗ ಸ್ಮಾರ್ಟ್‌ಕಾರ್ಡ್ ಖಾಲಿ ಆಗಿವೆ ಎಂದು ಸಿಬ್ಬಂದಿ ಹೇಳಿದರು. ಟೋಕನ್ ಕೂಡ ವಿತರಣೆ ಮಾಡುತ್ತಿಲ್ಲ. ಪ್ರಯಾಣ ಮಾಡಲಾಗದೆ ವಾಪಸ್ ಬರಬೇಕಾಯಿತು’ ಎಂದು ಪ್ರಯಾಣಿಕರೊಬ್ಬರು ಹೇಳಿದರು.

‘ಗೊರಗುಂಟೆ ಪಾಳ್ಯ ಮಾತ್ರವಲ್ಲದೆ, ಜಾಲಹಳ್ಳಿ, ದಾಸರಹಳ್ಳಿ ನಿಲ್ದಾಣ ಸೇರಿದಂತೆ ನಗರದ ಬಹುತೇಕ ನಿಲ್ದಾಣಗಳಲ್ಲಿ ಸ್ಮಾರ್ಟ್‌ಕಾರ್ಡ್ ಕೊರತೆ ಇದೆ. ಅಧಿಕಾರಿಗಳ ನಿರ್ಲಕ್ಷ್ಯವೇ ಇದಕ್ಕೆ ಕಾರಣ’ ಎಂದು ಬಿಎಂಆರ್‌ಸಿಎಲ್ ಕಾರ್ಮಿಕರ ಸಂಘದ ಸೂರ್ಯ ನಾರಾಯಣಮೂರ್ತಿ ದೂರಿದರು.

‘ನಿಗದಿತ ಸಂಖ್ಯೆಯ ಸ್ಮಾರ್ಟ್ ಕಾರ್ಡ್‌ಗಳ ಸಂಗ್ರಹ ಇರುವಂತೆ ನೋಡಿಕೊಳ್ಳದೆ ಪ್ರಯಾಣಿಕರು ತೊಂದರೆ ಅನುಭವಿಸುವಂತೆ ಮಾಡಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

‘ಕೆಲವು ದಿನಗಳ ಹಿಂದೆ ಸ್ಮಾರ್ಟ್‌ಕಾರ್ಡ್‌ಗಳ ಕೊರತೆ ಉದ್ಭವಿಸಿತ್ತು. ಆದರೆ, ಈಗ ಸರಿಯಾಗಿದೆ. ಯಾವ ಪ್ರಯಾಣಿಕರನ್ನೂ ವಾಪಸ್ ಕಳುಹಿಸಿಲ್ಲ. ಸ್ಮಾರ್ಟ್ ಕಾರ್ಡ್‌ಗಳು ಸಂಪೂರ್ಣವಾಗಿ ಖಾಲಿಯಾದರೆ ಕಾಗದದ ಟಿಕೆಟ್ ನೀಡಿ ಪ್ರಯಾಣಿಸಲು ಅವಕಾಶ ನೀಡುವ ವ್ಯವಸ್ಥೆಯನ್ನೂ ಮಾಡಿಕೊಳ್ಳಲಾಗಿದೆ’ ಎಂದು ನಿಗಮದ ಅಧಿಕಾರಿಯೊಬ್ಬರು ತಿಳಿಸಿದರು.

‘ಟೋಕನ್ ವಿತರಣೆಗಿಂತ ಸ್ಮಾರ್ಟ್‌ಕಾರ್ಡ್ ಬಳಕೆ ಮಾಡುವುದರಿಂದ ನಿಗಮಕ್ಕೂ ಮತ್ತು ಪ್ರಯಾಣಿಕರೂ ಆರ್ಥಿಕವಾಗಿ ಅನುಕೂಲವಾಗುತ್ತದೆ. ಟೋಕನ್ ವಿತರಣೆ ಸ್ಥಗಿತಗೊಳಿಸಿರುವುದರಿಂದ ಸ್ಮಾರ್ಟ್‌ಕಾರ್ಡ್ ಬಳಕೆ ಹೆಚ್ಚಾಗಿದ್ದು ಕೆಲವು ಕಡೆಗಳಲ್ಲಿ ಮಾತ್ರ ಕೊರತೆ ಉದ್ಭವಿಸಿತ್ತು’ ಎಂದೂ ಅವರು ಹೇಳಿದರು.

ಕೊರತೆ ಇಲ್ಲ: ‘ಯಾವುದೇ ನಿಲ್ದಾಣಗಳಲ್ಲಿ ಸ್ಮಾರ್ಟ್‌ಕಾರ್ಡ್‌ಗಳ ಕೊರತೆ ಇಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಕಾರ್ಡ್‌ಗಳನ್ನು ತರಲಾಗಿದೆ. ದಿನಕ್ಕೆ 6,500ದಿಂದ 7,000 ಸ್ಮಾರ್ಟ್‌ಕಾರ್ಡ್‌ಗಳು ಮಾರಾಟವಾಗುತ್ತಿವೆ. ತಿಂಗಳಿಗೆ ಅಂದಾಜು 2 ಲಕ್ಷ ಕಾರ್ಡ್‌ಗಳು ಬೇಕಾಗಿದ್ದು, ಎಲ್ಲ ವ್ಯವಸ್ಥೆ ಮಾಡಲಾಗಿದೆ’ ಎಂದು ನಿಗಮದ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಎ.ಎಸ್. ಶಂಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಂದು ನಿಲ್ದಾಣದಲ್ಲಿ ಕಾರ್ಡ್‌ಗಳ ಸಂಖ್ಯೆ ಕಡಿಮೆಯಿದ್ದರೂ, ಪಕ್ಕದ ನಿಲ್ದಾಣದಿಂದ ತೆಗೆದುಕೊಂಡು ಬಂದು ಪ್ರಯಾಣಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಯಾವುದೇ ಪ್ರಯಾಣಿಕರಿಗೂ ತೊಂದರೆಯಾಗಿಲ್ಲ’ ಎಂದೂ ಅವರು ಸ್ಪಷ್ಟಪಡಿಸಿದರು.

ಆಕಾಶವಾಣಿ: ಕವಿ–ಕಾವ್ಯ ಸರಣಿ

ಬೆಂಗಳೂರು: ಕನ್ನಡ ಕಾಯಕ ವರ್ಷದ ಅಂಗವಾಗಿ ಬೆಂಗಳೂರು ಆಕಾಶವಾಣಿ ಕೇಂದ್ರವು ‘ಕುಕಿಲ್ವ ಕೋಗಿಲೆಯೇ ಪಾಡುವ ತುಂಬಿಯೇ’ ಎಂಬ ಶೀರ್ಷಿಕೆಯಡಿ ಕನ್ನಡ ಕವಿ–ಕಾವ್ಯ ಪರಂಪರಾ ಸರಣಿ ಆರಂಭಿಸಲಿದೆ.

ಕನ್ನಡ ಕಾವ್ಯದ ವಿವಿಧ ಕಾಲ ಘಟ್ಟಗಳನ್ನು ನಾಡಿನ ಕೇಳುಗರಿಗೆ ಪರಿಚಯಿಸುವ ಈ ವಿಶೇಷ ಕಾರ್ಯಕ್ರಮ ಇದೇ 17ರಿಂದ ಜೂನ್ 9ರವರೆಗೆ ಪ್ರತಿ ಬುಧವಾರ ಬೆಳಿಗ್ಗೆ 9.05ಕ್ಕೆ ರಾಜ್ಯದ ಎಲ್ಲ ಬಾನುಲಿ ಕೇಂದ್ರಗಳಿಂದ ಪ್ರಸಾರವಾಗಲಿದೆ ಎಂದು ಆಕಾಶವಾಣಿ ಬೆಂಗಳೂರು ಕೇಂದ್ರದ ನಿರ್ದೇಶಕಿ ನಿರ್ಮಲಾ ಸಿ.ಎಲಿಗಾರ ತಿಳಿಸಿದ್ದಾರೆ.

ಶ್ರೀವಿಜಯ, ಪಂಪ, ರನ್ನ, ಕುಮಾರವ್ಯಾಸ, ಕುವೆಂಪು, ಬೇಂದ್ರೆ ಜತೆಗೆ ಇತ್ತೀಚಿನವರಾದ ಎಂ. ರಾಘವೇಂದ್ರರಾವ್, ಆರ್. ಶಂಕರನಾರಾಯಣ ಅವರ ವರೆಗಿನ ಹಲವು ಆಯ್ದ ಕವಿಗಳು ಹಾಗೂ ಅವರ ಪ್ರಮುಖ ಕಾವ್ಯಗಳ ಪರಿಚಯ ಈ ಸರಣಿಯ ಉದ್ದೇಶ. ಹಿರಿಯ ವಿದ್ವಾಂಸರು, ವಿಮರ್ಶಕರು ಕವಿ-ಕಾವ್ಯಗಳ ವಿವರವನ್ನು ಸಂಕ್ಷಿಪ್ತವಾಗಿ ಕೇಳುಗರಿಗೆ ಕಟ್ಟಿ ಕೊಡಲಿದ್ದಾರೆ.

ಒಟ್ಟಾರೆ 13 ಕಾರ್ಯಕ್ರಮಗಳ ಈ ಸರಣಿಯ ಪ್ರಾಯೋಜನೆಯನ್ನು ಬೆಂಗಳೂರಿನ ಗಮಕ-ಶಂಕರ ಸಂಸ್ಥೆ ಹೊತ್ತು ಕೊಂಡಿದೆ. ನಿಲಯದ ಕಾರ್ಯಕ್ರಮ ನಿರ್ವಾಹಕ ಶರಣಬಸವ ಚೋಳಿನ ಈ ಸರಣಿಯ ನಿರ್ಮಾಣ ಜವಾಬ್ದಾರಿ ನಿರ್ವಹಿಸಲಿದ್ದಾರೆ.

ಪೊಲೀಸ್ ಇನ್‌ಸ್ಪೆಕ್ಟರ್ ಮನೆಯಲ್ಲೇ ಕಳವು

ಚಿತ್ರದುರ್ಗ: ಇಲ್ಲಿನ ಬಸವೇಶ್ವರ ನಗರದಲ್ಲಿರುವ ಪೊಲೀಸ್ ಇನ್‌ಸ್ಪೆಕ್ಟರ್ ಮೃತ್ಯುಂಜಯ ಅವರ ಮನೆಗೆ ನುಗ್ಗಿದ ಕಳ್ಳರು, ₹ 7 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹ 60 ಸಾವಿರ ನಗದು ದೋಚಿದ್ದಾರೆ.

ಮೃತ್ಯುಂಜಯ ಅವರು ಕುಟುಂಬ ಸಹಿತ ಹೊರಗೆ ಹೋದಾಗ ಕಳವು ನಡೆದಿದೆ. ಭಾನುವಾರ ರಾತ್ರಿ ಮನೆಗೆ ಮರಳಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಕಳವಾಗಿದ್ದ ಕಾರು, ಲಾರಿ, ಗುರುತಿನ ಚೀಟಿ ವೆಂಕಟೇಶ್ವರ ದೇಗುಲದ ಆವರಣದಲ್ಲಿ ಸೋಮವಾರ ಪತ್ತೆಯಾಗಿವೆ ಎಂದು ಪೊಲೀಸರು ವಿವರಿಸಿದ್ದಾರೆ.

ಫೇಸ್‌ಬುಕ್ ಲೈವ್‌ನಲ್ಲಿ ಅಭಿಮಾನಿಗಳಿಗೆ ಸಂದೇಶ

ಯುವ ಸಂಭ್ರಮದ ಬದಲು ಜಿಲ್ಲೆಗಳಿಗೆ ಭೇಟಿ: ಪುನೀತ್ ರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಚ್ 20ರಂದು ಮೈಸೂರಿನಲ್ಲಿ ಯುವರತ್ನ ಸಿನಿಮಾ ಬಿಡುಗಡೆಗಾಗಿ ನಡೆಸಲು ಉದ್ದೇಶಿಸಿರುವ ‘ಯುವ ಸಂಭ್ರಮ’ ನಡೆಸುತ್ತಿಲ್ಲ. ಬದಲಾಗಿ ವಿವಿಧ ಜಿಲ್ಲಾ ಕೇಂದ್ರಗಳಿಗೆ, ಆಯ್ದ ಊರುಗಳಿಗೆ ತೆರಳಿ ಅಭಿಮಾನಿಗಳನ್ನು ಭೇಟಿಯಾಗುವುದಾಗಿ ನಟ ಪುನೀತ್ ರಾಜ್‌ಕುಮಾರ್ ಹೇಳಿದರು.

ಸೋಮವಾರ ಫೇಸ್‌ಬುಕ್ ಲೈವ್‌ನಲ್ಲಿ ಕಾಣಿಸಿಕೊಂಡ ಅವರು, ‘ಮಾರ್ಚ್ 20ರಂದು ಒಂದೇ ಊರಿನಲ್ಲಿ ಕಾರ್ಯಕ್ರಮ ಮಾಡುವ ಬದಲಾಗಿ ಎಲ್ಲ ಊರುಗಳಿಗೂ ನಾವು ತಲುಪಬೇಕಿದೆ. ಮಾರ್ಚ್ 21ರಿಂದ 23ರವರೆಗೆ ಬೇರೆ ಬೇರೆ ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡುತ್ತೇನೆ. ಕಾರ್ಯಕ್ರಮದ ವೇಳಾಪಟ್ಟಿಯನ್ನು ನಮ್ಮ ತಂಡದವರು ನೀಡಲಿದ್ದಾರೆ’ ಎಂದು ಹೇಳಿದರು.

ಪುನೀತ್ ರಾಜ್‌ಕುಮಾರ್

ಹುಟ್ಟುಹಬ್ಬದ ಸಂಭ್ರಮ ಇಲ್ಲ: ‘ಹುಟ್ಟುಹಬ್ಬದ ದಿನವಾದ ಮಾರ್ಚ್ 17ರಂದು ನಾವು ಮನೆಯಲ್ಲಿ ಇರುವುದಿಲ್ಲ. ಕುಟುಂಬ ಸಮೇತ ದೇವಸ್ಥಾನಗಳಿಗೆ ಭೇಟಿ ನೀಡಬೇಕು ಎಂದುಕೊಂಡಿದ್ದೇವೆ. ಆದ್ದರಿಂದ ಯಾರೂ ಮನೆಯ ಬಳಿ ಬರಬೇಡಿ. ಬದಲಾಗಿ ನೀವಿದ್ದಲ್ಲಿಗೆ ನಾನೇ ಬರುತ್ತೇನೆ’ ಎಂದರು.

‘ಫಿಟ್ನೆಸ್ ಸಂಬಂಧಿಸಿ ನಿಮಗೆ (ಅಭಿಮಾನಿಗಳಿಗೆ) ಸ್ಫೂರ್ತಿ ನೀಡುವುದು ಮತ್ತು ನಿಮ್ಮಿಂದ ನಾನೂ ಸ್ಫೂರ್ತಿ ಪಡೆಯಲಿಕ್ಕಾಗಿ ಆ ವಿಡಿಯೋಗಳನ್ನು ಬಿಡುಗಡೆ ಮಾಡುತ್ತಿದ್ದೇನೆ’ ಎಂದ ಅವರು, ‘ಸುರಕ್ಷತಾ ಕ್ರಮಗಳನ್ನು ಅನುಸರಿಸಿಕೊಂಡು ಚಿತ್ರಮಂದಿರಗಳಿಗೆ ಬಂದು ಚಿತ್ರ ನೋಡಿ’ ಎಂದು ಮನವಿ ಮಾಡಿದರು.

ನಗರದಲ್ಲಿ ಇಂದು

ನಟ ಉದಯಕುಮಾರ್ ಅವರ 88ನೇ ಜಯಂತಿಯ ನೆನಪಿನಲ್ಲಿ ‘ಉದಯ ಸ್ಮೃತಿ 88’ ಮತ್ತು ಸುವರ್ಣ ಸಭಾಂಗಣ ಉದ್ಘಾಟನಾ ಸಮಾರಂಭ: ಉದ್ಘಾಟನೆ- ಶಾಸಕ ಎಂ. ಕೃಷ್ಣಪ್ಪ, ಅತಿಥಿಗಳು: ಹಿರಿಯ ನಟ ಶಿವರಾಮ್, ಗಿರಿಜಾ ಲೋಕೇಶ್, ನೆ.ಲ.ನರೇಂದ್ರಬಾಬು, ಆಯೋಜನೆ: ಉದಯ ಕಲಾನಿಕೇತನ, ಸ್ಥಳ: ಸಂಘದ ರಂಗ ಮಂದಿರ ಆವರಣ, 3ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಚುಂಚಘಟ್ಟ ರಸ್ತೆ ಬೆಂಗಳೂರು, ಸಮಯ: ಸಂಜೆ 5.30

ಕೆ.ಎಚ್. ಪಾಟೀಲ ಅವರ 97ನೇ ಜನ್ಮದಿನಾಚರಣೆ, ಉದ್ಘಾಟನೆ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಭಾವಚಿತ್ರ ಅನಾವರಣ: ಲೋಕಾಯುಕ್ತ ನ್ಯಾಯಮೂರ್ತಿ ಪಿ.ವಿಶ್ವನಾಥಶೆಟ್ಟಿ, ಆಯೋಜನೆ: ಕೆ.ಎಚ್. ಪಾಟೀಲ ಅಭಿಮಾನಿ ಬಳಗ, ಸ್ಥಳ: ಬಾಪೂಜಿ ಸಭಾಂಗಣ, ಗಾಂಧಿಭವನ, ಸಮಯ: ಸಂಜೆ 5 ಗಂಟೆ


ಕೆ.ಎಚ್. ಪಾಟೀಲ

ಕವಿ ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ ಅವರ ಶ್ರದ್ಧಾಂಜಲಿ ಸಭೆ, ಅಧ್ಯಕ್ಷತೆ: ಡಾ. ಹಂಪ ನಾಗರಾಜಯ್ಯ, ಭಾಗವಹಿಸುವವರು: ಡಾ. ದೊಡ್ಡರಂಗೇಗೌಡ, ನರಹಳ್ಳಿ ಬಾಲಸುಬ್ರಹ್ಮಣ್ಯ, ಬಿ.ಆರ್. ಲಕ್ಷ್ಮಣರಾವ್, ವಿಜಯಾ ಸುಬ್ಬರಾವ್, ಬಸವರಾಜ ಕಲ್ಗುಡಿ, ಪ್ರೊ. ಎಂ.ಎಚ್. ಕೃಷ್ಣಯ್ಯ, ಆಯೋಜನೆ: ಬಿ.ಎಂ. ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಸಮಯ: ಬೆಳಿಗ್ಗೆ 10.30

ಪಂಡಿತ್ ಓ.ಆರ್. ರಾಮಣ್ಣ- ಶ್ರೀಮತಿ ಪುಟ್ಟಮ್ಮ ದತ್ತಿ ಉಪನ್ಯಾಸ, ಉಪನ್ಯಾಸ: ಸಹ ಪ್ರಾಧ್ಯಾಪಕರಾದ ಡಾ. ಎನ್. ಆರ್ ಲಲಿತಾಂಬ, ವಿಷಯ: ಜೈಮಿನಿ ಭಾರತ–ಸುಧನ್ವನ ಧರ್ಮ ಸಂಕಟ ಪ್ರಸಂಗ, ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಸಮಯ: ಸಂಜೆ 4.30

ಕೌಶಲ ಅಭಿವೃದ್ಧಿ ಕುರಿತ ವಿಚಾರ ಗೋಷ್ಠಿ, ಉಪಸ್ಥಿತಿ: ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ಅಧ್ಯಕ್ಷೆ ಕೆ. ರತ್ನಪ್ರಭಾ, ಆಯೋಜನೆ: ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮ, ಸ್ಥಳ: ಮೊದಲ ಮಹಡಿ, ಅಶೋಕ ಹೋಟೆಲ್, ಬೆಂಗಳೂರು, ಸಮಯ: ಬೆಳಿಗ್ಗೆ 10.30

ಐದು ದಿನಗಳ ರಾಜ್ಯಮಟ್ಟದ ಪೌರಾಣಿಕ ನಾಟಕೋತ್ಸವ, ಆಯೋಜನೆ: ಅಮರೇಶ್ವರ ವಿಜಯ ನಾಟಕ ಮಂಡಳಿ, ರಂಗಸೇತುವೆ ಟ್ರಸ್ಟ್ ತಂಡದಿಂದ ಆರ್.ರಾಮಮೂರ್ತಿ ನಿರ್ದೇಶನದ ‘ಕೋಲಮ ಗಾಂಧಾರ’ ನಾಟಕ ಪ್ರದರ್ಶನ. ಸ್ಥಳ: ಅಲ್ಲಮ ಕಲಾ ಶಾಲೆ, ಕನ್ನಲ್ಲಿ, ಸಂಜೆ: 6.30

ಕಾಂಕ್ರೀಟ್ ನಿರ್ಮಾಣದಲ್ಲಿ ಪರ್ಯಾಯ ವಸ್ತುಗಳು ಮತ್ತು ನವೀನ ತಂತ್ರಜ್ಞಾನಗಳು ಕುರಿತ ಎರಡು ದಿನಗಳ ಸಮ್ಮೇಳನ ಮತ್ತು ವಸ್ತುಪ್ರದರ್ಶನ, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಸಮಯ: ಬೆಳಿಗ್ಗೆ 9.30

‘ಪೆಟ್ರೋಲ್, ಡೀಸೆಲ್ ತೆರಿಗೆ ಇಳಿಸಲು ಯೋಚಿಸಬೇಕು’

ನವದೆಹಲಿ(ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಚಿಸಬೇಕು ಎಂದು ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಠಾಕೂರ್ ಸಲಹೆ ನೀಡಿದ್ದಾರೆ.

ಲೋಕಸಭೆಯಲ್ಲಿ ಈ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿರುವ ಅವರು,‘ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಗಳನ್ನು ಕಡಿಮೆಗೊಳಿಸುವುದನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ಸಿದ್ಧವಿದೆ. ರಾಜ್ಯ ಸರ್ಕಾರಗಳು ಸಹ ಇದೇ ರೀತಿ ಪರಿಶೀಲನೆ ಮಾಡಬೇಕು’ ಎಂದು ಹೇಳಿದ್ದಾರೆ.

‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿ ಅಡಿಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ತರುವ ಬಗ್ಗೆ ಚರ್ಚಿಸಲು ಸರ್ಕಾರ ಸಿದ್ಧವಿದೆ’ ಎಂದು ಹೇಳಿದರು.

‘ಕಾಟಿಕ್ ಸಮುದಾಯವನ್ನು ಎಸ್‌ಸಿಗೆ ಸೇರಿಸಿ’

ಬೆಂಗಳೂರು: ‘ಕಾಟಿಕ್ ಸಮಾಜವು ರಾಜ್ಯದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದೆ. ಈ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಬೇಕು ಎಂಬ ಶಿಫಾರಸಿನೊಂದಿಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ವರದಿ ಸಲ್ಲಿಸಬೇಕು’ ಎಂದು ಕರ್ನಾಟಕ ಕಾಟಿಕ್ ರಾಜ್ಯ ಸಂಚಾಲನಾ ಸಮಿತಿ ಸದಸ್ಯ ಆಗ್ರಹಿಸಿದೆ.

‘ದೇಶದ 11 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿದ್ದಾರೆ. ಆದರೆ ರಾಜ್ಯದಲ್ಲಿ ನಮ್ಮ ಸಮುದಾಯದ ಕೆಲವು ಒಳಪಂಗಡಗಳು ಪ್ರವರ್ಗ–1ರಲ್ಲಿ ಮತ್ತು ಉಳಿದವು ಪ್ರವರ್ಗ 2ಎದಲ್ಲಿವೆ’ ಎಂದು ಸಮಿತಿಯ ಸದಸ್ಯ, ಮಾಜಿ ಶಾಸಕ ಆರ್. ಕೆ. ಸಿದ್ಧರಾಮಣ್ಣ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಎಲ್ಲ ರಂಗಗಳಲ್ಲಿ ಹಿಂದುಳಿದಿರುವ ಕಾಟಿಕ್ ಸಮಾಜವು ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದೆ’ ಎಂದೂ ಹೇಳಿದರು.

ಸಚಿವರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಾಕೀತು

ಹಾಜರಿ ಕಡ್ಡಾಯ, ಸಂಘರ್ಷ ಬೇಡ

ಪ್ರಜಾವಾಣಿ ವಾರ್ತೆ

ಬಿ.ಎಸ್. ಯಡಿಯೂರಪ್ಪ

ಬೆಂಗಳೂರು: ಬಜೆಟ್ ಅಧಿವೇಶನ ಮುಗಿಯುವವರೆಗೆ ಎಲ್ಲ ಸಚಿವರೂ ಕಡ್ಡಾಯವಾಗಿ ವಿಧಾನಮಂಡಲ ಕಲಾಪದಲ್ಲಿ ಹಾಜರಿರಬೇಕು. ಕಲಾಪಕ್ಕೆ ತೊಡಕಾಗುವುದನ್ನು ತಪ್ಪಿಸಲು ಯಾವುದೇ ಸಂದರ್ಭದಲ್ಲೂ ಪ್ರತಿಪಕ್ಷಗಳ ಸದಸ್ಯರ ಜತೆ ಸಂಘರ್ಷಕ್ಕೆ ಇಳಿಯಬಾರದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಂಪುಟ ಸದಸ್ಯರಿಗೆ ತಾಕೀತು ಮಾಡಿದ್ದಾರೆ.

ಸೋಮವಾರ ಬೆಳಿಗ್ಗೆ ವಿಧಾನಸೌಧದಲ್ಲಿ ಸಚಿವರೊಂದಿಗೆ ಅನೌಪಚಾರಿಕ ಸಭೆ ನಡೆಸಿದ ಅವರು, ಕಲಾಪ ನಡೆಯುವ ದಿನಗಳಲ್ಲಿ ಇತರ ಕಾರ್ಯಕ್ರಮಗಳಲ್ಲಿ ಯಾವುದೇ ಸಚಿವರು ಭಾಗಿಯಾಗಬಾರದು ಎಂಬ ನಿರ್ದೇಶನ ನೀಡಿದರು.

‘ಕೆಲವು ದಿನಗಳಿಂದ ಸಚಿವರ ಗೈರಿನ ವಿಚಾರವೇ ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ದೊಡ್ಡದಾಗುತ್ತಿದೆ. ಸರ್ಕಾರಕ್ಕೆ ಮುಜುಗರ ಆಗುವುದನ್ನು ತಪ್ಪಿಸಲು ಎಲ್ಲರೂ ಕಲಾಪದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ವಿರೋಧ ಪಕ್ಷಗಳ ಸದಸ್ಯರು ಟೀಕಿಸಿದಾಗ ಆಕ್ರೋಶಗೊಂಡು ಸಂಘರ್ಷಕ್ಕೆ ಇಳಿಯಬೇಡಿ. ಆಯಾ ಸಚಿವರೇ ತಮ್ಮ ಖಾತೆಗೆ ಸಂಬಂಧಿಸಿದ ಉತ್ತರಗಳನ್ನು ನೀಡಿ, ವಿರೋಧ ಪಕ್ಷಗಳ ಸದಸ್ಯರ ಬಾಯಿ ಮುಚ್ಚಿಸಿ’ ಎಂದು ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಸಿ.ಡಿ ವಿಚಾರದಲ್ಲಿ ಪ್ರತಿಬಂಧಕಾಜ್ಞೆ ತಂದಿರುವ ಸಚಿವರಿಗೆ ಪ್ರಶ್ನೆ ಕೇಳದಿರುವ ಕಾಂಗ್ರೆಸ್ ನಿಲುವಿನಿಂದ ಇರಿಸು–ಮುರಿಸು ಉಂಟಾಗಬಹುದು. ಅದನ್ನೂ ಶಾಂತವಾಗಿಯೇ ಎದುರಿಸಬೇಕು. ಬಿಜೆಪಿ ಸದಸ್ಯರಿಂದ ಉಪ ಪ್ರಶ್ನೆಗಳನ್ನು ಕೇಳಿಸುವ ಮೂಲಕ ಅದೇ ಸಚಿವರಿಂದ ಸದನದಲ್ಲಿ ಉತ್ತರ ದಾಖಲಾಗುವಂತೆ ನೋಡಿಕೊಳ್ಳಬೇಕು ಎಂಬ ಸಲಹೆಯನ್ನು ಕೆಲವು ಸಚಿವರು ನೀಡಿದ್ದು, ಯಡಿಯೂರಪ್ಪ ಸಮ್ಮತಿಸಿದ್ದಾರೆ ಎಂದು ಗೊತ್ತಾಗಿದೆ.

ಚುನಾವಣಾ ತಯಾರಿಗೆ ಸೂಚನೆ: ‘ಮಸ್ಕಿ, ಬಸವಕಲ್ಯಾಣ ಮತ್ತು ಸಿಂದಗಿ ವಿಧಾನ ಸಭಾ ಕ್ಷೇತ್ರಗಳು ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗಳು ಶೀಘ್ರದಲ್ಲಿ ಘೋಷಣೆಯಾಗಲಿವೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳ ದೃಷ್ಟಿಯಿಂದ ಈ ಉಪ ಚುನಾವಣೆಗಳು ಬಿಜೆಪಿಗೆ ಮಹತ್ವದ್ದಾಗಿವೆ. ನಾಲ್ಕೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಈಗಿನಿಂದಲೇ ತಯಾರಿ ಆರಂಭಿಸಬೇಕು’ ಎಂದು ಸಚಿವರಿಗೆ ಸೂಚನೆ ನೀಡಿದ್ದಾರೆ.

ಉಪ ಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಚಿವರಾದ ಜಗದೀಶ ಶೆಟ್ಟರ್, ಆರ್. ಅಶೋಕ, ಕೆ.ಎಸ್. ಈಶ್ವರಪ್ಪ, ಬಸವರಾಜ ಬೊಮ್ಮಾಯಿ, ಡಾ.ಕೆ. ಸುಧಾಕರ್, ಸಿ.ಸಿ. ಪಾಟೀಲ, ವಿ. ಸೋಮಣ್ಣ, ಎಸ್. ಸುರೇಶ್ ಕುಮಾರ್, ಬಿ.ಸಿ. ಪಾಟೀಲ್, ಶಿವರಾಂ ಹೆಬ್ಬಾರ್, ಎಸ್.ಟಿ. ಸೋಮಶೇಖರ್, ಆರ್. ಶಂಕರ್, ಸಿ.ಪಿ. ಯೋಗೇಶ್ವರ ಸಭೆಯಲ್ಲಿದ್ದರು.

ಜಿಲ್ಲಾ ಪ್ರವಾಸಕ್ಕೆ ನಿರ್ದೇಶನ

‘ಎಲ್ಲ ಸಚಿವರು ಪ್ರತಿ ತಿಂಗಳು ಜಿಲ್ಲಾ ಪ್ರವಾಸ ಕೈಗೊಂಡು, ತಮ್ಮ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಬೇಕು. ನಾನು ಕೂಡ ಜಿಲ್ಲಾ ಪ್ರವಾಸ ಮಾಡುತ್ತೇನೆ. ಆಯಾ ಇಲಾಖೆಗಳ ಪ್ರತಿ ತಿಂಗಳ ಪ್ರಗತಿಯ ಕುರಿತು ವರದಿಯನ್ನೂ ನೀಡಬೇಕು’ ಎಂಬ ಸೂಚನೆಯನ್ನೂ ಮುಖ್ಯಮಂತ್ರಿ ಸಚಿವರಿಗೆ ನೀಡಿದ್ದಾರೆ.

‘ವೈದ್ಯಕೀಯ ಸೀಟು ಬ್ಲಾಕಿಂಗ್ ದಂಧೆ ವಿರುದ್ಧ ಕಠಿಣ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯ ಕಾಲೇಜುಗಳಲ್ಲಿನ ಸೀಟ್ ಬ್ಲಾಕಿಂಗ್ ದಂಧೆ ತಡೆಯಬೇಕು ಮುಂದಿನ ವರ್ಷದಿಂದ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ಭರವಸೆ ನೀಡಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ‘ಕಾನೂನಿನಲ್ಲಿರುವ ಲೋಪಗಳನ್ನು ಬಳಸಿಕೊಂಡು ಸೀಟ್ ಬ್ಲಾಕಿಂಗ್ ವ್ಯವಹಾರ ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ರಾಜ್ಯದಲ್ಲಿರುವ 65 ವೈದ್ಯಕೀಯ ಕಾಲೇಜುಗಳ ಪೈಕಿ 45 ಕಾಲೇಜುಗಳು ಖಾಸಗಿಯವರ ಒಡೆತನದಲ್ಲಿವೆ. ಈ ಕಾಲೇಜುಗಳು ಸುಪ್ರೀಂ ಕೋರ್ಟ್ ಆದೇಶವನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಿದ್ದಾರೆ’ ಎಂದರು.

‘ವೈದ್ಯಕೀಯ ಸೀಟ್ ಬ್ಲಾಕಿಂಗ್ ದಂಧೆಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಕಾಲೇಜು ಆಡಳಿತ ಮಂಡಳಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಶುಲ್ಕ ಕಟ್ಟಿಸಿ ಪ್ರವೇಶ ಪರೀಕ್ಷೆ ಬರೆಸುತ್ತಿದೆ. ಆಯ್ಕೆ ಆದ ಬಳಿಕ ಅವರಿಗೆ ಸ್ವಲ್ಪ ಹಣ ಕೊಟ್ಟು ಸೀಟು ಬಿಟ್ಟು ಕೊಡುವಂತೆ ಮಾಡುತ್ತಾರೆ. ಈ ರೀತಿ ತೆರವಾದ ಸೀಟುಗಳನ್ನು ಆಡಳಿತ ಮಂಡಳಿ ಕೋಟಾದಡಿ ತುಂಬಿಸಿಕೊಳ್ಳಲು ಅವಕಾಶ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡುತ್ತಾರೆ. ಪ್ರತಿ ವರ್ಷ 250ರಿಂದ 400 ಸೀಟುಗಳ ದಂಧೆ ನಡೆಯುತ್ತಿದೆ. ಅವ್ಯವಹಾರ ತಡೆಯಲು ಕ್ರಮ ಕೈಗೊಳ್ಳಬೇಕು. ಇಂಥ ಕಾಲೇಜುಗಳಿಗೆ ನೋಟಿಸ್ ನೀಡಿ, ಮಾನ್ಯತೆಯನ್ನು ರದ್ದು ಮಾಡಬೇಕು’ ಎಂದೂ ಆಗ್ರಹಿಸಿದರು.

‘ಸೀಟ್ ಬ್ಲಾಕಿಂಗ್ ಸಂಬಂಧಪಟ್ಟಂತೆ ಯಾವುದೇ ಕಾಲೇಜಿಗೆ ನೋಟಿಸ್ ನೀಡಿಲ್ಲ. ಮಾನ್ಯತೆ ಕೂಡ ರದ್ದು ಮಾಡಿಲ್ಲ. ಯಾವುದೇ ಕಾಲೇಜು ವಿರುದ್ಧ ದೂರು ದಾಖಲಾಗಿಲ್ಲ. ಆದರೆ, ಈ ದಂಧೆಯ ಬಗ್ಗೆ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಲು ಎಸಿಬಿ ಸರ್ಕಾರದ ಪೂರ್ವಾನುಮತಿ ಕೇಳಿದೆ’ ಎಂದು ಸಚಿವರು ವಿವರಿಸಿದರು.

ಮ್ಯಾನ್ಮಾರ್: ಒಟ್ಟು 138 ಪ್ರತಿಭಟನಕಾರರ ಸಾವು

ಯಾಂಗೂನ್ (ಎಪಿ, ಎಎಫ್‌ಪಿ, ರಾಯಿಟರ್ಸ್): ಮ್ಯಾನ್ಮಾರ್‌ನಲ್ಲಿ ಒಂದೂವರೆ ತಿಂಗಳ ಹಿಂದೆ ನಡೆದ ಕ್ಷಿಪ್ರ ಸೇನಾ ದಂಗೆಯ ನಂತರ ದೇಶದಲ್ಲಿ ಸೇನಾಡಳಿತದ ವಿರುದ್ಧ ಶಾಂತಿಯುತ ಪ್ರತಿಭಟನೆ ನಡೆಸುತ್ತಿರುವ ನಾಗರಿಕರ ಮೇಲೆ ಸೇನೆಯ ದೌರ್ಜನ್ಯ ಮುಂದುವರಿದಿದ್ದು, ಈವರೆಗೆ 138 ಮಂದಿ ಪ್ರತಿಭಟನಕಾರರು ಸೇನೆಯ ಗುಂಡೇಟಿಗೆ ಬಲಿಯಾಗಿದ್ದಾರೆ ಎಂದು ವಿಶ್ವಸಂಸ್ಥೆ ಸೋಮವಾರ ತಿಳಿಸಿದೆ.

‘ಮಾರ್ಷಿಯಲ್ ಲಾ’ ಜಾರಿ: ಮ್ಯಾನ್ಮಾರ್ ಮಿಲಿಟರಿ ಆಡಳಿತವು ಯಾಂಗೂನ್ ನಗರದ ಆರು ಟೌನ್‌ಶಿಪ್‌ಗಳಲ್ಲಿ ‘ಮಾರ್ಷಿಯಲ್ ಲಾ’ ಕೂಡ ಜಾರಿಗೊಳಿಸಿದೆ.

ಮಿಲಿಟರಿ ಆಡಳಿತದ ವಿರುದ್ಧ ಪ್ರತಿಭಟನೆ ತೀವ್ರಗೊಳ್ಳುತ್ತಿರುವುದರಿಂದ ಮತ್ತು ಹಿಂಸಾಚಾರ ಹತ್ತಿಕ್ಕಲು ಈ ಕ್ರಮಕೈಗೊಳ್ಳಲಾಗಿದೆ. ಯಾಂಗೂನ್‌ನ ಉತ್ತರ ಡಾಗೋನ್, ದಕ್ಷಿಣ ಡಾಗೋನ್, ಡಾಗೋನ್ ಸೈಕ್ಕನ್, ಉತ್ತರ ಒಕ್ಕಳಪಾ, ಹ್ಲೈಂಗ್ ಥಾರ್ ಯಾರ್ ಮತ್ತು ಶ್ವೆಪ್ಯಿಥಾನಲ್ಲಿ ಭಾನುವಾರದಿಂದ ‘ಮಾರ್ಷಿಯಲ್ ಲಾ’ ಘೋಷಿಸಲಾಗಿದೆ.

ಮೇಲ್ವರ್ಗದ ಮೀಸಲಾತಿ ಪಟ್ಟಿಗೆ ಜಿಎಸ್‌ಬಿ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕವಾಗಿ ಹಿಂದುಳಿದಿರುವ ಮೇಲ್ವರ್ಗದ ಕುಟುಂಬಗಳಿಗೆ ಶೈಕ್ಷಣಿಕ ಮತ್ತು ಸರ್ಕಾರಿ ನೌಕರಿಯಲ್ಲಿ ಶೇ 10 ಮೀಸಲಾತಿ ಪಡೆಯಲು ರಾಜ್ಯ ಸರ್ಕಾರ ರೂಪಿಸಿರುವ ಜಾತಿ ಪಟ್ಟಿಯಲ್ಲಿ ಗೌಡ ಸಾರಸ್ವತ ಸಮುದಾಯ(ಜಿಎಸ್‌ಬಿ) ಮತ್ತು ಬಿಟ್ಟು ಹೋಗಿರುವ ಸಣ್ಣಪುಟ್ಟ ಜಾತಿಗಳನ್ನು ಸೇರಿಸಲು ಕ್ರಮ ತೆಗೆದುಕೊಳ್ಳುವುದಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಬಿಜೆಪಿಯ ಡಿ.ವೇದವ್ಯಾಸ ಕಾಮತ್ ಮತ್ತು ಸುನಿಲ್ ಕುಮಾರ್ ಅವರ ಗಮನ ಸೆಳೆಯುವ ಸೂಚನೆಯಡಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮುಖ್ಯಮಂತ್ರಿ ಯಡಿಯೂರಪ್ಪ ಅವರು ಈ ಸಂಬಂಧ ಕಂದಾಯ ಇಲಾಖೆ ಕಾರ್ಯದರ್ಶಿಯವರಿಗೆ ಆದೇಶ ನೀಡಿದ್ದಾರೆ ಎಂದು ಹೇಳಿದರು.

ಈ ವಿಷಯವಾಗಿ ಹಿರಿಯ ಸಚಿವರು ಮತ್ತು ಮುಖ್ಯಮಂತ್ರಿಯವರೂ ಗಮನಹರಿಸಬೇಕು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ವಿಷಯ ಪ್ರಸ್ತಾಪಿಸಿದ ವೇದವ್ಯಾಸ ಕಾಮತ್, ಗೌಡ ಸಾರಸ್ವತ ಬ್ರಾಹ್ಮಣರಲ್ಲಿ ಅತಿ ಕಡುಬಡವರಿದ್ದಾರೆ. ಕೇಂದ್ರ ಸರ್ಕಾರ ಜಾರಿ ಮಾಡಿರುವ ಶೇ 10 ರಷ್ಟು ಮೀಸಲಾತಿ ಪಡೆಯುವ ಉದ್ದೇಶದಿಂದ ಜಾತಿ–ಆದಾಯ ಪ್ರಮಾಣ ಪತ್ರ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದರು.

ಅಲ್ಲದೆ, ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವ ಕುರಿತ ಸರ್ಕಾರದ ಸುತ್ತೋಲೆಯಲ್ಲಿ ಗೌಡ ಸಾರಸ್ವತ ಸಮುದಾಯದ ಹೆಸರನ್ನು ಸೇರ್ಪಡೆಗೊಳಿಸಿಲ್ಲ ಎಂದರು.

ವಾಣಿ/ವೈಶ್ಯವಾಣಿ ಸೇರ್ಪಡೆಗೆ ಸಚಿವ ಆಗ್ರಹ: ಮಂಗಳೂರು, ಉಡುಪಿ, ಉತ್ತರಕನ್ನಡ, ಬೆಳಗಾವಿ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ವಾಣಿ/ವೈಶ್ಯವಾಣಿ ಸಮುದಾಯವನ್ನೂ ಮೇಲ್ವರ್ಗದ ಹಿಂದುಳಿದ ಜಾತಿ ಪಟ್ಟಿಗೆ ಸೇರಿಸಬೇಕು ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಒತ್ತಾಯಿಸಿದರು.

ಸುದ್ದಿ 2 ನಿಮಿಷ

‘ಅತಿಥಿ ಉಪನ್ಯಾಸಕರ ಬೇಡಿಕೆ–ಚರ್ಚಿಸಿ ತೀರ್ಮಾನ’

ಬೆಂಗಳೂರು: ‘ಕನಿಷ್ಠ ₹ 25 ಸಾವಿರ ವೇತನ ನಿಗದಿ, ಸೇವಾ ಭದ್ರತೆ ಕಲ್ಪಿಸಬೇಕೆಂಬ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಬೇಡಿಕೆಗಳ ಬಗ್ಗೆ ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿ, ತೀರ್ಮಾನಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಕೊಠಡಿಯಲ್ಲಿ ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳ ಜತೆ ಸೋಮವಾರ ಮಾತುಕತೆ ನಡೆಸಿದ ಬಳಿಕ ಈ ವಿಷಯ ತಿಳಿಸಿದ ಅವರು, ‘ಮಾನವೀಯತೆ ಆಧಾರದಲ್ಲಿ ಬೇಡಿಕೆಗಳನ್ನು ಪರಿಶೀಲಿಸಲಾಗುವುದು’ ಎಂದರು.

‘ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡುವ ವಿಷಯವನ್ನು ಮಾನವೀಯ ನೆಲೆಯಲ್ಲಿ ಪರಿಗಣಿಸಿ, ನಿರ್ಣಯ ಕೈಗೊಳ್ಳುವಂತೆ ಸಭಾಪತಿ ಮತ್ತು ಶಿಕ್ಷಕರ ಕ್ಷೇತ್ರಗಳನ್ನು ಪ್ರತಿನಿಧಿಸುವ ಪರಿಷತ್ ಸದಸ್ಯರು ಮನವಿ ಮಾಡಿದ್ದಾರೆ. ಹತ್ತು ವರ್ಷ ಸೇವಾವಧಿ ಪೂರೈಸಿರುವ ಉಪನ್ಯಾಸಕರ ಸೇವೆ ಕಾಯಂಗೊಳಿಸಿ, ಪ್ರತಿ ಹನ್ನೆರಡು ತಿಂಗಳಿಗೊಮ್ಮೆ ಮರು ನೇಮಕ ಬೇಡ. ಕಾಯಂ ಆಗುವವರೆಗೂ ಬಳಸಿಕೊಳ್ಳುತ್ತಿರಬೇಕು. ಮಾಸಿಕ ಕನಿಷ್ಠ ₹ 25 ಸಾವಿರ ಗೌರವಧನ ನಿಗದಿ ಮಾಡಬೇಕು ಎಂಬ ಬೇಡಿಕೆಗಳಿವೆ’ ಎಂದರು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಆಯನೂರು ಮಂಜುನಾಥ್, ಅರುಣ್ ಶಹಾಪೂರ, ಎಸ್.ಎಲ್. ಬೋಜೇಗೌಡ, ಎಸ್.ವಿ. ಸಂಕನೂರ ಇದ್ದರು.

‘1– 5 ತರಗತಿ ನಡೆಸಿದರೆ ಕಠಿಣ ಕ್ರಮ’

ಬೆಂಗಳೂರು: ‘ಸರ್ಕಾರದ ಆದೇಶ ಮೀರಿ 1ರಿಂದ 5ರವರೆಗಿನ ತರಗತಿಗಳನ್ನು ನಡೆಸುತ್ತಿರುವ ಶಾಲೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಸೂಚಿಸಿದ್ದಾರೆ.

‘ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ನಿರ್ದೇಶನದ ಅನ್ವಯ 6ನೇ ತರಗತಿಯಿಂದ ಮೇಲಿನ ತರಗತಿಗಳನ್ನು ಮಾತ್ರ ಆರಂಭಿಸಲು ಅನುಮತಿ ನೀಡಲಾಗಿದೆ. ಆದರೆ, ರಾಜ್ಯದ ಹಲವೆಡೆ ಕೆಲವು ಖಾಸಗಿ ಶಾಲೆಗಳು 1ರಿಂದ 5ನೇ ತರಗತಿಗಳನ್ನು ಅನಧಿಕೃತವಾಗಿ ನಡೆಸುತ್ತಿರುವ ಕುರಿತು ಮಾಧ್ಯಮಗಳಲ್ಲಿ ವರದಿಗಳು ಬಂದಿವೆ. ಇಂಥ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಅವರು ಇಲಾಖೆಯ ಅಧಿಕಾರಿಗಳಿಗೆ ಅವರು ನಿರ್ದೇಶನ ನೀಡಿದ್ದಾರೆ.

‘1ರಿಂದ 5ರವರೆಗಿನ ತರಗತಿಗಳನ್ನು ಅನಧಿಕೃತವಾಗಿ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಪತ್ತೆ ಹಚ್ಚಿ, ಕಾನೂನು ಕ್ರಮ ಕೈಗೊಳ್ಳಲು ತಾಲ್ಲೂಕು ಮಟ್ಟದಲ್ಲಿ ಪರಿಶೀಲನಾ ತಂಡಗಳನ್ನು ರಚಿಸಿ ತಕ್ಷಣ ಸುತ್ತೋಲೆ ಹೊರಡಿಸಬೇಕು’ ಎಂದೂ ಇಲಾಖೆಯ ಆಯಕ್ತರು ಮತ್ತು ಹೆಚ್ಚುವರಿ ಆಯುಕ್ತರಿಗೆ ಸಚಿವರು ಸೂಚಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

BEFORE THE ARBITRAL TRIBUNAL OF SRI D. KRISHNAPPA SOLE ARBITRATOR AT ARBITRATION & CONCILIATION CENTRE AT BENGALURU (DOMESTIC & INTERNATIONAL)
A.C. NO, 122 OF 2020 (CMP 88/2019)
BETWEEN:
M/s Azvasa Education Pvt Ltd. ....CLAIMANT
AND:
Om Eshwari Vidya Samsthe Trust, And another ...RESPONDENTS
SUMMONS TO RESPONDENT NO. 2
Respondent No.2
Mr Lokeshwarappa.S, S/o Sri Siddappa, Aged about 47 years. No 450, 3rd Cross. 3rd Main. R R Layout, Jnanabharati Post, Nagadevanahalli. Bengaluru-560056
... RESPONDENT N0.2
Whereas the claimant has filed the above Arbitration case for an award against the respondents U/s 23(1) of The Arbitration and Conciliation Act 1996. The Sole Arbitrator has ordered notice to the above said respondent on 12.03.2021
The above case is posted on 29/03/2021 at 11.30 AM for your appearance
Therefore you are hereby requested to appear on that date before the said Sole Arbitrator at Arbitration and Conciliation Centre at Bengaluru, in person or through an Advocate, failing which the matter will be decided in your absence.
Given under my hand and the seal of the Arbitral Tribunal on this the 12th day of March 2021 at Bengaluru.
By Hon'ble Tribunal order
Advocate for the Claimant
M. KESHAVA REDDY, ADVOCATE
No.18/7, 1st Cross, Behind Janardhan Hotel, Near Shivananda Circle, BENGALURU - 560 001.

BUSINESS

Business to Business

Finance

NRI'S INVESTMENT AND FINANCE AVAILABLE ON LOW INTEREST AGAINST, PROPERTIES, LAND& BUILDING, SITES, FLATS, (ALSO) BUSINESS, COMPANIES CALL: 7411265189

PERSONAL

Lost

LOST
I, V. Narayanan S/o G.S. Vydhinathan Residing at No.4051, 5th Floor, Prestige South Ridge Apts., Hosakerehalli, BSK 3rd Stage, Bengaluru have lost my original sale deed of PID No.55-771-20/160 registered in BNG (U)-BSK 10358/2011-12,26-26.
Finders pls contact: 9945644770 or inform near by Police Station.
Ref. Lost report No. 070810/2021 dated 14/3/2021

LOST
I, N Nagappa S/o Late Narasappa R/a No.38, 2nd Cross, Thirumala Layout, Kithaganur, K R Puram, Bangalore-36. Have LOST Original Sale Deed bearing Reg No.17509/2013-14, dated 10.03.2014 Register in the office of Sub-Registrar Banaswadi, Bangalore East Taluk Bangalore while shifting my resident. Finders Pls Surrender to the owner 9482750905

Change of Name

I, KAVYA MARIA CHRISTINE aged about 30 years D/o DR. Tilak Kumar Residing at #140, Maathru Krupa, 39th Main, 4th Cross, BTM 2nd Stage, Bangalore 560068. have changed my name to KAVYA TILAK KUMAR vide affidavit dated 15.03.2021 before notary B.M. Chandrashekar, Bangalore.

JOB OPPORTUNITIES

Wanted

WANTED LABORATORY MANAGER
A newly established Water, Microbiology, Food, Soil & Air Testing Laboratory located In KIADB Industrial Area, Mudipu, Mangalore requires a LABORATORY MANAGER for immediate placement.
- The Candidate must be a Graduate in Chemistry/ Microbiology With 7 years' experience in Supervisory Level. Or Must be a Post Graduate in Chemistry/ Microbiology with 5 years Experience in Managerial position.
- Knowledge and Experience in Chemistry & Microbiology Tests.
- Knowledge of Federal Laboratory compliance standards, local regulations and other standards as per Government entities.
- Must be fully Conversant with various Certification requirements and processes, ISO procedures and capable to independently handle all such certification Processes.
- Excellent Organizational Skills and ability to train the laboratory staff, and establish the Laboratory as a profit Centre.
- Knowledge of prevailing market prospects & experience in interaction with Corporate Customers will be desirable.

Please rush your CVs to: info@aquamater.co.in

Out-Station

GOA INDUSTRIAL Area 1000 meter plot 260 meter builtup area. Ideal for Pharma also. Contact: 9620938350/ 9844243147.

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Sites

Sanjaynagar

EAST FACING SITE FOR SALE Near Sandeeppani School SANJAYANAGAR, area 1160 Sq.ft. Contact: 9845402737

DH Classifieds
BOOK YOUR AD on SATURDAY & GET 50% OFF ON SUNDAY
For more information contact:
9880856233
9731810277 | 9901641752
9845114560 | 9886213331
*condition apply

REAL ESTATE SELLING

Commercial Land

Mysore

PRIME COMMERCIAL Property 88000 Square Feet on 10 Lane Mysore Express Highway Near Underpass Close to Mysore is for Sale. Contact Owner 8277589915 /9471019028

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

AUTOMOTIVE

Four Wheelers Selling

Maruti

ACCIDENT VEHICLE KA-03 MN-6910 Maruti Ritz VXI Model 2011 for sale without RC Contact: 9980017170

ಹಾಲು ಉತ್ಪಾದಕರ ಸಂಘ: ಪದ್ಮಾವತಿ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ

ಬಿ.ಟಿ.ಪದ್ಮಾವತಿ, ಗಾಯತ್ರಮ್ಮ

ನೆಲಮಂಗಲ: ತಾಲ್ಲೂಕಿನ ಬರದಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಬಿ.ಟಿ.ಪದ್ಮಾವತಿ ರಾಜಣ್ಣ ಅವರು ಸತತ ನಾಲ್ಕನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ.

ಗಾಯತ್ರಮ್ಮ ಮುನಿರಾಮೇಗೌಡ (ಉಪಾಧ್ಯಕ್ಷ), ಗಂಗಮ್ಮ ಮಾರೇಗೌಡ, ಜಯಮ್ಮ ಲೋಕೇಶ್, ಎಚ್. ಎಸ್.ಜ್ಯೋತಿ ರವೀಂದ್ರಕುಮಾರ್, ಮಹಾಲಕ್ಷ್ಮಮ್ಮ ದೊಡ್ಡಹನುಮೇಗೌಡ, ರಾಜೇಶ್ವರಿ ರಂಗಸ್ವಾಮಿ, ರೇಣುಕಮ್ಮ ಹನುಮಂತರಾಯಪ್ಪ, ವೆಂಕಟಲಕ್ಷ್ಮಮ್ಮ ಗಂಗಪ್ಪ, ಯಲ್ಲಮ್ಮ ನಾಗರಾಜು, ನೇತ್ರಾವತಿ ರಾಮಯ್ಯ, ಪದ್ಮ ಲೋಕೇಶ್, ಮಂಗಳಗೌರಮ್ಮ ರಂಗಸ್ವಾಮಿ ನಿರ್ದೇಶಕರಾಗಿ, ಗೌರಮ್ಮ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಗೌರವ ಧನ ಹೆಚ್ಚಳಕ್ಕೆ ನಿರ್ಲಕ್ಷ್ಯ ಆರೋಪ: ಪ್ರತಿಭಟನೆ

ಬೆಂಗಳೂರು: ‘ಸೇವಾ ಹಿರಿತನದ ಮೇಲೆ ಗೌರವ ಧನ ಹೆಚ್ಚಳ ಮಾಡಲು ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರಿದೆ’ ಎಂದು ಆರೋಪಿಸಿ ರಾಜ್ಯದ ಅಂಗನವಾಡಿಗಳ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಎದುರು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಸಾಲ ವಸೂಲಿಗೆ ಕಿರುಕುಳ: 2 ವರ್ಷ ಜೈಲು

ಬೆಂಗಳೂರು: ಸಾಲ ವಸೂಲಿಗಾಗಿ ಕಿರುಕುಳ ಮತ್ತು ಹಿಂಸೆ ನೀಡುವ ನೀಡುವ ಲೇವಾದೇವಿದಾರರಿಗೆ ದಂಡ ಮತ್ತು ಜೈಲು ಶಿಕ್ಷೆ ಪ್ರಮಾಣ ಹೆಚ್ಚಿಸುವ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ)ಮಸೂದೆ 2021 ಕ್ಕೆ ವಿಧಾನಸಭೆ ಒಪ್ಪಿಗೆ ನೀಡಿತು.

ಮೊದಲ ಬಾರಿ ಅಪರಾಧ ಎಸಗಿದವರಿಗೆ ಒಂದು ವರ್ಷದ ವರೆಗೆ ವಿಸ್ತರಿಸಬಹುದಾದ ಸಾದಾ ಜೈಲು ಶಿಕ್ಷೆ ಅಥವಾ ₹50 ಸಾವಿರದವರೆಗೆ ಜುಲ್ಮಾನೆ. ಎರಡನೇ ಅಥವಾ ಮುಂದುವರೆದ ಅಪರಾಧಕ್ಕಾಗಿ ಎರಡು ವರ್ಷ ಜೈಲು ಅಥವಾ ₹1 ಲಕ್ಷದವರೆಗೆ ಜುಲ್ಮಾನೆ ವಿಧಿಸಲಾಗುವುದು. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಮಸೂದೆ ಮಂಡಿಸಿದರು.

ಅಲ್ಲದೆ, ಕರ್ನಾಟಕ ಪೌರಸಭೆಗಳ(ತಿದ್ದುಪಡಿ) ಮಸೂದೆಗೂ ಒಪ್ಪಿಗೆ ನೀಡಲಾಯಿತು. ಇದರಲ್ಲಿ, ಗಲಭೆಕೋರರು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಇದ್ದ ಅಧಿಕಾರದಲ್ಲಿ ‘ಕುಷ್ಠ ರೋಗಿ’ಗಳು ಎಂಬ ಪದವನ್ನು ತಿದ್ದುಪಡಿ ಮೂಲಕ ತೆಗೆದು ಹಾಕಲಾಗಿದೆ.

‘ರೈತರಿಗೆ ಸಕ್ಕರೆ ಕಾರ್ಖಾನೆಯಿಂದ ₹4 ಸಾವಿರ ಕೋಟಿ ಬಾಕಿ’

ಬೆಂಗಳೂರು: ‘ರಾಜ್ಯದ 67 ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ₹4 ಸಾವಿರ ಕೋಟಿ ಬಾಕಿ ಬರಬೇಕಿದೆ. ಎರಡು ವರ್ಷದಲ್ಲಿ ಮೂರು ಸಕ್ಕರೆ ಸಚಿವರು ಬದಲಾಗಿದ್ದಾರೆ. ರೈತರ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಧೋರಣೆ ಮುಂದುವರಿದಿದೆ’ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

‘ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ನೀಡುವಲ್ಲಿ ನಿಯಮ ಉಲ್ಲಂಘನೆಯಾಗುತ್ತಿದೆ. ಅವೈಜ್ಞಾನಿಕ ನೀತಿಗಳಿಂದ ಸಮಸ್ಯೆ ಹೆಚ್ಚಾಗುತ್ತಿದ್ದು, ಅವೆಲ್ಲವುಗಳನ್ನು ಸರ್ಕಾರ ಪರಿಹರಿಸಬೇಕು. ಕೃಷಿ ಕಾಯ್ದೆ ವಿಚಾರದಲ್ಲಿ ಪ್ರಧಾನಿ ರೈತರ ಸಭೆ ಕರೆಯಬೇಕು’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಸಮಾವೇಶ: ‘ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬುಬೆಳೆಗಾರರ ಸಂಘದ ನೇತೃತ್ವದಲ್ಲಿ ಕೃಷಿ ಕಾಯ್ದೆಗಳ ವಿರುದ್ಧ ರಾಜ್ಯದ ರೈತರಿಗೆ ಅರಿವು ಮೂಡಿಸಲು ಮಾ.20 ರಂದು ಶಿವಮೊಗ್ಗದ ವಿಜ್ಞಾನ ಕಾಲೇಜು ಮೈದಾನದಲ್ಲಿ ‘ಕಿಸಾನ್ ಮಹಾಪಂಚಾಯತ್ ಸಭೆ’ ಆಯೋಜಿಸಲಾಗಿದೆ’ ಎಂದರು.

‘ನಳಿನ್ ಕುಮಾರ್ ‘ಪಾದರಸ’ದಂತ ಅಧ್ಯಕ್ಷ’

ಬೆಂಗಳೂರು:‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ‘ಪಾದರಸ’ದಂತೆ ಕಾರ್ಯ ನಿರ್ವಹಿಸಿ ಪಕ್ಷವನ್ನು ಸಂಘಟಿಸುತ್ತಿದ್ದಾರೆ. ಉಪಚುನಾವಣೆಯಲ್ಲಿನ ಪಕ್ಷದ ಗೆಲುವಿಗೆ ಇವರ ಕಾರ್ಯಕ್ಷಮತೆ ಮತ್ತು ಶ್ರಮವೇ ಕಾರಣ’ ಎಂದು ಬಿಜೆಪಿ ರಾಜ್ಯ ವಕ್ತಾರ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ಬಲಿಷ್ಠ ಅಧ್ಯಕ್ಷರ ಹುಡುಕಾಟ’ ವರದಿಗೆ ಸಮಜಾಯಿಷಿ ನೀಡಿರುವ ಅವರು, ಕಟೀಲ್ ಅವರು ತಮ್ಮ ಒಂದೂವರೆ ವರ್ಷದ ಅವಧಿಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಪಕ್ಷವನ್ನು ಸದೃಢಗೊಳಿಸಿದ್ದಾರೆ. ಅವರ ಬದಲಾವಣೆ ಇಲ್ಲ ಎಂದು ತಿಳಿಸಿದ್ದಾರೆ.

ನಗರದ ಸೀಕ್ವೆಲ್ ಲಾಜಿಸ್ಟಿಕ್ಸ್ ಸಂಸ್ಥೆಯು ಪ್ರೇರಣಾ ಮೋಟಾರ್ಸ್‌ನಿಂದ 31 ಟಾಟಾ ಯೋಧ ಕ್ರ್ಯೂಕ್ಯಾಬ್ ಸರಕು ಸಾಗಣೆ ವಾಹನಗಳನ್ನು ಖರೀದಿಸಿತು. ಸಂಸ್ಥೆಯ ಜೇಮ್ಸ್ ಜೈಪ್ರಕಾಶ್, ಟಾಟಾ ಮೋಟಾರ್ಸ್ ಕ್ಷೇತ್ರೀಯ ಮಾರಾಟ ವ್ಯವಸ್ಥಾಪಕ ನಾಗನಗೌಡ, ಟಾಟಾ ಮೋಟಾರ್ಸ್‌ನ ಶ್ರೀಧರ ಕಟ್ಟೆ, ಶ್ರೀರಾಮ ಬಿಡದಿ ಮತ್ತು ಪ್ರೇರಣಾ ಮೋಟಾರ್ಸ್‌ನ ಸಿಇಒ ಸೋಮಸುಂದರಂ, ಮಾರಾಟ ವಿಭಾಗದ ನವೀನ್, ಮನೋಜ್ ಬಿರಾದಾರ ಇದ್ದರು

ಕೋವಿಡ್: ಗುಣಮುಖರಿಗಿಂತ ಸೋಂಕಿತರ ಸಂಖ್ಯೆ ದುಪ್ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಗುಣಮುಖರಾದವರಿಗಿಂತ ಸೋಂಕಿತರ ಸಂಖ್ಯೆ ಹೆಚ್ಚಿರುವ ಪರಿಸ್ಥಿತಿ ಮತ್ತೆ ಮುಂದುವರಿದಿದೆ. ತಿಂಗಳ ಹಿಂದೆ ಸೋಂಕಿತರಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಾಗಿರುತ್ತಿತ್ತು.

ರಾಜ್ಯದಲ್ಲಿ ಸೋಮವಾರ 429 ಮಂದಿ ಕೋವಿಡ್‌ನಿಂದ ಗುಣಮುಖರಾಗಿದ್ದರೆ, ಇದರ ದುಪ್ಪಟ್ಟು ಅಂದರೆ 932 ಮಂದಿಗೆ ಕೋವಿಡ್ ದೃಢಪಟ್ಟಿದೆ. ಸೋಂಕು ಪ್ರಕರಣ ಏರಿಕೆಯ ಜೊತೆಗೆ ಮರಣ ಪ್ರಮಾಣವೂ ಹೆಚ್ಚಳವಾಗಿದ್ದು, ಕಳೆದ 24 ಗಂಟೆಯಲ್ಲಿ 7 ಮಂದಿ ಸೋಂಕಿನಿಂದ ಸಾವಿಗೀಡಾಗಿದ್ದಾರೆ.

ಸಕ್ರಿಯ ಪ್ರಕರಣಗಳ ಪೈಕಿ 8,860 ಮಂದಿ ಚಿಕಿತ್ಸೆಯಲ್ಲಿದ್ದಾರೆ. 125 ಮಂದಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬೆಂಗಳೂರಿನಲ್ಲಿ ಮಾ.15ರಂದು 550 ಸೋಂಕು ಪ್ರಕರಣಗಳು ವರದಿಯಾಗಿದ್ದು ಐವರು ಮೃತಪಟ್ಟಿದ್ದಾರೆ.

1.25 ಲಕ್ಷ ಮಂದಿಗೆ ಲಸಿಕೆ: ರಾಜ್ಯದಲ್ಲಿ ಸೋಮವಾರ 3,188 ಕೇಂದ್ರಗಳ ಮೂಲಕ 1.25 ಲಕ್ಷ ಮಂದಿಗೆ ಕೋವಿಡ್ ಲಸಿಕೆ ವಿತರಿಸಲಾಗಿದೆ.

ಬೆಂಗಳೂರು ವಿವಿ: ಯುಜಿಸಿ ನಿಯಮಾವಳಿ ಉಲ್ಲಂಘನೆ ಆರೋಪ

ಪಿಎಚ್‌.ಡಿ ವಿದ್ಯಾರ್ಥಿಗಳಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಚ್‌.ಡಿ ಪ್ರವೇಶ ಪ್ರಕ್ರಿಯೆಯಲ್ಲಿ ಯುಜಿಸಿ ನಿಯಮಾವಳಿಗಳನ್ನು ಉಲ್ಲಂಘಿಸಲಾಗುತ್ತಿದೆ ಎಂದು ಆರೋಪಿಸಿ ನೂರಾರು ವಿದ್ಯಾರ್ಥಿಗಳು ಬೆಂಗಳೂರು ಆಡಳಿತ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ವಿ.ವಿ. ಆವರಣದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ರ‍್ಯಾಲಿ ನಡೆಸಿದ ವಿದ್ಯಾರ್ಥಿಗಳು ಎಲ್ಲ ವಿಭಾಗಗಳಿಗೆ ಬೀಗ ಹಾಕಿ ಪ್ರತಿಭಟಿಸಿದರು.

‘ಯುಜಿಸಿ ನಿಯಮಾವಳಿಗಳ ಪ್ರಕಾರ ಪ್ರತಿ ಪ್ರವೇಶ ಪ್ರಕ್ರಿಯೆಯಲ್ಲಿ ಸಾಮಾನ್ಯ ವರ್ಗಕ್ಕೆ ಶೇ 55, ಹಿಂದುಳಿದ ವರ್ಗಗಳಿಗೆ ಶೇ 50 ಮತ್ತು ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗೆ ಶೇ 45ರಷ್ಟು ಅರ್ಹತಾ ಅಂಕಗಳನ್ನು ನಿಗದಿಪಡಿಸಬೇಕು. ಆದರೆ, ಬೆಂಗಳೂರು ವಿ.ವಿಯಲ್ಲಿ ಈ ಯಾವುದೇ ವಿನಾಯಿತಿ ನೀಡದೆ ಪ್ರವೇಶ ಪ್ರಕ್ರಿಯೆ ನಡೆಸಲಾಗುತ್ತಿದೆ’ ಎಂದು ವಿದ್ಯಾರ್ಥಿಗಳು ದೂರಿದರು.

ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆಡಳಿತ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ನಿವೃತ್ತಿಗೆ 6 ತಿಂಗಳು ಬಾಕಿ ಇರುವ ಪ್ರಾಧ್ಯಾಪಕರಿಗೆ ಪಿಎಚ್‌.ಡಿ ಮಾರ್ಗದರ್ಶನ ನೀಡಲು ಪ್ರೊ. ಕೆ.ಆರ್. ವೇಣುಗೋಪಾಲ್ ಅವರು ಅವಕಾಶ ನಿರಾಕರಿಸುತ್ತಿದ್ದಾರೆ. ಇದರಿಂದ ಹಲವಾರು ವಿದ್ಯಾರ್ಥಿಗಳ ಪಿಎಚ್‌.ಡಿ ವ್ಯಾಸಂಗ ಮಾಡಲು ಸಾಧ್ಯವಾಗುತ್ತಿಲ್ಲ’ ಅಳಲು ತೋಡಿಕೊಂಡರು.

ಯುಜಿಸಿ ನಿಯಮ ಪಾಲನೆ: ‘ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ಪ್ರವೇಶ ಪ್ರಕ್ರಿಯೆಯು ಯುಜಿಸಿ ನಿಯಮಾವಳಿಯಂತೆಯೇ ನಡೆಯುತ್ತಿದೆ. 2019ರ ಜುಲೈನಲ್ಲಿ ಅರ್ಜಿ ಕರೆಯಲಾಗಿತ್ತು. 3,737 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಗ 764 ಸೀಟುಗಳು ಲಭ್ಯವಿದ್ದವು. ಅದೇ ಡಿಸೆಂಬರ್‌ನಲ್ಲಿ ಪ್ರವೇಶಾತಿ ಪರೀಕ್ಷೆ ನಡೆಸಲಾಗಿತ್ತು. ಫಲಿತಾಂಶ ಪ್ರಕಟಿಸಿದ ನಂತರ ಆಕ್ಷೇಪಣೆಗೆ ಕಾಲಾವಕಾಶ ನೀಡಲಾಗಿತ್ತು. ಜೇಷ್ಠತಾ ಪಟ್ಟಿ ಪ್ರಕಟಿಸುವ ವೇಳೆ ಕೋವಿಡ್‌ನಿಂದಾಗಿ ಲಾಕ್‌ಡೌನ್ ಮಾಡಿದ್ದರಿಂದ ಪ್ರವೇಶ ಪ್ರಕ್ರಿಯೆ ನಡೆಸಲು ಸಾಧ್ಯವಾಗಲಿಲ್ಲ’ ಎಂದು ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ವಿಶ್ವವಿದ್ಯಾಲಯದಲ್ಲಿ ಜಾರಿಯಲ್ಲಿರುವ ಪಿಎಚ್‌.ಡಿ ವಿನಿಯಮ–2016ರಲ್ಲಿ ಯಾವುದೇ ತಿದ್ದುಪಡಿಯನ್ನು ಮಾಡಲು ವಿಶ್ವವಿದ್ಯಾಲಯವು ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಈ ಸಂಬಂಧ ಏ.9ರಂದು ವಿಶ್ವವಿದ್ಯಾಲಯವು ಸಂಬಂಧಪಟ್ಟವರ ಸಭೆ ಕರೆದಿದ್ದು, ಈ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದ್ದಾರೆ.

ಅಭಿವೃದ್ಧಿ ವಿರೋಧಿ ಬಜೆಟ್: ಟೀಕಾಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 2004ರಲ್ಲಿ ವಿತ್ತೀಯ ಹೊಣೆಗಾರಿಕೆ ಕಾಯ್ದೆ ಜಾರಿಗೆ ಬಂದ ಬಳಿಕ ಮೊದಲ ಬಾರಿಗೆ ಖೋತಾ ಬಜೆಟ್ ಮಂಡನೆಯಾಗಿದೆ. ಇದೊಂದು ಅಭಿವೃದ್ಧಿ ವಿರೋಧಿ ಬಜೆಟ್' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಾಪ್ರಹಾರ ನಡೆಸಿದರು.

ವಿಧಾನಸಭೆಯಲ್ಲಿ ಸೋಮವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಈ ಸಲ ₹143 ಕೋಟಿ ಮಿಗತೆ ವರಮಾನದ ನಿರೀಕ್ಷೆ ಮಾಡಲಾಗಿತ್ತು. ಆದರೆ, ಈ ಸಲ ₹19,485 ಕೋಟಿ ವರಮಾನ ಕೊರತೆಯಾಗಿದೆ. ಮುಂದಿನ ವರ್ಷದ ವೇಳೆ ಕೊರತೆ ಪ್ರಮಾಣ ₹15,133 ಕೋಟಿ ಆಗಬಹುದು. ಇಂತಹ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ದುಡ್ಡು ಎಲ್ಲಿದೆ' ಎಂದು ಪ್ರಶ್ನಿಸಿದರು.

'ಒಟ್ಟು ಆಂತರಿಕ ಉತ್ಪನ್ನದ ಶೇ 25ರಷ್ಟು ಸಾಲ ಪಡೆಯಲು ಅವಕಾಶ ಇದೆ. ಹೆಚ್ಚುವರಿಯಾಗಿ ಶೇ 2ರಷ್ಟು ಸಾಲ ಪಡೆಯಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಸರ್ಕಾರ ₹71 ಸಾವಿರ ಕೋಟಿ ಸಾಲ (ಶೇ 26.9) ಪಡೆಯಲು ತೀರ್ಮಾನಿಸಿದೆ. ಸಾಲ ಪಡೆಯುವುದು ತಪ್ಪಲ್ಲ. ಅದನ್ನು ಶಾಶ್ವತ ಆಸ್ತಿ ಸೃಷ್ಟಿಗೆ ಬಳಸಿಕೊಳ್ಳಬೇಕು. ಆದರೆ, ಬಿಜೆಪಿ ಸರ್ಕಾರ ಈ ಮೊತ್ತವನ್ನು ಬದ್ಧ ವೆಚ್ಚಗಳಿಗೆ ಬಳಸಿಕೊಳ್ಳುತ್ತಿದೆ' ಎಂದು ಅವರು ಹೇಳಿದರು.

ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಮಾತನಾಡಿದರು

'ಬಂಡವಾಳ ವೆಚ್ಚಕ್ಕೆ ₹46 ಸಾವಿರ ಕೋಟಿ ಮೀಸಲಿಡಲಾಗಿದೆ ಎಂದು ಸರ್ಕಾರ ಹೇಳಿತ್ತು. ಈ ವರ್ಷ ಬಳಸಿದ್ದು ₹19 ಸಾವಿರ ಕೋಟಿ ಮಾತ್ರ. 2021–22ರಲ್ಲಿ ₹44,237 ಕೋಟಿ, 22–23ರಲ್ಲಿ ₹26,735 ಕೋಟಿ, 23–24ರಲ್ಲಿ ₹14,284 ಕೋಟಿ, 24–25ರಲ್ಲಿ ₹10,942 ಕೋಟಿಗೆ ಬಂಡವಾಳ ವೆಚ್ಚ ಇಳಿಯಲಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಪಿಂಚಣಿ ಕೊಡಲು ಸಹ ಸರ್ಕಾರದ ಬಳಿ ಹಣ ಇರುವುದಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

'ನಮ್ಮ ಸರ್ಕಾರ ಇದ್ದಾಗ ಬದ್ಧ ವೆಚ್ಚ ಶೇ 78ರಷ್ಟು ಇತ್ತು. 2019–20ರಲ್ಲಿ ಶೇ 87, 20–21ರಲ್ಲಿ ಶೇ 92 ಆಗಿತ್ತು. ಮುಂದಿನ ವರ್ಷದ ವೇಳೆ ಶೇ 102 ಆಗಲಿದೆ ಎಂದು ಅಂದಾಜಿಸಲಾಗಿದೆ. ಎರಡು ಕಡೆಯಲ್ಲಿ ಡಬಲ್ ಎಂಜಿನ್ ಸರ್ಕಾರ ಇದ್ದರೆ ಸ್ವರ್ಗ ಸೃಷ್ಟಿ ಆಗಲಿದೆ ಎಂದು ಬಿಜೆಪಿಯವರು ಹೇಳಿದ್ದರು. ಇದೇನಾ ಸ್ವರ್ಗ' ಎಂದು ಛೇಡಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಬಂಡವಾಳ ವೆಚ್ಚಕ್ಕೆ ಶೇ 17 ಮೊತ್ತ ಮೀಸಲು ಇಡಲಾಗಿದೆ. ಬಜೆಟ್‌ನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಿಟ್ಟ ಹಣ ಕಡಿತ ಮಾಡುವುದಿಲ್ಲ' ಎಂದರು.

ಅನುಗ್ರಹ– ಬಾಕಿ ಬಿಡುಗಡೆ: 'ಅನುಗ್ರಹ' ಯೋಜನೆ ಮುಂದುವರಿಸಲಾಗುವುದು. ಬಾಕಿ ಇರುವ ₹38 ಕೋಟಿಯನ್ನು ಇನ್ನು 2–3 ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಯಡಿಯೂರಪ್ಪ ಭರವಸೆ ನೀಡಿದರು.

ಜಾನುವಾರುಗಳು ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಪರಿಹಾರ ನೀಡುವ ಈ ಯೋಜನೆ ನಿಲ್ಲಿಸಲಾಗಿದೆ ಎಂದು ಕಾಂಗ್ರೆಸ್ ಸದಸ್ಯರು ಟೀಕಾ ಪ್ರಹಾರ ನಡೆಸಿದರು.

ಮತ್ತೆ ಅಧಿಕಾರಕ್ಕೆ: ಸಿದ್ದರಾಮಯ್ಯ ವಿಶ್ವಾಸ

'ಮುಂದಿನ ಸಲ ನಮಗೆ ಜನರು ಅವಕಾಶ ನೀಡಲಿದ್ದಾರೆ. ವಿ ವಿಲ್ ಕಮ್ ಬ್ಯಾಕ್' ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

'ರಾಜ್ಯ ಸರ್ಕಾರ ಮಿತಿ ಮೀರಿ ಸಾಲ ಮಾಡುತ್ತಿದೆ' ಎಂದು ಸಿದ್ದರಾಮಯ್ಯ ಆರೋಪಿಸಿದರು. ಆಗ ಮಧ್ಯಪ್ರವೇಶಿಸಿದ ಯಡಿಯೂರಪ್ಪ, 'ನನ್ನ ಜಾಗದಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದೀರಿ' ಎಂದು ಪ್ರಶ್ನಿಸಿದರು.

'ನೀವು ಆ ಜಾಗ ಬಿಡಿ. ನಾನೇನು ಮಾಡುವೆ ಎಂದು ಆಗ ಹೇಳುವೆ' ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು. 'ನಿಮ್ಮನ್ನು ಜನರು ತಿರಸ್ಕರಿಸಿದ್ದಾರಲ್ಲ' ಎಂದು ಬಿಜೆಪಿ ಸದಸ್ಯರು ಕಾಲೆಳೆದರು.

'ರಾಜ್ಯದಲ್ಲಿ 1947ರಿಂದ ಬೇರೆ ಬೇರೆ ಪಕ್ಷಗಳಿಗೆ ಜನರು ಅವಕಾಶ ನೀಡಿದ್ದಾರೆ. ಮತ್ತೆ ನಾವೇ ಬರುತ್ತೇವೆ' ಎಂದು ಸಿದ್ದರಾಮಯ್ಯ ಹೇಳಿದರು.

ಮುಂದೆಯೂ ಬಾದಾಮಿಯಿಂದಲೇ ಸ್ಪರ್ಧೆ

'ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಬಾದಾಮಿ ಕ್ಷೇತ್ರದಿಂದಲೇ ಸ್ಪರ್ಧಿಸುತ್ತೇನೆ. ರಾಜಕಾರಣದಿಂದ ಓಡಿ ಹೋಗುವುದಿಲ್ಲ. ಈ ಬಗ್ಗೆ ಯಾರಿಗೂ ಸಂಶಯ ಬೇಡ' ಎಂದು ಸಿದ್ದರಾಮಯ್ಯ ಹೇಳಿದರು.

'ಮತ್ತೆ ಮುಖ್ಯಮಂತ್ರಿಯಾಗುವ ತಿರುಕನ ಕನಸನ್ನು ಕಾಣುತ್ತಿದ್ದೀರಿ. ಮುಂಬರುವ ಉಪಚುನಾವಣೆಗಳಲ್ಲಿ ನಾವೇ ಗೆದ್ದು ಬರುತ್ತೇವೆ. ಮತ್ತೆ ಇಲ್ಲಿ ಬಂದು ಮಾತನಾಡೋಣ' ಎಂದು ಯಡಿಯೂರಪ್ಪ ಛೇಡಿಸಿದರು.

'ಉಪಚುನಾವಣೆಯಲ್ಲಿ ನಮ್ಮ ಸರ್ಕಾರ ಇದ್ದಾಗ ನಾವೂ ಗೆದ್ದಿದ್ದೆವು. ನಿಮಗೆ ಧೈರ್ಯ ಇದ್ದರೆ ವಿಧಾನಸಭೆ ವಿಸರ್ಜಿಸಿ, ಚುನಾವಣೆ ಎದುರಿಸಿ' ಎಂದು ಸಿದ್ದರಾಮಯ್ಯ ಸವಾಲು ಹಾಕಿದರು.

ಬಜೆಟ್: 'ಪ್ರಜಾವಾಣಿ' ವರದಿಗೆ ಮೆಚ್ಚುಗೆ

ಬೆಂಗಳೂರು: ರಾಜ್ಯ ಬಜೆಟ್ ಕುರಿತ 'ಪ್ರಜಾವಾಣಿ' ವರದಿಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಪ್ರಜಾವಾಣಿ' ಹೊರತುಪಡಿಸಿ ಉಳಿದೆಲ್ಲ ಪತ್ರಿಕೆಗಳು ತೆರಿಗೆ ಭಾರ ಇಲ್ಲದ ಬಜೆಟ್ ಎಂದು ವಿಶ್ಲೇಷಿಸಿವೆ. ಜಿಎಸ್‌ಟಿ ಬಂದ ಮೇಲೆ ತೆರಿಗೆ ಹಾಕಲು ಅವಕಾಶ ಇದೆಯೇ. ಪೆಟ್ರೋಲ್ ಬೆಲೆ ಗಗನಕ್ಕೆ ಏರಿದೆ. ಸಂಪನ್ಮೂಲ ಕ್ರೋಡೀಕರಣದ ಬಾಗಿಲು ಬಂದ್ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ತೆರಿಗೆ ಹಾಕಲು ಸಾಧ್ಯವೇ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, 'ತೆರಿಗೆ ಹಾಕಿಲ್ಲ ಎಂದು ಮಾಧ್ಯಮದವರು ಸತ್ಯವನ್ನೇ ಬರೆದಿದ್ದಾರೆ. ಅವರು ಯಾವಾಗಲೂ ಹೇಳುವುದು ಸತ್ಯವನ್ನಲ್ಲವೇ' ಎಂದು ವ್ಯಂಗ್ಯವಾಡಿದರು.

ಪ್ರಜಾವಾಣಿ
ಬೇಕಾಗಿದ್ದಾರೆ
ಉಪಸಂಪಾದಕರು/ವರದಿಗಾರರು
ನಾಡಿನ ಹೆಮ್ಮೆಯ ಮಾಧ್ಯಮ ಸಂಸ್ಥೆಯಾದ 'ಪ್ರಜಾವಾಣಿ'ಯಲ್ಲಿ ಪತ್ರಕರ್ತರಾಗಿ ಭವಿಷ್ಯ ರೂಪಿಸಿಕೊಳ್ಳಲು ಇಲ್ಲಿದೆ ಒಂದು ಅಪೂರ್ವ ಅವಕಾಶ...
■ ಅರ್ಹತೆಗಳು ■
- ಯಾವುದೇ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು
- 30 ವರ್ಷದೊಳಗಿನ ವಯೋಮಿತಿಯವರು ಆಗಿರಬೇಕು
- ಕನ್ನಡದಲ್ಲಿ ಸುಲಲಿತವಾಗಿ ಬರೆಯುವ ಸಾಮರ್ಥ್ಯ ಹೊಂದಿರಬೇಕು
- ಪ್ರಚಲಿತ ವಿಷಯ, ಕಲೆ, ಸಾಹಿತ್ಯ, ವಿಜ್ಞಾನ, ಅರ್ಥಶಾಸ್ತ್ರ, ಕಾನೂನು, ರಾಜಕೀಯ ವಿಷಯಗಳಲ್ಲಿ ಜ್ಞಾನ ಇರಬೇಕು
- ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಆಸಕ್ತಿ ಹೊಂದಿರಬೇಕು
- ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸುವ ಪರಿಣತಿ ಇರಬೇಕು
- 3–5 ವರ್ಷಗಳ ಅನುಭವ ಇರಬೇಕು
ಈ ಮೇಲಿನ ಅರ್ಹತೆಗಳು ನಿಮ್ಮಲ್ಲಿವೆಯೇ? ಹಾಗಾದರೆ ಹೆಸರು, ವಿಳಾಸ, ವಿದ್ಯಾರ್ಹತೆ ಮತ್ತು ಅನುಭವದ ವಿವರವುಳ್ಳ ಅರ್ಜಿಯನ್ನು ಏಳು ದಿನಗಳ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
ಇ–ಮೇಲ್ ವಿಳಾಸ: careers@prajavani.co.in
ಅಂಚೆ ವಿಳಾಸ: ಮ್ಯಾನೇಜರ್ (ನೇಮಕಾತಿ)
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ನಂ 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಕಡಿಮೆ ಅಂಕ: ಬಾಸುಂಡೆ ಬರುವಂತೆ ವಿದ್ಯಾರ್ಥಿಗಳಿಗೆ ಥಳಿತ

ಕುದೂರು (ಮಾಗಡಿ): ಎಸ್ಎಸ್ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ ಮೂವರು ವಿದ್ಯಾರ್ಥಿಗಳನ್ನು ಖಾಸಗಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಮತ್ತು ಶಿಕ್ಷಕರು ಬಾಸುಂಡೆ ಬರುವಂತೆ ಬಾರಿಸಿದ್ದಾರೆ.

ಕಿಶನ್ ಎಂಬ ವಿದ್ಯಾರ್ಥಿ ಮೈಮೇಲಿದ್ದ ಬಾಸುಂಡೆ ಕಂಡು ಅವನ ತಾಯಿ ಬಿಇಒ ಕಚೇರಿ ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ದೂರು ನೀಡಿದ್ದಾರೆ. ಮಾ.16ರಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು ಗುರುಕುಲ ವಿದ್ಯಾಮಂದಿರ ಶಾಲೆಗೆ ಭೇಟಿ ನೀಡಲಿದ್ದಾರೆ.

ವಿದ್ಯಾರ್ಥಿಗಳು ಮತ್ತು ಪೋಷಕರ ಜೊತೆ ಚರ್ಚಿಸಿದ ನಂತರ ಎಫ್ಐಆರ್ ದಾಖಲಿಸುವ ಬಗ್ಗೆ ನಿರ್ಧರಿಸಲಾಗುವುದು ಎಂದು ಜಿಲ್ಲಾ ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಸುರೇಂದ್ರ ತಿಳಿಸಿದ್ದಾರೆ.

'ಅಂತಿಮ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಲಿ ಮತ್ತು ಅವರ ಭವಿಷ್ಯ ಒಳ್ಳೆಯದಾಗಲಿ ಎಂಬ ಸದುದ್ದೇಶದಿಂದ ಹೊಡೆದಿದ್ದು ನಿಜ. ವಿದ್ಯಾರ್ಥಿಗಳು ನಮ್ಮ ಮಕ್ಕಳೇ ಎಂಬ ಭಾವದಿಂದ ಶಿಕ್ಷೆ ನೀಡಿದ್ದೇವೆ. ತಪ್ಪಾಗಿದ್ದರೆ ಪೋಷಕರಲ್ಲಿ ಕ್ಷಮೆಯಾಚಿಸುತ್ತೇವೆ' ಎಂದು ಗುರುಕುಲ ವಿದ್ಯಾಮಂದಿರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಕೇಶವ ಮೂರ್ತಿ ವಿಷಾದ ವ್ಯಕ್ತಪಡಿಸಿದ್ದಾರೆ.

ಫೆಬ್ರುವರಿ ಕೊನೆಯ ವಾರದಲ್ಲಿ ಎಸ್ಎಸ್ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆ ನಡೆಸಲಾಗಿತ್ತು. ಮಾರ್ಚ್ 9ರಂದು ಫಲಿತಾಂಶ ಪ್ರಕಟವಾಗಿತ್ತು. ಮೂವರು ವಿದ್ಯಾರ್ಥಿಗಳು ಕಡಿಮೆ ಅಂಕ ಪಡೆದ ಕಾರಣ ಸಿಟ್ಟಿಗೆದ್ದ ಶಿಕ್ಷಕರು ಅವರಿಗೆ ಬಾಸುಂಡೆ ಬರುವಂತೆ ಬಾರಿಸಿದ್ದರು.

ಪರಿಷತ್‌ನಲ್ಲಿ ಪ್ರತಿಧ್ವನಿಸಿದ 'ಪ್ರಜಾವಾಣಿ' ವರದಿ

ಮಹಿಮೆ ಗ್ರಾಮಕ್ಕೆ ಬಸ್ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯಿತಿಯ ಮಹಿಮೆ ಎಂಬ ಕುಗ್ರಾಮಕ್ಕೆ ಬಸ್ ಸಂಚಾರ ಇಲ್ಲದಿರುವ ವಿಚಾರವು ಸೋಮವಾರ ವಿಧಾನಪರಿಷತ್ತಿನಲ್ಲಿ ಪ್ರತಿಧ್ವನಿಸಿತು. ಸಂಜೆಯ ವೇಳೆಗೆ ಗ್ರಾಮಕ್ಕೆ ಬಸ್ ಸಂಚಾರ ಆರಂಭವಾಯಿತು.

ವರದಿ ಫಲಶ್ರುತಿ

ಶೂನ್ಯವೇಳೆಯಲ್ಲಿ ಬಿಜೆಪಿಯ ಪಿ.ಎಂ. ಮುನಿರಾಜು ಗೌಡ, 'ಪ್ರಜಾವಾಣಿ'ಯ ಮಾರ್ಚ್ 13ರ ಸಂಚಿಕೆಯಲ್ಲಿ ಪ್ರಕಟವಾದ ವಿಶೇಷ ವರದಿಯನ್ನು ಪ್ರಸ್ತಾಪಿಸಿದರು. 'ಬಸ್ಸಿಗಾಗಿ 8 ಕಿ.ಮೀ ನಡೆವ ವಿದ್ಯಾರ್ಥಿಗಳು!' ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು.

'ಬಸ್ ಸೌಕರ್ಯವಿಲ್ಲದ ಕಾರಣ ಸುಮಾರು 40 ಮಕ್ಕಳು ಶಾಲೆಗೆ ಹೋಗಲು ದಟ್ಟ ಕಾಡಿನ ನಡುವೆ ನಡೆದುಕೊಂಡು ಹೋಗುವುದು ಸಾಹಸವೇ ಸರಿ. ಇದರಿಂದ ಮಕ್ಕಳ ಕಲಿಕೆಯಲ್ಲಿ ಏಕಾಗ್ರತೆ ಸಾಧಿಸಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಹೆಣ್ಣು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ' ಎಂದು ಮುನಿರಾಜು ಗೌಡ ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಶಿಕ್ಷಣ ಸಚಿವ ಸುರೇಶಕುಮಾರ್, 'ಕಳೆದ ವರ್ಷ ಆ ಹಳ್ಳಿಗೆ ನಾನೂ ಭೇಟಿ ನೀಡಿದ್ದೆ. ಅಲ್ಲಿನ ಪರಿಸ್ಥಿತಿ ಅರಿತಿದ್ದು, ಸಾರಿಗೆ ಸಚಿವ ಸವದಿ ಅವರೊಂದಿಗೆ ಚರ್ಚಿಸಿ ಬಸ್ ಸಂಚಾರದ ವ್ಯವಸ್ಥೆ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಕಾರವಾರ ವರದಿ: ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕುಮಟಾ ಘಟಕದ ವ್ಯವಸ್ಥಾಪಕಿ ದೀಪಾ ನಾಯಕ, 'ಮಾರ್ಚ್ 16ರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಸಮಯಕ್ಕೆ ವೇಳಾಪಟ್ಟಿ ಸಿದ್ಧಪಡಿಸಿ ಬಸ್ ಸಂಚಾರ ಆರಂಭಿಸಲಾಗುವುದು' ಎಂದು ತಿಳಿಸಿದರು.

'ಹುಲಿ ಸೆರೆಯ ಬಳಿಕ ಕೊಡಗು ಭೇಟಿ'

ಬೆಂಗಳೂರು: 'ಪೊನ್ನಂಪೇಟೆ ತಾಲ್ಲೂಕಿನಲ್ಲಿ ಮೂವರನ್ನು ಸಾಯಿಸಿರುವ ಹುಲಿಯನ್ನು ಯಾವುದೇ ರೂಪದಲ್ಲಾದರೂ ಸೆರೆಹಿಡಿದ ಬಳಿಕವೇ ಕೊಡಗು ಜಿಲ್ಲೆಗೆ ಭೇಟಿ ನೀಡುತ್ತೇನೆ' ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಹುಲಿ ದಾಳಿಯಿಂದ ಕೊಡಗು ಜಿಲ್ಲೆಯಲ್ಲಿ ಭೀತಿಯ ವಾತಾವರಣ ಸೃಷ್ಟಿಯಾಗಿರುವ ಕುರಿತು ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ವೀಣಾ ಅಚ್ಚಯ್ಯ ಅವರು ಸರ್ಕಾರದ ಗಮನ ಸೆಳೆದರು. ತಕ್ಷಣವೇ ಕೊಡಗು ಜಿಲ್ಲೆಗೆ ಬಂದು ಜನರಿಗೆ ಧೈರ್ಯ ತುಂಬುವಂತೆ ಸಚಿವರನ್ನು ಆಗ್ರಹಿಸಿದರು.

ಉತ್ತರ ನೀಡಿದ ಸಚಿವರು, 'ನಾನು ಬಂದರೆ ಹುಲಿ ಸಿಗುವುದಾದರೆ ಬರಲು ಸಿದ್ಧ. ಆದರೆ, ನರಭಕ್ಷಕ ಹುಲಿ ಸೆರೆಗೆ ಈಗಾಗಲೇ ಕಾರ್ಯಾಚರಣೆ ಆರಂಭವಾಗಿದೆ. ಅನಿವಾರ್ಯ ಆದಲ್ಲಿ ಗುಂಡಿಕ್ಕುವುದಕ್ಕೂ ಆದೇಶ ನೀಡಿದ್ದೇನೆ. ನಾನು ಈಗ ಅಲ್ಲಿಗೆ ಭೇಟಿನೀಡುವುದರಿಂದ ಕಾರ್ಯಾಚರಣೆಗೆ ಅಡ್ಡಿಯಾಗುತ್ತದೆ. ಆದ್ದರಿಂದ ಕಾರ್ಯಾಚರಣೆ ಮುಗಿದ ಬಳಿಕವೇ ಕೊಡಗು ಜಿಲ್ಲೆಗೆ ಬರುತ್ತೇನೆ' ಎಂದರು.

ಆನೆ ಸಂತಾನಶಕ್ತಿ ಹರಣಕ್ಕೆ ಆಗ್ರಹ: 'ಅರಣ್ಯ ಇಲಾಖೆಯು ಆನೆಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮೂಲಕ ಪರಿಸ್ಥಿತಿಯನ್ನು ಹತೋಟಿಗೆ ತರಬೇಕು' ಎಂದು ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ಬಸವರಾಜ ಪಾಟೀಲ್ ಇಟಗಿ ಸಲಹೆ ನೀಡಿದರು.

ಮಂಡ್ಯ ಜಿಲ್ಲೆಯಲ್ಲಿ ಚಿರತೆ ಹಾವಳಿ ತಡೆಯುವಂತೆ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಒತ್ತಾಯಿಸಿದರೆ, ವನ್ಯಜೀವಿಗಳ ದಾಳಿಯಿಂದ ಮೃತರಾದವರ ಕುಟುಂಬಗಳಿಗೆ ಮಾಸಾಶನ ಮಂಜೂರಾತಿಗೆ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಕಾಂಗ್ರೆಸ್‌ನ ಎಸ್. ರವಿ ಆಗ್ರಹಿಸಿದರು.

ರೈತರ ಹೋರಾಟ ನಿರ್ಲಕ್ಷಿಸಿದರೆ ರಾಜಕೀಯ ಪಕ್ಷಗಳಿಗೆ ಬುದ್ಧಿ ಕಲಿಸುವುದು ಅನಿವಾರ್ಯ

'ಬೀದಿಗಳಲ್ಲಿ ಶಾಸನ ಬರೆಯುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಬೇಡಿಕೆಗಳನ್ನು ಸರ್ಕಾರಗಳಿಗೆ ಸ್ಪಂದಿಸದೆ ಇದ್ದರೆ ಮುಂದಿನ ವಿಧಾನಸಭೆ ಚುನಾವಣೆಯ ಮೇಲೆ ಅದರ ಪರಿಣಾಮ ಬೀರಲಿದೆ. ಬೀದಿ ಬೀದಿಗಳ ಮೇಲೆ ಶಾಸನಗಳನ್ನು ಬರೆದು ಹೋರಾಟ ನಡೆಸುತ್ತೇವೆ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವರಿಷ್ಠ ಕೆ.ಟಿ. ಗಂಗಾಧರ ತಿಳಿಸಿದರು.

ಮಾ.20ರಂದು ಶಿವಮೊಗ್ಗದಲ್ಲಿ ರಾಕೇಶ್ ಟಿಕಾಯತ್ ಅವರ ಸಮ್ಮುಖದಲ್ಲಿ ನಡೆಯಲಿರುವ ಕಿಸಾನ್ ಮಹಾ ಪಂಚಾಯತ್ ಕುರಿತು 'ಪ್ರಜಾವಾಣಿ' ನಡೆಸಿದ ಫೇಸ್‌ಬುಕ್ ಸಂವಾದದಲ್ಲಿ ಅವರು ಮಾತನಾಡಿದರು.

'ಸಮಾವೇಶಗಳನ್ನು ಮಾಡಿ ಮನೆಗೆ ಹೋಗುವುದು ನಮ್ಮ ಜಾಯಮಾನವಲ್ಲ. ಆ ನಂತರವೂ ಹೋರಾಟಗಳು ನಿರಂತರವಾಗಿ ನಡೆಯಲಿವೆ. ರೈತರು ಸೆಟೆದು ನಿಂತರೆ ಏನಾಗುತ್ತದೆ ಎಂಬ ಪಾಠವನ್ನು ಆಳುವವರಿಗೆ ತಿಳಿಸಬೇಕಾದ ಅನಿವಾರ್ಯ ಇದೆ. ಎಲ್ಲಾ ರೈತ ಬಣಗಳು ಸೇರಿ ಆ ಕೆಲಸ ಮಾಡಲು ಹೊರಟಿದ್ದೇವೆ' ಎಂದು ಹೇಳಿದರು.

'ಚಳವಳಿಗಳನ್ನು ಲಘುವಾಗಿ ಪರಿಗಣಿಸುತ್ತಿರುವ ಸರ್ಕಾರ, ಅದರ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಅನುಭವಿಸಲಿದೆ. ರೈತ ಚಳವಳಿಗಳು ರಾಜಕೀಯ ದಿಕ್ಸೂಚಿಯೂ ಆಗಲಿವೆ. ಆಂದೋಲನಗಳನ್ನು ನಂಜುಗಣ್ಣಿನಿಂದ ನೋಡುವುದನ್ನು ಸರ್ಕಾರ ಬಿಡಬೇಕು' ಎಂದು ಎಚ್ಚರಿಸಿದರು.

'ಕಿಸಾನ್ ಮಹಾ ಪಂಚಾಯತ್‌ಗೆ ರಾಜಕೀಯ ಬಣ್ಣ ಕಟ್ಟುವುದು ಬೇಡ. ಹಳ್ಳಿಯ ರೈತರು ಎಲ್ಲಾ ಪಕ್ಷಗಳಲ್ಲೂ ಇದ್ದಾರೆ. ಎಲ್ಲಾ ಪಕ್ಷದಲ್ಲಿರುವ ರೈತರನ್ನು ಒಳಗೊಳ್ಳುವ ಪ್ರಯತ್ನ ಇದೆ. ರಾಜಕಾರಣಿಗಳು ಬಂದು ಬೆಂಬಲ ಸೂಚಿಸಿದರೆ ಬೇಡ ಎನ್ನುವುದಿಲ್ಲ. ಆದರೆ, ವೇದಿಕೆಯ ಮೇಲೆ ಕೂರಿಸಿ ಚಳವಳಿಯ ಲಾಭವನ್ನು ಅವರು ಪಡೆದುಕೊಳ್ಳಲು ಅವಕಾಶ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಶಿವಮೊಗ್ಗದಲ್ಲಿ ನಡೆಯಲಿರುವ ಮಹಾ ಪಂಚಾಯತ್‌ನಲ್ಲಿ 80 ಸಾವಿರದಿಂದ 1 ಲಕ್ಷ ಜನ ಸೇರುವ ನಿರೀಕ್ಷೆ ಇದೆ. 30ಕ್ಕೂ ಹೆಚ್ಚು ರೈತ ಸಂಘದ ಬಣಗಳೊಂದಿಗೆ ನಾನೇ ಖುದ್ದಾಗಿ ಮಾತನಾಡಿದ್ದೇನೆ. ಎಲ್ಲರಿಗೂ ಆಹ್ವಾನ ನೀಡಿದ್ದೇನೆ. ದಲಿತ, ಕಾರ್ಮಿಕ ಮತ್ತು ರೈತರ ಐಕ್ಯ ಹೋರಾಟದ ಬೆಂಬಲಗಳನ್ನು ಪಡೆದುಕೊಂಡೇ ಹೋರಾಟ ಮುನ್ನಡೆಯುತ್ತಿದೆ' ಎಂದು ಸ್ಪಷ್ಟಪಡಿಸಿದರು.

'ರಾಜ್ಯದಲ್ಲಿ ನಡೆಯಲಿರುವ ಈ ಸಮಾವೇಶಗಳು ರಾಜ್ಯದ ರಾಜಕೀಯದ ದಿಕ್ಕನ್ನೇ ಬದಲಿಸಲಿವೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಯಾರು ಆಡಳಿತ ನಡೆಸಬೇಕು ಎಂಬುದನ್ನು ರೈತರು ನಿರ್ಧರಿಸಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪೂರ್ಣ ಸಂದರ್ಶನ ಕೇಳಲು– https://www.facebook.com/prajavani.net

ಪ್ರಜಾವಾಣಿ ಸಂವಾದ

ಕೆ.ಟಿ. ಗಂಗಾಧರ

ಸರ್ಕಾರಕ್ಕೆ ರೈತರಿಂದಲೇ ಸಬ್ಸಿಡಿ: ಎಚ್‌.ವಿ. ವಾಸು

'ಸರ್ಕಾರದಿಂದ ರೈತರು ಸಬ್ಸಿಡಿ ಪಡೆಯುತ್ತಿದ್ದಾರೆ ಎಂಬುದು ಸುಳ್ಳು. ಸರ್ಕಾರಕ್ಕೆ ರೈತರು ಸಬ್ಸಿಡಿ ನೀಡುತ್ತಿದ್ದಾರೆ. ಇದನ್ನು ಸರ್ಕಾರದ ಅಂಕಿ ಅಂಶಗಳೇ ಹೇಳುತ್ತಿವೆ' ಎಂದು ಸಾಮಾಜಿಕ ಹೋರಾಟಗಾರ ಡಾ. ಎಚ್‌.ವಿ. ವಾಸು ಅಭಿಪ್ರಾಯಪಟ್ಟರು.

'ರಾಜ್ಯ ಸರ್ಕಾರವೇ ರಚನೆ ಮಾಡಿದ ಕೃಷಿ ಬೆಲೆ ಆಯೋಗವು ಒಂದು ಬೆಳೆ ಬೆಳೆಯಲು ಎಷ್ಟು ಖರ್ಚಾಗುತ್ತಿದೆ. ಅದಕ್ಕೆ ಬೆಲೆ ಎಷ್ಟಿರಬೇಕು ಎಂಬುದನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ತಿಳಿಸಿದೆ. ರಾಜ್ಯ ಸರ್ಕಾರ ಘೋಷಣೆ ಮಾಡಿದ್ದ 13 ಬೆಳೆಗಳಿಗೆ ಸೀಮಿತವಾಗಿ ನೋಡಿದರೂ 2019–2020ನೇ ಸಾಲಿನಲ್ಲಿ ರೈತರಿಗೆ ₹20,339 ಕೋಟಿ ನಷ್ಟ ಆಗಿದೆ' ಎಂದರು.

'ಕಳೆದ 20 ವರ್ಷಗಳಿಗೆ ಲೆಕ್ಕ ಹಾಕಿದರೆ ₹4 ಲಕ್ಷ ಕೋಟಿ ಸಬ್ಸಿಡಿಯನ್ನು ರೈತರು ಸರ್ಕಾರಕ್ಕೆ ನೀಡಿದ್ದಾರೆ. ಬರ ಮತ್ತು ಅತಿವೃಷ್ಟಿಯಿಂದ ₹8 ಲಕ್ಷ ಕೋಟಿಯಷ್ಟು ನಷ್ಟವಾಗಿದೆ. ಇದೆಲ್ಲವನ್ನೂ ನೋಡಿದರೆ 'ರೈತರು ಸಾಲಗಾರರಲ್ಲ, ಸರ್ಕಾರವೇ ಬಾಕಿದಾರ' ಎಂಬ ಮಾತು ಇಂದಿಗೂ ಪ್ರಸ್ತುತ' ಎಂದು ಪ್ರತಿಪಾದಿಸಿದರು.

'ಸರ್ಕಾರಗಳು ರೈತ ವಿರೋಧಿ ಮೂರು ಹೊಸ ಕಾಯ್ದೆಗಳನ್ನು ಕೈಬಿಡಬೇಕು ಮತ್ತು ರೈತರಿಗೆ ಅಗತ್ಯವಾಗಿ ಬೇಕಿರುವ ಕನಿಷ್ಠ ಬೆಂಬಲ ಬೆಲೆ ನೀತಿಗೆ ಕಾನೂನಿನ ರೂಪ ಕೊಡಬೇಕು. ನಿರ್ದಿಷ್ಟಪಡಿಸಿದ ಬೆಲೆಗಿಂತ ಕಡಿಮೆ ದರದಲ್ಲಿ ರೈತರ ಉತ್ಪನ್ನಗಳನ್ನು ಖರೀದಿಸುವುದು ಶಿಕ್ಷಾರ್ಹ ಅಪರಾಧ ಎಂಬ ಕಾನೂನು ರೂಪುಗೊಳ್ಳಬೇಕು' ಎಂದರು.

'ಎಪಿಎಂಸಿಗಳನ್ನು ಮಂಡಿಗಳನ್ನಾಗಿ ಮಾಡಲು ಸರ್ಕಾರ ಹೊರಟಿದೆ. ಕರ್ನಾಟಕದಲ್ಲಿ ಉತ್ಪಾದನೆಯಾಗುವ ಭತ್ತವನ್ನೆಲ್ಲಾ ಒಂದೆಡೆ ದಾಸ್ತಾನು ಮಾಡುವಷ್ಟು ದೊಡ್ಡದಾದ ಗೋದಾಮನ್ನು ಮುಖೇಶ್ ಅಂಬಾನಿ ನಿರ್ಮಿಸಿಕೊಂಡಿದ್ದಾರೆ ಎಂದರೆ ಮುಂದೆ ರೈತರ ಸ್ಥಿತಿ ಏನಾಗಲಿದೆ ಎಂಬುದು ಅರ್ಥವಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಭಾರತದಲ್ಲಿ ಈಗ ನಡೆಯುತ್ತಿರುವ ರೈತ ಚಳವಳಿ ಹೊಸ ಸಂಚಲವನ್ನೇ ಸೃಷ್ಟಿ ಮಾಡಿದೆ. ಕರ್ನಾಟಕದಲ್ಲಿ ಇನ್ನೂ ಅದು ಜನಸಾಮಾನ್ಯರ ಹೋರಾಟವಾಗಿಲ್ಲ. ಆ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನ ಈಗ ನಡೆಯುತ್ತಿದೆ' ಎಂದು ಹೇಳಿದರು.

'ಚಳವಳಿಗಳು ರಾಜಕೀಯೇತರವಾಗಿ ಇರಬೇಕೆಂದಿಲ್ಲ. ಜನಾಂದೋಲನಗಳೇ ರಾಜಕೀಯ ಪಕ್ಷಗಳಾಗಿ ಬದಲಾಗಿರುವ ಉದಾಹರಣೆಗಳು ಸಾಕಷ್ಟಿವೆ. ಕರ್ನಾಟಕದಲ್ಲಿ ಈ ವಿಷಯದಲ್ಲಿ ಚಳವಳಿಗಳು ಸ್ವಲ್ಪ ಹಿಂದಿವೆ. ಚುನಾವಣೆ ಸಂದರ್ಭದಲ್ಲಿ ಅಥವಾ ಚಳವಳಿಗಳು ದುರ್ಬಲವಾಗಿದ್ದ ಸಂದರ್ಭದಲ್ಲಿ ರಾಜಕೀಯದ ಬಗ್ಗೆ ಆಲೋಚನೆ ನಡೆಸುತ್ತಿರುವ ಕಾರಣ ಸಫಲವಾಗಲು ಸಾಧ್ಯವಾಗುತ್ತಿಲ್ಲ. ಮುಂದೆ ಆ ನಿಟ್ಟಿನಲ್ಲೂ ಪ್ರಯತ್ನಗಳು ನಡೆಯಲಿವೆ' ಎಂದು ತಿಳಿಸಿದರು.

ಎಚ್‌.ವಿ. ವಾಸು

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದ ನಿವಾಸದಲ್ಲಿ ಸೋಮವಾರ ಭೇಟಿ ಮಾಡಿ ನಟ ಶಿವರಾಜ್‌ಕುಮಾರ್ ಮಾತುಕತೆ ನಡೆಸಿದರು

'ಗೀತಾ ಶಿವರಾಜ್‌ಕುಮಾರ್ ಕಾಂಗ್ರೆಸ್ ಸೇರ್ಪಡೆ: ಕಾದು ನೋಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ಶಿವರಾಜ್‌ಕುಮಾರ್ ಅವರ ಪತ್ನಿ ಗೀತಾ ಅವರು ಕಾಂಗ್ರೆಸ್ ಸೇರುವ ಬಗ್ಗೆ ಕಾದು ನೋಡಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸದಾಶಿವನಗರದಲ್ಲಿರುವ ತಮ್ಮ ನಿವಾಸದಲ್ಲಿ ಶಿವರಾಜ್‌ಕುಮಾರ್ ಜತೆ ಸೋಮವಾರ ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಶಿವರಾಜ್‌ಕುಮಾರ್ ನಮ್ಮ ಆತ್ಮೀಯರು. ಅವರ ಕುಟುಂಬ ಇಡೀ ದೇಶ ಹಾಗೂ ರಾಜ್ಯದ ಆಸ್ತಿ' ಎಂದರು.

'ಶಿವರಾಜ್‌ಕುಮಾರ್ ಕುಟುಂಬದ ಮೇಲೆ ನಮಗೆ ಅಪಾರ ಗೌರವವಿದೆ. ನಮಗೂ ಅವರ ಜತೆ ವೈಯಕ್ತಿಕ ಸಂಬಂಧಗಳಿವೆ. ನಾನು ಆ ಬಗ್ಗೆ ಹೆಚ್ಚು ಹೇಳುವುದಿಲ್ಲ. ಮಧು ಬಂಗಾರಪ್ಪ ಅವರಿಗೆ ಆ ಬಗ್ಗೆ ಮಾತನಾಡುವ ಹಕ್ಕಿದೆ. ಅವರು ಮಾತನಾಡಿದ್ದಾರೆ. ಸಂದರ್ಭ ಬಂದಾಗ ಗೀತಾ ಶಿವರಾಜ್‌ಕುಮಾರ್ ಕೂಡಾ ಮಾತನಾಡುತ್ತಾರೆ' ಎಂದರು.

ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, 'ಹಿರಿಯ ನಾಯಕರ ಜತೆ ಚರ್ಚಿಸಿದ ಬಳಿಕ ಈ ಬಗ್ಗೆ ಮಾತನಾಡುತ್ತೇನೆ' ಎಂದರು.

ಪೊಲೀಸ್ ಇನ್‌ಸ್ಪೆಕ್ಟರ್ ಮನೆಯಲ್ಲೇ ಕಳವು

ಚಿತ್ರದುರ್ಗ: ಇಲ್ಲಿನ ಬಸವೇಶ್ವರ ನಗರದಲ್ಲಿರುವ ಪೊಲೀಸ್ ಇನ್‌ಸ್ಪೆಕ್ಟರ್ ಮೃತ್ಯುಂಜಯ ಅವರ ಮನೆಗೆ ನುಗ್ಗಿದ ಕಳ್ಳರು, ₹7 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹60 ಸಾವಿರ ನಗದು ದೋಚಿದ್ದಾರೆ.

ಮೃತ್ಯುಂಜಯ ಅವರು ಕುಟುಂಬ ಸಹಿತ ಹೊರಗೆ ಹೋದಾಗ ಕಳವು ನಡೆದಿದೆ. ಭಾನುವಾರ ರಾತ್ರಿ ಮನೆಗೆ ಮರಳಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಕಳವಾಗಿದ್ದ ಕಾರು, ಲಾಠಿ, ಬೆಳ್ಳಿ ಸಾಮಗ್ರಿ ಹಾಗೂ ಗುರುತಿನ ಚೀಟಿ ವೆಂಕಟೇಶ್ವರ ದೇಗುಲದ ಆವರಣದಲ್ಲಿ ಸೋಮವಾರ ಪತ್ತೆಯಾಗಿವೆ.

ಮಾರ್ಚ್ 13ರಂದು ರಾತ್ರಿ ಕಳ್ಳತನ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಎಸ್‌ಪಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೃತ್ಯುಂಜಯ ಅವರ ಗುರುತಿನ ಚೀಟಿ ಕಾರಿನಲ್ಲೇ ಇತ್ತು. ಪಿಸ್ತೂಲ್ ಕೂಡ ಇರುವುದನ್ನು ಗಮನಿಸಿದ ಕಳ್ಳರು ಕಾರು ಹಾಗೂ ಇಲಾಖೆಗೆ ಸಂಬಂಧಿಸಿದ ವಸ್ತುಗಳನ್ನು ವೆಂಕಟೇಶ್ವರ ದೇಗುಲದ ಆವರಣದಲ್ಲಿ ಬಿಟ್ಟು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ವಿವರಿಸಿದ್ದಾರೆ.

ಬಿಆರ್‌ಟಿ: ಕೆ.ಗುಡಿ ಸಫಾರಿ ವಲಯದಲ್ಲಿ ಆನೆಗಳ ದಾಳಿ

ಕೂದಲೆಳೆ ಅಂತರದಲ್ಲಿ ಪ್ರವಾಸಿಗರು ಪಾರು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಿಳಿಗಿರಿರಂಗನಾಥಸ್ವಾಮಿ ದೇವಾಲಯ ಹುಲಿ ಸಂರಕ್ಷಿತ (ಬಿಆರ್‌ಟಿ) ಪ್ರದೇಶದ ಕೆ.ಗುಡಿ ವಲಯದಲ್ಲಿ, ಸಫಾರಿ ನಡೆಸುತ್ತಿದ್ದ ಪ್ರವಾಸಿಗರು ಎರಡು ಆನೆಗಳ ದಾಳಿಯಿಂದ ಕೂದಲೆಳೆಯ ಅಂತರದಲ್ಲಿ ಪಾರಾಗಿದ್ದಾರೆ.

ಎರಡು ದಿನಗಳ ಹಿಂದೆ ಈ ಘಟನೆ ನಡೆದಿದೆ ಎನ್ನಲಾಗಿದೆ. ಹೆಣ್ಣಾನೆಯೊಂದು ಹಿಂಬದಿಯಿಂದ ವಾಹನ ಬೆನ್ನಟ್ಟುತ್ತಿರುವುದು ಹಾಗೂ ಪ್ರವಾಸಿಗರು ಅದರಿಂದ ತಪ್ಪಿಸಿಕೊಂಡ ತಕ್ಷಣ ಎದುರು ಭಾಗದಲ್ಲಿ ಇನ್ನೊಂದು ಹೆಣ್ಣಾನೆ ವಾಹನಕ್ಕೆ ಅಡ್ಡ ಬಂದಿರುವ ವಿಡಿಯೊ ತುಣುಕು ವೈರಲ್ ಆಗಿದೆ. ಪ್ರವಾಸಿಗರೊಬ್ಬರು ಮೊಬೈಲ್‌ನಲ್ಲಿ ಈ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ.

ಸಫಾರಿ ವಾಹನ ಚಾಲಕ ನಾಗರಾಜು ಎಂಬುವವರು, ಆತಂಕದ ಸನ್ನಿವೇಶದಲ್ಲೂ ವಾಹನದ ಎದುರಿಗೆ ಅಡ್ಡ ಬಂದ ಹೆಣ್ಣಾನೆಯನ್ನು ಬೆನ್ನಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕೆ ಕೃತಜ್ಞತೆ ಅರ್ಪಿಸಿರುವ ಪ್ರವಾಸಿಗ, ಅವರನ್ನು ಮಾತನಾಡಿಸಿ ಧನ್ಯವಾದ ಸಲ್ಲಿಸುವ ವಿಡಿಯೊ ಮಾಡಿದ್ದಾರೆ. ಅದು ಕೂಡ ವೈರಲ್ ಆಗಿದೆ.


ಹಿಂಭಾಗದಿಂದ ಅಟ್ಟಿಸಿಕೊಂಡು ಬಂದ ಹೆಣ್ಣಾನೆ (ಎಡ ಚಿತ್ರ), ವಾಹನದ ಮುಂಭಾಗ ಅಡ್ಡಬಂದ ಮತ್ತೊಂದು ಹೆಣ್ಣಾನೆ (ವಿಡಿಯೊ ಚಿತ್ರ)

'ನಮ್ಮನ್ನು ನಂಬಿ ಅತಿಥಿಗಳು ಬಂದಿರುತ್ತಾರೆ. ಅವರ ಸುರಕ್ಷತೆ ನಮಗೆ ಅತ್ಯಂತ ಮುಖ್ಯ. ನಮ್ಮ ಪ್ರಾಣ ಹೋದರೂ ಅವರನ್ನು ರಕ್ಷಿಸಬೇಕು ಎಂಬ ಕಾರಣಕ್ಕೆ ಆನೆಯನ್ನೇ ಬೆನ್ನಟ್ಟಿದೆ' ಎಂದು ನಾಗರಾಜ್ ಅವರು ಹೇಳುತ್ತಿರುವುದು ವಿಡಿಯೊದಲ್ಲಿದೆ.

ವಿಡಿಯೊದಲ್ಲೇನಿದೆ?: ಸಫಾರಿ ವಲಯದಲ್ಲಿ ಬರುವ ಭತ್ತದಗದ್ದೆ ಕೆರೆ ರಸ್ತೆಯಲ್ಲಿ ಘಟನೆ ನಡೆದಿದೆ ಎನ್ನಲಾಗಿದೆ. 1.10 ನಿಮಿಷದ ವಿಡಿಯೊದಲ್ಲಿ ಜೀಪಿನ ಹೆಡ್‌ಲೈಟ್ ಹಾಕುವ ಚಾಲಕ, ಹೆಣ್ಣಾನೆ ಬೆನ್ನಟ್ಟುತ್ತಾರೆ. ಎರಡು ಬಾರಿ ತಿರುಗಿ ವಾಹನದತ್ತ ಬರುವ ಆನೆ, ವಾಹನದ ಶಬ್ದ ಹಾಗೂ ಪ್ರವಾಸಿಗರ ಕಿರುಚಾಟಕ್ಕೆ ರಸ್ತೆಯಿಂದ ಸರಿಯುತ್ತದೆ. ಅದೇ ಪ್ರದೇಶದಲ್ಲಿ ನಾಲ್ಕೈದು ಆನೆಗಳಿರುವ ಹಿಂಡು ಇರುವ ದೃಶ್ಯವೂ ವಿಡಿಯೊದಲ್ಲಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಸಂತೋಷ್ ಕುಮಾರ್, ಈ ಬಗ್ಗೆ ಸಿಬ್ಬಂದಿಯನ್ನು ವಿಚಾರಿಸಿ ಮಾಹಿತಿ ನೀಡುವುದಾಗಿ ಹೇಳಿದರು.

'ಬೆನ್ನಟ್ಟುವ ಅವಶ್ಯಕತೆ ಇರಲಿಲ್ಲ'

'ಹಿಂಬದಿಯಿಂದ ಅಟ್ಟಿಸಿಕೊಂಡು ಬಂದ ಆನೆ ಸ್ವಲ್ಪ ದೂರದ ನಂತರ ನಿಲ್ಲುತ್ತದೆ. ಆಗ ವಾಹನವನ್ನು ನಿಧಾನ ಮಾಡಬೇಕಿತ್ತು. ಎದುರು ಇನ್ನೊಂದು ಹೆಣ್ಣಾನೆಯನ್ನು ಕಂಡ ತಕ್ಷಣ ಚಾಲಕ ವಾಹನವನ್ನು ಅಲ್ಲೇ ನಿಲ್ಲಿಸಬಹುದಿತ್ತು. ವಿಡಿಯೊದಲ್ಲಿ ಆನೆಯ ವರ್ತನೆ ಗಮನಿಸಿ ಹೇಳುವುದಾದರೆ, ಅದು ದಾಳಿ ಮಾಡಲು ಮುಂದಾಗಿಲ್ಲ. ಪ್ರವಾಸಿಗರನ್ನು ಹೆದರಿಸಲು ಯತ್ನಿಸಿದೆ. ಅದು ತಿರುಗಿ ಮುಂದೆ ಓಡುತ್ತಿರುವಾಗ ಬೆನ್ನಟ್ಟುವ ಅವಶ್ಯಕತೆ ಇರಲಿಲ್ಲ' ಎಂದು ವನ್ಯಜೀವಿ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

'ಸಫಾರಿ ವಲಯದಲ್ಲಿ ಪ್ರಾಣಿಗಳಿಂದ ಕನಿಷ್ಠ 20 ಮೀಟರ್ ದೂರದಲ್ಲಿ ಇರಬೇಕು ಎಂಬ ನಿಯಮ ಇದೆ. ಆನೆ ಮುಂದಕ್ಕೆ ಹೋಗುತ್ತಿದ್ದಾಗ ಅದರ ಹಿಂದೆಯೇ ವಾಹನ ಸಾಗಿದ್ದರಿಂದ ಅದಕ್ಕೆ ಮತ್ತಷ್ಟು ಕಿರಿಕಿರಿಯಾಗಿದೆ. ವಾಹನದಲ್ಲಿ ಪ್ರವಾಸಿಗರು ಇದ್ದುದರಿಂದ, ಆನೆ ಎಲ್ಲಿ ದಾಳಿ ಮಾಡಬಹುದು ಎಂಬ ಭಯದಿಂದ ಚಾಲಕ ಹಾಗೆ ಮಾಡಿರುವ ಸಾಧ್ಯತೆ ಇದೆ' ಎಂದು ಅವರು ಹೇಳಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3vo3wbo

ಕನ್ನಡಿಗರ ಅಂಗಡಿ ಬಂದ್: ಶಿವಸೇನಾ ಎಚ್ಚರಿಕೆ

ಬೆಳಗಾವಿ: ಇಲ್ಲಿನ ಮಹಾನಗರಪಾಲಿಕೆಯ ಎದುರು ಹಾರಿಸಿರುವ ಕನ್ನಡ ಧ್ವಜವನ್ನು ತೆರವುಗೊಳಿಸದಿದ್ದರೆ ಮಹಾರಾಷ್ಟ್ರದಲ್ಲಿ ಕನ್ನಡಿಗರ ವ್ಯವಹಾರ ಬಂದ್ ಮಾಡಿಸಲಾಗುವುದು ಎಂದು ಶಿವಸೇನಾ ಕಾರ್ಯಕರ್ತರು, ಎಚ್ಚರಿಕೆ ನೀಡಿದ್ದಾರೆ. 'ಮಾರ್ಚ್ 20ರ ಒಳಗೆ ತೆರವುಗೊಳಿಸಬೇಕು' ಎಂಬ ಗಡುವನ್ನೂ ವಿಧಿಸಿದ್ದಾರೆ.

'ಇಲ್ಲವಾದಲ್ಲಿ ಕೊಲ್ಹಾಪುರ, ಸಾಂಗ್ಲಿ ಹಾಗೂ ಸತಾರ ಭಾಗದಲ್ಲಿರುವ ಕನ್ನಡಿಗರ ಮಳಿಗೆಗಳನ್ನು ಬಂದ್ ಮಾಡಿಸಲಾಗುವುದು. ಶಿವಸೇನಾ ಕಾರ್ಯಕರ್ತರು ಈ ದಾಳಿ ನಡೆಸಲಿದ್ದಾರೆ' ಎಂದು ತಿಳಿಸಿದ್ದಾರೆ.

ಪ್ರಚೋದನೆ– ಮೂವರ ವಿಚಾರಣೆ: ಸಾಮಾಜಿಕ ಜಾಲತಾಣದಲ್ಲಿ ಭಾಷೆ ವಿಷಯದಲ್ಲಿ ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕುತ್ತಿದ್ದರು ಎನ್ನಲಾದ ತಾಲ್ಲೂಕಿನ ಮಚ್ಛೆ ಗ್ರಾಮದ ಮೂವರು ಯುವಕರನ್ನು ಪೊಲೀಸರು ಸೋಮವಾರ ವಿಚಾರಣೆಗೆ ಒಳಪಡಿಸಿದ್ದಾರೆ. 'ಮರಾಠಿ ಮಾತನಾಡುವ ಜನರು ಹುಲಿಗಳು' ಎಂಬಿತ್ಯಾದಿ ಪೋಸ್ಟ್‌ಗಳನ್ನು ಮಾಡಿ ಅವರು ಪ್ರಚೋದನೆ ನೀಡುತ್ತಿದ್ದರು ಎಂದು ಆರೋಪಿಸಲಾಗಿದೆ. 'ವಿಚಾರಣೆ ನೆಪದಲ್ಲಿ ಪೊಲೀಸರು ಯುವಕರ ಮೇಲೆ ಬಾಸುಂಡೆ ಬರುವಂತೆ ಥಳಿಸಿದ್ದಾರೆ' ಎಂಬ ಆರೋಪವೂ ಕೇಳಿಬಂದಿದೆ.

www.ltfs.com
CIN: U65910WB1993FLC060810
L&T Financial Services
WALK-IN Interview Drive – MICRO LOAN OFFICER
(16th, 17th and 18th Mar'21)
ಎಲ್&ಟಿ ಗ್ರೂಪ್‌ನ ಒಂದು ಅಂಗವಾಗಿರುವ ಎಲ್&ಟಿ ಫೈನಾನ್ಷಿಯಲ್ ಸರ್ವಿಸಸ್, ಭಾರತದ ಒಂದು ಅಗ್ರಣಿ ಎನ್‌ಬಿಎಫ್‌ಸಿ ಬ್ರ್ಯಾಂಡ್ ಆಗಿದ್ದು, ವಿಭಿನ್ನ ಫೈನಾನ್ಷಿಯಲ್ ಪ್ರಾಡಕ್ಟ್‌ಗಳನ್ನು ಒದಗಿಸುತ್ತದೆ; ಇದು ತನ್ನ ಮೈಕ್ರೊ ಲೋನ್ ಬಿಸಿನೆಸ್‌ಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದೆ.
ಹುದ್ದೆ : ಸೇಲ್ಸ್ ಆ್ಯಂಡ್ ಕಲೆಕ್ಷನ್ ಆಫೀಸರ್
ನೌಕರಿಯ ಸ್ಥಳ : ಶಹಾಪುರ, ದೇವದುರ್ಗ, ಚಿತ್ತಾಪುರ, ಲಿಂಗಸಗೂರು, ಸಿಂದಗಿ, ಮುದ್ದೇಬಿಹಾಳ, ಬಿಜಾಪುರ, ಇಂಡಿ, ಕೊಟ್ಟೂರು, ಶೋರಾಪುರ, ಬಾಗಲಕೋಟೆ, ದೇವರಹಿಪ್ಪರಗಿ, ಮಾನ್ವಿ, ರಾಯಚೂರು–3
ಅರ್ಹತೆ : ಯಾವುದೇ ಪದವಿ
ವಯಸ್ಸು : 21ರಿಂದ 30 ವರ್ಷಗಳು
ಸಂಬಳ : ಆಕರ್ಷಕ ಸಂಬಳ, ಅತ್ಯುತ್ತಮ ಇನ್ಸೆಂಟಿವ್ ಸ್ಕೀಮ್‌ನೊಂದಿಗೆ
ಸಂಪರ್ಕ ನಂಬರ್ : ರವೀಂದ್ರ ಅಮೀನ್ – 9901507669, ಹನಮಂತ ಕಾಶೀನಾಥ – 9731406529
ಸಂದರ್ಶನದ ವಿವರ :

ಸಮಯ	ಸಂದರ್ಶನದ ಸ್ಥಳ	
ಸಮಯ : ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ	ಎಲ್&ಟಿ ಫೈನಾನ್ಷಿಯಲ್ ಸರ್ವಿಸಸ್, ಬಿಜಾಪುರ ಮನೆ ನಂ. #129, ನೆಲ ಮಹಡಿ, ಕನಕದಾಸ ಬಡಾವಣೆ, ಬಸ್‌ಸ್ಟಾಪ್ ಸಮೀಪ, ಬಿಜಾಪುರ, ಕರ್ನಾಟಕ 586 101.	ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ, ನೋಂದಾಯಿಸಿಕೊಳ್ಳಿ
	ಡೋರ್ ನಂ. 12-10-61/1A, 1ನೇ ಶ್ರೀ ನಿಮಿಷಾಂಬಾದೇವಿ ಚಿತಿಗ್ರಾ ಕಲ್ಯಾಣ ಮಂಟಪ, ಸಿಯಾತಾಲಾಬ್, ರಾಯಚೂರು 584 102.	
	ವೀರಭದ್ರೇಶ್ವರ ನಿಲಯ, ಮದ್ರಸಾದ ಸಮೀಪ, ಕೆಇಬಿ ಸಾಯಿನಗರದ ಎದುರಿಗೆ, ಕತರಾಕಿ ರಸ್ತೆ, ಮುಧೋಳ, ಬಾಗಲಕೋಟೆ ಜಿಲ್ಲೆ, ಕರ್ನಾಟಕ 587313.	
	ಕೋಟಿ ಬಿಲ್ಡಿಂಗ್, ಟಿಎಮ್‌ಸಿ ನಂ. 16, ತಾಲೂಕು ಸ್ಟೇಡಿಯಂನ ಎದುರಿಗೆ, ಇಳಕಲ ರಸ್ತೆ, ನಾಗಲಿಂಗ ನಗರ, ಹುನಗುಂದ 587 118.	

Interested candidates are requested to walk in with their Resume, Pan Card, Aadhaar Card and Graduation documents. ಟೂ-ವ್ಹೀಲರ್, ಡ್ರೈವಿಂಗ್ ಲೈಸೆನ್ಸ್ ಮತ್ತು ಸ್ಮಾರ್ಟ್‌ಫೋನ್ ಹೊಂದಿರುವ ಪುರುಷ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.



ಅನಾರೋಗ್ಯಕ್ಕೆ ಕಾರಣವಾಗಬಲ್ಲ ಭೋಜನವಿಧಾನಗಳು ನಮ್ಮ ದಿನನಿತ್ಯದ ಜೀವನದಲ್ಲಿ ಹಲವಾರು. ಇವುಗಳನ್ನು ಅರಿತು ಸರಿಪಡಿಸಿಕೊಳ್ಳುವುದು ಸ್ವಾಸ್ಥ್ಯರಕ್ಷಣೆಗೆ ಆವಶ್ಯಕ.

ಖಿನ್ನತೆಯಿಂದ ಹೊರಗೆ ಬನ್ನಿ...

ಲಾವಣ್ಯಗೌರಿ ವೆಂಕಟೇಶ್

ಸುಖ-ದುಃಖಗಳೆರಡೂ ಮಾನವನ ಜೀವನದ ಎರಡು ಮಗ್ಗಲುಗಳು. ಇವೆರಡೂ ಒಟ್ಟಿಗಿರಲು ಸಾಧ್ಯವಿಲ್ಲದಿದ್ದರೂ, ಎಲ್ಲರ ಬಾಳಿನಲ್ಲೂ ಆಗಾಗ ಬಂದು ಹೋಗುವ ಅತಿಥಿಗಳು. ನಮಗಿಷ್ಟವಾದ ವ್ಯಕ್ತಿಗಳು, ವಿಷಯಗಳು, ಸಂದರ್ಭಗಳು ನಮ್ಮ ಸುತ್ತಮುತ್ತಲಿದ್ದಾಗ, ನಮಗೆ ಸುಖ, ಸಂತೋಷಗಳಾಗುತ್ತವೆ. ಅದೇ ಇಷ್ಟವಿಲ್ಲದ ಘಟನೆಗಳು, ಕೆಲಸ-ಕಾರ್ಯಗಳು, ವ್ಯಕ್ತಿಗಳು ಎದುರಾದಾಗ ಆಗುವುದೇ ದುಃಖ. ಈ ವ್ಯಸನ ಹೆಚ್ಚಿನ ಸಮಯದವರೆಗೆ ಇದ್ದಾಗ, ಮನಸ್ಸಿನ ಮೇಲೆ ಆಗುವ ದಾಳಿಯೇ ಖಿನ್ನತೆ! ಈ ವಿಷಣ್ಣತೆ ಆ ವ್ಯಕ್ತಿಯೊಬ್ಬನನ್ನು ಸೋಲಿಸುವುದಲ್ಲದೆ, ಸುತ್ತಮುತ್ತಲಿನವರನ್ನೂ ಕಂಗೆಡಿಸುತ್ತದೆ. ಹಾಗಾದರೆ ಈ ಅಸಮಾಧಾನ ಸ್ಥಿತಿಗೆ ಕಾರಣವೇನು?

ಖಿನ್ನತೆಯಾಗುವುದು ಒಬ್ಬ ವ್ಯಕ್ತಿಯಿಂದಾದರೆ, ಒಂದು ವಿಷಯದಿಂದಾದರೆ ಅಥವಾ ನಿರ್ದಿಷ್ಟ ಸಂದರ್ಭದಿಂದಾದರೆ, ಅದರಿಂದ ದೂರ ಸರಿಯಬಹುದು. ಉದಾಹರಣೆಗೆ, ಕಚೇರಿಯ ಕೆಲಸ ನಿಮಗೆ ಅಸಮಾಧಾನ ತರುವಂತಾದಾಗ, ಅದನ್ನು ಬಿಟ್ಟು ಬೇರೆ ಕೆಲಸಕ್ಕೆ ಸೇರಬಹುದು. ಕಾಲ ಸರಿದಂತೆ ಹಳೆ ನೆನಪುಗಳು ಮಾಸಿ, ಅಸಮಾಧಾನ, ನೋವು ನೀಗುತ್ತವೆ. ಸಮಯ ಎಲ್ಲವನ್ನೂ ಸರಿಪಡಿಸುತ್ತದೆ. ಆದರೆ ವ್ಯಕ್ತಿಯೊಬ್ಬ ಒಬ್ಬನೇ ಇರುವಾಗಲೂ ನಿರುತ್ಸಾಹದಿಂದ, ಚಿಂತೆಯಿಂದ, ಕೊರಗಿನಿಂದಿದ್ದಾಗ, ಆ ವ್ಯಕ್ತಿ ಮಾನಸಿಕವಾಗಿ ಅನಾರೋಗ್ಯದಿಂದಿದ್ದಾನೆ ಎಂದು ಹೇಳಬಹುದು. ಮಾನಸಿಕ ರೋಗ ಎಂದಾಕ್ಷಣ ಅದು ಮರುಳಲ್ಲ! ಬಹುತೇಕ ಜನರು ಮಾನಸಿಕ ತಜ್ಞರ ಬಳಿ ಹೋಗಲು ಹೆದರುತ್ತಾರೆ. ಮಾನಸಿಕವಾಗಿ ಉನ್ಮತ್ತರಾಗಿರುವವರು ಮಾತ್ರ ಮಾನಸಿಕ ವೈದ್ಯರ ಬಳಿ ಹೋಗಬೇಕೆಂದಿಲ್ಲ. ದೇಹಕ್ಕಾಗುವ ನೋವಿಗೆ ಹೇಗೆ ಔಷಧ ಇದೆಯೋ ಹಾಗೆಯೇ ಮಾನಸಿಕ ನೋವಿಗೂ ಔಷಧಿ ಇದೆ. ವ್ಯತ್ಯಾಸವೆಂದರೆ, ದೈಹಿಕ ಕಾಯಿಲೆಯಾದಾಗ ಜನರಿಂದ ಕಾಳಜಿ, ಅನುಕಂಪ ದೊರೆಯುತ್ತದೆ. ಅದೇ ಮಾನಸಿಕವಾಗಿ ನೋವಾದಾಗ ಯಾರೂ ನಿಮ್ಮ ಬಳಿ ಸುಳಿಯುವುದಿಲ್ಲ!

ದೇಹಕ್ಕಾದ ಗಾಯ ಕಾಣುತ್ತದೆ. ಆದರೆ ಮನಸ್ಸಿಗಾದ ಗಾಯ ಯಾರ ಕಣ್ಣಿಗೂ ಗೋಚರಿಸುವುದಿಲ್ಲ. ಮನಸ್ಸಿನ ಗಾಯದ ನೋವು ಬಹಳ ಆಳವಾಗಿರುತ್ತದೆ. ಖಿನ್ನತೆಯನ್ನು ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಅನುಭವಿಸಿಯೇ ಇರುತ್ತಾರೆ. ಆದರೆ ಅದರ ತೀವ್ರತೆ ಮಾತ್ರ ಹೆಚ್ಚು ಕಡಿಮೆಯಾಗಿರುತ್ತದೆ. ಈಗಿನ ಸಂದರ್ಭವನ್ನೇ ತೆಗೆದುಕೊಂಡರೆ, ಈ ಸರ್ವವ್ಯಾಪಿ ವ್ಯಾಧಿಯಾದ ಕರೋನಾದಿಂದ ಎಷ್ಟೋ ಜನರು ಖಿನ್ನತೆಯನ್ನು ಅನುಭವಿಸಿದ್ದಾರೆ.

ಯಾವುದೇ ಒಂದು ಘಟನೆ ಘಟಿಸಿದಾಗ, ಆ ಸಂದರ್ಭಕ್ಕೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದರ ಮೇಲೆ ನಮ್ಮ ಸಂತೋಷ ಅಥವಾ ದುಃಖ ಅವಲಂಬಿತವಾಗಿರುತ್ತದೆ. ಆಯ್ಕೆ ನಮ್ಮದೇ ಆಗಿರುವಾಗ ಚಿಂತೆ ಏಕೆ? ನಮ್ಮ ಮನಃಸ್ಥಿತಿಯ ನಿರ್ಧಾರ ನಮ್ಮ ಕೈಯಲ್ಲೇ ಇರುವಾಗ, ನಮ್ಮ ಸಂತೋಷ-ದುಃಖಗಳನ್ನೂ ನಾವೇ ಆಯ್ಕೆ ಮಾಡಿಕೊಳ್ಳಬಹುದಲ್ಲವೇ? ಇದು ಎಷ್ಟು ಸುಲಭವೋ ಅಷ್ಟೇ ಕಷ್ಟಕರವಾದದ್ದೂ ಹೌದು. ಆದರೆ ಅಸಾಧ್ಯವಾದುದೇನಲ್ಲ. ಮೊದಲಿಗೆ ಖಿನ್ನತೆ ಆವರಿಸಿದೆ ಎಂದು ಖಚಿತಪಡಿಸಿಕೊಳ್ಳುವುದು ಹೇಗೆ?



ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದಿದ್ದಲ್ಲಿ ಖಿನ್ನತೆಯು ದೈಹಿಕ ಅನಾರೋಗ್ಯಗಳಾದ ಅಸ್ತಮಾ, ಆರ್ಥ್ರೈಟಿಸ್, ಮಧುಮೇಹ, ಬೊಜ್ಜು, ತೂಕ ಕಳೆದುಕೊಳ್ಳುವಿಕೆ, ಹೃದಯ ಸಂಬಂಧಿ ಕಾಯಿಲೆ ಮುಂತಾದವುಗಳಿಗೆ ದಾರಿ ಮಾಡಿಕೊಡುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಆತ್ಮಹತ್ಯೆಗೂ ಕಾರಣವಾಗುತ್ತದೆ.

ಖಿನ್ನತೆಯ ಕುರುಹುಗಳು

ನಿರುತ್ಸಾಹ, ಒಂಟಿತನ, ಭಾವನಾತ್ಮಕ ಏರಿಳಿತ, ಹಸಿವು-ನೀರಡಿಕೆಗಳ ವ್ಯತ್ಯಯ, ನಿಃಶಕ್ತಿ, ಆತ್ಮಹತ್ಯೆಯ ಚಿಂತನೆ, ಚಡಪಡಿಕೆ, ಕಳವಳ, ಭಯ, ಭ್ರಮೆ, ಆತಂಕ, ನಿದ್ರಾಹೀನತೆ ಅಥವಾ ಅತಿ ನಿದ್ರೆ ಮುಂತಾದವುಗಳು ಖಿನ್ನತೆಯ ಲಕ್ಷಣಗಳು.

ಮನುಷ್ಯ ಭಾವನಾ ಜೀವಿ. ಅವನಿಗೆ ಮಾನಸಿಕವಾಗಿ, ದೈಹಿಕವಾಗಿ ಹಾಗೂ ಭಾವನಾತ್ಮಕವಾಗಿ ಅಂತರ ಅಥವಾ ಸ್ಪೇಸ್ ಬೇಕಾಗುತ್ತದೆ. ಖಿನ್ನತೆ ಇರುವವರಿಗೆ ಈ ಅವಕಾಶವನ್ನು ಮಾಡಿಕೊಡಬೇಕು. ಅದಿಲ್ಲದಾದಾಗ ಈ ರೀತಿಯ ಸಮಸ್ಯೆಗಳು ಶುರುವಾಗುತ್ತವೆ. ಖಿನ್ನತೆ ತೀವ್ರವಾದಾಗ ತಜ್ಞರಿಂದ ಚಿಕಿತ್ಸೆ ಅಗತ್ಯ.

ಹೊರಬರುವ ದಾರಿಗಳು

- ಆದಷ್ಟೂ ಮನಸ್ಸಿಗೆ ಆಗಾಗ ದಾಳಿ ಇಡುವ ನಕಾರಾತ್ಮಕ ಚಿಂತನೆಗಳಿಂದ ದೂರವಿರಬೇಕು. ಚಿಂತೆ ನಿಜವಾದದ್ದೋ ಅಥವಾ ನಾವೇ ಸ್ವತಃ ಆಯ್ದುಕೊಂಡದ್ದೋ ಎನ್ನುವುದನ್ನು ತಿಳಿದುಕೊಳ್ಳಬೇಕು. ಬೇರೆಯವರ ನಿರೀಕ್ಷೆಗೆ ತಕ್ಕಂತೆ, ಅಂದರೆ ಜನ ಏನೆಂದುಕೊಳ್ಳುವರೋ ಎಂದು ಚಿಂತಿಸಿದರೆ, ಅದು ನಾವೇ ಆಯ್ದುಕೊಂಡ ಚಿಂತೆ.
- ಸಮಸ್ಯೆ ಎದುರಾದಾಗ, ಅದರ ಬಗ್ಗೆಯೇ ಆಳವಾಗಿ ಯೋಚಿಸುವ ಬದಲು ಅದಕ್ಕೆ ಪರಿಹಾರವನ್ನು ಕಂಡುಹಿಡಿಯಲು ಯತ್ನಿಸಬೇಕು. ಪರಿಹಾರ ನಿಮ್ಮಿಂದ ಸಾಧ್ಯವಾಗದಾದಾಗ ಗೊತ್ತಿರುವವರ ಬಳಿ ಚರ್ಚಿಸಿ, ಪರಿಹಾರ ಪಡೆಯಲು ಪ್ರಯತ್ನಿಸಬೇಕು.
- ಇಂದಿನ ಬಗ್ಗೆ ಮಾತ್ರ ಚಿಂತಿಸಿ, ಕಳೆದುಹೋದುದರ ಬಗ್ಗೆ ಅಥವಾ ಮುಂದೆ ನಡೆಯುವುದರ ಬಗ್ಗೆ ಚಿಂತಿಸುವುದರಿಂದ ಸಮಸ್ಯೆಯ ಉತ್ಪತ್ತಿಯೇ ಹೊರತು ಪರಿಹಾರವಲ್ಲ.
- ಕೆಲಸವಿಲ್ಲದ ಖಾಲಿ ಮನ ದೆವ್ವಗಳ ವಾಸಸ್ಥಾನ! ಇಲ್ಲಿ ದೆವ್ವಗಳೆಂದರೆ ಚಿಂತೆಗಳು. ಆದ್ದರಿಂದ ಯಾವಾಗಲೂ ಕ್ರಿಯಾಶೀಲರಾಗಿರಿ.
- ಚಿಂತೆ ಮಾಡುವುದೇ ಆದರೆ ಸಕಾರಾತ್ಮಕ ಚಿಂತನೆಯನ್ನು ಮಾಡಿ. ಇದರಿಂದ ಖಿನ್ನತೆ ದೂರವಾಗುತ್ತದೆ. ಆತ್ಮವಿಶ್ವಾಸ ಹಾಗೂ ಶ್ರೇಷ್ಠ ಚಿಂತನೆಯಿಂದ ಕೀಳರಿಮೆಯನ್ನು ಹಿಮ್ಮೆಟ್ಟಿ.
- ಧ್ಯಾನ ಮತ್ತು ದೈಹಿಕ ವ್ಯಾಯಾಮ ಮಾಡುವುದರಿಂದಲೂ ಖಿನ್ನತೆಯಿಂದ ಹೊರಬರಬಹುದು.

ಮಿದುಳು ಜಠರಗಳ ನಡುವೆ ಒಂದು ಹೆದ್ದಾರಿ

ಡಾ. ಜಿ. ಎಲ್. ಕೃಷ್ಣ

ಮಾನಸಿಕ ಭಾವಗಳನ್ನು ಜೀರ್ಣಾಂಗಗಳ ವ್ಯಾಪಾರವೆಂಬಂತೆ ಸೂಚಿಸುವ ನುಡಿಗಟ್ಟುಗಳು ನಮ್ಮ ಭಾಷೆಗಳಲ್ಲಿ ಹೇರಳವಾಗಿವೆ. ಮಾತ್ಸರ್ಯವಿದ್ದಾಗ ಹೊಟ್ಟೆ ಉರಿಯುವುದು, ತೀವ್ರಶೋಕವಾದಾಗ ಕರುಳು ಕಿವುಚಿದಂತಾಗುವುದು, ಜೀವಕ್ಕೆ ಹಾಯೆನಿಸಿದಾಗ ಹಾಲು ಕುಡಿದಂತಾಗುವುದು ನಮ್ಮೆಲ್ಲರ ಮಾತಿನಲ್ಲಿ ಅನುಭವದಲ್ಲಿ ಯಥೇಷ್ಟವಾಗಿವೆ. ತೀರಾ ಸಾಮಾನ್ಯವೆಂಬಂತೆ ತೋರುವ ಈ ನುಡಿಗಟ್ಟುಗಳು ಶರೀರದ ಒಳಗಿನ ಕ್ರಿಯೆಗಳಲ್ಲಿರುವ ಸೂಕ್ಷ್ಮಸಂಬಂಧವೊಂದನ್ನು ಸೂಚಿಸುತ್ತಿವೆ.

ಶರೀರದ ಎಲ್ಲ ಅವಯವಗಳೂ ಮಿದುಳಿನ ಜೊತೆ ನರಗಳ ಮೂಲಕ, ವಿವಿಧ ರಾಸಾಯನಿಕಗಳ ಮೂಲಕ ಸಂಬಂಧ ಹೊಂದಿರುವುದು ಗೊತ್ತಿರದ ವಿಚಾರವೇನಲ್ಲ. ಇಂತಹ ಸಂಬಂಧದಿಂದ ಮಿದುಳು ಶರೀರದ ವಿವಿಧ ಭಾಗಗಳಿಂದ ಬೇಕಾದ ಮಾಹಿತಿಯನ್ನು ಸಂಗ್ರಹಿಸಿ, ಸರಿಯಾಗಿ ಯೋಜಿಸಿ, ಶರೀರಸ್ಥಿತಿಗೆ ಯುಕ್ತವಾದ ಪ್ರತಿಕ್ರಿಯೆಗಳನ್ನೇರ್ಪಡಿಸುತ್ತದೆ. ಎಲ್ಲ ಅವಯವಗಳೊಂದಿಗೆ ಮಿದುಳಿಗೆ ಇಂಥ ಸಂಬಂಧವಿದೆಯಾದರೂ ಜೀರ್ಣಾಂಗಗಳ ಜೊತೆ ಅದಕ್ಕಿರುವ ನಿಕಟತೆ ವಿಶಿಷ್ಟವಾದದ್ದು. ಈ ನಿಕಟತೆಯನ್ನು ಗುರುತಿಸಿ ವೈದ್ಯಶಾಸ್ತ್ರ ಮಿದುಳು-ಜಠರಗಳ ನಡುವೆ ಒಂದು ಮಾಹಿತಿ ವಿನಿಮಯದ ಹೆದ್ದಾರಿಯೇ ಇದೆ ಎಂದು ಕಲ್ಪಿಸಿದೆ. ಈ ಹೆದ್ದಾರಿಯನ್ನು ಬ್ರೇನ್-ಗಟ್ ಏಕ್ಸಿಸ್ ಎಂದು ಕರೆಯುತ್ತಾರೆ. ಈ ಹೆದ್ದಾರಿಯ ಮೂಲಕ ಮನಸ್ಸು ಜೀರ್ಣಕ್ರಿಯೆಗಳ ಮೇಲೆ, ಜೀರ್ಣಕ್ರಿಯೆಗಳು ಮನಸ್ಸಿನ ಮೇಲೆ ಶೀಘ್ರಪರಿಣಾಮವನ್ನು ಬೀರುತ್ತಿರುತ್ತವೆ. ಎಷ್ಟರಮಟ್ಟಿಗೆಂದರೆ, ಜೀರ್ಣಾಂಗಗಳ ಸಮಸ್ಯೆಯಿರುವ ಸುಮಾರು ಐವತ್ತು ಪ್ರತಿಶತ ರೋಗಿಗಳಲ್ಲಿ ಮಾನಸಿಕ ಅನಾರೋಗ್ಯವೇ ಜೀರ್ಣಕ್ರಿಯೆ ಬಿಗಡಾಯಿಸುವುದಕ್ಕೆ ಮೂಲಕಾರಣ ಎಂಬುದನ್ನು ಕಂಡುಕೊಳ್ಳಲಾಗಿದೆ.

ಇಷ್ಟೇ ಅಲ್ಲ. ನಮ್ಮ ಜೀರ್ಣಾಂಗಗಳ ಸ್ಥಿತಿ ನಮ್ಮ ಸ್ವಭಾವವನ್ನೇ ನಿಯಂತ್ರಿಸುತ್ತಿರಬಹುದೆಂಬ ಸೋಜಿಗದ ಸಂಗತಿ ಈಚಿನ ಸಂಶೋಧನೆಗಳಿಂದ ತೋರಿಬರುತ್ತಿದೆ. ಸ್ಟೀಫನ್ ಕಾಲಿನ್ಸ್ ಎಂಬ ವೈದ್ಯವಿಜ್ಞಾನಿಯ ನೇತೃತ್ವದಲ್ಲಿ ನಡೆಯುತ್ತಿರುವ ಸಂಶೋಧನೆಗಳು ಈ ದಿಶೆಯಲ್ಲಿ ಮಹತ್ವದ್ದಾಗಿವೆ. ಅವರ ಒಂದು ವೈಜ್ಞಾನಿಕ ಪ್ರಯೋಗವನ್ನು ಇಲ್ಲಿ ಉದಾಹರಿಸಬಹುದು. ಸ್ವಭಾವದಿಂದಲೇ ಭಿನ್ನವಾಗಿದ್ದ ಇಲಿಗಳ ಎರಡು ತಳಿಗಳನ್ನು ಪ್ರಯೋಗಕ್ಕೆ ಆಯ್ದುಕೊಳ್ಳಲಾಯಿತು. ಒಂದು ತಳಿಯ ಇಲಿಗಳು ಸಂಕೋಚ ಸ್ವಭಾವದವುಗಳಾಗಿದ್ದರೆ ಇನ್ನೊಂದು ತಳಿಯವು ಸ್ವಾಭಾವಿಕವಾಗಿಯೇ ಹೊರಮುಖವಾಗಿರುತ್ತಿದ್ದವು. ಸಂಶೋಧಕರು ಆ್ಯಂಟಿಬಯಾಟಿಕ್‌ಗಳ ಬಳಕೆಯಿಂದ ಈ ಇಲಿಗಳ ಜಠರದ ಪ್ರಾಕೃತಿಕ ಸೂಕ್ಷ್ಮಕ್ರಿಮಿಗಳನ್ನು ಇಲ್ಲವಾಗಿಸಿ, ಅವುಗಳ ಜಾಗದಲ್ಲಿ ವಿರುದ್ಧ ತಳಿಯ ಜಠರದ ಸೂಕ್ಷ್ಮಕ್ರಿಮಿಗಳನ್ನು ಭರಿಸಿದರು. ಏನಾಶ್ಚರ್ಯ! ಸಂಕೋಚ ಸ್ವಭಾವದ ಇಲಿಗಳು ಹೊರಮುಖವಾಗಿಬಿಟ್ಟವು, ಹೊರಮುಖವಾಗಿಯೇ ಇರುತ್ತಿದ್ದವು ನಾಚಿಕೆಯಿಂದ ಹಿಂದೆ ಸರಿಯುವಂಥವುಗಳಾಗಿಬಿಟ್ಟವು. ಜಠರದ ಸೂಕ್ಷ್ಮಕ್ರಿಮಿಗಳು ಮತ್ತು ಅವುಗಳಿಂದ ರೂಪುಗೊಂಡ ಜೀರ್ಣಾಂಗಗಳ ಸ್ಥಿತಿ ಮನಸ್ಸಿನ ಮೇಲೆ ಎಷ್ಟು ವ್ಯಾಪಕವಾದ ಪ್ರಭಾವವನ್ನು ಬೀರಬಲ್ಲದು ಎಂಬುದನ್ನು ಈ ವೈಜ್ಞಾನಿಕ ಪ್ರಯೋಗ ಸೂಚಿಸುತ್ತಿದೆ. ಈ ನಿಟ್ಟಿನಲ್ಲಿ ಮತ್ತಷ್ಟು ಅಧ್ಯಯನಗಳು ಸಾಗುತ್ತಿವೆ.

ಬ್ರೇನ್-ಗಟ್ ಏಕ್ಸಿಸ್‌ನ ವೈಜ್ಞಾನಿಕ ವಿಶ್ಲೇಷಣೆ ಈಚಿನ ತಿಳಿವಳಿಕೆಯಾದರೂ, ಮೇಲಿನ ನುಡಿಗಟ್ಟುಗಳು ಸೂಚಿಸುವಂತೆ ಮಿದುಳು-ಜಠರಗಳ ನಡುವಣ ನಿಕಟ ಸಂಬಂಧ ಬಹುಕಾಲದಿಂದ ತಿಳಿದಿರುವ ವಿಷಯವೇ. ಆಯುರ್ವೇದದ ಆರ್ಷಗ್ರಂಥವಾದ ಚರಕಸಂಹಿತೆಯಲ್ಲಿ ಸ್ವಾರಸ್ಯಕರವಾದ ಶ್ಲೋಕವೊಂದಿದೆ:

ಮಾತ್ರಯಾಽಪ್ಯಭ್ಯವಹೃತಂ ಪಥ್ಯಂ ಚಾನ್ನಂ ನ ಜೀರ್ಯತಿ |
ಚಿಂತಾ-ಶೋಕ-ಭಯ-ಕ್ರೋಧ-ದುಃಖಶಯ್ಯಾ- ಪ್ರಜಾಗರೈಃ||

‘ಸರಿಯಾದ ಪ್ರಮಾಣದಲ್ಲೇ ಆಹಾರವನ್ನು ಸೇವಿಸಿರಬಹುದು. ಒಳ್ಳೆಯ ಪಥ್ಯವಾದ ಅನ್ನವನ್ನೇ ಭುಂಜಿಸಿರಬಹುದು. ಆದರೂ ಕೆಲವೊಮ್ಮೆ ತಿಂದ ಅನ್ನ ಮೈಸೇರದು. ಕಾರಣ: ಚಿಂತೆ, ಶೋಕ, ಭಯ, ಕ್ರೋಧಾದಿಗಳಿಂದ ಉಪತಪ್ತವಾದ ಮನಸ್ಸು!’

ಭೋಜನಕ್ಕೆ ಕುಳಿತ ಶಾಲಾಬಾಲಕನನ್ನು ಅವನ ಪರೀಕ್ಷೆಯ ಫಲಿತಾಂಶ ಕಳಪೆಯಾಯಿತೆಂದು ಹಂಗಿಸುವುದಿರಬಹುದು, ‘ಬ್ರೇಕ್ ಫಸ್ಟ್ ಮೀಟಿಂಗ್’ಗಳಲ್ಲಿ ಉದ್ವೇಗಕಾರಿಯಾದ ರಾಜಕಾರಣವನ್ನು ಚರ್ಚಿಸುವುದಿರಬಹುದು, ಇಲ್ಲವೇ ಕಾಮಕ್ರೋಧಗಳನ್ನು ಕೆರಳಿಸುವ ಟಿ.ವಿಯ ಧಾರಾವಾಹಿಗಳನ್ನು ನೋಡುತ್ತಾ ಅನ್ಯಮನಸ್ಕರಾಗಿ ಊಟ ಮಾಡುವುದಿರಬಹುದು, ಅನಾರೋಗ್ಯಕ್ಕೆ ಕಾರಣವಾಗಬಲ್ಲ ಭೋಜನವೃತ್ತಗಳು ನಮ್ಮ ದಿನನಿತ್ಯದ ಜೀವನದಲ್ಲಿ ಹಲವಾರು. ಇವುಗಳನ್ನು ಅರಿತು ಸರಿಪಡಿಸಿಕೊಳ್ಳುವುದು ಸ್ವಾಸ್ಥ್ಯರಕ್ಷಣೆಗೆ ನಿತಾಂತವಾಗಿ ಆವಶ್ಯಕ.

ಇಂತಹ ಪ್ರಮಾದಗಳು ಆಗದಿರಲೆಂದೇ ಪೂರ್ವಿಕರು ಭೋಜನವೃತ್ತವನ್ನು ಒಂದು ಯಜ್ಞಕಾರ್ಯವೇನೋ ಎಂಬಂತೆ ಭಾವಿಸಿದ್ದಾರೆ. ಜಠರದಲ್ಲಿ ಸ್ಥಿತನಾದ ವೈಶ್ವಾನರಾಗ್ನಿಗೆ ನಿಯತಕಾಲದಲ್ಲಿ ಭಕ್ತಿಯಿಂದ ಸಮರ್ಪಿಸುವ ಸಾತ್ತ್ವಿಕಾಹಾರವೆಂಬ ಹವಿಸ್ಸು ತನುಮನಗಳೆರಡನ್ನೂ ಪೋಷಿಸಿ ಸಲಹುವ ಯಜ್ಞದ್ರವ್ಯ. ಪವಿತ್ರಭಾವಗಳಿಂದ ಸೇವಿಸುವ ಆಹಾರ ಶರೀರಕ್ಕೆ ಅಮೃತಪ್ರಾಯವಾದೀತೆಂಬುದು ಈ ಯಜ್ಞಯಕಲ್ಪನೆಯ ಆಶಯ. ಅನ್ನಪೂರ್ಣೆಯನ್ನು ಸ್ತುತಿಸಿ, ಅನ್ನದಾತನನ್ನು ಸ್ಮರಿಸಿ, ದೇಹವೆಂಬ ದೇವಾಲಯದ ರಕ್ಷಕನಾದ ವೈಶ್ವಾನರಾಗ್ನಿಗೆ ತೃಪ್ತಿಯನ್ನು ಉಂಟುಮಾಡುವುದು ಈ ಕಲ್ಪನೆಯ ತಾತ್ಪರ್ಯ. ಹಿಂದಿನಂತೆಯೇ ಈ ನಮ್ಮ ಆಧುನಿಕ ಕಾಲಕ್ಕೂ ಅತ್ಯಂತವಾಗಿ ಪ್ರಸ್ತುತವಾಗುವ ಸತ್ಕಲ್ಪನೆಯಲ್ಲವೇ ಇದು? ಭಗವದ್ಗೀತೆಯ ಈ ಶ್ಲೋಕ ಮನನೀಯ:

ಅಹಂ ವೈಶ್ವಾನರೋ ಭೂತ್ವಾ
ಪ್ರಾಣಿನಾಂ ದೇಹಮಾಶ್ರಿತಃ |
ಪ್ರಾಣಾಪಾನಸಮಾಯುಕ್ತಃ
ಪಚಾಮ್ಯನ್ನಂ ಚತುರ್ವಿಧಮ್ ||

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಬೆಳಕು ಪ್ರತಿಫಲನ ಮತ್ತು ವಕ್ರೀಭವನ

(ಮುಂದುವರಿದ ಭಾಗ)

ಭೌತಶಾಸ್ತ್ರ

ಎಸ್ಸೆಸ್ಸೆಲ್ಸಿ

ಮಸೂರ ಸೂತ್ರ:

ಮಸೂರಗಳಲ್ಲಿ ಎಲ್ಲಾ ದೂರಗಳನ್ನು ದೃಕ್ ಕೇಂದ್ರಗಳಿಂದ ಅಳೆಯಲಾಗುತ್ತಿದ್ದು, ಪೀನ ಮಸೂರದಲ್ಲಿ ಸಂಗಮ ದೂರವು ಧನಾತ್ಮಕವಾಗಿಯೂ ಮತ್ತು ನಿಮ್ನ ಮಸೂರದಲ್ಲಿ ಸಂಗಮ ದೂರವನ್ನು ಋಣಾತ್ಮಕವಾಗಿಯೂ ಅಳೆಯಲಾಗುತ್ತದೆ.

ಮಸೂರ ಸೂತ್ರವು ವಸ್ತು ದೂರ u ಪ್ರತಿಬಿಂಬ ದೂರ v ಮತ್ತು ಸಂಗಮ ದೂರ f ಗಳ ನಡುವೆ ಸಂಬಂಧವನ್ನು ಕಲ್ಪಿಸುತ್ತಿದ್ದು, ಈ ಸೂತ್ರ

$$\frac{1}{v} - \frac{1}{u} = \frac{1}{f}$$

ಮಸೂರ ವರ್ಧನೆ

ವಸ್ತುವಿನ ಎತ್ತರ h ಮತ್ತು ಮಸೂರದಿಂದ ಉಂಟಾದ ಪ್ರತಿಬಿಂಬ h1 ಎತ್ತರ ಆದಾಗ ಮಸೂರದಿಂದ ಉಂಟಾದ ವರ್ಧನೆ (m) ಯು

$$m = \frac{\text{ಪ್ರತಿಬಿಂಬದ ಎತ್ತರ}}{\text{ವಸ್ತುವಿನ ಎತ್ತರ}} = \frac{h^1}{h} = \frac{v}{u}$$

ಮಸೂರದ ಸಾಮರ್ಥ್ಯ

ಮಸೂರವು ಬೆಳಕನ್ನು ಕೇಂದ್ರೀಕರಿಸುವ ಅಥವಾ ವಿಕೇಂದ್ರೀಕರಿಸುವ ಮಟ್ಟವನ್ನು ಅದರ ಸಾಮರ್ಥ್ಯ ಎನ್ನುವರು. ಮಸೂರದ ಸಾಮರ್ಥ್ಯವು ಅದರ ಸಂಗಮ ದೂರಕ್ಕೆ ವಿಲೋಮಾನುಪಾತದಲ್ಲಿರುತ್ತದೆ.

$$p = \frac{1}{f}$$

ಮಸೂರದ ಸಾಮರ್ಥ್ಯದ SI ಏಕಮಾನ ಡಯಾಪ್ಟರ್ (D)

ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

ಮಾನವನ ಕಣ್ಣಿನ ರಚನೆ ಮತ್ತು ಕಾರ್ಯ



ನಮ್ಮ ಜ್ಞಾನೇಂದ್ರೀಯಗಳಲ್ಲಿ ಒಂದಾದ ಕಣ್ಣು ಸರಿಸುಮಾರು 2.3 ಸೆಂ.ಮೀ ವ್ಯಾಸವುಳ್ಳ ಗೋಳಾಕಾರದಲ್ಲಿದೆ. ಇದು ಕ್ಯಾಮೆರಾದಂತಿದ್ದು, ಇದರ ಮಸೂರ ವ್ಯವಸ್ಥೆಯು ದ್ಯುತಿ ಸಂವೇದಿ ಪರದೆಯಾದ ರೆಟಿನಾದ ಮೇಲೆ ಪ್ರತಿಬಿಂಬವನ್ನು ಉಂಟುಮಾಡುತ್ತದೆ. ಬೆಳಕು ಕಣ್ಣುಗುಡ್ಡೆಯ ಮುಂಭಾಗದಲ್ಲಿ ಉಬ್ಬಿನಂತಿರುವ ಕಾರ್ನಿಯಾ ಮೂಲಕ ಕಣ್ಣನ್ನು ಪ್ರವೇಶಿಸುತ್ತದೆ.

ವಿವಿಧ ಅಂತರದಲ್ಲಿರುವ ವಸ್ತುಗಳಿಂದ ಬಂದ ಬೆಳಕನ್ನು ರೆಟಿನಾದ ಮೇಲೆ ಕೇಂದ್ರೀಕರಿಸಲು ಬೇಕಾದ ಸಂಗಮ ದೂರದ ಹೊಂದಾಣಿಕೆಯನ್ನು ಸ್ಫಟಿಕ ಮಸೂರವು ಒದಗಿಸುತ್ತದೆ.

ಐರಿಸ್ ಕಣ್ಣಿನಲ್ಲಿರುವ ಕಡು ಕಪ್ಪಾದ ಸ್ನಾಯುಗಳ ಪರವಾಗಿದ್ದು, ಇದು ಕಣ್ಣಿನ ಪಾಪೆಯ ಗಾತ್ರವನ್ನು ನಿಯಂತ್ರಿಸುತ್ತದೆ. ಕಣ್ಣಿನ ಪಾಪೆಯು ಕಣ್ಣಿನೊಳಗೆ ಪ್ರವೇಶಿಸುವ ಬೆಳಕಿನ ಪ್ರಮಾಣವನ್ನು ನಿಯಂತ್ರಿಸುತ್ತದೆ. ಕಣ್ಣಿನ ಮಸೂರವು ಅಕ್ಷಪಟಲದ ಮೇಲೆ ನೈಜ ಚಿತ್ರವನ್ನು ತಲೆಕೆಳಗಾಗಿ ಪ್ರತಿಬಿಂಬಿಸುತ್ತದೆ.

ಅಗಾಧ ಸಂಖ್ಯೆಯ ಬೆಳಕಿನ ದೃಶ್ಯ ಗ್ರಾಹಕ ಕೋಶಗಳ ತೆಳು ಪರದೆಯಾದ ಅಕ್ಷಿಪಟಲವು ಬೆಳಕಿನ ಕಿರಣಗಳ ಚೋದನೆಯಿಂದ ಸಕ್ರಿಯಗೊಂಡು ವಿದ್ಯುತ್ ಸಂಕೇತಗಳನ್ನು ಸೃಷ್ಟಿಸುತ್ತವೆ. ಈ ಸಂಕೇತಗಳು ಚಾಕ್ಷುಕ ನರಗಳ ಮೂಲಕ ಮಿದುಳಿಗೆ ತಲುಪಿದಾಗ ಮಿದುಳು ಈ ಸಂಕೇತಗಳನ್ನು ಅರ್ಥೈಸಿ ಮಾಹಿತಿಗಳನ್ನು ಸಂಸ್ಕರಿಸುತ್ತದೆ.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಜೀವಶಾಸ್ತ್ರ ವಿಭಾಗದ ‘ಸೆಕ್ಷುವಲ್ ರಿಪ್ರೊಡಕ್ಷನ್ ಇನ್ ಫ್ಲವರಿಂಗ್ ಪ್ಲ್ಯಾಂಟ್’ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3rQ3Xcb

ಅರೆವಾಹಕಗಳು

(ಮುಂದುವರಿದ ಭಾಗ)

ಭೌತಶಾಸ್ತ್ರ

ದ್ವಿತೀಯ ಪಿಯುಸಿ

ಜೀನಾರ್ ಡಯೋಡ್



ವೋಲ್ಟೇಜ್‌ನ ನಿಯಂತ್ರಕವಾಗಿ ಬಳಸಲಾಗುವ ಜೀನಾರ್ ಡಯೋಡ್ ವಿಪರ್ಯಾಯ ಪಕ್ಷಪಾತದಲ್ಲಿನ ಕುಸಿತ ವಲಯದಲ್ಲಿಯೂ ಸಹ ಕೆಲಸ ಮಾಡುತ್ತದೆ. ಈ ಡಯೋಡ್‌ನಲ್ಲಿ p ಮತ್ತು n ಬದಿಗಳೆರಡರಲ್ಲೂ ಅತಿಯಾದ ಪ್ರಮಾಣದಲ್ಲಿ ಡೋಪ್ ಮಾಡಲಾಗಿದ್ದು ವಿಪರ್ಯಾಯ ಪಕ್ಷಪಾತ ವೋಲ್ಟೇಜ್ (V_Z) ತಲುಪಿದಾಗ ವಿದ್ಯುತ್ ಪ್ರವಾಹದಲ್ಲಿ ತ್ರೀವತರ ಹೆಚ್ಚಳ ಕಂಡು ಬರುತ್ತದೆ ಮತ್ತು ವೋಲ್ಟೇಜ್ ಸ್ಥಿರವಾಗಿಯೇ ಇರುತ್ತದೆ. ವಿಪರ್ಯಾಯ ಪ್ರವಾಹದಲ್ಲಿ ಎಲೆಕ್ಟ್ರಾನ್‌ಗಳು p ನಿಂದ n ಬದಿಗೆ ಮತ್ತು ರಂಧ್ರಗಳು n ನಿಂದ p ಬದಿಗೆ ಹರಿಯುತ್ತವೆ.

ವಿಪರ್ಯಾಯ ವೋಲ್ಟೇಜ್ ಹೆಚ್ಚಿದಂತೆಲ್ಲಾ ಸಂಧಿಯಲ್ಲಿ ವಿದ್ಯುತ್ ಕ್ಷೇತ್ರವು ಗುರುತರವಾಗುತ್ತಾ ಹೋಗುತ್ತದೆ. ವಿಪರ್ಯಾಯ ಪಕ್ಷಪಾತ ವೋಲ್ಟೇಜ್ $V-V_Z$ ಆದಾಗ ವೇಲೆನ್ಸ್ ಎಲೆಕ್ಟ್ರಾನ್‌ಗಳು p ಬದಿಯಿಂದ n ಬದಿಗೆ ವೇಗೋತ್ಕರ್ಷಿಸಲು ಬೇಕಾಗಿರುವ ಶಕ್ತಿಯನ್ನು ಪಡೆದು ಕುಸಿತ ವೋಲ್ಟೇಜ್‌ನಲ್ಲಿ ಹೆಚ್ಚಿನ ಪ್ರವಾಹವನ್ನು ತೋರಿಸುತ್ತವೆ. ವಿದ್ಯುತ್ ಕ್ಷೇತ್ರದ ಪ್ರಭಾವದಿಂದ ಎಲೆಕ್ಟ್ರಾನ್‌ಗಳು ವಿಸರ್ಜನೆಯಾಗುವುದರಿಂದ ಇದನ್ನು ‘ಆಂತರಿಕ ಕ್ಷೇತ್ರ ವಿಸರ್ಜನೆ’ ಅಥವಾ ಕ್ಷೇತ್ರ ಅಯಾನೀಕರಣ ಎನ್ನುವರು.

ಜೀನಾರ್ ಡಯೋಡ್ ಒಂದು ವೋಲ್ಟೇಜ್ ನಿಯಂತ್ರಕವಾಗಿ



ಜೀನಾರ್ ಡಯೋಡ್ ಅನ್ನು ವಿಪರ್ಯಾಯ ಪಕ್ಷಪಾತದಲ್ಲಿ R_X ನೊಂದಿಗೆ ಶ್ರೇಣಿಯಲ್ಲಿ ಜೋಡಿಸಲಾಗುತ್ತದೆ. ಭುಕ್ತ ವೋಲ್ಟೇಜ್ ಅನ್ನು ಹೆಚ್ಚಿಸಿದಾಗ R_X ನಡುವೆ ಬೀಳುವ ವೋಲ್ಟೇಜ್ ಹೆಚ್ಚಾದರೂ ಡಯೋಡ್‌ನ ವಿಶೇಷ ಗುಣದಿಂದ ಜೀನಾರ್ ಡಯೋಡ್‌ನ ನಡುವೆ ವೋಲ್ಟೇಜ್ ಸ್ಥಿರವಾಗಿಯೇ ಉಳಿಯುತ್ತದೆ. ಒಂದು ವೇಳೆ ಕಡಿಮೆ ಭುಕ್ತ ವೋಲ್ಟೇಜ್ ಕೊಟ್ಟಾಗ ಮತ್ತು ಜೀನಾರ್ ಡಯೋಡ್‌ನ ಮೂಲಕ ಹರಿಯುವ ಪ್ರವಾಹ ಸ್ಥಿರವಾಗಿದ್ದು, ಜೀನಾರ್ ಡಯೋಡ್‌ನ ನಡುವಿನ ವೋಲ್ಟೇಜ್‌ನಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಭುಕ್ತ ವೋಲ್ಟೇಜ್ ಅನ್ನು ಹೆಚ್ಚು /ಕಡಿಮೆ ಮಾಡಿದರೂ ಜೀನಾರ್ ಡಯೋಡ್‌ನ ನಡುವಿನ ವೋಲ್ಟೇಜ್‌ನಲ್ಲಿ ಯಾವುದೇ ಬದಲಾವಣೆಯಾಗದ ಕಾರಣ ಇದನ್ನು ವೋಲ್ಟೇಜ್‌ನ ನಿಯಂತ್ರಕವಾಗಿ ಬಳಸುತ್ತಾರೆ.

ಫೋಟೊ ಡಯೋಡ್





ಇದು ಒಂದು p-n ಸಂಧಿ ಡಯೋಡ್ ಆಗಿದ್ದು, ಡಯೋಡ್‌ನ ಮೇಲೆ ಬಿದ್ದ ಬೆಳಕು ಸಂಧಿಯ ಮೂಲಕ ಸಾಗಲು ಪಾರದರ್ಶಕ ಕಿಟಕಿಯನ್ನು ನಿರ್ಮಿಸಲಾಗಿರುತ್ತದೆ. ಪ್ರಕಾಶಿಸುವ ಬೆಳಕಿನ ಶಕ್ತಿಯು (h) ಅರೆವಾಹಕ ಶಕ್ತಿ ಅಂತರ E_g ಗಿಂತ ಹೆಚ್ಚಾದಾಗ, ಬರಿದಾದ ಸ್ತರಗಳಲ್ಲಿನ e-h ಜೋಡಿಯಲ್ಲಿ ಎಲೆಕ್ಟ್ರಾನ್‌ಗಳು n-ಬದಿಗೂ ರಂಧ್ರಗಳು p- ಬದಿಗೂ ತಲುಪುತ್ತವೆ. ಇದನ್ನು ವಿಪರ್ಯಾಯ ಪಕ್ಷಪಾತದಲ್ಲಿ ಇರಿಸಲಾಗುತ್ತಿದ್ದು, ಎಲೆಕ್ಟ್ರಾನ್‌ಗಳು n-ಬದಿಯಲ್ಲೂ ರಂಧ್ರಗಳು n-ಬದಿಯಲ್ಲೂ ಶೇಖರಣೆಯಾಗುತ್ತಾ ಹೋಗುವುದರಿಂದ ವಿದ್ಯುತ್ ಚಾಲಕ ಬಲ ಉಂಟಾಗುತ್ತದೆ. ಇದು ಬಾಹ್ಯ ಹೊರೆಯ ಮೂಲಕ ವಿದ್ಯುತ್ ಪ್ರವಾಹವನ್ನು ಉಂಟು ಮಾಡುತ್ತಿದ್ದು, ಈ ಪ್ರವಾಹವನ್ನು ದ್ಯುತಿ ಪ್ರವಾಹ ಎನ್ನುತ್ತಾರೆ. ಈ ಪ್ರವಾಹವು ಆಪಾತ ಬೆಳಕಿನ ತೀವ್ರತೆಗೆ ನೇರಾನುಪಾತದಲ್ಲಿರುತ್ತದೆ.

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ ‘ಆಟಂ’ ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3lfMojo

‘ಮಂತ್ರಾಲಯ ಸಮಗ್ರ ಅಭಿವೃದ್ಧಿಗೆ ₹ 1 ಸಾವಿರ ಕೋಟಿ ಯೋಜನೆ’

50 ಅಡಿ ಎತ್ತರದ ರಾಮನಮೂರ್ತಿ ಸ್ಥಾಪನೆ: ಶ್ರೀಸುಬುಧೇಂದ್ರ ತೀರ್ಥರು

ಪ್ರಜಾವಾಣಿ ವಾರ್ತೆ

ರಾಯಚೂರು: ‘ಮಂತ್ರಾಲಯದ ಸಮಗ್ರ ಅಭಿವೃದ್ಧಿಗೆ ₹ 1 ಸಾವಿರ ಕೋಟಿ ವೆಚ್ಚದ ಯೋಜನೆ ಸಿದ್ಧಪಡಿಸಲಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನ ಪಡೆಯಲಾಗುವುದು’ ಎಂದು ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿ ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಮಂತ್ರಾಲಯದಲ್ಲಿ ಸೋಮವಾರ ಆಯೋಜಿಸಿದ್ದ ‘ರಾಯರ 400ನೇ ಪಟ್ಟಾಭಿಷೇಕ ಮಹೋತ್ಸವ’ಕ್ಕೂ ಮುನ್ನ, ಕ್ಷೇತ್ರದ ಪ್ರವೇಶ ಮಾರ್ಗಪಕ್ಕದಲ್ಲಿ 32 ಅಡಿ ಎತ್ತರದ ಅಭಯ ಆಂಜನೇಯ ಏಕಶಿಲಾ ಮೂರ್ತಿ ಪ್ರತಿಷ್ಠಾಪನೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಕುಡಿಯುವ ನೀರು, ರಸ್ತೆ, ಸೋಲಾರ್ ಸೌಲಭ್ಯ, ಆಸ್ಪತ್ರೆ, ಉದ್ಯಾನ, ಹೆಲಿಪ್ಯಾಡ್ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿಯ ಈ ಯೋಜನೆಗೆ ಮಠದಿಂದಲೂ ಭಾಗಶಃ ವೆಚ್ಚ ಭರಿಸಲಾಗುವುದು’ ಎಂದು ತಿಳಿಸಿದರು.

ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ಶ್ರೀರಾಘವೇಂದ್ರಸ್ವಾಮಿಗಳ 400ನೇ ಪಟ್ಟಾಭಿಷೇಕ ಮಹೋತ್ಸವ ನಿಮಿತ್ತ ಸೋಮವಾರ, ಸಿಂಹಾಸನದ ಮೇಲೆ ರಾಯರ ಪಾದುಕೆಗಳನ್ನಿಟ್ಟು ವಿಶೇಷ ಪೂಜೆ ಮತ್ತು ಮಂಗಳಾರತಿ ನೆರವೇರಿಸಿದರು

‘ರಾಯಚೂರು ವಿಮಾನ ನಿಲ್ದಾಣ ಕಾಮಗಾರಿಯನ್ನು ಬೇಗ ಆರಂಭಿಸಿ, ಅದಕ್ಕೆ ಶ್ರೀರಾಘವೇಂದ್ರಸ್ವಾಮಿಗಳ ಹೆಸರು ಇಡಬೇಕು ಎಂದು ಶ್ರೀಮಠದಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ’ ಎಂದರು.

‘ಮಾರ್ಚ್ 20ರಂದು ರಾಯರ 426ನೇ ಜನ್ಮದಿನ ಉತ್ಸವ ಕಾರ್ಯಕ್ರಮವಿದೆ. ಈ ವಾರವಿಡೀ ನಿತ್ಯ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ವಿವಿಧ ಕ್ಷೇತ್ರಗಳ ಗಣ್ಯರು ಭಾಗಿಯಾಗಲಿದ್ದಾರೆ. 38 ಸಾಧಕರನ್ನು ಸನ್ಮಾನಿಸಲಾಗುವುದು’ ಎಂದು ಹೇಳಿದರು.

50 ಅಡಿ ಎತ್ತರದ ರಾಮನಮೂರ್ತಿ: ‘ಅಭಯ ಆಂಜನೇಯ ಮೂರ್ತಿ ಎದುರಿನಲ್ಲಿಯೇ ₹ 5 ಕೋಟಿ ವೆಚ್ಚದಲ್ಲಿ 50 ಅಡಿ ಎತ್ತರದ ಪ್ರಸನ್ನ ರಾಮನ ಮೂರ್ತಿ ಪ್ರತಿಷ್ಠಾಪನೆ ಆಗಲಿದೆ. ಅಯೋಧ್ಯೆ ರಾಮಮಂದಿರ ನಿರ್ಮಾಣವಾಗುವ ಪೂರ್ವದಲ್ಲಿಯೇ ಮಂತ್ರಾಲಯದಲ್ಲಿ ರಾಮನ ಮೂರ್ತಿ ಅನಾವರಣಗೊಳಿಸುವ ಸಂಕಲ್ಪ ಮಾಡಲಾಗಿದೆ. ಆಂಜನೇಯ ಮೂರ್ತಿ ವೆಚ್ಚ ಭರಿಸಿದ ಭಕ್ತರೆ ಇದನ್ನೂ ಮಾಡಿಕೊಡಲು ಮುಂದೆ ಬಂದಿದ್ದಾರೆ’ ಎಂದು ಶ್ರೀಗಳು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸಚಿವ ಅರವಿಂದ ಲಿಂಬಾವಳಿಗೆ ಪತ್ರ

‘ನಾಡಗೀತೆ ಸಮಯ: ಶೀಘ್ರ ನಿರ್ಣಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುವೆಂಪು ಅವರ ‘ಜಯಭಾರತ ಜನನಿಯ ತನುಜಾತೆ’ ನಾಡಗೀತೆ ಅವಧಿಯನ್ನು 2 ನಿಮಿಷ 30 ಸೆಕೆಂಡುಗಳಿಗೆ ಮಿತಿಗೊಳಿಸುವ ಕುರಿತು ಸಾಹಿತಿಗಳು, ಚಿಂತಕರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಶೀಘ್ರ ನಿರ್ಣಯ ಕೈಗೊಳ್ಳಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ ಸರ್ಕಾರಕ್ಕೆ ಪತ್ರ ಬರೆದಿದೆ.

‘ನಾಡಗೀತೆ ಹಾಡಲು ಒಂದು ಕ್ರಮ ಬೇಕು. ಅದಕ್ಕೆ ಸಂಬಂಧಿಸಿದಂತೆ ತಜ್ಞರ ಸಭೆ ಕರೆಯುವ ಚಿಂತನೆ ಇದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅವರು ಭಾನುವಾರ ಹೇಳಿಕೆ ನೀಡಿದ್ದರು.

ಮುಖ್ಯಾಂಶಗಳು

- ಸಾಹಿತಿಗಳು, ಕನ್ನಡಪರ ಚಿಂತಕರ ಒಮ್ಮತದ ಅಭಿಪ್ರಾಯ
- ‘ನಾಡಗೀತೆ ಹಾಡಲು ಈವರೆಗೆ ಒಂದು ಕಾಲಮಿತಿ ಮತ್ತು ಕ್ರಮ ನಿಗದಿಪಡಿಸಿಲ್ಲ’

ಇದರ ಬೆನ್ನಲ್ಲೇ, ನಾಡಗೀತೆಯ ಅವಧಿ ನಿಗದಿಗೊಳಿಸಲು 2018ರ ನ. 14ರಂದು ನಡೆದ ಸಾಹಿತಿಗಳ, ಕನ್ನಡಪರ ಚಿಂತಕರ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳ ನಡಾವಳಿಯ ಸಮೇತ ಸಚಿವರಿಗೆ ಕಸಾಪ ಅಧ್ಯಕ್ಷ ಮನು ಬಳಿಗಾರ್ ಪತ್ರ ಬರೆದಿದ್ದಾರೆ.

‘ನಾಡಗೀತೆ ಹಾಡುವ ಕಾಲಾವಧಿ ನಿಗದಿ ಬಗ್ಗೆ ಅನೇಕ ಸಭೆಗಳು ನಡೆದಿವೆ. ಹಿರಿಯರು ತಮ್ಮ ಅಭಿಪ್ರಾಯವನ್ನು ಪ್ರತಿಪಾದಿಸಿದ್ದಾರೆ. 2018ರಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಸಭೆ ಸೇರಿ, 2.30 ನಿಮಿಷದಲ್ಲಿ ಹಾಡಿ ಮುಗಿಸಲು ಏಕಕಂಠದಿಂದ ಸಹಮತ ಸೂಚಿಸಲಾಗಿದೆ. ಅದಕ್ಕೆ ಪೂರಕವಾಗಿ ಪ್ರಸಿದ್ಧ ಗಾಯಕರಿಂದ ಸೋದಾಹರಣ ಪ್ರಾತ್ಯಕ್ಷಿಕೆ ಏರ್ಪಡಿಸಿ, ಅಷ್ಟೇ ಅವಧಿಯಲ್ಲಿ ಈಗಿನ ಪೂರ್ಣ ಪಠ್ಯವನ್ನು ಹಾಡಿ ಮುಗಿಸಲು ಸಾಧ್ಯ ಎಂದೂ ತೋರಿಸಿ ಕೊಡಲಾಗಿದೆ. ಅಂದಿನ ಸಭೆಯ ನಡಾವಳಿಯನ್ನು ಆಗಿನ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರೂ ಸಕಾರಾತ್ಮಕ ಪ್ರತಿಕ್ರಿಯೆ ಬಂದಿರಲಿಲ್ಲ’ ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ನಾಡಗೀತೆ ಹಾಡಲು ಈವರೆಗೆ ಒಂದು ಕಾಲಮಿತಿ ಮತ್ತು ಕ್ರಮ ನಿಗದಿಪಡಿಸಿಲ್ಲ. ಹೀಗಾಗಿ, ಎಲ್ಲಿಯೇ ಹಾಡಲಿ ಅದಕ್ಕೆ ಸಮಯದ ಮಿತಿ ಇಲ್ಲ. ಭಾವಗೀತೆಗಳನ್ನು ಹಾಡಿದಂತೆ ನಾಡಗೀತೆಯನ್ನೂ ನಾಲ್ಕೂವರೆ ನಿಮಿಷ ಹಾಡಲಾಗುತ್ತಿದೆ. ಅದರಲ್ಲಿ ಆಲಾಪಗಳು, ಪುನರಾವರ್ತನೆಗಳು, ಚಪ್ಪಾಳೆಗಳು ಇರುತ್ತವೆ. ನಾಡಗೀತೆ ಯಾವಾಗ ಮುಗಿಯುತ್ತದೆ ಎಂದು ಕೆಲವರು ಚಡಪಡಿಸುತ್ತಾರೆ. ಪುನರಾವರ್ತನೆ ಇಲ್ಲದೆ, ಆಲಾಪಗಳಿಲ್ಲದೆ, ನಡುವೆ ವಾದ್ಯಗೋಷ್ಠಿಗೆ ಅವಕಾಶ ಕೊಡದೆ ನಾಡಗೀತೆ ಹಾಡಿ ಮುಗಿಸುವುದು ಗೌರವದ ಸಂಕೇತ’ ಎಂದೂ ಪತ್ರದಲ್ಲಿ ಅವರು ಪ್ರತಿಪಾದಿಸಿದ್ದಾರೆ.

ಮುಖ್ಯಮಂತ್ರಿ, ಕುಟುಂಬದ ಭ್ರಷ್ಟಾಚಾರದ ವಿರುದ್ಧ ಹೋರಾಟ ನಿರಂತರ- ಯತ್ನಾಳ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಮತ್ತು ಅವರ ಕುಟುಂಬದ ಭ್ರಷ್ಟಾಚಾರ ಮತ್ತು ಕುಟುಂಬ ರಾಜಕೀಯದ ವಿರುದ್ಧ ನನ್ನ ಹೋರಾಟ ನಿರಂತರವಾಗಿ ಮುಂದುವರಿಯಲಿದೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೋಮವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಮಾತ್ರವಲ್ಲ, ಅವರ ಇಡೀ ಕುಟುಂಬ ಭ್ರಷ್ಟಾಚಾರದಲ್ಲಿ ಭಾಗಿಯಾಗಿದೆ. ಎಲ್ಲ ವರ್ಗಾವಣೆ ಮುಖ್ಯಮಂತ್ರಿ ಮನೆಯಿಂದಲೇ ಆಗುವುದು. ಅದಲ್ಲದೆ, ‘ಡಿ’ ಗ್ರೇಡ್ ವರ್ಗಾವಣೆ ಸಮೇತ ಮುಖ್ಯಮಂತ್ರಿ ಕುಟುಂಬದಿಂದಲೇ ಆಗಬೇಕು. ಅಷ್ಟು ಭ್ರಷ್ಟಾಚಾರದಲ್ಲಿ ಮುಖ್ಯಮಂತ್ರಿ ಮತ್ತು ಅವರ ಕುಟುಂಬ ತೊಡಗಿದೆ’ ಎಂದು ಆರೋಪಿಸಿದರು.

‘ನಾನು ಯಾರ ಏಜೆಂಟೂ ಅಲ್ಲ. ಬಿಜೆಪಿ ಕಾರ್ಯಕರ್ತ. ಪ್ರಧಾನಿ ನರೇಂದ್ರ ಮೋದಿ ಬೆಂಬಲಿಗ. ಯಾರ ಪರವಾಗಿ ನಿಲ್ಲಲು ನನಗೆ ಹುಚ್ಚು ಹಿಡಿದಿಲ್ಲ’ ಎಂದೂ ಹೇಳಿದರು.

‘ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್ಐಟಿ) ನೀಡಿರುವುದರಿಂದ ನ್ಯಾಯ ಸಿಗಲ್ಲ. ಎಸ್ಐಟಿಯು ಮುಖ್ಯಮಂತ್ರಿ ಮತ್ತು ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರ ಹಿಡಿತದಲ್ಲಿದೆ. ಹೀಗಾಗಿ, ಈ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸುತ್ತೇನೆ’ ಎಂದರು.

‘ಸಿ.ಡಿ ಹಿಂದೆ ಕೇವಲ ಕಾಂಗ್ರೆಸ್ ನಾಯಕರು ಮಾತ್ರವಲ್ಲ, ಬಿಜೆಪಿ ನಾಯಕರ ಕೈವಾಡ ಇದ್ದರೂ ಇರಬಹುದು’ ಎಂದ ಯತ್ನಾಳ್, ‘ಪತ್ರಕರ್ತನ ಪುತ್ರಿ ಜನ್ಮದಿನ ಕಾರ್ಯಕ್ರಮಕ್ಕೆ ಕೇವಲ ಕಾಂಗ್ರೆಸ್ ಮುಖಂಡರು ಮಾತ್ರವಲ್ಲ, ಬಿಜೆಪಿ ನಾಯಕರೂ ಹೋಗಿದ್ದರು. ಅವರ ಫೋಟೊಗಳನ್ನು ಬಿಡುಗಡೆ ಮಾಡಬೇಕು. ಕಾರ್ಯಕ್ರಮಕ್ಕೆ ಯಾರೆಲ್ಲ ಹೋಗಿದ್ದರು ಎಂಬುದನ್ನೂ ಬಹಿರಂಗಪಡಿಸಬೇಕು’ ಎಂದು ಅವರು ಆಗ್ರಹಿಸಿದರು.

ಮಂಡ್ಯ ಬೆಲ್ಲ ತಿರಸ್ಕರಿಸಿದ ಕೇರಳ

ಒಂದನೇ ಪುಟದಿಂದ

‘ಒಂದು ಟನ್ ಕಬ್ಬಿನಿಂದ 90 ಕೆ.ಜಿ ಬೆಲ್ಲ ತಯಾರಿಸಬಹುದು. ಆದರೆ, ಕೇವಲ ಒಂದು ಟನ್ ಕಬ್ಬು ಬಳಸಿ, ಕಳಪೆ ಬೆಲ್ಲ ಹಾಗೂ ಸಕ್ಕರೆಯಿಂದ 30 ಕ್ವಿಂಟಲ್ ಬೆಲ್ಲವನ್ನು ಪುನರ್ ಉತ್ಪಾದನೆ ಮಾಡಲಾಗಿದೆ. ಬೆಲ್ಲ ತಯಾರಿಕೆಗೆ ಕಬ್ಬಿನ ಅವಶ್ಯಕತೆಯೇ ಇಲ್ಲ ಎಂಬಂತಾಗಿದೆ. ಹೊರರಾಜ್ಯಗಳಿಂದ ಬಂದು ಆಲೆಮನೆ ನಡೆಸುತ್ತಿರುವ ಮಾಲೀಕರು ಹಾಗೂ ಕೆಲ ವರ್ತಕರು ಮಂಡ್ಯ ಜಿಲ್ಲೆಯ ಹೆಸರನ್ನು ಹಾಳು ಮಾಡಿದ್ದಾರೆ’ ಎಂದು ಆಲೆಮನೆ ಮಾಲೀಕರ ಸಂಘದ ಅಧ್ಯಕ್ಷ ಸೋಮಶಂಕರೇಗೌಡ ಬೇಸರ ವ್ಯಕ್ತಪಡಿಸಿದರು.

ಸ್ಥಳೀಯ ರೈತರ ಉತ್ಪನ್ನಗಳ ಮಾರಾಟಕ್ಕೆ ಎಪಿಎಂಸಿ ವ್ಯವಸ್ಥೆ ಇದೆ. ಆದರೆ ಹೊರರಾಜ್ಯದಿಂದ ಬಂದ ಕಳಪೆ ಬೆಲ್ಲವನ್ನು ಇಲ್ಲಿ ಮಾರಾಟ ಮಾಡಿರುವುದು ಅನುಮಾನಕ್ಕೆ ಕಾರಣವಾಗಿದೆ.

‘ಬೆಲ್ಲ ಕಳಪೆಯಾಗಿದ್ದ ಕಾರಣ ಕೇರಳದಲ್ಲಿ ನಮ್ಮ ಬೆಲ್ಲದ ಖರೀದಿ ಸ್ಥಗಿತಗೊಂಡಿದೆ. ಸ್ಥಳೀಯ ರೈತರ ಅನುಕೂಲಕ್ಕಾಗಿ ಹೊರರಾಜ್ಯದ ಕಳಪೆ ಬೆಲ್ಲ ವಹಿವಾಟು ಮಾಡದಂತೆ ವರ್ತಕರಿಗೆ ಸೂಚನೆ ನೀಡಿದ್ದೇನೆ’ ಎಂದು ಎಪಿಎಂಸಿ ಅಧ್ಯಕ್ಷೆ ಪ್ರೇಮಾ ತಿಮ್ಮೇಗೌಡ ತಿಳಿಸಿದರು.

‘ಆತ್ಮನಿರ್ಭರ ಭಾರತ’ ಜಾರಿಗೆ ಹಿನ್ನಡೆ: ಆತ್ಮನಿರ್ಭರ ಭಾರತ ಯೋಜನೆಯ, ‘ಒಂದು ಜಿಲ್ಲೆ ಒಂದು ಉತ್ಪನ್ನ’ದಡಿ ಮಂಡ್ಯ ಬೆಲ್ಲ ಆಯ್ಕೆಯಾಗಿದೆ. ಆದರೆ ಇಲ್ಲಿ ಗುಣಮಟ್ಟದ ಬೆಲ್ಲ ಉತ್ಪಾದನೆಯಾಗದ ಕಾರಣ ಯೋಜನೆ ಜಾರಿಗೆ ಹಿನ್ನಡೆಯಾಗಿದೆ.

ಈ ಬಗ್ಗೆ ಸಭೆ ನಡೆಸಿರುವ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಗುಣಮಟ್ಟದ ಬೆಲ್ಲ ತಯಾರಿಕೆಗೆ ಆದ್ಯತೆ ನೀಡಲು ಸೂಚಿಸಿದ್ದಾರೆ.

‘ಆಲೆಮನೆ ಮಾಲೀಕರ ಸಭೆ ನಡೆಸಿ ಗುಣಮಟ್ಟಕ್ಕೆ ಆದ್ಯತೆ ನೀಡಲು ಸೂಚಿಸಲಾಗಿದೆ. ನಂತರ ಆತ್ಮನಿರ್ಭರ ಭಾರತ ಯೋಜನೆಯಡಿ ಆಲೆಮನೆಗಳಿಗೆ ಪುನಶ್ಚೇತನ ನೀಡಲಾಗುವುದು’ ಎಂದು ಜಿಲ್ಲಾಧಿಕಾರಿ ಎಸ್.ಅಶ್ವಥಿ ತಿಳಿಸಿದರು.

ಅಂಗನವಾಡಿ: ವಿವರ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಮೂಲಸೌಕರ್ಯ ಕಲ್ಪಿಸಿದ್ದರೆ ಆ ಕುರಿತ ಮಾರ್ಗಸೂಚಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿರುವ ಮಾಹಿತಿಗೆ ಪ್ರತಿಕ್ರಿಯೆಯಾಗಿ ಅಫಿಡವಿಟ್ ಸಲ್ಲಿಸುವಂತೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿದೆ.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಅಂಗನವಾಡಿಗಳು ಮುಚ್ಚಿದ್ದರಿಂದ ಮಕ್ಕಳ ಅಭಿವೃದ್ಧಿ ಯೋಜನೆಗಳು ಸ್ಥಗಿತಗೊಂಡಿದ್ದವು. ಇದರಿಂದಾಗಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳಿವೆ ಎಂದು ಅರ್ಜಿದಾರರು ಆತಂಕ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ -2013 ರ ಪ್ರಕಾರ ಪೌಷ್ಟಿಕಾಂಶದ ಆಹಾರ ಪದಾರ್ಥಗಳನ್ನು ಮಕ್ಕಳಿಗೆ ಪೂರೈಸಬೇಕು ಎಂದು ರಾಜ್ಯಗಳಿಗೆ ಸುಪ್ರೀಂ ಕೋರ್ಟ್ 2021ರ ಜನವರಿಯಲ್ಲಿ ನಿರ್ದೇಶನ ನೀಡಿತ್ತು.

‘ಇದು ಮಕ್ಕಳಿಗೆ ಮಾತ್ರ ಸೀಮಿತವಲ್ಲ. ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರ ಪೌಷ್ಟಿಕತೆಗೂ ಸಂಬಂಧಿಸಿದ ವಿಷಯ. ಹೀಗಾಗಿ, ಸುಪ್ರೀಂ ಕೋರ್ಟ್ ಆದೇಶ ಪಾಲಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಬೇಕು’ ಎಂದು ಪೀಠ ನಿರ್ದೇಶನ ನೀಡಿತು.

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪೂರ್ವಾರ್ಹತೆ ಪಡೆಯಲಿಚ್ಛಿಸುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

- **ಕಾಮಗಾರಿಯ ಹೆಸರು:** ಸೂರ್ಯನಗರ 1ನೇ ಹಂತದ ಬಡಾವಣೆಯಲ್ಲಿ ನಿರ್ಮಾಣ ಮಾಡಿರುವ 2 ಎಂ.ಎಲ್.ಡಿ. 0.25 ಎಂ.ಎಲ್.ಡಿ. ಒಳಚರಂಡಿ ತ್ಯಾಜ್ಯ ಸಂಸ್ಕರಣಾ ಘಟಕಗಳ ವಾರ್ಷಿಕ ನಿರ್ವಹಣೆ ಕಾಮಗಾರಿ.
- Tender Reference No. KHB / 2020-21 /STP Maintenance/ S.nagara Ph-I/Work_Indent 803 & IFT No.131/2020-21 Date: 06.03.2021
- ಟೆಂಡರ್‌ಗಿಟ್ಟ ಮೊತ್ತ: **ರೂ. 58,96,201/–**
- ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **23.03.2021ರ ಸಂಜೆ 4.00 ಗಂಟೆಯವರೆಗೆ.**

ಕಾಮಗಾರಿಯ ಬಗ್ಗೆ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.
ದೂರವಾಣಿ: 080–22213511, 080–22100077
Website: www.khb.karnataka.gov.in, https://eproc.karnataka.gov.in
ವಾಸಾಸಂಇ/ಬೆಂ.ನ./ಜಿಎ/3117/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)
(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಜಿಕೆವಿಕೆ ಆವರಣ, ಆಟ್ಟೂರ್ ಬಡಾವಣೆ, ಯಲಹಂಕ, ಬೆಂಗಳೂರು–64. ದೂರವಾಣಿ: 080–67355000.
No: KSNDMC/ACT/13/2020 ದಿನಾಂಕ: 15.03.2021

ಇ–ಟೆಂಡರ್ ಪ್ರಕಟಣೆ

ಈ ಕೆಳಕಂಡ ಯೋಜನೆಗೆ ಈ ಪ್ರೊಕ್ಯೂರ್‌ಮೆಂಟ್ ಜಾಲತಾಣ ಮುಖಾಂತರ ಟೆಂಡರ್ ಕರೆಯಲಾಗಿದೆ. Tender No. KSNDMC/ADM/04/2021- **Providing Group Health Insurance Policy (GHIP) to the employees of Karnataka State Natural Disaster Monitoring Centre, Bengaluru.** ಯೋಜನೆ ಕಾಮಗಾರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು ಸೂಚನೆಗಳು ಮತ್ತು ಷರತ್ತುಗಳು/ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **www.eproc.karnataka.gov.in** ಮತ್ತು **KSNDMC** ಕಛೇರಿಯ ಜಾಲತಾಣ **www.ksndmc.org** ದಲ್ಲಿ ಪಡೆದುಕೊಳ್ಳಬಹುದು. ಪ್ರಿ–ಬಿಡ್ ಸಭೆ ದಿನಾಂಕ: **22.03.2021.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **31.03.2021.**

ಸಹಿ/- ನಿರ್ದೇಶಕರು

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
ಪಿ.ಬಿ. ರಸ್ತೆ, ವಿದ್ಯಾನಗರ, ಹುಬ್ಬಳ್ಳಿ–580 021
ಸಂಖ್ಯೆ: ಕಿಮ್ಸ್/ಆಸ್ಪತ್ರೆ/ಪೂವಿ(1)/143/2020–21 ದಿನಾಂಕ: 15.03.2021

ಸಾರ್ವಜನಿಕ ಪ್ರಕಟಣೆಗಾಗಿ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ರೋಗಿಗಳ ಸಾಮಾನ್ಯ ಒಳರೋಗಿ ದಾಖಲಾತಿಗಳನ್ನು **ದಿನಾಂಕ: 01.01.2004** ರಿಂದ **ದಿನಾಂಕ: 31.12.2010** ರವರೆಗಿನ ವೈದ್ಯಕೀಯ ದಾಖಲಾತಿಗಳನ್ನು ವಿಲೇ ಮಾಡಿ ನಾಶಪಡಿಸಲಾಗುತ್ತಿದೆ. ಈ ಹಿಂದಿನ ಕಚೇರಿ ಕಡತ ಟಿಪ್ಪಣಿ ಸಂ: (132) (133)ರ ಸಮಿತಿ ಆದೇಶದಂತೆ ಹಾಗೂ ಈಗಿನ ಟಿಪ್ಪಣಿ ಸಂ: (10) ರಂತೆ ನಿರ್ದೇಶಕರ ಆದೇಶದ ಮೇರೆಗೆ ಈ ಕ್ರಮ ಕೈಗೊಳ್ಳಲಾಗುತ್ತಿದ್ದು ರೋಗಿ/ರೋಗಿಗಳ ಸಂಬಂಧಿಕರು ಅವಶ್ಯವಿರುವ ಮಾಹಿತಿಯನ್ನು ಈ ನೋಟಿಸು ಪ್ರಕಟಣೆಗೊಂಡ 30 ದಿವಸದ ಒಳಗಾಗಿ ಸ್ಥಳೀಯ ವೈದ್ಯಾಧಿಕಾರಿಗಳು, ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿ ಇವರಿಗೆ ಮನವಿ ಮಾಡಿ ಪಡೆದುಕೊಳ್ಳಬಹುದು. ವಿಲೇ ಮಾಡಿದ ನಂತರ ಹಾಗೂ ಈ ನೋಟಿಸ್ ಪ್ರಕಟಣೆಯಾದ 30 ದಿವಸಗಳ ನಂತರ ಬರುವ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಕಾರಣ ತಾವಾಗಲಿ ಅಥವಾ ತಮ್ಮ ಹತ್ತಿರದ ರಕ್ತ ಸಂಬಂಧಿಕರ ಸಾಮಾನ್ಯ ಒಳರೋಗಿ ಚಿಕಿತ್ಸೆಯ ಮಾಹಿತಿಯನ್ನು ಈ 30 ದಿವಸದ ಒಳಗಾಗಿ ಪಡೆದುಕೊಳ್ಳಬಹುದೆಂದು ತಿಳಿಸಿ ಪ್ರಕಟಣೆಗೊಳಿಸಲಾಗಿದೆ.

ಸಹಿ/– ನಿರ್ದೇಶಕರು
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಗೃಹ ಮಂಡಳಿ
ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಉಪ ವಿಭಾಗ, ಹಾಸನ.
ದೂರವಾಣಿ ಸಂಖ್ಯೆ: 08172–268681, ಇಮೇಲ್: eekhbhsn@gmail.com
ನಂ.ಕಗೃಮಂ/ಸಕಾಅ/ಹಾಉವಿ/ಬ–ಹ/ಹಾ–ಚ/01/2020–21/530 ದಿ:12.03.2020

ಬಹಿರಂಗ ಹರಾಜು ಪ್ರಕಟಣೆಯ ತಿದ್ದುಪಡಿ

ಹಾಸನ ಚನ್ನಪಟ್ಟಣ ಕರ್ನಾಟಕ ಗೃಹ ಮಂಡಳಿ ಬಡಾವಣೆಯ ಮೂಲೆ ನಿವೇಶನಗಳ ಬಹಿರಂಗ ಹರಾಜು ಪ್ರಕಟಣೆ ದಿನಾಂಕ: 01.03.2021ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಿಸಿದ ಹರಾಜು ಪ್ರಕಟಣೆಯಲ್ಲಿ ಬಹಿರಂಗ ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳ ಪೈಕಿ ಕ್ರಮ ಸಂಖ್ಯೆ: 3ರ ನಿಬಂಧನೆಯನ್ನು “ಒಂದು ನಿವೇಶನದ ಹರಾಜಿನಲ್ಲಿ ಯಶಸ್ವಿಯಾದ ಬಿಡ್ದುದಾರರು ಇನ್ನೊಂದು ನಿವೇಶನದ ಹರಾಜಿನಲ್ಲಿ ಭಾಗವಹಿಸಲು ಇಚ್ಛೆಪಟ್ಟಲ್ಲಿ ಮುಂದುವರೆದ ಬಿಡ್ಡನ ಅವಧಿಯಲ್ಲಿ ಇನ್ನೊಂದು ನಿವೇಶನ ಹರಾಜಿಗೆ ರೂ. 50,000/– ಗಳನ್ನು ಮುಂಗಡ ಠೇವಣಿಯಾಗಿ ಪಾವತಿಸಿ, ಮುಂದುವರೆದ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.” ಮುಂದುವರೆದು... 11ನೇ ಷರತ್ತು ಮತ್ತು ನಿಬಂಧನೆಯಾಗಿ “ಬಿಡ್ದುದಾರರು, ಬಿಡ್ದುದಾರರ ಹೆಸರಿನ ಖಾತೆಯಿಂದಲೇ ಮಂಡಳಿಗೆ ಪೂರ್ಣ ಹಣ ಪಾವತಿಸಲು ತಿಳಿಯಪಡಿಸಿದೆ. ಆರ್.ಟಿ.ಜಿ.ಎಸ್. ಮಾಡುವಾಗ ಬಿಡ್ದುದಾರರರ ಹೆಸರು, ಬಿಡ್ ಮಾಡಿದ ನಿವೇಶನ ಸಂಖ್ಯೆ ಮತ್ತು ಬಡಾವಣೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸಬೇಕು ಮತ್ತು ಜಂಟಿ ಅಥವಾ ಪಾಲುದಾರಿಕೆಯಡಿ ಭಾಗವಹಿಸುವ ಬಿಡ್ದುದಾರರು ಸಂಬಂಧಿಸಿದ ಜಂಟಿ ಪ್ರಮಾಣಪತ್ರವನ್ನು ಫೋಟೋದೊಂದಿಗೆ ದೃಢೀಕರಿಸಿ ಸಲ್ಲಿಸಬೇಕು.” ಎಂಬುದಾಗಿ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ ಉಪವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/708/2020–21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ
ಸಂಖ್ಯೆ:ಕಾಪಾಇಂ/ಗ್ರಾಕುನೀ&ನೈವಿ/ಹ.ಹಳ್ಳಿ/ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ/ಜೆಇ/2020–21/993 ದಿನಾಂಕ:15–03–2021.

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–17/ 2020–21 (2ನೇ ಕರೆ).

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರಿಂದ ಸದರಿ ವಿಭಾಗ ವ್ಯಾಪ್ತಿಯಲ್ಲಿನ ಹೂವಿನಹಡಗಲಿ & ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಕಾಮಗಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ Standard Bid Document KW-IV ರ ನಿಯಮಗಳ ನಿಬಂದನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ:17.03.2021 ರಿಂದ 01.04.2021 ರ ಸಾಯಂಕಾಲ 5.00 ಗಂಟೆಯವರೆಗೆ ಹಾಗೂ ದಿನಾಂಕ: 23.03.2021 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿಯಲ್ಲಿ ಕರೆಯಲಾಗಿದೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:03.04.2021 ರಂದು ಬೆಳಗ್ಗೆ 11.00 ಗಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.eproc.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಕುನೀ&ನೀ. ವಿಭಾಗ, ಹರಪನಹಳ್ಳಿ
ಡಿಐಪಿಆರ್/ಬಳ್ಳಾರಿ/465/ಎಂಸಿಎ/2020–21

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಆಸ್ತಿ ಅಧಿಕಾರಿಗಳು, ಕೃವಿವಿ, ರಾಯಚೂರು
ನಂ. ಆಅ/ಕೃವಿವಿವಿರಾ/ಟೆ.ನೋ.–129/2020–21 ದಿನಾಂಕ:–12–03–2021

ಅಲ್ಪಾವದಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೆ.ಪಿ.ಡಬ್ಲ್ಯೂ.ಡಿ. ಹಾಗೂ ಸಿ.ಪಿ.ಡಬ್ಲ್ಯೂ.ಡಿ.ಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕುಮೆಂಟ್ಸ (ಕೆ.ಡಬ್ಲ್ಯೂ–I) ಅನುಸಾರವಾಗಿ ಏಕ ಲಕೋಟೆ ಪದ್ಧತಿಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಪರವಾಗಿ ರಾಯಚೂರು ಮುಖ್ಯ ಆವರಣ, ಕೃ.ಸಂ.ಕೇಂದ್ರ ದಢೇಸುಗೂರುನಲ್ಲಿ ಸಿವ್ಹಿಲ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳು ವೆಬ್‌ಸೈಟ್ ವಿಳಾಸ https://eproc.karnataka.gov.in ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ವೇಳಾ ಪಟ್ಟಿ

1) ತುಂಬಿದ ಟೆಂಡರನ್ನು ವೆಬ್‌ಸೈಟ್‌ನ ಮೂಲಕ ಸಲ್ಲಿಸುವ ಕೊನೆಯ ದಿನಾಂಕ : **20–03–2021** ಸಾಯಂಕಾಲ 4.00 ಘಂಟೆಯವರೆಗೆ, 2) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ : **22–03–2021 ಸಾಯಂಕಾಲ 4.10 ಘಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನಗಳಂದು ಸದರಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು (Ph. No. 08532 – 220640) ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ https://eproc.karnataka.gov.in ನಲ್ಲಿ ಇಲ್ಲವೆ ಹೆಲ್ಪಡೆಸ್ಕನಿಂದ (ಸಹಾಯಕ ದೂರವಾಣಿ ಸಂಖ್ಯೆ : 080–25501216 ಮತ್ತು 25501227) ಪಡೆಯಬಹುದು.

ಸಹಿ/– ಆಸ್ತಿ ಅಧಿಕಾರಿಗಳು, ಕೃ.ವಿ.ವಿ. ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/673/ಎಂ.ಸಿ.&ಎ/2020–21

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ: 08338/ 273859 ಇ–ಮೇಲ್:eepwdckd@gmail.com
ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2020–21/ 7099 ದಿನಾಂಕ: 12/03/2021

ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2020–21/6912 ದಿನಾಂಕ: 05/03/2021 ಮತ್ತು ಸಂಖ್ಯೆ: 6936, ದಿನಾಂಕ: 06/03/2021 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಎರಡೂ ಪ್ರಕಟಣೆಗಳಲ್ಲಿನ ಕ್ರ.ಸಂ. 2 ರಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.
ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 16–03–2021 ರಂದು (11.00 ಗಂಟೆಗೆ) 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 18–03–2021 (ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 20–03–2021 (ಸಾಯಂಕಾಲ 5.00 ಗಂಟೆಯವರೆಗೆ) 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 22–03–2021 (ಸಾಯಂಕಾಲ 4.30 ಗಂಟೆಗೆ) 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ”
ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1542/MCA/2020-21

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
E-mail - itstaff_ulb_gulbarga@yahoo.com
No : KMP/HS/SWM/01/2020-21 Date : 15-03-2021

ಎಕ್ಸ್‌ಪ್ರೇಷನ್ ಆಫ್ ಇಂಟರೆಸ್ಟ್

"ಸೂಕ್ತ ತಂತ್ರಜ್ಞಾನವನ್ನು ಬಳಸಿಕೊಂಡು ಕಲಬುರಗಿಯಲ್ಲಿರುವ ಲೆಜೆಸಿ ತ್ಯಾಜ್ಯದ ಜೈವಿಕ ಪರಿಹಾರಕ್ಕಾಗಿ ಅರ್ಹ ಮತ್ತು ಯೋಗ್ಯ ಅರ್ಜಿದಾರರು ಅರ್ಜಿ ಸಲ್ಲಿಸಬಹುದು.
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿಯು (KMP/KMC) ಎಕ್ಸಪ್ರೇಷನ್ ಆಫ್ ಇಂಟರೆಸ್ಟ್ ಸಲುವಾಗಿ ಮೂಲಕ ಸಿಂಗಲ್ ಕವರನಲ್ಲಿ (ತಾಂತ್ರಿಕ & ಆರ್ಥಿಕ) E-portal website **(https://eproc.karnataka.gov.in)** ಕೆಳಗೆ ಸೂಚಿಸಿದಂತೆ ವಿವಿಧ ವಸ್ತುಗಳ ದರಗಳನ್ನು ನಿಗದಿಪಡಿಸಲು ಸಾಬೀತಾದ ಟ್ರ್ಯಾಕ್ ರೆಕಾರ್ಡ್‌ನೊಂದಿಗೆ ಹೆಸರಾಂತ ಏಜೆನ್ಸಿಗಳಿಂದ ಪ್ರಸ್ತಾವಿತ ಪರಿಕಲ್ಪನೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.
1) Particulars : Any new techniques to be proposed by eligible applicant for biomedication of 165000 cum old SWM waste, 2) Unit : --
2) Particulars : Quote Processing fee for processing and disposal of SWM Legacy waste/ton, Unit : In Rs.
ನಿಗಧಿಪಡಿಸಲಾದ ದಿನಾಂಕಗಳು :
1) Last date for submission of EOI application : 26-03-2021 04.30 PM, 2) Date of opening of EOI : 27-03-2021 04.35 PM
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಪರಿಸರ), ಮಹಾನಗರ ಪಾಲಿಕೆ ಕಲಬುರಗಿ ರವರನ್ನು 'ಸೈಟ್ ಭೇಟಿ' ಗಾಗಿ (ಸ್ಥಳದ ಪರಿಶೀಲನೆಗಾಗಿ (ಮೊಬೈಲ್ ಸಂಖ್ಯೆ 7829847863) ಸಂಪರ್ಕಿಸಬಹುದು. ಇದೇ ರೀತಿಯ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸಾಬೀತಾದ ದಾಖಲೆಯೊಂದಿಗೆ ಗುರುತಿಸಿಕೊಂಡಿರುವ/ಪ್ರಸಿದ್ಧ ಏಜೆನ್ಸಿಗಳು ಕರ್ನಾಟಕ ಸರ್ಕಾರದ ಇ–ಪೋರ್ಟಲ್ ವೆಬ್‌ಸೈಟ್‌ನಿಂದ 'Expression of Interest' (EOI)' ಡಾಕ್ಯುಮೆಂಟ್ ಅನ್ನು ಡೌನ್‌ಲೋಡ ಮಾಡಿಕೊಳ್ಳಬಹುದು **https://eproc.karnataka.gov.in** ಭರ್ತಿ ಮಾಡಿದ 'Expression of Interest' (EOI)' ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ ಮಾಡಬೇಕು : ಕರ್ನಾಟಕ : https://eproc.karnataka.gov.in

ಸಹಿ/– ಉಪ ಆಯುಕ್ತರು (ಅಭಿವೃದ್ಧಿ) ಮಹಾನಗರ ಪಾಲಿಕೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1086/ಎಂ.ಸಿ&ಎ/2020–21

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:36/2020–21/1732
ದಿನಾಂಕ : 12–03–2021

ಅಲ್ಪಾವಧಿ ಟೆಂಡರ ಪ್ರಕಟಣೆ
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

NRDWP JJM ಯೋಜನೆಯಡಿ ಹಾವೇರಿ, ಹಾನಗಲ್ಲ, ಹಿರೇಕೆರೂರ, ರಾಣೇಬೆನ್ನೂರ ಮತ್ತು ಸವಣೂರ ತಾಲೂಕುಗಳ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.
(1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ ದಿನಾಂಕ : **23–03–2021** ರ 17:30 ಗಂಟೆವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 1 ರಿಂದ 14) ತಾಂತ್ರಿಕ ಬಿಡ್ ತೆರೆಯುವ (ಕ್ರ.ಸಂ 15 ರಿಂದ 35) (ಸಾಧ್ಯವಾದಲ್ಲಿ) ದಿನಾಂಕ : **24–03–2021**ರ 17:31 ಗಂಟೆ ನಂತರ (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 15 ರಿಂದ 35) (ಸಾಧ್ಯವಾದಲ್ಲಿ) ದಿನಾಂಕ : **30–03–2021**ರ 10:30 ಗಂಟೆ ನಂತರ (4) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. ದಿನಾಂಕ : **20–03–2021** ರಂದು ಬೆಳಿಗ್ಗೆ 11:00 ಗಂಟೆಗೆ
ಸಾಮಾನ್ಯ : ಇಂಡೆಂಟ್ ನಂ : (1) 33288, (2) 33289, (3) 33040, (4) 33254, (5) 33091, (6) 33241, (7) 33231, (8) 33016, (9) 33127, (10) 33092, (11) 33106, (12) 33290, (13) 33198, (14) 33093, (15) 33238, (16) 33037, (17) 33096, (18) 33292, (19) 33256, (20) 33293, (21) 33232, (22) 33294, (23) 33295, (24) 33296, (25) 33297, (26) 33298, (27) 33299, (28) 33300, (29) 33301, (30) 33161, (31) 33302, (32) 33190, (33) 33165, (34) 33303.
ಎಸ್.ಸಿ : ಇಂಡೆಂಟ್ ನಂ :– (1) 33291.
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/395/2020–21

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
(ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ವೃತ್ತ, ಬೆಂಗಳೂರು – 560001 ದೂ. 22126758/59/60/61
ಫ್ಯಾಕ್ಸ್: 22229666 ಇಮೇಲ್ : piukship@gmail.com
ಸಂ.ಪಿಐಯು/ಕೆಶಿಪ್/ಇಎಸ್‌ಟಿ/ಎಂಪಿಎ/2020–21/3170 ದಿನಾಂಕ : 15–03–2021

ಅಲ್ಪಾವದಿ ಟೆಂಡರ್ ಪ್ರಕಟಣೆ

ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಸಂಸ್ಥೆಗಳನ್ನು ಶಾರ್ಟ್‌ಲಿಸ್ಟ್ ಮಾಡಲು ಆಸಕ್ತಿ ವ್ಯಕ್ತಪಡಿಸುವಿಕೆ.
ಯೋಜನಾ ಅನುಷ್ಠಾನ ಘಟಕ (ಪಿಐಯು), ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆಯು, ವಿಶ್ವಬ್ಯಾಂಕ್ / ಎಡಿಬಿ ನೆರವಿನಿಂದ ರಸ್ತೆ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಸೇವೆಗಳನ್ನು ಹೊರಗುತ್ತಿಗೆ ನೀಡುವುದರ ಮೂಲಕ ಯೋಜನೆಯಲ್ಲಿರುವ ಕೆಲವು ಖಾಲಿ ಹುದ್ದೆಗಳಿಗೆ ತಾತ್ಕಾಲಿಕ ಆಧಾರದ ಮೇಲೆ ನೇಮಕಾತಿ ನಡೆಸಲು ಪ್ರಸ್ತಾಪಿಸಿದೆ. ಇದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯಪಾಲರ ಪರವಾಗಿ, ಕೆಳಸಹಿದಾರರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000ಗೆ ಮತ್ತು ನಿರ್ದಿಷ್ಟ ಪ್ರಸ್ತಾವನೆಗಳಿಗಾಗಿ ವಿನಂತಿಗಳಿಗೆ ಅನುಸಾರವಾಗಿ, ಮಾನವ ಸಂಪನ್ಮೂಲ ಸರಬರಾಜು ಸಂಸ್ಥೆಗಳಿಂದ ಕೆಳಗೆ ವಿವರಿಸಲಾದ ಮತ್ತು ಸಮಾನ ಹುದ್ದೆಗಳಿಗೆ ನೇಮಕಾತಿ ಒದಗಿಸುವ ಸೇವೆಗಳಿಗಾಗಿ “ಆಸಕ್ತಿ ವ್ಯಕ್ತಪಡಿಸುವಿಕೆ”ಯನ್ನು ಆಹ್ವಾನಿಸಿದ್ದಾರೆ.

ಪದನಾಮ	ಹುದ್ದೆಗಳ ಸಂಖ್ಯೆ
ಅಧೀಕ್ಷಕ ಅಭಿಯಂತರರು	2
ಕಾರ್ಯಪಾಲಕ ಅಭಿಯಂತರರು (ಪರಿಸರ)/ ಪರಿಸರ ತಜ್ಞರು	1
ಸಹಾಯಕ ಕಾರ್ಯಪಾಲಕ ಅಭಿಯಂತರರು / ತಜ್ಞರು	1
ವ್ಯವಸ್ಥೆಯ ವಿಶ್ಲೇಷಕ	2
ವ್ಯವಸ್ಥಾಪಕರು (ಮಾಹಿತಿ ವಿಜ್ಞಾನ)	1
ಸಹಾಯಕ ಅಭಿಯಂತರರು / ಕಾರ್ಯ ವ್ಯವಸ್ಥಾಪಕರು	14
ಸಹಾಯಕ ಅಭಿಯಂತರರು (ಪರಿಸರ)	4
ಒಟ್ಟು	25

ಮೇಲಿನ ಸೇವೆಗಳಿಗಾಗಿ ಟೆಂಡರಿಂಗ್‌ನಲ್ಲಿ ಆಸಕ್ತಿಯುಳ್ಳ ಅರ್ಹ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗೆ ಅರ್ಜಿಯನ್ನು ಸಲ್ಲಿಸಬಹುದು. ಟೆಂಡರ್‌ನ ಕರಾರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.
ಅ) ಇ–ಪೋರ್ಟಲ್ **www.eproc.karnataka.gov.in** ನಲ್ಲಿ ಆಸಕ್ತಿ ವ್ಯಕ್ತಪಡಿಸುವಿಕೆ (EOI) ಯನ್ನು ಡೌನ್‌ಲೋಡ್ ಮಾಡುವ ದಿನಾಂಕ : **15–03–2021**ರಂದು ಅಥವಾ ತದನಂತರ. ಆ) ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸ್ವೀಕರಿಸಲು ಕೊನೆಯ ದಿನಾಂಕ : **05–04–2021**ರಂದು **ಸಂಜೆ 4:00** ಗಂಟೆಯವರೆಗೆ. ಇ) ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ತೆರೆಯುವ ದಿನಾಂಕ : **06–04–2021**ರಂದು **ಸಂಜೆ 4:00** ಗಂಟೆಗೆ ಅಥವಾ ನಂತರ ಸೂಚಿಸುವ ದಿನಾಂಕದಂದು.
ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಗೆ ಭೇಟಿ ನೀಡಿ.

ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ, ಕೆಶಿಪ್, ಬೆಂಗಳೂರು.
ವಾ.ಸಂ.ಇ/ಬೆಂ.ನಗರ/RO. No. 3122/2020–21

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಎಐಎಡಿಎಂಕೆ, ಡಿಎಂಕೆಗೆ ಕಮಲಹಾಸನ್, ದಿನಕರನ್ ನೇತೃತ್ವದ ಪಕ್ಷಗಳಿಂದ ಸವಾಲು

ತಮಿಳುನಾಡಲ್ಲಿ ಪಂಚಕೋನ ಹಣಾಹಣಿ

• ಇ.ಟಿ.ಬಿ. ಶಿವಪ್ರಿಯನ್

ಚೆನ್ನೈ: ತಮಿಳುನಾಡು ವಿಧಾನಸಭೆಗೆ ಏಪ್ರಿಲ್ 6ರಂದು ನಡೆಯಲಿರುವ ಚುನಾವಣೆಗೆ ಕಣ ಸಜ್ಜಾಗಿದೆ. ರಾಜ್ಯದ 16ನೇ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಪಂಚ ಕೋನ ಸ್ಪರ್ಧೆ ಖಚಿತವಾಗಿದೆ. ಹೊಸ ಪಕ್ಷಗಳ ರಂಗಪ್ರವೇಶವು ತಮಿಳುನಾಡಿನ ಬಲಾಢ್ಯ ಪಕ್ಷಗಳಾದ ಎಐಎಡಿಎಂಕೆ ಮತ್ತು ಡಿಎಂಕೆಯ ಗೆಲುವಿಗೆ ಹಲವು ಕ್ಷೇತ್ರಗಳಲ್ಲಿ ಮುಳುವಾಗಬಹುದು.

ಆಡಳಿತಾರೂಢ ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟ ಮತ್ತು ವಿರೋಧ ಪಕ್ಷ ಡಿಎಂಕೆ ನೇತೃತ್ವದ ಮೈತ್ರಿಕೂಟದ ನಡುವೆ ನೇರ ಹಣಾಹಣಿ ಇದೆ. ಆದರೆ, ಟಿ.ಟಿ.ವಿ. ದಿನಕರನ್ ನೇತೃತ್ವದ ಅಮ್ಮ ಮಕ್ಕಳ್ ಮುನ್ನೇತ್ರ ಕಳಗಂ (ಎಎಂಎಂಕೆ) ಮತ್ತು ಕಮಲಹಾಸನ್ ನೇತೃತ್ವದ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಕೂಡ ಮೈತ್ರಿಕೂಟಗಳನ್ನು ರಚಿಸಿಕೊಂಡಿವೆ. ತಮಿಳು ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ನಾಮ್ ತಮಿಳರ್ ಕಚ್ಚಿ (ಎನ್‌ಟಿಕೆ) ಕೂಡ ಚುನಾವಣಾ ಕಣಕ್ಕೆ ಪ್ರವೇಶಿಸಿದೆ.

ಪ್ರಬಲವಲ್ಲದ ಕೆಲವು ಪಕ್ಷಗಳೂ ಇವೆ– ಡಾ. ಕೆ. ಕೃಷ್ಣಸಾಮಿ ನೇತೃತ್ವದ ಪುದಿಯ ತಮಿಳಗಂ ಮತ್ತು ನಿವೃತ್ತ ಅಧಿಕಾರಿ ಯು. ಸಗಾಯಂ ಅವರ ಹೊಸ ಪಕ್ಷಗಳು ಹೆಚ್ಚಿನ ಪರಿಣಾಮ ಬೀರುವ ಸಾಧ್ಯತೆ ಇಲ್ಲ.

ತಾನು ಬದಲಾವಣೆಯ ಹರಿಕಾರ ಎಂದು ಎಂಎನ್‌ಎಂ ಬಿಂಬಿಸಿಕೊಳ್ಳುತ್ತಿದೆ. ತಮಿಳುನಾಡಿನಲ್ಲಿ ತಮಿಳರ ನಿಜವಾದ ಆಳ್ವಿಕೆ ಬರಬೇಕು ಎಂಬುದು ಎನ್‌ಟಿಕೆಯ ಪ್ರತಿಪಾದನೆ.

ನಾಮಪತ್ರ ಸಲ್ಲಿಸಲು ಮೆರವಣಿಗೆಯಲ್ಲಿ ಬಂದ ಸ್ಟಾಲಿನ್

ಎಐಎಡಿಎಂಕೆಯ ಬಲವನ್ನು ತಾನು ಪಡೆದುಕೊಳ್ಳಬೇಕು ಎಂಬುದು ಎಎಂಎಂಕೆಯ ಬಯಕೆ.

ಎಐಎಡಿಎಂಕೆ ಮತ್ತು ಡಿಎಂಕೆ ನಡುವೆ ನೇರ ಸ್ಪರ್ಧೆ ಎಂದರೂ ಎಎಂಎಂಕೆ ಮತ್ತು ಎಂಎನ್‌ಎಂ ಅನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಎಎಂಎಂಕೆ ಮತ್ತು ನಟ ವಿಜಯಕಾಂತ್ ಅವರ ಡಿಎಂಡಿಕೆ ಮೈತ್ರಿ ಮಾಡಿಕೊಂಡಿವೆ. ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟದಿಂದ ಹೊರಬಂದ ಬಳಿಕ ಡಿಎಂಡಿಕೆ, ಎಎಂಎಂಕೆ ಜತೆ ಸೇರಿದೆ.

ಎಎಂಎಂಕೆ, ಎಂಎನ್‌ಎಂ ಮತ್ತು ಎನ್‌ಟಿಕೆ ಪಕ್ಷಗಳು 2019ರ ಲೋಕಸಭಾ ಚುನಾವಣೆಯಲ್ಲಿ ಪಡೆದ ಮತ ಪ್ರಮಾಣ ಶೇ 12.85ರಷ್ಟಿತ್ತು.

ನಟ ಸೀಮನ್ ಸ್ಥಾಪಿಸಿರುವ ಎನ್‌ಟಿಕೆ ತಮಿಳುನಾಡಿನಲ್ಲಿ ತನ್ನದೇ ನೆಲೆ ಸೃಷ್ಟಿಸಿಕೊಳ್ಳುವ ಯತ್ನದಲ್ಲಿದೆ. ಆದರೆ, ಈವರೆಗೆ ಯಾವುದೇ ಕ್ಷೇತ್ರದಲ್ಲಿ ಅದು ಗೆದ್ದಿಲ್ಲ.

ತಾವು ಪ್ರಬಲ ಎಂದು ಭಾವಿಸಿರುವ ಪ್ರದೇಶದ ಕ್ಷೇತ್ರಗಳಲ್ಲಿ ಎಎಂಎಂಕೆ ಮತ್ತು ಎಂಎನ್‌ಎಂ ನಾಯಕರಾದ ದಿನಕರನ್ ಮತ್ತು ಕಮಲಹಾಸನ್ ಸ್ಪರ್ಧಿಸುತ್ತಿದ್ದಾರೆ. ಇವರ ಸ್ಪರ್ಧೆಯು ಹತ್ತಿರದ ಕ್ಷೇತ್ರಗಳಲ್ಲಿಯೂ ಪರಿಣಾಮ ಉಂಟು ಮಾಡಬಹುದು.

‘ಚೆನ್ನೈ, ಮಧುರೆ, ಕೊಯಮತ್ತೂರುನಂತಹ ನಗರಗಳಲ್ಲಿ ಎಂಎನ್‌ಎಂ ಹೆಚ್ಚು ಮತ ಪಡೆಯುವ ಸಾಧ್ಯತೆ ಇದೆ. ಗ್ರಾಮೀಣ ಪ್ರದೇಶದಲ್ಲಿ ಈ ಪಕ್ಷಗಳು ಪರಿಣಾಮಕಾರಿಯಾಗುವುದು ಕಷ್ಟ. ಸೀಮನ್ ಅವರ ಪಕ್ಷದ ಸ್ಪರ್ಧೆಯು ಹೆಚ್ಚು ಪರಿಣಾಮಕಾರಿ ಆಗದು’ ಎಂದು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಮತ್ತು ಸಾರ್ವಜನಿಕ ಆಡಳಿತ ವಿಭಾಗದ ಮುಖ್ಯಸ್ಥ ಪ್ರೊ. ರಾಮು ಮಣಿವಣ್ಣನ್ ಹೇಳಿದ್ದಾರೆ.

ದಿನಕರನ್ ಅವರ ಗೌಂಡರ್ ಸಮುದಾಯದ ಪ್ರಾಬಲ್ಯ ಇರುವ ರಾಜ್ಯದ ದಕ್ಷಿಣ ಭಾಗದಲ್ಲಿ ಎಎಂಎಂಕೆ ಹೆಚ್ಚು ಮತಗಳನ್ನು ಪಡೆದುಕೊಳ್ಳಬಹುದು. ದಿನಕರನ್ ಅವರಿಗೆ ಪಕ್ಷದೊಳಗಿನ ಶತ್ರುವಿನ ವಿರುದ್ಧವೂ ಹೋರಾಡಬೇಕಾದ ಅನಿವಾರ್ಯ ಎದುರಾಗಿದೆ. ದಿನಕರನ್ ಪಕ್ಷವು ಎಐಎಡಿಎಂಕೆಯ ಮತಗಳನ್ನು ಕಸಿಯಬಹುದು’ ಎಂದು ಮಣಿವಣ್ಣನ್ ವಿಶ್ಲೇಷಿಸುತ್ತಾರೆ.

‘ಹೊಸದಾಗಿ ಸೃಷ್ಟಿಯಾಗಿರುವ ಮೂರು ಗುಂಪುಗಳು ಎಐಎಡಿಎಂಕೆಯ ಮತಗಳನ್ನು ಕಸಿಯಲಿವೆಯೇ ಡಿಎಂಕೆ ಮತಗಳಿಗೆ ಕನ್ನ ಹಾಕಲಿದೆಯೇ ಎಂಬುದು ನಿಗೂಢ. ತಮಿಳುನಾಡಿನಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಹೇಗೆ ಅಳೆಯಬಹುದು ಎಂಬುದಕ್ಕೆ ಈ ಚುನಾವಣೆಯ ಫಲಿತಾಂಶವು ಹೊಸ ಮಾನದಂಡಗಳನ್ನು ಸೃಷ್ಟಿಸಬಹುದು’ ಎಂಬುದು ಹಿರಿಯ ಪತ್ರಕರ್ತ ಆರ್. ಭಗವಾನ್ ಅವರ ಅಭಿಪ್ರಾಯ.

ಕನ್ಯಾಕುಮಾರಿಯ ಒಲವು ಯಾರಿಗೆ?

ಕನ್ಯಾಕುಮಾರಿ ಲೋಕಸಭಾ ಕ್ಷೇತ್ರಕ್ಕೂ ಏಪ್ರಿಲ್ 6ರಂದು ಮತದಾನ ನಡೆಯಲಿದೆ. ಈ ಕ್ಷೇತ್ರದ ಫಲಿತಾಂಶವು ಲೋಕಸಭೆಯಲ್ಲಿ ಪಕ್ಷಗಳ ಸ್ಥಿತಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಹಾಗಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿ ಈ ಕ್ಷೇತ್ರದ ಗೆಲುವನ್ನು ಪ್ರತಿಷ್ಠೆ ಆಗಿಸಿಕೊಂಡಿವೆ.

ಎಚ್. ವಸಂತಕುಮಾರ್ ಅವರ ನಿಧನದಿಂದಾಗಿ ಈ ಕ್ಷೇತ್ರ ತೆರವಾಗಿದೆ. ತಮಿಳುನಾಡಿನಲ್ಲಿ ಬಿಜೆಪಿ ಪ್ರಬಲವಾಗಿರುವ ಕೆಲವೇ ಪ್ರದೇಶಗಳಲ್ಲಿ ಕನ್ಯಾಕುಮಾರಿಯೂ ಒಂದು. 2014ರ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆ ಅಥವಾ ಎಐಎಡಿಎಂಕೆಯ ಬೆಂಬಲ ಇಲ್ಲದೆಯೇ ಇಲ್ಲಿ ಬಿಜೆಪಿ ಜಯಗಳಿಸಿತ್ತು.

ತಮಿಳುನಾಡು ಬಿಜೆಪಿಯಲ್ಲಿ ಇರುವ ಅತ್ಯಂತ ಜನಪ್ರಿಯ ನಾಯಕ ಪೊನ್ ರಾಧಾಕೃಷ್ಣನ್ ಅವರನ್ನು ಬಿಜೆಪಿ ಕಣಕ್ಕೆ ಇಳಿಸಿದೆ. 1999 ಮತ್ತು 2014ರಲ್ಲಿ ಅವರು ಇಲ್ಲಿ ಗೆದ್ದಿದ್ದರು. ವಸಂತಕುಮಾರ್ ಅವರ ಮಗ ವಿಜಯ ವಸಂತ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ.

ಕೇಂದ್ರ ಸಚಿವ ಅಮಿತ್ ಶಾ ಅವರೇ ಇಲ್ಲಿಗೆ ಪ್ರಚಾರಕ್ಕೆ ಬರುವ ಮೂಲಕ ಈ ಕ್ಷೇತ್ರವು ಬಿಜೆಪಿಗೆ ಮಹತ್ವದ್ದು ಎಂಬ ಸಂದೇಶ ರವಾನಿಸಿದ್ದಾರೆ. ಕನ್ಯಾಕುಮಾರಿಯಲ್ಲಿ ಗೆದ್ದರೆ ಬಿಜೆಪಿ ಕಾರ್ಯಕರ್ತರ ಹುಮ್ಮಸ್ಸು ಹೆಚ್ಚುತ್ತದೆ. ತಮಿಳುನಾಡಿನಲ್ಲಿ ನೆಲೆಯೂರಲು ಮಾಡುತ್ತಿರುವ ಪ್ರಯತ್ನಕ್ಕೆ ಫಲ ದೊರೆತಂತಾಗುತ್ತದೆ. 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ಇದ್ದ ಮೋದಿ ವಿರೋಧಿ ಅಲೆ ಈಗ ಇಲ್ಲ ಎಂದು ಘೋಷಿಸಿದಂತಾಗುತ್ತದೆ.

ವಸಂತಕುಮಾರ್ ಅವರ ಸಾವಿನ ಅನುಕಂಪವು ವಿಜಯ ವಸಂತ್ ಅವರಿಗೆ ನೆರವಾಗಬಹುದು ಎಂಬುದು ಕಾಂಗ್ರೆಸ್ ಲೆಕ್ಕಾಚಾರ.

ನಾಯಕರ ನಾಮಪತ್ರ ಸಲ್ಲಿಕೆ ಭರಾಟೆ

ದೇಶದ 4 ರಾಜ್ಯಗಳು ಮತ್ತು 1 ಕೇಂದ್ರಾಡಳಿತ ಪ್ರದೇಶ ವಿಧಾನಸಭೆಗೆ ಏಪ್ರಿಲ್ 6ರಂದು ಮೂರನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಹಲವು ಅಭ್ಯರ್ಥಿಗಳು ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ಈ ಚುನಾವಣೆಯಲ್ಲಿ ಕಣಕ್ಕೆ ಇಳಿಯುತ್ತಿರುವ ಎಲ್ಲಾ ಪಕ್ಷಗಳು ಪ್ರಮುಖರು ನಾಮಪತ್ರ ಸಲ್ಲಿಸಿದ್ದಾರೆ

- ಮಕ್ಕಳ ನೀಧಿ ಮಯ್ಯಂ ಮುಖ್ಯಸ್ಥ ಕಮಲಹಾಸನ್ ಅವರು ತಮಿಳುನಾಡಿನ ಕೊಯಮತ್ತೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಎಐಎಡಿಎಂಕೆ ಪ್ರಾಬಲ್ಯವಿದ್ದ ಈ ಕ್ಷೇತ್ರದಲ್ಲಿ ಕಣಕ್ಕೆ ಇಳಿದಿರುವ ಕಮಲಹಾಸನ್ ಅವರು ಎಂಎನ್‌ಎಂನ ಮುಖ್ಯಮಂತ್ರಿ ಅಭ್ಯರ್ಥಿ ಕೂಡ ಹೌದು. ಇದೇ ಕ್ಷೇತ್ರದಲ್ಲಿ ಬಿಜೆಪಿಯ ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷೆ ವನತಿ ಶ್ರೀನಿವಾಸನ್ ಸಹ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ

- ತಮಿಳುನಾಡಿನ ಹಾಲಿ ಮುಖ್ಯಮಂತ್ರಿ ಮತ್ತು ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿ ಇ.ಕೆ. ಪಳನಿಸ್ವಾಮಿ ಅವರು ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ತಮ್ಮ ತವರು ಕ್ಷೇತ್ರವಾದ ಎಡಪ್ಪಾಡಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಅವರು ನಾಮಪತ್ರ ಸಲ್ಲಿಸಿದ್ದಾರೆ
- ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರು ಕೊಳತ್ತೂರು ವಿಧಾನಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದಾರೆ. ಸ್ಟಾಲಿನ್ ಅವರು 2011ರಿಂದ ಎರಡು ಬಾರಿ ಈ ಕ್ಷೇತ್ರದಿಂದ ಶಾಸಕರಾಗಿ ಚುನಾಯಿತರಾಗಿದ್ದಾರೆ. ಡಿಎಂಕೆ ಭದ್ರಕೋಟೆಯಾಗಿರುವ ಕೊಳತ್ತೂರಿನಿಂದ ಈಗ ಮೂರನೇ ಬಾರಿ ಚುನಾಯಿತರಾಗುವ ನಿರೀಕ್ಷೆಯಲ್ಲಿದ್ದಾರೆ

- ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕಣ್ಣೂರು ಜಿಲ್ಲೆಯ ಧರ್ಮಡಂ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಈ ಕ್ಷೇತ್ರದಿಂದ ಅವರು ಕಣಕ್ಕೆ ಇಳಿಯುತ್ತಿರುವುದು ಇದು 2ನೇ ಬಾರಿ
- ಎಐಎನ್‌ಆರ್‌ಸಿ ಮುಖ್ಯಸ್ಥ ಮತ್ತು ಪುದುಚೇರಿಯ ವಿರೋಧ ಪಕ್ಷದ ನಾಯಕರಾಗಿದ್ದ ಎನ್.ರಂಗಸ್ವಾಮಿ ಅವರು ಪುದುಚೇರಿಯ ತಟ್ಟಂಚವಾಡಿ ವಿಧಾನಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದಾರೆ. ಅವರು ಇದೇ ಮೊದಲ ಬಾರಿ ಈ ಕ್ಷೇತ್ರದಿಂದ ಕಣಕ್ಕೆ ಇಳಿಯುತ್ತಿದ್ದಾರೆ

ಕಮಲಹಾಸನ್ ಕಾರಿನ ಮೇಲೆ ದಾಳಿ

ಕಾಂಚೀಪುರಂ (ತಮಿಳುನಾಡು) (ಪಿಟಿಐ): ಮಕ್ಕಳ ನೀಧಿ ಮಯ್ಯಂ ಮುಖ್ಯಸ್ಥ ಕಮಲಹಾಸನ್ ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಭಾನುವಾರ ತಡರಾತ್ರಿ ಯುವಕನೊಬ್ಬ ದಾಳಿ ನಡೆಸಿದ್ದಾನೆ. ಕಾಂಚೀಪುರಂನಲ್ಲಿ ಪ್ರಚಾರ ನಡೆಸಿ, ಹೋಟೆಲ್‌ಗೆ ವಾಪಸಾಗುವಾಗ ಈ ಘಟನೆ ನಡೆದಿದೆ.

‘ಘಟನೆಯಲ್ಲಿ ಕಮಲಹಾಸನ್ ಅವರಿಗೆ ಯಾವುದೇ ಗಾಯವಾಗಿಲ್ಲ. ಆದರೆ ಕಾರಿನ ಗಾಜಿಗೆ ಹಾನಿಯಾಗಿದೆ. ಇಂತಹ ದಾಳಿಗಳಿಂದ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಹೆದರಿಸಲು ಸಾಧ್ಯವಿಲ್ಲ’ ಎಂದು ಪಕ್ಷದ ವಕ್ತಾರ ಎ.ಜಿ. ಮೌರ್ಯ ಅವರು ತಿಳಿಸಿದ್ದಾರೆ.

ದಾಳಿ ನಡೆಸಿದ ಯುವಕ ಮದ್ಯ ಕುಡಿದಿದ್ದ. ಆತನ ಮೇಲೆ ಎಂಎನ್‌ಎಂ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ. ಅಷ್ಟರಲ್ಲೇ ಪೊಲೀಸರು ಬಂದು, ಯುವಕನನ್ನು ಬಂಧಿಸಿ ಕರೆದೊಯ್ದಿದ್ದಾರೆ ಎಂದು ಮೂಲಗಳು ಹೇಳಿವೆ.

ನುಡಿ–ಕಿಡಿ

ಕೋಮುವಾದಿ ಪಕ್ಷವಾದ ಎಐಯುಡಿಎಫ್ ಅನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡಿರುವ ಕಾಂಗ್ರೆಸ್, ಬಾಯಲ್ಲಿ ಮಾತ್ರ ಜಾತ್ಯತೀತತೆ ಬಗ್ಗೆ ಮಾತನಾಡುತ್ತಿದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಕಾಂಗ್ರೆಸ್, ಮಹಾತ್ಮ ಗಾಂಧಿ ಅವರ ಮಾರ್ಗವನ್ನು ಅನುಸರಿಸುತ್ತಿಲ್ಲ. ಬದಲಿಗೆ ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ, ಮೊಹಮ್ಮದ್ ಅಲಿ ಜಿನ್ನಾ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ಇವರು ಅಸ್ಸಾಂ ಮತ್ತು ದೇಶವನ್ನು ಹಾಳುಮಾಡುತ್ತಾರೆ
ಶಿವರಾಜ್ ಸಿಂಗ್ ಚೌಹಾಣ್, ಮಧ್ಯಪ್ರದೇಶ ಮುಖ್ಯಮಂತ್ರಿ

ಬಿಜೆಪಿ ಸರ್ಕಾರವಿರುವ ಉತ್ತರ ಪ್ರದೇಶ, ಅಸ್ಸಾಂ, ಬಿಹಾರ ಈವರೆಗೆ ಸುವರ್ಣ ರಾಜ್ಯಗಳಾಗಿಲ್ಲ. ಇನ್ನು, ಅವರು ಪಶ್ಚಿಮ ಬಂಗಾಳವನ್ನು ಹೇಗೆ ಸುವರ್ಣ ರಾಜ್ಯ ಮಾಡುತ್ತಾರೆ
ಅಭಿಷೇಕ್ ಬ್ಯಾನರ್ಜಿ, ಟಿಎಂಸಿ ಸಂಸದ

ಕೇರಳ: ಬಿಜೆಪಿಗೆ ಮುಖಭಂಗ

ತಿರುವನಂತಪುರ: ಕೇರಳದ ವಯನಾಡ್ ಜಿಲ್ಲೆಯ ಮಾನಂದವಾಡಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂದು ಬಿಜೆಪಿ ಘೋಷಿಸಿದ್ದ ಸಿ.ಮಣಿಕುಟ್ಟನ್ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದಾರೆ. ಇದರಿಂದ ಬಿಜೆಪಿಗೆ ಭಾರಿ ಮುಖಭಂಗವಾಗಿದೆ.

ಬಿಜೆಪಿಯು ಭಾನುವಾರ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಘೋಷಿಸಿತ್ತು. ‘ಪನಿಯಾ ಸಮುದಾಯದ ಮಾದರಿ ಯುವಕರಾದ ಸಿ.ಮಣಿಕುಟ್ಟನ್ ಅವರನ್ನು ಮಾನಂದವಾಡಿ ಕ್ಷೇತ್ರಕ್ಕೆ ನಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ’ ಎಂದು ಬಿಜೆಪಿ ಘೋಷಿಸಿತ್ತು. ಆದರೆ, ಸೋಮವಾರ ಈ ಬಗ್ಗೆ ಮಣಿಕುಟ್ಟನ್, ‘ನನಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲ. ನಾನು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ನನ್ನ ಕುಟುಂಬದ ಯಾರೂ ರಾಜಕೀಯಕ್ಕೆ ಬರುವುದಿಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.

ಹೃದಯಬಡಿತ ಇರುವವರೆಗೆ ಬಿಜೆಪಿ ವಿರುದ್ಧ ಹೋರಾಟ: ಮಮತಾ

ಕೋಲ್ಕತ್ತ (ಪಿಟಿಐ): ‘ನನ್ನ ಹೃದಯದ ಬಡಿತ ಇರುವವರೆಗೆ ಮತ್ತು ಧ್ವನಿಪೆಟ್ಟಿಗೆ ಎಷ್ಟು ದಿನ ಕೆಲಸಮಾಡುವುದೋ ಅಲ್ಲಿಯವರೆಗೆ ನಾನು ಬಿಜೆಪಿಯ ವಿರುದ್ಧ ಹೋರಾಡುತ್ತೇನೆ. ಗಾಯವಾಗಲಿ, ಯಾವುದೇ ಸಂಚಾಗಲಿ ನನ್ನನ್ನು ತಡೆಯಲಾರದು’ ಎಂದು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಗುಡುಗಿದ್ದಾರೆ.

ಪುರುಲಿಯಾದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಜಗತ್ತಿನ ಯಾವ ಸರ್ಕಾರವೂ ಮಾಡದಿರುವಷ್ಟು ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಸರ್ಕಾರ ಮಾಡಿದೆ. ಅವರು (ಬಿಜೆಪಿ) ದೆಹಲಿಯಿಂದ ಎಷ್ಟೇ ನಾಯಕರನ್ನು ಕರೆತಂದರೂ ಇಲ್ಲಿ ಏನನ್ನೂ ಸಾಧಿಸಲಾರರು. ಸ್ವಲ್ಪ ದಿನ ಕಾಯ್ದು ನೋಡಿ, ನನ್ನ ಕಾಲು ಸರಿಯಾಗಲಿದೆ. ಆಮೇಲೆ ನಿಮ್ಮ ಕಾಲುಗಳು ಎಷ್ಟು ಮುಕ್ತವಾಗಿ ಬಂಗಾಳದಲ್ಲಿ ಓಡಾಡುತ್ತವೆ ಎಂಬುದನ್ನು ನೋಡುತ್ತೇನೆ’ ಎಂದರು.

ಕುಟುಂಬದವರ ಗತಿ ಏನು?: ‘ಮಮತಾ ಅವರು ತಮ್ಮ ಕಾಲುನೋವಿನ ಬಗ್ಗೆ ಮಾತನಾಡಿದ್ದಾರೆ, ಆದರೆ, ಪಶ್ಚಿಮ ಬಂಗಾಳದಲ್ಲಿ ಹತರಾಗಿರುವ ಬಿಜೆಪಿ ಕಾರ್ಯಕರ್ತರ ಕುಟುಂಬದವರ ನೋವು ಅವರಿಗೆ ಅರ್ಥವಾಗುತ್ತಿದೆಯೇ’ ಎಂದು ಕೇಂದ್ರದ ಗೃಹ ಸಚಿವ ಅಮಿತ್ ಶಾ ಪ್ರಶ್ನಿಸಿದ್ದಾರೆ.

‘ದೀದಿ, ನಿಮ್ಮ ಕಾಲಿನ ನೋವು ಬೇಗನೆ ವಾಸಿಯಾಗಲಿ ಎಂದು ನಾನು ಹಾರೈಸುತ್ತೇನೆ. ಆದರೆ, ಟಿಎಂಸಿ ಗೂಂಡಾಗಳ ದಾಳಿಯಿಂದ ಸತ್ತಿರುವ 130 ಮಂದಿ ಬಿಜೆಪಿ ಕಾರ್ಯಕರ್ತರ ತಾಯಂದಿರ ನೋವಿನ ಬಗ್ಗೆ ಏನು ಹೇಳುತ್ತೀರಿ? ಅವರ ನೋವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ನೀವು ಮಾಡಿದ್ದೀರಾ’ ಎಂದು ರಾಣಿಬಂಧ್‌ನಲ್ಲಿ ಪ್ರಚಾರ ರ‍್ಯಾಲಿಯಲ್ಲಿ ಮಾತನಾಡುತ್ತಾ ಶಾ ಪ್ರಶ್ನಿಸಿದರು.

ಸರ್ಕಾರದ ಅಸಹಕಾರ: ‘ತಾಜ್‌ಪುರದಲ್ಲಿ ಬಂದರು ನಿರ್ಮಿಸುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ಪಶ್ಚಿಮ ಬಂಗಾಳ ಸರ್ಕಾರ ಸಹಕಾರ ನೀಡಿರಲಿಲ್ಲ. ಅಷ್ಟೇ ಅಲ್ಲ, ಈ ಸರ್ಕಾರ ರಾಜ್ಯದಿಂದ ಒಂದು ಆಟೊಮೊಬೈಲ್ ಕಂಪನಿಯನ್ನು ಓಡಿಸಿತ್ತು’ ಎಂದು ಕೇಂದ್ರದ ಸಾರಿಗೆ ಸಚಿವ ನಿತಿನ್ ಗಡ್ಕರಿ ಆರೋಪಿಸಿದ್ದಾರೆ. ‘ಸಾರಿಗೆ ಸಚಿವನಾಗಿ ನಾನು ನಂದಿಗ್ರಾಮಕ್ಕೆ ಒಂದು ದೊಡ್ಡ ಆಟೊಮೊಬೈಲ್ ಕಂಪನಿಯನ್ನು ತರುವ ಪ್ರಯತ್ನ ಮಾಡಿದ್ದೆ. ಆದರೆ ಟಿಎಂಸಿ ಸರ್ಕಾರ ಅದನ್ನು ಓಡಿಸಿದೆ. ಬಂದರು ಸಚಿವನಾಗಿದ್ದ ಅವಧಿಯಲ್ಲಿ ರಾಜ್‌ಪುರ ಜಿಲ್ಲೆಯಲ್ಲಿ ಒಂದು ಬಂದರು ನಿರ್ಮಾಣದ ಯೋಜನೆಯನ್ನೂ ಹಾಕಿಕೊಂಡಿದ್ದೆ. ಅದಕ್ಕೆ ಸಹಕಾರ ನೀಡಲಿಲ್ಲ’ ಎಂದು ಎಗ್ರಾದಲ್ಲಿ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಮಾತನಾತನಾಡುತ್ತಾ ಅವರು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ಮೂರು ಮತ್ತು ನಾಲ್ಕನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಿಗೆ ಬಿಜೆಪಿ ಘೋಷಿಸಿರುವ ಅಭ್ಯರ್ಥಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಪಕ್ಷದ ಕಾರ್ಯಕರ್ತರು ಕೋಲ್ಕತ್ತದಲ್ಲಿ ಪಕ್ಷದ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಮಮತಾ ನಾಮಪತ್ರ ತಿರಸ್ಕರಿಸಲು ಒತ್ತಾಯ

‘ಮಮತಾ ಅವರು ತಮ್ಮ ನಾಮಪತ್ರದ ಜತೆಗೆ ಸಲ್ಲಿಸಿರುವ ಮಾಹಿತಿಯಲ್ಲಿ, ಅವರ ವಿರುದ್ಧ ಇರುವ ಆರು ಅಪರಾಧ ಪ್ರಕರಣಗಳನ್ನು ಉಲ್ಲೇಖಿಸಿಲ್ಲ. ಆದ್ದರಿಂದ ಅವರ ನಾಮಪತ್ರವನ್ನು ತಿರಸ್ಕರಿಸಬೇಕು’ ಎಂದು ನಂದಿಗ್ರಾಮ ಕ್ಷೇತ್ರದ ಬಿಜೆಪಿಯ ಅಭ್ಯರ್ಥಿ ಸುವೇಂದು ಅಧಿಕಾರಿ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

‘ಅಸ್ಸಾಂನಲ್ಲಿ ಅವರ ವಿರುದ್ಧ ದಾಖಲಾಗಿರುವ ಐದು ಪ್ರಕರಣಗಳು ಹಾಗೂ ಪಶ್ಚಿಮ ಬಂಗಾಳದಲ್ಲಿ ಸಿಬಿಐ ದಾಖಲಿಸುವ ಒಂದು ಪ್ರಕರಣದ ವಿವರಗಳನ್ನು ಅವರು ನಾಮಪತ್ರದ ಜತೆಗೆ ಸಲ್ಲಿಸಿದ ಮಾಹಿತಿಯಲ್ಲಿ ಒದಗಿಸಿಲ್ಲ’ ಎಂದು ಸುವೇಂದು ಹೇಳಿದ್ದಾರೆ. ಆದರೆ ಆ ಪ್ರಕರಣಗಳ ವಿವರಗಳನ್ನು ಅವರು ನೀಡಿಲ್ಲ.

‘ಮಮತಾ ಅವರ ನಾಮಪತ್ರ ತಿರಸ್ಕರಿಸುವಂತೆ ನಾನು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೇನೆ. ಅವರು ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕಾಯ್ದು ನೋಡುತ್ತೇನೆ. ಕಾನೂನು ಪ್ರಕಾರವೇ ಅವರು ನಡೆಯಬೇಕಾಗುತ್ತದೆ’ ಎಂದು ಸುವೇಂದು ಅವರು ಮಾಧ್ಯಮಪ್ರತಿನಿಧಿಗಳ ಜತೆ ಮಾತನಾಡುತ್ತಾ ಹೇಳಿದ್ದಾರೆ.

‘ಪ್ರಕರಣದ ಬಗ್ಗೆ ಗಮನ ಹರಿಸಲಾಗಿದೆ’ ಎಂದು ಚುನಾವಣಾ ಆಯೋಗದ ಅಧಿಕಾರಿ ಹೇಳಿದ್ದಾರೆ. ಇದಕ್ಕೆ ಟಿಎಂಸಿ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ತಮ್ಮ ಆಸ್ತಿಯ ವಿವರ ಹಾಗೂ ಕ್ರಿಮಿನಲ್ ಪ್ರಕರಣಗಳನ್ನು ಕುರಿತ ಮಾಹಿತಿಯನ್ನು ಬಹಿರಂಗಪಡಿಸದಿರುವ ಅಭ್ಯರ್ಥಿಗಳ ನಾಮಪತ್ರವನ್ನು ಚುನಾವಣಾ ಅಧಿಕಾರಿಯು ತಿರಸ್ಕರಿಸಬಹುದು ಎಂಬ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ 2018ರ ಮಾರ್ಚ್‌ನಲ್ಲಿ ನೀಡಿತ್ತು.



ಸುವೇಂದು ಅಧಿಕಾರಿ

ಶಾ ರ‍್ಯಾಲಿ ರದ್ದು– ಟೀಕೆ

ಝರ್‌ಗ್ರಾಮದಲ್ಲಿ ಸೋಮವಾರ ನಡೆಯಬೇಕಾಗಿದ್ದ ಗೃಹಸಚಿವ ಅಮಿತ್ ಶಾ ಅವರ ಚುನಾವಣಾ ರ‍್ಯಾಲಿಯನ್ನು ತಾಂತ್ರಿಕ ಕಾರಣದಿಂದಾಗಿ ರದ್ದುಪಡಿಸಲಾಗಿತ್ತು. ಬದಲಿಗೆ, ಅವರ ಭಾಷಣವನ್ನು ವರ್ಚುವಲ್ ಮಾಧ್ಯಮದಲ್ಲಿ ಪ್ರಸಾರ ಮಾಡಲಾಯಿತು.

ಈ ಘಟನೆಯನ್ನು ಬಿಜೆಪಿ ವಿರುದ್ಧದ ಟೀಕೆಗೆ ಬಳಸಿಕೊಂಡ ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ, ‘ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ರ‍್ಯಾಲಿಗಳಲ್ಲಿ ಸೇರುವ ಜನರಿಗಿಂತ ಹೆಚ್ಚು ಜನರು ಚಹಾದ ಅಂಗಡಿಗಳ ಮುಂದೆ ಮತ್ತು ಜೆಸಿಬಿ ಕೆಲಸ ಮಾಡುವುದನ್ನು ನೋಡಲು ಸೇರಿರುತ್ತಾರೆ’ ಎಂದರು.

‘ಜನರು ಸೇರಿಲ್ಲ ಎಂಬ ಕಾರಣಕ್ಕೆ ಶಾ ಅವರ ರ‍್ಯಾಲಿಯನ್ನು ರದ್ದುಪಡಿಸಲಾಗಿದೆ. ನಮ್ಮಲ್ಲಿ ಮನವಿ ಮಾಡಿದ್ದಿದ್ದರೆ ನಾವೇ ಅವರ ರ‍್ಯಾಲಿಗೆ ಒಂದಿಷ್ಟು ಜನರನ್ನು ಕಳುಹಿಸಿಕೊಡುತ್ತಿದ್ದೆವು’ ಎಂದು ಮಮತಾ ಬ್ಯಾನರ್ಜಿ ಲೇವಡಿ ಮಾಡಿದ್ದಾರೆ.

ಮತ ಜಾಗೃತಿ

ರಸ್ತೆಯಲ್ಲಿ ರಂಗೋಲಿ

ಅಸ್ಸಾಂನ ಮತದಾರರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ರಾಜ್ಯದ ಕಚಾರ್ ಜಿಲ್ಲಾಡಳಿತವು ಸಿಲ್ಚಾರ್ ಹೆದ್ದಾರಿಯಲ್ಲಿ 8 ಕಿ.ಮೀ. ಉದ್ದದ ರಂಗೋಲಿಯನ್ನು ಹಾಕಿಸಿತ್ತು -ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ...

- ಬಹುಕೋಟಿ ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ, ಮಮತಾ ಬ್ಯಾನರ್ಜಿ ಅವರ ಸೋದರಳಿಯ, ತೃಣಮೂಲ ಕಾಂಗ್ರೆಸ್‌ನ ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಸಂಬಂಧಿಕರನ್ನು ಸೋಮವಾರ ಸಿಬಿಐ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ
- ಟಿಕೆಟ್ ವಂಚಿತ ಟಿಎಂಸಿ ನಾಯಕಿ ದೇಬಶ್ರೀ ರಾಯ್ ಅವರು ಸೋಮವಾರ ಪಕ್ಷವನ್ನು ತ್ಯಜಿಸಿದ್ದಾರೆ. ಖ್ಯಾತ ನಟಿಯಾಗಿರುವ ಇವರು ಟಿಎಂಸಿಯಿಂದ ಎರಡು ಬಾರಿ ಶಾಸಕಿಯಾಗಿದ್ದರು. ‘ನಾನಿನ್ನು ನಟನೆಯ ಕಡೆಗೆ ಗಮನ ಹರಿಸುತ್ತೇನೆ, ಒಳ್ಳೆಯ ಪ್ರಸ್ತಾವ ಬಂದರೆ ಬೇರೆ ಪಕ್ಷವನ್ನು ಸೇರುವ ಬಗ್ಗೆಯೂ ಚಿಂತಿಸುವೆ’ ಎಂದು ಅವರು ಹೇಳಿದ್ದಾರೆ
- ಪಶ್ಚಿಮ ಬಂಗಾಳದ 3 ಮತ್ತು 4ನೇ ಹಂತದ ಚುನಾವಣೆಗೆ ಬಿಜೆಪಿ ಘೋಷಿಸಿರುವ ಅಭ್ಯರ್ಥಿಗಳ ಪಟ್ಟಿಗೆ ಅಸಮಾಧಾನ ವ್ಯಕ್ತಪಡಿಸಿರುವ ಪಕ್ಷದ ಕಾರ್ಯಕರ್ತರು, ರಾಷ್ಟ್ರೀಯ ಉಪಾಧ್ಯಕ್ಷ ಮುಕುಲ್ ರಾಯ್ ಅವರ ಕಾರು ತಡೆದು ಪ್ರತಿಭಟನೆ ನಡೆಸಿದ್ದಾರೆ.
- ಕೇರಳ ಕಾಂಗ್ರೆಸ್‌ನ ಮಹಿಳಾ ಘಟಕದ ಅಧ್ಯಕ್ಷೆಯಾಗಿದ್ದ ಲತಿಕಾ ಸುಭಾಷ್ ಅವರು, ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಇಳಿಯಲು ನಿರ್ಧರಿಸಿದ್ದಾರೆ
- ಕೇರಳ ಕಾಂಗ್ರೆಸ್‌ನಲ್ಲಿ ಟಿಕೆಟ್ ಹಂಚಿಕೆ ಸಂಬಂಧ ಉಂಟಾಗಿರುವ ಅಸಮಾಧಾನ ಮತ್ತು ಭಿನ್ನಮತವನ್ನು ಶಮನ ಮಾಡಲು ಕಾಂಗ್ರೆಸ್ ಹೈಕಮಾಂಡ್, ಪಕ್ಷದ ಹಿರಿಯ ನಾಯಕರನ್ನು ನಿಯೋಜನೆ ಮಾಡಿದೆ
- ಚುನಾವಣೆಗೆ ಸಂಬಂಧಿಸಿದಂತೆ ಸುಳ್ಳುಸುದ್ದಿಗಳು ಮತ್ತು ತಪ್ಪುಮಾಹಿತಿಗಳನ್ನು ಹಂಚಿಕೊಳ್ಳುವುದನ್ನು ತಡೆಯಲು ಟ್ವಿಟರ್ ಹಲವು ಕಾರ್ಯಕ್ರಮಗಳನ್ನು ಆರಂಭಿಸಿದೆ. ಅಸ್ಸಾಮಿ, ಬಂಗಾಳಿ, ತಮಿಳು, ಮಲಯಾಳ, ಹಿಂದಿ, ಇಂಗ್ಲಿಷ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ

‘ದೇಶದ್ರೋಹ ಆರೋಪಿಗಳಿಗೆ ಚಾರ್ಜ್‌ಶೀಟ್ ಪ್ರತಿ ಕೊಡಿ’

ನವದೆಹಲಿ(ಪಿಟಿಐ): ದೇಶದ್ರೋಹ ಪ್ರಕರಣದ ಆರೋಪಿಗಳಾದ ಜೆಎನ್‌ಯು ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ ಕನ್ಹಯ್ಯ ಕುಮಾರ್ ಮತ್ತು ಇತರ ಒಂಬತ್ತು ಮಂದಿಗೆ ದೋಷಾರೋಪ ಪಟ್ಟಿಯ ಪ್ರತಿಯನ್ನು ನೀಡುವಂತೆ ನ್ಯಾಯಾಲಯವು ಸೋಮವಾರ ದೆಹಲಿ ಪೊಲೀಸರಿಗೆ ನಿರ್ದೇಶನ ನೀಡಿದೆ.

ಈ ಬಗ್ಗೆ ವಿಚಾರಣೆ ನಡೆಸಿದ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಸಿಎಂಎಂ) ಪಂಕಜ್ ಶರ್ಮಾ ಅವರು, ಪ್ರಕರಣದ ದಾಖಲೆಗಳನ್ನು ಏಪ್ರಿಲ್ 7 ರಂದು ಪರಿಶೀಲನೆ ಮಾಡುವುದಾಗಿ ಹೇಳಿದರು. ಇದೇ ವೇಳೆ ಬಂಧನಕ್ಕೊಳಗಾಗದ ಏಳು ಆರೋಪಿಗಳಿಗೆ ಜಾಮೀನು ಕೂಡ ನೀಡಿದರು.

ಕನ್ಹಯ್ಯ ಕುಮಾರ್, ಜೆಎನ್‌ಯು ಮಾಜಿ ವಿದ್ಯಾರ್ಥಿಗಳಾದ ಉಮರ್ ಖಾಲಿದ್ ಮತ್ತು ಅನಿರ್ಬನ್ ಭಟ್ಟಾಚಾರ್ಯ ಸೇರಿದಂತೆ ಇತರರ ವಿರುದ್ಧ ಭಾರತ ವಿರೋಧಿ ಘೋಷಣೆಗಳನ್ನು ಕೂಗಿದ್ದರು ಎಂಬ ಆರೋಪ ಇದೆ.

ಕಾಶ್ಮೀರಿ ವಿದ್ಯಾರ್ಥಿಗಳಾದ ಅಕ್ವಿಬ್ ಹುಸೇನ್, ಮುಜೀಬ್ ಹುಸೇನ್, ಮುನೀಬ್ ಹುಸೇನ್, ಉಮರ್ ಗುಲ್, ರಾಯಿಯಾ ರಸ್ಸೋಲ್, ಬಶೀರ್ ಭಟ್ ಮತ್ತು ಬಶರತ್ ಈ ಪ್ರಕರಣದ ಇತರ ಏಳು ಆರೋಪಿಗಳು. ಇವರಲ್ಲಿ ಕೆಲವರು ಜೆಎನ್‌ಯು, ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯ ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದರು.

ಇವರ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 124 ಎ (ದೇಶದ್ರೋಹ), 323 (ಸ್ವಯಂ ಪ್ರೇರಣೆಯಿಂದ ನೋವುಂಟು ಮಾಡುವುದು), 471 (ನಕಲಿ ದಾಖಲೆ ಬಳಕೆ), 143, 149 (ಕಾನೂನುಬಾಹಿರವಾಗಿ ಸಭೆ ಸೇರುವುದು), 147 (ಗಲಭೆಗೆ ಶಿಕ್ಷೆ) ಮತ್ತು 120 ಬಿ (ಕ್ರಿಮಿನಲ್ ಪಿತೂರಿ) ಅಡಿಯಲ್ಲಿ ಆರೋಪಗಳನ್ನು ಹೊರಿಸಲಾಗಿದೆ.

ಶಸ್ತ್ರಚಿಕಿತ್ಸೆಗೆ ಆಯುರ್ವೇದ ವೈದ್ಯರಿಗೂ ಅವಕಾಶ: ಕೇಂದ್ರಕ್ಕೆ ನೋಟಿಸ್

ನವದೆಹಲಿ: ಆಯುರ್ವೇದ ವೈದ್ಯರಿಗೆ ಕೆಲವು ಶಸ್ತ್ರಚಿಕಿತ್ಸೆ ನಡೆಸಲು ಅವಕಾಶ ನೀಡಿರುವುದನ್ನು ಪ್ರಶ್ನಿಸಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸಲ್ಲಿಸಿರುವ ಅರ್ಜಿ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೋಬಡೆ ಮತ್ತು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ವಿ. ರಾಮಸುಬ್ರಮಣಿಯನ್ ಅವರಿದ್ದ ಪೀಠವು ಈ ನಿರ್ದೇಶನ ನೀಡಿದೆ.

ಆಯುಷ್ ಸಚಿವಾಲಯ, ಭಾರತೀಯ ಔಷಧಗಳ ಕೇಂದ್ರೀಯ ಮಂಡಳಿ (ಸಿಸಿಐಎಂ) ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೂ ಪೀಠವು ನೋಟಿಸ್ ಜಾರಿಗೊಳಿಸಿದೆ.

ಹಾನಿಕಾರಕವಲ್ಲದ ಗಡ್ಡೆ ತೆಗೆಯುವುದು, ಗ್ಯಾಂಗ್ರಿನ್ ಮುಂತಾದ ಸಾಮಾನ್ಯ ಶಸ್ತ್ರಚಿಕಿತ್ಸೆಗಳನ್ನು ನಡೆಸಲು ಸ್ನಾತಕೋತ್ತರ ಆಯುರ್ವೇದ ವೈದ್ಯರಿಗೆ ಕೇಂದ್ರ ಸರ್ಕಾರವು ಕಳೆದ ತಿಂಗಳು ಅನುಮತಿ ನೀಡಿತ್ತು.

ಪಂಚಮಸಾಲಿ ಶ್ರೀ ಧರಣಿ ಅಂತ್ಯ

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿದರು. ಬಸನಗೌಡ ಪಾಟೀಲ ಯತ್ನಾಳ, ಸಿ.ಸಿ. ಪಾಟೀಲ, ರೇಣುಕಾಚಾರ್ಯ, ವಿಜಯಾನಂದ ಕಾಶಪ್ಪನವರ, ಅರುಣ್ ಪೂಜಾರಿ ಇತರರು ಇದ್ದರು

ಒಂದನೇ ಪುಟದಿಂದ

‘ಅಧಿವೇಶನದಲ್ಲಿಯೇ ಮೀಸಲಾತಿ ಘೋಷಿಸಬೇಕು. ಇಲ್ಲದಿದ್ದರೆ ಇಂತಿಷ್ಟು ದಿನಗಳಲ್ಲಿ ಘೋಷಿಸಲಾಗುವುದು ಎಂಬ ಮಾತನ್ನಾದರೂ ನೀಡಬೇಕು ಅಥವಾ ಆಗುವುದಿಲ್ಲ ಎಂದಾದರೂ ತಿಳಿಸಬೇಕು ಎಂಬ ಷರತ್ತನ್ನು ಸರ್ಕಾರದ ಮುಂದಿಟ್ಟಿದ್ದೆವು. ಆರು ತಿಂಗಳಲ್ಲಿ ಬೇಡಿಕೆ ಈಡೇರಿಸುವುದಾಗಿ ಸರ್ಕಾರ ಹೇಳಿದೆ. ಈ ಅವಧಿಯೊಳಗೆ ಬೇಡಿಕೆ ಈಡೇರದಿದ್ದರೆ 6 ತಿಂಗಳ ನಂತರ ಬೆಂಗಳೂರಿನಲ್ಲಿ 20 ಲಕ್ಷ ಜನರನ್ನು ಸೇರಿಸಿ ಜಾಗತಿಕ ಪಂಚಮಸಾಲಿ ಸಮಾವೇಶ ನಡೆಸಲಾಗುವುದು. ನೇರವಾಗಿ ಪ್ರಧಾನಿ ಮೋದಿಯವರಿಗೇ ಮನವಿ ಸಲ್ಲಿಸಲಾಗುವುದು’ ಎಂದೂ ಅವರು ಹೇಳಿದರು.

‘ಅಧಿವೇಶನದಲ್ಲಿಯೇ ಸ್ಪಷ್ಟ ಭರವಸೆ ಸಿಕ್ಕಿರುವುದು ನಮ್ಮ ಹೋರಾಟಕ್ಕೆ ಸಿಕ್ಕ ಪ್ರಥಮ ಜಯ. ಮುಖ್ಯಮಂತ್ರಿಯವರ ಮನ ಒಲಿಸುವಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್, ಸಚಿವರಾದ ಬಸವರಾಜ ಬೊಮ್ಮಾಯಿ, ಸಿ.ಸಿ. ಪಾಟೀಲ ಯಶಸ್ವಿಯಾಗಿದ್ದಾರೆ. ಸಂಘ ಪರಿವಾರದವರಿಗೂ ಶಾಸಕ ಅರವಿಂದ ಬೆಲ್ಲದ ಮನವೊಲಿಸಿದ್ದಾರೆ. ಇವರೆಲ್ಲ ಸೇರಿದಂತೆ ನಮ್ಮ ಹೋರಾಟಕ್ಕೆ ಬೆಂಬಲ ನೀಡಿದ ಎಲ್ಲರಿಗೂ ಕೃತಜ್ಞತೆ ಹೇಳುತ್ತೇನೆ’ ಎಂದರು.

ಧರಣಿ ನಡೆಯುತ್ತಿದ್ದ ಸ್ವಾತಂತ್ರ್ಯ ಉದ್ಯಾನಕ್ಕೆ ಸಚಿವ ಸಿ.ಸಿ. ಪಾಟೀಲ, ಶಾಸಕರಾದ ಯತ್ನಾಳ, ರೇಣುಕಾಚಾರ್ಯ, ಸಿದ್ದು ಸವದಿ, ಮಹೇಶ ಕುಮಠಳ್ಳಿ, ಅರುಣ್ ಪೂಜಾರಿ ಭೇಟಿ ನೀಡಿ ಧರಣಿ ಕೈಬಿಡುವಂತೆ ಸ್ವಾಮೀಜಿಯವರಿಗೆ ಮನವಿ ಮಾಡಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಇದ್ದರು.

ಆರು ತಿಂಗಳಲ್ಲಿ ವರದಿ: ಬಿಎಸ್‌ವೈ

ಬೆಂಗಳೂರು: ‘ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2 ಎ ಗೆ ಸೇರಿಸುವ ಸಂಬಂಧ ಅಧ್ಯಯನ ನಡೆಸಲು ರಚಿಸಲಾಗಿರುವ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ಸಮಿತಿ ಹಾಗೂ ಹಿಂದುಳಿದ ವರ್ಗಗಳ ಆಯೋಗವು ಆರು ತಿಂಗಳಲ್ಲಿ ವರದಿ ಸಲ್ಲಿಸಲಿವೆ. ಆಗ ಸಮುದಾಯದ ಬೇಡಿಕೆಗೆ ಸಕಾರಾತ್ಮಕ ಉತ್ತರ ಸಿಗಲಿದೆ’ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಸೋಮವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ್ ಅವರು ಮೀಸಲಾತಿ ವಿಷಯ ಪ್ರಸ್ತಾಪಿಸಿದರು. ಆಗ ಯಡಿಯೂರಪ್ಪ, ‘ಬಸವ ಮೃತ್ಯುಂಜಯ ಸ್ವಾಮೀಜಿ ಅವರು ಉಪವಾಸ ಸತ್ಯಾಗ್ರಹ ಕೈ ಬಿಡಬೇಕು‘ ಎಂದೂ ಕೋರಿದರು.

ಬಾಟ್ಲಾ ಹೌಸ್ ಎನ್‌ಕೌಂಟರ್ ಪ್ರಕರಣ: ಅಪರಾಧಿಗೆ ₹11 ಲಕ್ಷ ದಂಡ

ಉಗ್ರ ಅರಿಜ್ ಖಾನ್‌ಗೆ ಗಲ್ಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2008ರ ಬಾಟ್ಲಾ ಹೌಸ್ ಎನ್‌ಕೌಂಟರ್ ಪ್ರಕರಣದಲ್ಲಿ ಅಪರಾಧಿಯಾಗಿದ್ದ ಇಂಡಿಯನ್ ಮುಜಾಹಿದೀನ್ ಉಗ್ರ ಸಂಘಟನೆಯ ಸಹಚರ ಅರಿಜ್ ಖಾನ್ ಅಲಿಯಾಸ್ ಜುನೈದ್‌ಗೆ ಗಲ್ಲು ಶಿಕ್ಷೆ ವಿಧಿಸಿ ದೆಹಲಿ ನ್ಯಾಯಾಲಯ ತೀರ್ಪು ನೀಡಿದೆ.

'ಇದೊಂದು ಅಪರೂಪದಲ್ಲೇ ಅಪರೂಪದ ಅಪರಾಧ ಪ್ರಕರಣ. ಯಾವುದೇ ರೀತಿಯ ಪ್ರಚೋದನೆ ಇಲ್ಲದಿದ್ದರೂ ಪೊಲೀಸರ ಮೇಲೆ ಅಪರಾಧಿಯು ಕ್ರೂರ ಕೃತ್ಯವೆಸಗಿದ್ದಾನೆ. ಈತ ದೇಶದ ಶತ್ರು' ಎಂದು ಉಲ್ಲೇಖಿಸಿರುವ ನ್ಯಾಯಾಲಯವು, ಅಪರಾಧಿ ಅರಿಜ್‌ನನ್ನು ಸಾಯುವವರೆಗೂ ನೇಣಿಗೆ ಹಾಕಬೇಕು ಎಂದು ಹೇಳಿದೆ.

ಬಾಟ್ಲಾ ಹೌಸ್ ಎನ್‌ಕೌಂಟರ್‌ನಲ್ಲಿ ದೆಹಲಿ ಪೊಲೀಸ್ ಇನ್‌ಸ್ಪೆಕ್ಟರ್ ಮೋಹನ್ ಚಾಂದ್ ಶರ್ಮಾ ಹುತಾತ್ಮರಾಗಿದ್ದರು. ಶರ್ಮಾ ಅವರ ಹತ್ಯೆಗಾಗಿ ಅರಿಜ್‌ಗೆ ಗಲ್ಲು ಶಿಕ್ಷೆ ವಿಧಿಸಲಾಗಿದೆ ಎಂದು ನ್ಯಾಯಾಲಯ ತಿಳಿಸಿದೆ.

ಈ ಪ್ರಕರಣದಲ್ಲಿ ಅರಿಜ್‌ಗೆ ₹11 ಲಕ್ಷ ದಂಡವನ್ನು ಸಹ ವಿಧಿಸಲಾಗಿದೆ. ಈ ಮೊತ್ತದಲ್ಲಿ ತಕ್ಷಣವೇ ಶರ್ಮಾ ಅವರ ಕುಟುಂಬದ ಸದಸ್ಯರಿಗೆ ₹10 ಲಕ್ಷ ನೀಡಬೇಕು ಎಂದು ಆದೇಶಿಸಿದೆ.

ಅರಿಜ್ ಖಾನ್

'₹10 ಲಕ್ಷ ಪರಿಹಾರ ಕಡಿಮೆಯಾಯಿತು ಎನ್ನುವುದು ನನ್ನ ಅಭಿಪ್ರಾಯ. ಹೀಗಾಗಿ, ಹೆಚ್ಚುವರಿ ಪರಿಹಾರಕ್ಕೆ ಸಂಬಂಧಿಸಿದಂತೆ ದೆಹಲಿಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಈ ವಿಷಯ ವರ್ಗಾಯಿಸಲಾಗುವುದು' ಎಂದು ತೀರ್ಪು ನೀಡಿರುವ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸಂದೀಪ್ ಯಾದವ್ ತಿಳಿಸಿದ್ದಾರೆ.

2008ರ ಸೆಪ್ಟೆಂಬರ್ 13ರಂದು ದೆಹಲಿಯಲ್ಲಿ ಸಂಭವಿಸಿದ ಸರಣಿ ಸ್ಫೋಟಗಳಲ್ಲಿ 39 ಮಂದಿ ಸಾವಿಗೀಡಾಗಿದ್ದರು ಮತ್ತು 159 ಮಂದಿ ಗಾಯಗೊಂಡಿದ್ದರು. ಬಳಿಕ, ಸೆಪ್ಟೆಂಬರ್ 19ರಂದು ದಕ್ಷಿಣ ದೆಹಲಿಯ ಜಮಿಯಾ ನಗರದಲ್ಲಿ ಪೊಲೀಸರು ಮತ್ತು ಭಯೋತ್ಪಾದಕರ ನಡುವೆ ನಡೆದ ಎನ್‌ಕೌಂಟರ್‌ನಲ್ಲಿ ಇನ್‌ಸ್ಪೆಕ್ಟರ್ ಶರ್ಮಾ ಹುತಾತ್ಮರಾಗಿದ್ದರು.

ಎನ್‌ಕೌಂಟರ್ ಸ್ಥಳದಿಂದ ಪರಾರಿಯಾಗಿದ್ದ ಅರಿಜ್ ಖಾನ್‌ನನ್ನು 2009ರಲ್ಲಿ 'ಘೋಷಿತ ಅಪರಾಧಿ' ಎಂದು ಪ್ರಕಟಿಸಲಾಗಿತ್ತು. ಬಳಿಕ, 2018ರ ಫೆಬ್ರುವರಿ 14ರಂದು ಈತನನ್ನು ಬಂಧಿಸಲಾಗಿತ್ತು.

'ಇದು ಕೇವಲ ಹತ್ಯೆ ಅಲ್ಲ. ನ್ಯಾಯವನ್ನು ಸಮರ್ಥಿಸಿಕೊಳ್ಳುವ ಮತ್ತು ಕಾನೂನು ಜಾರಿಗೊಳಿಸುವ ಅಧಿಕಾರಿಯ ಹತ್ಯೆಯಾಗಿದೆ. ಕರ್ತವ್ಯದಲ್ಲಿದ್ದಾಗಲೇ ಅವರ ಹತ್ಯೆಯಾಗಿದೆ. ಹೀಗಾಗಿ, ಅರಿಜ್ ಖಾನ್‌ಗೆ ಮರಣದಂಡನೆ ಶಿಕ್ಷೆ ವಿಧಿಸಬೇಕು' ಎಂದು ಸರ್ಕಾರಿ ವಕೀಲ ಎ.ಟಿ ಅನ್ಸಾರಿ ಅವರು ನ್ಯಾಯಾಲಯದ ಮುಂದೆ ಪ್ರತಿಪಾದಿಸಿದ್ದರು.

'ಅರಿಜ್ ಮತ್ತು ಇತರರು ಮಾರಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು. ಅವರು ಯಾರನ್ನು ಬೇಕಾದರೂ ಸಾಯಿಸಲು ಸಿದ್ಧರಾಗಿದ್ದರು. ಯಾವುದೇ ಪ್ರಚೋದನೆ ಇಲ್ಲದಿದ್ದರೂ ಅವರೇ ಮೊದಲು ಗುಂಡು ಹಾರಿಸಿದರು' ಎಂದು ವಾದಿಸಿದ್ದರು

ಗಲ್ಲು ಶಿಕ್ಷೆಗೆ ವಿರೋಧ ವ್ಯಕ್ತಪಡಿಸಿದ್ದ ಅರಿಜ್ ಪರ ವಕೀಲ ಎಂ.ಎಸ್. ಖಾನ್, 'ಈ ಘಟನೆಯು ಪೂರ್ವಯೋಜಿತವಾಗಿರಲಿಲ್ಲ' ಎಂದು ವಾದಿಸಿದ್ದರು.

'ಅರಿಜ್ ಖಾನ್ ಮತ್ತು ಆತನ ಸಹಚರರು ಪೊಲೀಸ್ ಅಧಿಕಾರಿಗಳ ಮೇಲೆ ಗುಂಡು ಹಾರಿಸಿದ್ದಾರೆ. ಪೊಲೀಸ್ ಅಧಿಕಾರಿಯ ಹತ್ಯೆ ಮಾಡಿರುವುದು ಸಾಬೀತಾಗಿದೆ. ಅರಿಜ್ ಖಾನ್ ಮತ್ತು ಆತನ ಸಹಚರರು ತಪ್ಪಿತಸ್ಥರು' ಎಂದು ನ್ಯಾಯಾಲಯ ಮಾರ್ಚ್ 8ರಂದು ಹೇಳಿತ್ತು.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯ ಇಂಡಿಯನ್ ಮುಜಾಹಿದ್ದೀನ್ ಸಂಘಟನೆ ಭಯೋತ್ಪಾದಕ ಶಹಜಾದ್ ಅಹ್ಮದ್‌ಗೆ 2013ರ ಜುಲೈನಲ್ಲಿ ಜೀವಾವಧಿ ಶಿಕ್ಷೆ ವಿಧಿಸಿತ್ತು. ಈ ಆದೇಶದ ವಿರುದ್ಧ ಸಲ್ಲಿಸಿರುವ ಅರ್ಜಿಯು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ.

ವಿವಾದಕ್ಕೀಡಾಗಿದ್ದ ಎನ್‌ಕೌಂಟರ್

ಬಾಟ್ಲಾ ಹೌಸ್ ಎನ್‌ಕೌಂಟರ್ ನಕಲಿ ಎಂದು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಹೇಳಿಕೆ ನೀಡಿದ್ದು ವಿವಾದಕ್ಕೀಡಾಗಿತ್ತು. ಆದರೆ, ಈ ಹೇಳಿಕೆಯಿಂದ ದೂರ ಉಳಿಯುವುದಾಗಿ ಕಾಂಗ್ರೆಸ್ ಹೇಳಿತ್ತು.

ಎನ್‌ಕೌಂಟರ್ ಚಿತ್ರಗಳನ್ನು ನೋಡಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಕಣ್ಣೀರು ಹಾಕಿದ್ದರು ಎಂದು ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಯೂ ರಾಜಕೀಯ ವಲಯದಲ್ಲಿ ವಾಗ್ವಾದಕ್ಕೆ ಕಾರಣವಾಗಿತ್ತು.

ಜತೆಗೆ, ಹಲವು ವರ್ಷಗಳ ಕಾಲ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಈ ವಿಷಯ ಆರೋಪ ಮತ್ತು ಪ್ರತ್ಯಾರೋಪಕ್ಕೂ ಕಾರಣವಾಗಿತ್ತು. ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ಭಯೋತ್ಪಾದನೆ ವಿರುದ್ಧ ಮೃದು ಧೋರಣೆ ಹೊಂದಿದೆ ಎಂದು ಬಿಜೆಪಿ ಟೀಕಿಸಿತ್ತು.

ಕ್ಷಮೆಯಾಚನೆಗೆ ಆಗ್ರಹ: ಬಾಟ್ಲಾ ಹೌಸ್ ಎನ್‌ಕೌಂಟರ್ ಕುರಿತು ನೀಡಿರುವ ತೀರ್ಪಿನಿಂದ ಭಯೋತ್ಪಾದಕರ ಬಗ್ಗೆ ಅನುಕಂಪ ಹೊಂದಿದವರ ಬಣ್ಣ ಬಯಲಾಗಿದೆ ಎಂದು ಬಿಜೆಪಿ ಹೇಳಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರನ್ನು ಪ್ರಶ್ನಿಸಿದ್ದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕ್ಷಮೆಯಾಚಿಸಬೇಕು ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಒತ್ತಾಯಿಸಿದ್ದಾರೆ.

ಕೋವಿಡ್ ಲಸಿಕೆ ಅಭಿಯಾನ: ಕೇಂದ್ರದ ಹೇಳಿಕೆ

'ವಿಶೇಷ ವರ್ಗ ಸೃಷ್ಟಿಸಲಾಗದು'

ನವದೆಹಲಿ: ಉದ್ಯೋಗ ಅಥವಾ ವೃತ್ತಿಯನ್ನು ಆಧರಿಸಿ ಕೋವಿಡ್ ಲಸಿಕೆ ನೀಡಲು ಆದ್ಯತಾ ವಲಯದಲ್ಲಿ ಉಪವರ್ಗ ಸೃಷ್ಟಿಸಲಾಗದು. ಸದ್ಯ, ಆರೋಗ್ಯ ಸ್ಥಿತಿ, ಕೆಲಸದ ಸ್ವರೂಪ ಮತ್ತು ವಯಸ್ಸು ಆಧರಿಸಿ ಲಸಿಕೆ ನೀಡಲು ನೀತಿ ರೂಪಿಸಲಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿತು.

ಕೋವಿಡ್ ಲಸಿಕೆಯನ್ನು ನೀಡುವ ಕುರಿತಂತೆ ಆಗಸ್ಟ್ 7, 2020ರಲ್ಲಿ ಪರಿಣಿತರ ರಾಷ್ಟ್ರೀಯ ತಂಡವನ್ನು ರಚಿಸಲಾಗಿದೆ. ಈ ತಂಡವು ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು, 60 ವರ್ಷ ಮೀರಿದವರು, 45 ರಿಂದ 59 ವರ್ಷದವರಿಗೆ ಆದ್ಯತೆ ಮೇಲೆ ನೀಡಬೇಕು ಎಂದು ಸಲಹೆ ಮಾಡಿದೆ ಎಂದು ತಿಳಿಸಿದೆ.

ದೇಶದಲ್ಲಿ ಜನವರಿ 16ರಿಂದ ಮಾರ್ಚ್ 6ರ ಅವಧಿಯಲ್ಲಿ ಒಟ್ಟು 2.1 ಕೋಟಿ ಡೋಸ್ ಲಸಿಕೆಯನ್ನು ನೀಡಲಾಗಿದೆ. ಇದೇ ಅವಧಿಯಲ್ಲಿ ಅಮೆರಿಕ, ಬ್ರಿಟನ್, ಸ್ಪೇನ್, ಇಸ್ರೇಲ್‌ನಲ್ಲಿ ಕ್ರಮವಾಗಿ 3.2 ಕೋಟಿ, 76 ಲಕ್ಷ, 25.6 ಲಕ್ಷ, 55.4 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ ಎಂದು ಸರ್ಕಾರ ಅಂಕಿ ಅಂಶವನ್ನು ನೀಡಿತು.

ಲಸಿಕೆಯನ್ನು ನೀಡುವಾಗ ಆದ್ಯತಾ ವಲಯದಿಂದ ವಕೀಲರನ್ನು ಕೈಬಿಟ್ಟಿರುವುದನ್ನು ಪ್ರಶ್ನಿಸಿ ಅರವಿಂದ ಸಿಂಗ್ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಕೇಂದ್ರವು, ವಕೀಲರು ಮತ್ತು 45 ವರ್ಷದಿಂದ ಕೆಳಗಿನವರು ಒಳಗೊಂಡು ವಿಶೇಷ ವರ್ಗ ರೂಪಿಸಲಾಗದು ಎಂದು ಸ್ಪಷ್ಟಪಡಿಸಿತು.

ಒಟ್ಟಾರೆ ದೇಶದ ಹಿತದೃಷ್ಟಿಯಿಂದ ಆದ್ಯತೆ ವಲಯದಲ್ಲಿ ಉಪವರ್ಗವನ್ನು ಅವರ ವೃತ್ತಿ, ಉದ್ಯೋಗ ಆಧರಿಸಿ ಈ ಹಂತದಲ್ಲಿ ಸೃಷ್ಟಿಸಲು ಆಗದು ಎಂದು ತಿಳಿಸಿದೆ. ಕೋರ್ಟ್ ಈ ಕುರಿತ ವಿಚಾರಣೆಯನ್ನು ಮಾ. 18ಕ್ಕೆ ನಿಗದಿಪಡಿಸಿತು.



ಮುಂಜಾಗ್ರತೆ ವಹಿಸಿ: ರಾಹುಲ್

ನವದೆಹಲಿ: 'ಕೋವಿಡ್ 19' ಸಾಂಕ್ರಾಮಿಕ ರೋಗದ ಉಪಟಳ ಮುಂದುವರಿದಿದ್ದು, ಸಾರ್ವಜನಿಕರು ಎಲ್ಲ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಕಳೆದ ನಾಲ್ಕು ವಾರಗಳಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ದ್ವಿಗುಣಗೊಂಡಿವೆ ಎಂದು ಹೇಳುವ ಗ್ರಾಫ್ ಅನ್ನು ತಮ್ಮ ಟ್ವೀಟ್ ಜತೆ ಪೋಸ್ಟ್ ಮಾಡಿದ್ದಾರೆ. ಒಂದು ವಾರದಲ್ಲಿ ಶೇ 33ರಷ್ಟು ಸೋಂಕಿನ ಪ್ರಕರಣಗಳು ಹೆಚ್ಚಾಗಿವೆ ಎಂದು ಗ್ರಾಫ್ ಸೂಚಿಸುತ್ತದೆ.

ಕೇಂದ್ರ ಸರ್ಕಾರ ಕೊರೊನಾ ಸೋಂಕು ನಿಭಾಯಿಸುವಲ್ಲಿ ತೀವ್ರ ನಿರ್ಲಕ್ಷ್ಯ ವಹಿಸಿದೆ ಎಂದು ಕಳೆದ ತಿಂಗಳು ತಾವು ಆರೋಪಿಸಿದ್ದನ್ನು ಈ ಟ್ವೀಟ್‌ನಲ್ಲೂ ನೆನಪಿಸಿರುವ ಅವರು, 'ಈಗಲೂ ಸೋಂಕಿನ ಪ್ರಮಾಣ ಏರುತ್ತಲೇ ಇದೆ' ಎಂದು ಉಲ್ಲೇಖಿಸಿದ್ದಾರೆ.

ಮೀಸಲು ಮಿತಿ ಮರುಪರಿಶೀಲನೆ: ವಿಚಾರಣೆ ಆರಂಭಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಶೇ 50ರಷ್ಟಕ್ಕೆ ಮಿತಿಗೊಳಿಸಿದ 1992ರ ಇಂದ್ರಾ ಸಾಹ್ನಿ ಪ್ರಕರಣದ (ಮಂಡಲ್ ತೀರ್ಪು ಎಂದೂ ಹೇಳಲಾಗುತ್ತದೆ) ಐತಿಹಾಸಿಕ ತೀರ್ಪನ್ನು ವಿಸ್ತೃತ ಪೀಠವು ಮರುಪರಿಶೀಲನೆಗೆ ಒಳಪಡಿಸುವ ಅಗತ್ಯ ಇದೆಯೇ ಎಂಬ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಆರಂಭಿಸಿದೆ.

ಈ ವಿಷಯದಲ್ಲಿ ಸಂಕ್ಷಿಪ್ತ ಟಿಪ್ಪಣಿ ಸಲ್ಲಿಸಲು ಕೆಲವು ರಾಜ್ಯಗಳು ಹೆಚ್ಚಿನ ಕಾಲಾವಕಾಶ ಕೇಳಿದ್ದವು. ಹಾಗಾಗಿ, ಟಿಪ್ಪಣಿ ಸಲ್ಲಿಸಲು ಎಲ್ಲ ರಾಜ್ಯಗಳಿಗೆ ಒಂದು ವಾರದ ಕಾಲಾವಕಾಶವನ್ನು ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ನೀಡಿದೆ.

ತೀರ್ಪು ಮರುಪರಿಶೀಲಿಸಲು ವಿಸ್ತೃತ ಪೀಠಕ್ಕೆ ಒಪ್ಪಿಸಬೇಕೇ ಎಂಬ ಬಗ್ಗೆ ವಾದ ಮಂಡನೆ ಆರಂಭಿಸಿದ ಹಿರಿಯ ವಕೀಲ ಅರವಿಂದ ದಾತಾರ್ ಅವರು, ಇಂದ್ರಾ ಸಾಹ್ನಿ ಪ್ರಕರಣದ ತೀರ್ಪು ಮರುಪರಿಶೀಲನೆ ಅಗತ್ಯ ಇಲ್ಲ ಎಂದರು. ಈ ತೀರ್ಪು ಮರುಪರಿಶೀಲನೆಗೆ 11 ನ್ಯಾಯಮೂರ್ತಿಗಳ ಪೀಠ ರಚಿಸಬೇಕಾಗುತ್ತದೆ. ಮೀಸಲಾತಿಗೆ ಶೇ 50ರ ಮಿತಿ ಸೇರಿ ಹಲವು ಅಂಶಗಳನ್ನು ಪರಿಶೀಲನೆಗೆ ಒಳಪಡಿಸಿದ್ದ ತೀರ್ಪನ್ನು ಮರುಪರಿಶೀಲಿಸುವುದು ಬೇಕಾಗಿಲ್ಲ ಎಂದರು.

ಸುಪ್ರೀಂ ಕೋರ್ಟ್ ಸ್ಥಾಪನೆಯಾದ ಬಳಿಕ ಐದು ಬಾರಿ ಮಾತ್ರ 11 ನ್ಯಾಯಮೂರ್ತಿಗಳ ಪೀಠ ರಚನೆ ಆಗಿತ್ತು. ವಿಶಿಷ್ಟ ಮತ್ತು ಸಾಂವಿಧಾನಿಕವಾಗಿ ಭಾರಿ ಮಹತ್ವ ಇರುವ ಪ್ರಕರಣಗಳ ಸಂದರ್ಭದಲ್ಲಿ ಮಾತ್ರ ಇಷ್ಟೊಂದು ವಿಸ್ತೃತ ಪೀಠ ರಚಿಸಲಾಗಿದೆ. ಈಗ ಪ್ರಶ್ನೆ ಎದ್ದಿರುವುದು ಮೀಸಲಾತಿಯ ಮಿತಿಯ ಬಗ್ಗೆ ಮಾತ್ರ. 1992ರ ತೀರ್ಪಿನಲ್ಲಿ ಪರಿಶೀಲನೆಗೆ ಒಳಪಟ್ಟ ಇತರ ವಿಚಾರಗಳಲ್ಲಿ ಯಾವುದೇ ಸಂದೇಹ ಇಲ್ಲ ಎಂದು ದಾತಾರ್ ಹೇಳಿದರು.

ಪಿ.ಎಂ ಕೇರ್ಸ್ ನಿಧಿಗೆ ದೇಣಿಗೆ ಕಾಂಗ್ರೆಸ್–ಸರ್ಕಾರ ವಾಗ್ವಾದ

ನವದೆಹಲಿ: ಪಿ.ಎಂ ಕೇರ್ಸ್ ನಿಧಿಗೆ ಬಂದಿರುವ ದೇಣಿಗೆಯ ವಿಷಯ ಸೋಮವಾರ ಲೋಕಸಭೆಯಲ್ಲಿ ಕಾಂಗ್ರೆಸ್ ಮತ್ತು ಸರ್ಕಾರದ ನಡುವೆ ಬಿಸಿ ಚರ್ಚೆಗೆ ಆಸ್ಪದವಾಯಿತು.

ಎಲ್‌ಐಸಿ ಜನರಿಗೆ ಅನುಕೂಲ ಕಲ್ಪಿಸುವ ಬದಲು ಈ ನಿಧಿಗೆ ನೆರವು ನೀಡಿತು ಎಂದು ವಿರೋಧಪಕ್ಷ ಆರೋಪಿಸಿತು. ಇದಕ್ಕೆ ಎದಿರೇಟು ನೀಡಿದ ಸಚಿವ ಅನುರಾಗ್ ಠಾಕೂರ್ ಅವರು ರಾಜೀವ್ ಗಾಂಧಿ ಫೌಂಡೇಷನ್ ಚೀನಾದಿಂದಲೂ ದೇಣಿಗೆ ಸ್ವೀಕರಿಸಿದೆ ಎಂದರು.

ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಲೋಕಸಭೆಯ ಕಾಂಗ್ರೆಸ್‌ನ ಹಂಗಾಮಿ ನಾಯಕ ರಣವೀತ್ ಸಿಂಗ್ ಅವರು, ಲಾಕ್‌ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರು ಮತ್ತು ಕಡುಬಡವರು ತೀವ್ರ ಕಷ್ಟವನ್ನು ಅನುಭವಿಸಬೇಕಾಯಿತು ಎಂದು ದೂರಿದರು.

'ಈ ಜನರಿಗೆ ನೆರವು ಸಿಗಲಿಲ್ಲ. ಎಲ್‌ಐಸಿಯೂ ನಿಧಿಯನ್ನು ಕೇವಲ ಪಿಎಂ ಕೇರ್ಸ್ ನಿಧಿಗೆ ನೀಡುತ್ತದೆ. ಏಕೆ ಹೀಗೆ? ಎಂದು ಪ್ರಶ್ನಿಸಿದರು. ಇದಕ್ಕೆ 'ರಾಜಕೀಯ ಉತ್ತರ ನೀಡಬೇಡಿ' ಎಂದೂ ಕೋರಿದರು. ಈ ಹಂತದಲ್ಲಿ ಸ್ಪೀಕರ್ ಓಂ ಬಿರ್ಲಾ ಅವರು, 'ರಾಜಕೀಯ ಪ್ರಶ್ನೆ ಕೇಳಿದರೆ, ರಾಜಕೀಯ ಉತ್ತರವನ್ನೇ ಪಡೆಯುತ್ತೀರಿ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಠಾಕೂರ್, ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಮರಳುವ ವೇಳೆಯಲ್ಲಿ ಸಮಸ್ಯೆಯಾಯಿತು ಎಂದರು. ಅಲ್ಲದೆ, ಪರಿಹಾರ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು ತಿಳಿಸಿದರು.

ಪಿ.ಎಂ ಕೇರ್ಸ್ ನಿಧಿಗೆ ಪಿಂಚಣಿ ಮೊತ್ತ ಮತ್ತು ನರೇಗಾ ಯೋಜನೆಯ ಕೂಲಿ ಮೊತ್ತವನ್ನು ನೀಡಿರುವ ನಿದರ್ಶನಗಳಿವೆ. ಸಾರ್ವಜನಿಕ ವಲಯದ ಸಂಸ್ಥೆಗಳೂ ಕೊಡುಗೆ ನೀಡಿವೆ ಎಂದರು.

ಕಾಂಗ್ರೆಸ್ ಪಕ್ಷವು ರಾಜೀವ್‌ಗಾಂಧಿ ಫೌಂಡೇಷನ್‌ನ ಖಾತೆ ತುಂಬಲು ಇಂತಹದೇ ಕೆಲಸ ಮಾಡಿತು. ಖಾತೆ ಮುಚ್ಚಬೇಕಾದ್ದರಿಂದ ಕಾಂಗ್ರೆಸ್‌ಗೆ ನೋವಾಗುತ್ತಿದೆ. ಫೌಂಡೇಷನ್‌ಗೆ ಚೀನಾದಿಂದಲೂ ನೆರವು ಬಂದಿದೆ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರೂ ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

ಸಂಸದ ಅಭಿಷೇಕ್ ಸಂಬಂಧಿಕರ ವಿಚಾರಣೆ

ಕೋಲ್ಕತ್ತ: ಅಕ್ರಮ ಕಲ್ಲಿದ್ದಲು ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಸಂಬಂಧಿಕರನ್ನು ಸಿಬಿಐ ಸೋಮವಾರ ವಿಚಾರಣೆ ನಡೆಸಿದೆ.

ಅಭಿಷೇಕ್ ಬ್ಯಾನರ್ಜಿ ಅವರ ಅತ್ತಿಗೆ ಮೇನಕಾ ಗಂಭೀರ್ ಅವರ ಪತಿ ಅಂಕುಶ್ ಅರೋರಾ ಹಾಗೂ ಅಂಕುಶ್ ಅವರ ತಂದೆ ಪವನ್ ಅರೋರಾ ಅವರನ್ನು ವಿಚಾರಣೆ ನಡೆಸಲಾಯಿತು.

ಶುಕ್ರವಾರ ಇಬ್ಬರಿಗೂ ಈ ಬಗ್ಗೆ ನೋಟಿಸ್ ನೀಡಲಾಗಿತ್ತು. ಅಭಿಷೇಕ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ.

ವಿಶ್ವನಾಥ ದತ್ತ ಕೃತಿಯ ಹೊಸ ಆವೃತ್ತಿ ಬಿಡುಗಡೆ

ನವದೆಹಲಿ: ಇತಿಹಾಸಕಾರ ದಿವಂಗತ ವಿಶ್ವನಾಥ ದತ್ತ ಅವರ 1969ರ ಅತ್ಯುತ್ತಮ ಕೃತಿ 'ಜಲಿಯನ್‌ವಾಲಾ ಬಾಗ್: ಎ ಗ್ರೌಂಡ್‌ಬ್ರೇಕಿಂಗ್ ಹಿಸ್ಟರಿ ಆಫ್ ದ 1919 ಮೆಸಾಕರ್' ನೂತನ ಆವೃತ್ತಿ ಸೋಮವಾರ ಬಿಡುಗಡೆಯಾಗಿದೆ ಎಂದು ಪ್ರಕಾಶನ ಸಂಸ್ಥೆ ಪೆಂಗ್ವಿನ್ ತಿಳಿಸಿದೆ.

ಪರಿಷ್ಕೃತ ಆವೃತ್ತಿಯಲ್ಲಿ ಕೃತಿಕಾರನ ಪುತ್ರಿ, ಇತಿಹಾಸಕಾರರೂ ಆದ ನೊನಿಕಾ ದತ್ತ ಅವರ ಪರಿಚಯ ಲೇಖನವಿದೆ. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಕುರಿತ ಪ್ರಥಮ ದಾಖಲೆ ಇದಾಗಿದೆ ಎಂದು ಹೇಳಲಾಗಿದೆ.

ಪ್ರಾಥಮಿಕ ಮಾಹಿತಿ ಮತ್ತು ಹತ್ಯಾಕಾಂಡದಲ್ಲಿ ನೊಂದವರು, ಬದುಕುಳಿದವರ ಅನುಭವಗಳನ್ನು ಆಧರಿಸಿ ಈ ಕೃತಿ ರಚಿಸಲಾಗಿದ್ದು, ಐತಿಹಾಸಿಕ ಘಟನೆ ಕುರಿತು ಪ್ರಥಮ ದಾಖಲೆ ಇದಾಗಿದೆ. ಈ ಘಟನೆಯೇ ಮುಂದೆ ಸ್ವಾತಂತ್ರ್ಯ ಹೋರಾಟ ತೀವ್ರಗೊಳ್ಳಲು ಕಾರಣವಾಯಿತು.

ಇದು, ನನ್ನ ತಂದೆ 1969ರಲ್ಲಿ ಬರೆದ ಕೃತಿಯ ಹೊಸ ಆವೃತ್ತಿ. ಎಂದು ನೊನಿಕಾ ತಿಳಿಸಿದರು.

'ವಾಜೆ ಬಂಧನ ಮಹಾರಾಷ್ಟ್ರ ಪೊಲೀಸರಿಗೆ ಅವಮಾನ'

ಮುಂಬೈ: 'ಮುಂಬೈ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಎನ್‌ಐಎ ಬಂಧಿಸಿದ್ದು ಇದು ಮಹಾರಾಷ್ಟ್ರ ಪೊಲೀಸರಿಗೆ ಮಾಡಿದ ಅವಮಾನ. ಸಚಿನ್ ವಾಜೆ ಅವರನ್ನು ಉದ್ದೇಶಪೂರ್ವಕವಾಗಿ ಬಂಧಿಸಲಾಗಿದೆ' ಎಂದು ಶಿವಸೇನಾ ಆರೋಪಿಸಿದೆ.

ಉದ್ಯಮಿ ಮುಕೇಶ್ ಅಂಬಾನಿ ಅವರ ಮನೆ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ, ಸಚಿನ್ ವಾಜೆ ಅವರನ್ನು ಶನಿವಾರ ಬಂಧಿಸಿತ್ತು.

'ಮುಂಬೈ ಪೊಲೀಸರ ತನಿಖಾ ಸಾಮರ್ಥ್ಯ ಮತ್ತು ಧೈರ್ಯಕ್ಕೆ ವಿಶ್ವವೇ ಮೆಚ್ಚುಗೆ ವ್ಯಕ್ತಪಡಿಸಿದೆ. ಹೀಗಿರುವಾಗ ಈ ಪ್ರಕರಣವನ್ನು ಎನ್‌ಐಎಗೆ ನೀಡಿರುವುದು ನಿಜಕ್ಕೂ ಆಶ್ಚರ್ಯಕರ' ಎಂದು ಶಿವಸೇನಾ ಪಕ್ಷದ ಮುಖವಾಣಿ 'ಸಾಮ್ನಾ' ಪತ್ರಿಕೆಯ ಸಂಪಾದಕೀಯದಲ್ಲಿ ಹೇಳಲಾಗಿದೆ.

'ಒಂದು ವೇಳೆ ಸಚಿನ್ ವಾಜೆ ತಪ್ಪಿತಸ್ಥರಾಗಿದ್ದಲ್ಲಿ ಮುಂಬೈ ಪೊಲೀಸ್ ಮತ್ತು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳಕ್ಕೆ(ಎಟಿಎಸ್) ಅವರ ವಿರುದ್ಧ ಕ್ರಮಕೈಗೊಳ್ಳುವ ಸಾಮರ್ಥ್ಯವಿದೆ. ಆದರೆ ಕೇಂದ್ರ ತನಿಖಾ ದಳ ಇದನ್ನು ಬಯಸಿರಲಿಲ್ಲ' ಎಂದು ಸಂಪಾದಕೀಯದಲ್ಲಿ ದೂರಲಾಗಿದೆ.

'ಅನ್ವಯ್‌ನಾಯ್ಕ್ ಆತ್ಮಹತ್ಯೆ ಪ್ರಕರಣದಡಿ ಪತ್ರಕರ್ತ ಅರ್ನಬ್ ಗೋಸ್ವಾಮಿ ಅವರನ್ನು ಸಚಿನ್ ವಾಜೆ ಬಂಧಿಸಿದ್ದರು. ಅಂದಿನಿಂದ ಬಿಜೆಪಿ ಮತ್ತು ಕೇಂದ್ರ ಸರ್ಕಾರವು ಸಚಿನ್ ವಾಜೆಯನ್ನು ಗುರಿಯಾಗಿಸಿಕೊಂಡಿದೆ' ಎಂದು ಆರೋಪಿಸಲಾಗಿದೆ.

ವಾಜೆ ಅವರು ಈವರೆಗೆ ಒಟ್ಟು 63 ಎನ್‌ಕೌಂಟರ್‌ಗಳನ್ನು ಮಾಡಿದ್ದಾರೆ. ಅಂಬಾನಿ ಮನೆ ಮುಂದೆ ಪತ್ತೆಯಾದ ಕಾರಿನ ಮಾಲೀಕ ಮನ್‌ಸುಖ್ ಹಿರೇನ್ ಹತ್ಯೆಯ ಆರೋಪ ಕೂಡ ಸಚಿನ್ ವಾಜೆ ಮೇಲಿದೆ.

ಸಚಿನ್ ವಾಜೆ ಅಮಾನತು



ಸಚಿನ್ ವಾಜೆ

ಮುಂಬೈ: ಉದ್ಯಮಿ ಮುಕೇಶ್ ಅಂಬಾನಿ ಅವರ ಮನೆ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಸಚಿನ್ ವಾಜೆಯನ್ನು ಸೋಮವಾರ ಅಮಾನತುಗೊಳಿಸಲಾಗಿದೆ.

'ಪೊಲೀಸ್ ವಿಶೇಷ ಶಾಖೆಯ ಹೆಚ್ಚುವರಿ ಆಯುಕ್ತರ ಆದೇಶದಂತೆ ಸಚಿನ್ ವಾಜೆ ಅವರನ್ನು ಅಮಾನತು ಮಾಡಲಾಗಿದೆ' ಎಂದು ಪೊಲೀಸ್ ಉಪ ಆಯುಕ್ತ ಎಸ್.ಚೈತನ್ಯ ತಿಳಿಸಿದರು.

ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಶನಿವಾರ ಸಚಿನ್ ವಾಜೆ ಅವರನ್ನು ಬಂಧಿಸಿತ್ತು. ಅಂಬಾನಿ ಮನೆ ಮುಂದೆ ಪತ್ತೆಯಾದ ಸ್ಕಾರ್ಪಿಯೋ ಕಾರಿನ ಮಾಲೀಕ ಮನ್‌ಸುಖ್ ಹಿರೇನ್ ಅವರ ಹತ್ಯೆ ಪ್ರಕರಣದ ಆರೋಪವನ್ನೂ ಸಚಿವ್ ವಾಜೆ ಅವರು ಎದುರಿಸುತ್ತಿದ್ದಾರೆ.

ಮುಂಬೈ ನ್ಯಾಯಾಲಯವು ಭಾನುವಾರ ಸಚಿನ್ ವಾಜೆ ಅವರನ್ನು ಮಾರ್ಚ್ 25ರ ತನಕ ಎನ್‌ಐಎ ಕಸ್ಟಡಿಗೆ ನೀಡಿದೆ.

ಉಗ್ರ ಸಂಘಟನೆಯ ಉನ್ನತ ಕಮಾಂಡರ್ ಸಜಾದ್ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಮೂರು ದಿನಗಳ ಕಾಲ ನಡೆದ ಗುಂಡಿನ ಕಾಳಗದಲ್ಲಿ ಪಾಕಿಸ್ತಾನ ಮೂಲದ ಜೈಷ್-ಎ-ಮೊಹಮ್ಮದ್ ಉಗ್ರ ಸಂಘಟನೆಯ ಉನ್ನತ ಕಮಾಂಡರ್ ಸಜಾದ್ ಅಫ್ಘಾನಿ ಎಂಬುವವನನ್ನು ಹೊಡೆದುರುಳಿಸುವಲ್ಲಿ ಭದ್ರತಾ ಪಡೆಗಳು ಯಶಸ್ವಿಯಾಗಿವೆ.

ಕಾರ್ಯಾಚರಣೆಯ ವಿವರಣೆ ನೀಡಿರುವ ಕಾಶ್ಮೀರದ ಹಿರಿಯ ಪೊಲೀಸ್ ಅಧಿಕಾರಿ ವಿಜಯ್ ಕುಮಾರ್, ಉಗ್ರ ವಿಲಾಯತ್ ಲೋನ್ ಅಲಿಯಾಸ್ ಸಜಾದ್ ಅಫ್ಘಾನಿಯ ಹತ್ಯೆಯನ್ನು ಖಚಿತಪಡಿಸಿದ್ದು, ಭದ್ರತಾ ಪಡೆ ಹಾಗೂ ಪೊಲೀಸರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

'ಆತ (ಅಫ್ಘಾನಿ) ದಕ್ಷಿಣ ಕಾಶ್ಮೀರದಲ್ಲಿ, ವಿಶೇಷವಾಗಿ ಶೋಪಿಯಾನ್‌ನಲ್ಲಿ ಉಗ್ರರನ್ನು ನೇಮಕ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ. ಇದು ಭದ್ರತಾ ಪಡೆಗಳಿಗೆ ದೊರಕಿರುವ ದೊಡ್ಡ ಯಶಸ್ಸು. ಈ ಕಾರ್ಯಾಚರಣೆಗಾಗಿ ಎಲ್ಲರನ್ನು ಅಭಿನಂದಿಸುತ್ತೇನೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಅಫ್ಘಾನಿ ಹಾಗೂ ಆತನ ಸಹಚರರ ಇರುವಿಕೆಯ ಖಚಿತ ಮಾಹಿತಿಯ ಮೇರೆಗೆ ಸೇನೆ ಹಾಗೂ ಹಾಗೂ ಭದ್ರತಾ ಪಡೆಗಳು ಶೋಪಿಯಾನ್ ಜಿಲ್ಲೆಯ ರಾವಲ್‌ಪೋರಾ ಗ್ರಾಮದಲ್ಲಿ ಶುಕ್ರವಾರ ಜಂಟಿ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದವು. ಬಳಿಕ ಗುಂಡಿನ ಚಕಮಕಿ ನಡೆದಿದೆ. ಎನ್‌ಕೌಂಟರ್‌ನಲ್ಲಿ ಮೂರು ಮನೆಗಳು ಹಾನಿಗೊಳಗಾಗಿದ್ದು, ಕಲ್ಲು ತೂರಾಟವು ನಡೆದಿತ್ತು.

ಮುನ್ನೆಚ್ಚರಿಕಾ ಕ್ರಮದ ಭಾಗವಾಗಿ ಶೋಪಿಯಾನ್ ಜಿಲ್ಲೆಯಲ್ಲಿ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು.

ಭಾನುವಾರ ನಡೆದ ಎನ್‌ಕೌಂಟರ್‌ನಲ್ಲಿ ಲಷ್ಕರ್-ಎ-ತೊಯಬಾ ಉಗ್ರ ಜಹಾಂಗೀರ್ ಅಹ್ಮದ್ ಎಂಬಾತನನ್ನು ಹತ್ಯೆಗೈಯಲಾಗಿತ್ತು. ಆತನಿಂದ ಅಮೆರಿಕ ನಿರ್ಮಿತ ಎಂ4-ರೈಫಲ್ ಮತ್ತು ಮದ್ದು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ: 1) ಈ ಕಛೇರಿ ಟೆಂಡರ್ ಪ್ರಕಟಣೆ ನಂ: ಕಾಸಮಂ/ತಾ.ಶಾ./ಸ.ಇ/ಟೆಂಡರ್–53/2021/885 ದಿ: 09.03.20212) ಈ ಕಛೇರಿ ಟೆಂಡರ್ ಪ್ರಕಟಣೆ ನಂ: ಕಾಸಮಂ/ತಾ.ಶಾ./ಸ.ಇ/ಟೆಂಡರ್–54/2021/900 ದಿ:10.03.2021 3) ಈ ಕಛೇರಿ ಟೆಂಡರ್ ಪ್ರಕಟಣೆ ನಂ: ಕಾಸಮಂ/ತಾ.ಶಾ./ಸ.ಇ/ಟೆಂಡರ್–55/2021/902 ದಿ:10.03.2021

****

ಉಲ್ಲೇಖಿತ ಪತ್ರಗಳನ್ವಯ ಆಹ್ವಾನಿಸಲಾದಂತೆ ಉಡುಪಿ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್/ಸ್ಟಾಂಡರ್ಡ್ ಕನ್ಸಲ್ಟೆನ್ಸಿ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ಉಲ್ಲೇಖ (1) ರ ಕಾಮಗಾರಿಗಳ ಟೆಂಡರನ್ನು **ದಿ:19.03.2021ರ ಸಂಜೆ 4.00** ಗಂಟೆಯವರೆಗೆ ಹಾಗೂ ಉಲ್ಲೇಖ (2) ಹಾಗೂ (3)ರ ಕನ್ಸಲ್ಟೆನ್ಸಿ ಟೆಂಡರ್‌ನ್ನು **ದಿ:23.03.2021ರ ಸಂಜೆ 4.00** ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್‌ನ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ವ ತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/ADM/MCA/1058/20-21 dt. 15.3.2021

ಕರ್ನಾಟಕ ಸರ್ಕಾರ, ಜಿಲ್ಲಾ ಪಂಚಾಯಿತಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ : 08262–220936 ಫ್ಯಾಕ್ಸ್ ನಂ : 08262–221936 E-Mail : zpedckm@rediffmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 13/ಸಅ1/2020–21 ದಿ: 09.03.2021

:–ಅಲ್ಪಾವಧಿ ಟೆಂಡರ್ ಪ್ರಕಟಣೆ:–

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು , ಕಡೂರು, ತರೀಕೆರೆ ಮತ್ತು ಅಜ್ಜಂಪುರ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂದಿಸಿದಂತೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಮೊತ್ತ ರೂ. 20.00 ಲಕ್ಷಗಳು ಮತ್ತು ಕನಿಷ್ಟ ಮೊತ್ತ ರೂ 10.50 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document- KW 1 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿದ ಡಾಕ್ಯೂಮೆಂಟ್ ಗಳನ್ನು ದಿನಾಂಕ: **15.03.2021 ರಿಂದ 29.03.2021 ರ** ವರೆಗೆ ಸಂಜೆ 5.00 ಗಂಟೆಯೊಳಗೆ ಭರ್ತಿಮಾಡಿ ಅಪ್ ಲೋಡ್ ಮಾಡುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ 31.03.2021 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು www.eproc.karnataka.gov.in ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ತೀವ್ರ ಹಿಂಸಾಚಾರ: ಸ್ಥಳೀಯ ಪೊಲೀಸರ ಬದಲು ಸೇನೆಗೆ ಭದ್ರತೆ ವ್ಯವಸ್ಥೆ ನಿಯಂತ್ರಣ

ಮ್ಯಾನ್ಮಾರ್‌ನ ಕೆಲವೆಡೆ 'ಮಾರ್ಷಿಯಲ್ ಲಾ'

ಯಾಂಗೂನ್(ಎಪಿ, ಎಎಫ್‌ಪಿ, ರಾಯಿಟರ್ಸ್): ಮ್ಯಾನ್ಮಾರ್ ಮಿಲಿಟರಿ ಆಡಳಿತವು ಯಾಂಗೂನ್ ನಗರದ ಆರು ಟೌನ್‌ಶಿಪ್‌ಗಳಲ್ಲಿ 'ಮಾರ್ಷಿಯಲ್ ಲಾ' ಜಾರಿಗೊಳಿಸಲಾಗಿದೆ.

ಮಿಲಿಟರಿ ಆಡಳಿತದ ವಿರುದ್ಧ ಪ್ರತಿಭಟನೆ ದಿನೇ ದಿನೇ ತೀವ್ರಗೊಳ್ಳುತ್ತಿರುವುದರಿಂದ ಮತ್ತು ಹಿಂಸಾಚಾರ ಹತ್ತಿಕ್ಕಲು ಈ ಕ್ರಮಕೈಗೊಳ್ಳಲಾಗಿದೆ.

ಯಾಂಗೂನ್‌ನ ಉತ್ತರ ಡಾಗೋನ್, ದಕ್ಷಿಣ ಡಾಗೋನ್, ಡಾಗೋನ್ ಸೈಕ್ಕನ್, ಉತ್ತರ ಒಕ್ಕಳಪಾ, ಹ್ಲೈಂಗ್ ಥಾರ್ ಯಾರ್ ಮತ್ತು ಶ್ವೆಪ್ಯಿಥಾನಲ್ಲಿ ಭಾನುವಾರದಿಂದ 'ಮಾರ್ಷಿಯಲ್ ಲಾ' ಘೋಷಿಸಲಾಗಿದೆ.

ಫೆಬ್ರುವರಿ 1ರಂದು ಸೇನೆ ಆಡಳಿತವನ್ನು ವಹಿಸಿಕೊಂಡ ಬಳಿಕ, ದೇಶದಾದ್ಯಂತ ತುರ್ತು ಪರಿಸ್ಥಿತಿ ಜಾರಿಗೊಳಿಸಲಾಗಿತ್ತು. ಈ ಮೂಲಕ ಎಲ್ಲ ಸರ್ಕಾರಿ ಇಲಾಖೆಗಳ ನಿಯಂತ್ರಣವನ್ನು ಸೇನೆ ವಹಿಸಿಕೊಂಡಿತ್ತು. ಆದರೆ, ಈಗ ಜಾರಿಗೊಳಿಸಲಾಗಿರುವ 'ಮಾರ್ಷಿಯಲ್ ಲಾ' ಅನ್ವಯ ಸ್ಥಳೀಯ ಪೊಲೀಸರ ಬದಲು ಸೇನೆಯೇ ನೇರವಾಗಿ ಭದ್ರತೆಯ ವ್ಯವಸ್ಥೆಯ ನಿಯಂತ್ರಣವನ್ನು ತೆಗೆದುಕೊಳ್ಳಲಿದೆ.

ಯಾಂಗೂನ್ ಪ್ರಾದೇಶಿಕ ಕಮಾಂಡರ್‌ಗೆ ಆಡಳಿತಾತ್ಮಕ, ನ್ಯಾಯಾಂಗ ಮತ್ತು ಸೇನಾ ಅಧಿಕಾರವನ್ನು ನೀಡಲಾಗಿದೆ.

ಭಾನುವಾರ ನಡೆದ ಹಿಂಸಾಚಾರದಲ್ಲಿ 38 ಮಂದಿಯನ್ನು ಹತ್ಯೆ ಮಾಡಲಾಗಿದೆ. ಹಲವರು ಗಾಯಗೊಂಡಿದ್ದಾರೆ ಎಂದು 'ಅಸಿಸ್ಟೆನ್ಸ್ ಅಸೋಸಿಯೇಷನ್ ಫಾರ್ ಪಾಲಿಟಿಕಲ್ ಪ್ರಿಸನರ್ಸ್' (ಎಎಪಿಪಿ) ಎನ್ನುವ ಸಂಸ್ಥೆ ತಿಳಿಸಿದೆ.

ಮ್ಯಾನ್ಮಾರ್‌ನ ಹಲವೆಡೆ ಮೊಬೈಲ್ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ಇಂಟರ್‌ನೆಟ್ ಸೇವೆ ವ್ಯತ್ಯಯದಿಂದಾಗಿ ನ್ಯಾಯಾಲಯದಲ್ಲಿ ಆಂಗ್ ಸಾನ್ ಸೂಕಿ ಅವರ ವಿಚಾರಣೆ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಸಲು ಸಾಧ್ಯವಾಗಲಿಲ್ಲ. ಹೀಗಾಗಿ, ವಿಚಾರಣೆಯನ್ನು ನ್ಯಾಯಾಲಯ ಮುಂದೂಡಿದೆ.

ಫೆಬ್ರುವರಿ 1ರಂದು ಸೂಕಿ ಅವರನ್ನು ಬಂಧಿಸಲಾಗಿತ್ತು. ಅವರ ವಿರುದ್ಧ ಹಲವು ಆರೋಪಗಳನ್ನು ಹೊರಿಸಲಾಗಿದೆ.

ಮ್ಯಾನ್ಮಾರ್‌ನ ಯಾಂಗೂನ್‌ನ ನಗರದಲ್ಲಿ ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಿಂದ ಗಾಯಗೊಂಡ ಪ್ರತಿಭಟನಾಕಾರನೊಬ್ಬನನ್ನು ಕರೆದೊಯ್ಯುತ್ತಿರುವುದು.

ಮತ್ತೆ ಐವರ ಹತ್ಯೆ

ಸೇನೆಯ ಆಡಳಿತ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ಐವರ ಮೇಲೆ ಸೋಮವಾರ ಗುಂಡಿನ ದಾಳಿ ನಡೆಸಿ ಹತ್ಯೆ ನಡೆಸಲಾಗಿದೆ.

ಮಾಂಡಲೇ ಮತ್ತು ಹಖಾ ನಗರಗಳಲ್ಲಿ ಪ್ರತಿಭಟನೆ ತೀವ್ರಗೊಂಡಿದ್ದು, ರ‍್ಯಾಲಿಗಳನ್ನು ಆಯೋಜಿಸಲಾಗಿತ್ತು. ಔಂಗ್ಲಾನ್ ನಗರದಲ್ಲಿ ಇಬ್ಬರು ಮತ್ತು ಮ್ಯಿಂಗ್ಯಾನ್‌ನಲ್ಲಿ ಮೂವರು ಸಾವಿಗೀಡಾಗಿದ್ದಾರೆ ಎಂದು ವರದಿಯಾಗಿದೆ.

ಚೀನಾ ಕಾರ್ಖಾನೆಗಳ ಧ್ವಂಸ: ಆತಂಕ

ಮ್ಯಾನ್ಮಾರ್‌ನ ಯಾಂಗೂನ್‌ನಲ್ಲಿ ಚೀನಾ ಮೂಲದ 32 ಕಾರ್ಖಾನೆಗಳನ್ನು ಸೋಮವಾರ ಧ್ವಂಸಗೊಳಿಸಲಾಗಿದ್ದು, ಅಪಾರ ಹಾನಿಯಾಗಿದೆ.

ಈ ಘಟನೆಯಲ್ಲಿ ಚೀನಾದ ಇಬ್ಬರು ಕಾರ್ಮಿಕರು ಗಾಯಗೊಂಡಿದ್ದಾರೆ. ಮ್ಯಾನ್ಮಾರ್‌ನಲ್ಲಿ ಚೀನಾ ನಾಗರಿಕರ ಸುರಕ್ಷತೆ ಬಗ್ಗೆ ಚೀನಾ ಕಳವಳ ವ್ಯಕ್ತಪಡಿಸಿದೆ.

ಚೀನಾ ನಾಗರಿಕರು ಮತ್ತು ಸಂಸ್ಥೆಗಳ ಸುರಕ್ಷತೆಗೆ ಮ್ಯಾನ್ಮಾರ್ ಆಡಳಿತ ಕ್ರಮಕೈಗೊಳ್ಳಬೇಕು ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಝಾವೋ ಲಿಜಿಯಾನ್ ಒತ್ತಾಯಿಸಿದ್ದಾರೆ.

ಮ್ಯಾನ್ಮಾರ್ ಸೇನೆಗೆ ಚೀನಾ ಬೆಂಬಲ ನೀಡಿರುವುದರಿಂದಲೇ ಪ್ರತಿಭಟನಾಕಾರರು ಈ ರೀತಿಯ ಕೃತ್ಯಕ್ಕೆ ಇಳಿದಿದ್ದಾರೆ ಎಂದು ಹೇಳಲಾಗಿದೆ. 'ವ್ಯಾಪಾರ–ಉದ್ಯಮಗಳನ್ನು ರಕ್ಷಿಸಿಕೊಳ್ಳಬೇಕಾದರೆ ಸೇನಾ ಬೆಂಬಲ ನೀಡುವುದನ್ನು ಚೀನಾ ನಿಲ್ಲಿಸಬೇಕು' ಎಂದು ನಾಯಕಿ ಥಿಂಜಾರ್ ಶುನ್ಲೆಯಿ ಯಿ ಟ್ವೀಟ್ ಮಾಡಿದ್ದಾರೆ.

ಬ್ರಿಟನ್‌ನಲ್ಲಿ ಜನಾಂಗೀಯ ನಿಂದನೆ: ಅಗತ್ಯವಿದ್ದಾಗ ಚರ್ಚೆ– ಜೈಶಂಕರ್

ನವದೆಹಲಿ: 'ಬ್ರಿಟನ್‌ನಲ್ಲಿ ನಡೆದ ಜನಾಂಗೀಯ ನಿಂದನೆ ಮತ್ತು ಸೈಬರ್ ಬೆದರಿಕೆಗೆ ಸಂಬಂಧಿಸಿದಂತಹ ಪ್ರಕರಣಗಳ ಚರ್ಚೆಯನ್ನು ಭಾರತ ಅಗತ್ಯವಿದ್ದಾಗ ಕೈಗೆತ್ತಿಕೊಳ್ಳಲಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಸೋಮವಾರ ರಾಜ್ಯಸಭೆಗೆ ತಿಳಿಸಿದರು.

'ಭಾರತ, ಮಹಾತ್ಮ ಗಾಂಧಿಯವರ ಜನ್ಮಭೂಮಿ' ಎಂದು ಬಣ್ಣಿಸಿದ ಸಚಿವರು, 'ನಮ್ಮ ದೇಶ ಎಂದಿಗೂ ಜನಾಂಗೀಯ ಭೇದದಂತಹ ವಿಚಾರಗಳ ಬಳಿ ಸುಳಿಯುವುದಿಲ್ಲ' ಎಂದರು.

ಸೈಬರ್ ಬೆದರಿಕೆ ಮತ್ತು ಜನಾಂಗೀಯ ನಿಂದನೆಗೆ ಸಂಬಂಧಿಸಿದಂತೆ ಬ್ರಿಟನ್‌ನ ಆಕ್ಸ್‌ಫರ್ಡ್ ವಿವಿ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸ್ಥಾನಕ್ಕೆ ಮಣಿಪಾಲ ಮೂಲದ ರಶ್ಮಿ ಸಾಮಂತ್ ಅವರು ರಾಜೀನಾಮೆ ನೀಡಿರುವ ಕುರಿತು 'ಶೂನ್ಯ ವೇಳೆ'ಯಲ್ಲಿ ಬಿಜೆಪಿ ಸದಸ್ಯ ಅಶ್ವಿನಿ ವೈಷ್ಣವ್ ಕಳವಳ ವ್ಯಕ್ತಪಡಿಸಿದರು.

ಇದಕ್ಕೆ ಪ್ರಕ್ರಿಯಿಸಿದ ಸಚಿವ ಜೈಶಂಕರ್, 'ಈ ವಿಚಾರದಲ್ಲಿ ಸದಸ್ಯರ ಅಭಿಪ್ರಾಯವನ್ನು ಗಮನಿಸಿದ್ದೇನೆ. ಭಾರತ, ಬ್ರಿಟನ್‌ನೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದೆ. ಇಂಥ ವಿಷಯಗಳನ್ನು ಅಗತ್ಯವಿದ್ದಾಗ ಭಾರತ ಕೈಗೆತ್ತಿಕೊಳ್ಳಲಿದೆ' ಎಂದು ಸಚಿವರು ಭರವಸೆ ನೀಡಿದರು.

ಮಣಿಪಾಲ ಮೂಲದ ರಶ್ಮಿ ಸಾಮಂತ್ ಅವರು, ಕಳೆದ ತಿಂಗಳು, ಬ್ರಿಟನ್‌ನ ಆಕ್ಸ್‌ಫರ್ಡ್ ಯೂನಿವರ್ಸಿಟಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅಧ್ಯಕ್ಷರಾಗಿ ಆಯ್ಕೆಯಾದ ಐದು ದಿನಗಳಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಮಕ್ಕಳ ಆರೈಕೆ ಮತ್ತು ರಕ್ಷಣೆ' ಮಸೂದೆ ತಿದ್ದುಪಡಿಗಾಗಿ ಮಂಡನೆ

ನವದೆಹಲಿ(ಪಿಟಿಐ): ಮಕ್ಕಳ ರಕ್ಷಣೆಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿಗಳ ಪಾತ್ರವನ್ನು ಹೆಚ್ಚಿಸುವ ಬಾಲನ್ಯಾಯ ಮಂಡಳಿ ಕಾಯ್ದೆ–2015 (ಮಕ್ಕಳ ಆರೈಕೆ ಮತ್ತು ರಕ್ಷಣೆ) ಮಸೂದೆಯನ್ನು ತಿದ್ದುಪಡಿಗಾಗಿ ಸೋಮವಾರ ಲೋಕಸಭೆಯಲ್ಲಿ ಮಂಡಿಸಲಾಯಿತು.

ಮಸೂದೆ ಮಂಡನೆಯ ವೇಳೆಯಲ್ಲಿ ಕಾಂಗ್ರೆಸ್ ಸಂಸದ ಶಶಿ ತರೂರ್ ಮಸೂದೆ ವಿರೋಧಿಸಿದರು.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟದೆ)
No:SEE/O&M/KLB/EE/(o)/AEE1/2020-21/CYS-216 Dtd:: 10.03.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್ಮೆಂಟ್ ಮೂಲಕ ಮಾತ್ರ)

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಕಾರ್ಯ ಮತ್ತು ಪಾಲನೆ ವೃತ್ತ ಕಲಬುರ್ಗಿಯು ಯಾದಗಿರ ವಿಭಾಗಕ್ಕೆ ಅಗತ್ಯವಿರುವ 11 KV 200 Amps ಸಿಂಗಲ್ ಬ್ರೇಕ್ G.O.S (with long and short pipes and without H-Frame) ಸೆಟಗಳನ್ನು ತಯಾರಿಸಿ, ಪರೀಕ್ಷಿಸಿ ಸರಬರಾಜು ಮಾಡಲು ಅರ್ಹ ಬಿಡ್ಡುದಾರರಿಂದ ದ್ವಿ–ದಸ್ತಾವೇಜು ಪದ್ಧತಿಯಲ್ಲಿ ಈ–ಪ್ರೊಕ್ಯುರ್ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಬಿಡ್ ದಸ್ತಾವೇಜಗಳನ್ನು ದಿನಾಂಕ **16.03.2021** ರಂದು ಅಥವಾ ನಂತರ https://eproc.karnataka.gov.in ಗೆ ಭೇಟಿ ನೀಡಿ ಪಡೆಯಬಹುದು.

ಸಹಿ/– ಅಧೀಕ್ಷಕ ಅಭಿಯಂತರರು ಕಾರ್ಯ ಮತ್ತು ಪಾಲನೆ ವೃತ್ತ, ಗುವಿಸಕಂ. ಕಲಬುರ್ಗಿ

ವಿದ್ಯುತ್ ಸಂಬಂಧಿತ ದೂರುಗಳಿಗೆ 1912 ಗೆ ಕರೆ ಮಾಡಿ **URJA MITRA APP** ಡೌನಲೋಡ್ ಮಾಡಿಕೊಳ್ಳಿ



ಸುಭಾಷಿತ

ಜಾತಿ ಜಾತಿಯೊಳಗೆ ಜನಕೆಲ್ಲ ಹಗೆ, ಹೆರರಿಗಿದು ನಗೆ,
ನಮಗಿದು ದಗೆ.

-ಪಂಜೆ ಮಂಗೇಶರಾಯರು

ಸಾಂಸ್ಕೃತಿಕ ವಲಯಕ್ಕೆ ಅನುದಾನ ಸರ್ಕಾರ ಚೌಕಾಸಿ ಮಾಡಬಾರದು

ತಂತ್ರಜ್ಞಾನ ಯುಗದಲ್ಲಿ ಕನ್ನಡ ಭಾಷೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ 'ಕನ್ನಡ ಕಾಯಕ ವರ್ಷ' ಆಚರಿಸುವುದಾಗಿ 65ನೇ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಘೋಷಿಸಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ತಮ್ಮ ಹೇಳಿಕೆಗೆ ವ್ಯತಿರಿಕ್ತವಾಗಿ ನಡೆದುಕೊಂಡಿರುವುದು ಬಜೆಟ್‌ನಲ್ಲಿ ಒದಗಿಸಿರುವ ಅನುದಾನದಲ್ಲಿ ಎದ್ದು ಕಾಣುತ್ತಿದೆ. ಕನ್ನಡದ ನಾಡು-ನುಡಿ, ಸಂಸ್ಕೃತಿಗೆ ಸಂಬಂಧಿಸಿದ ಸಂಸ್ಥೆಗಳ ಅನುದಾನದಲ್ಲಿ ಭಾರಿ ಕಡಿತ ಮಾಡಿರುವುದು, ಕನ್ನಡದ ನಾಳೆಗಳ ಬಗೆಗಿನ ಅವರ ಕಾಳಜಿಯನ್ನೇ ಅನುಮಾನಿಸುವಂತಿದೆ ಹಾಗೂ 'ಕನ್ನಡ ಕಾಯಕ ವರ್ಷ'ದ ಅಣಕದಂತಿದೆ.

ನಾಡು-ನುಡಿ ಮತ್ತು ಗಡಿಗೆ ಸಂಬಂಧಿಸಿದ ಕೆಲಸಗಳಿಗೆ ಅನುದಾನ ಕಡಿತ ಮಾಡಿರುವ ಸರ್ಕಾರದ ತೀರ್ಮಾನ ಅಸಮರ್ಪಕವಾದುದು ಹಾಗೂ ಕನ್ನಡ ಸಂಸ್ಕೃತಿಯ ಚಟುವಟಿಕೆಗಳನ್ನು ನಿರುತ್ಸಾಹ ಗೊಳಿಸುವಂತಹುದು

ನಾಡು-ನುಡಿ ಮತ್ತು ಗಡಿಗೆ ಸಂಬಂಧಿಸಿದ ಕೆಲಸಗಳಿಗೆ ಅನುದಾನ ಕಡಿತ ಮಾಡಿರುವ ಸರ್ಕಾರದ ತೀರ್ಮಾನ ಅಸಮರ್ಪಕವಾದುದು ಹಾಗೂ ಕನ್ನಡ ಸಂಸ್ಕೃತಿಯ ಚಟುವಟಿಕೆಗಳನ್ನು ನಿರುತ್ಸಾಹಗೊಳಿಸುವಂಥದ್ದು. ಜಾತಿಗಳ ಹೆಸರಿನಲ್ಲಿ ರೂಪಿಸಿರುವ ಮರಾಠಾ ನಿಗಮಕ್ಕೆ ₹ 50 ಕೋಟಿ, ವೀರಶೈವ ಮತ್ತು ಒಕ್ಕಲಿಗ ನಿಗಮಗಳಿಗೆ ತಲಾ ₹ 500 ಕೋಟಿ ಮೀಸಲಿಟ್ಟಿರುವ ಸರ್ಕಾರ, ಅಲ್ಪಸಂಖ್ಯಾತರಿಗೆಂದು ₹ 1,500 ಕೋಟಿ ಹಂಚಿಕೆ ಮಾಡಿದೆ. ಜಾತಿ ನಿಗಮಗಳ ವಿಷಯದಲ್ಲಿ ಧಾರಾಳಿಯಾಗಿರುವ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ ₹ 2 ಕೋಟಿ ಮತ್ತು ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 5 ಕೋಟಿ ಗೊತ್ತುಪಡಿಸಿದೆ. ನಾಡಿನ ಐತಿಹಾಸಿಕ ಪರಂಪರೆಯನ್ನು ಬಿಂಬಿಸುವ ಹಂಪಿ, ಕದಂಬ ಉತ್ಸವಗಳಿಗೆ ಹಣವನ್ನು ಗೊತ್ತುಪಡಿಸುವ ಗೋಜಿಗೇ ಹೋಗಿಲ್ಲ. ಈ ಅತಾರ್ಕಿಕ ಹಂಚಿಕೆಯನ್ನು ಗಮನಿಸಿದರೆ, ಜಾತಿ ರಾಜಕಾರಣದ ಎದುರು ಭಾಷೆ-ಸಂಸ್ಕೃತಿಯ ಪಾತ್ರ ಅತ್ಯಂತ ಗೌಣವಾದುದು ಎಂದು ಸರ್ಕಾರ ಭಾವಿಸಿರುವಂತಿದೆ. ರಾಜ್ಯದಲ್ಲಿ ಆಡಳಿತ ನಡೆಸಿರುವ ಈವರೆಗಿನ ಎಲ್ಲ ಸರ್ಕಾರಗಳೂ ನಾಡು- ನುಡಿ ಅಭಿವೃದ್ಧಿಯನ್ನು ಆದ್ಯತೆಯ ವಿಷಯವಾಗಿ ಪರಿಗಣಿಸಿಲ್ಲ. ಆದರೆ, ಕನ್ನಡ ಸಂಸ್ಕೃತಿಗೆ ಸಂಬಂಧಿಸಿದ ಹಣವನ್ನು ಹೀಗೆ ಒಮ್ಮೆಗೇ ಕಡಿತಗೊಳಿಸಿ, ಮತ್ತೊಂದೆಡೆ ಜಾತಿ ನಿಗಮಗಳ ಬಗ್ಗೆ ಇಷ್ಟೊಂದು ಉದಾರವಾಗಿ ನಡೆದುಕೊಂಡ ಉದಾಹರಣೆಗಳೂ ಇಲ್ಲ. ಸಂಸ್ಕೃತಿ, ಪರಂಪರೆ ರಕ್ಷಣೆಯ ಬಗ್ಗೆ ವೀರಾವೇಶದಿಂದ ಮಾತನಾಡುವ ಪಕ್ಷದ ನೇತೃತ್ವದ ಸರ್ಕಾರವೇ ಆ ಕ್ಷೇತ್ರವನ್ನು ದುರ್ಬಲಗೊಳಿಸಲು ಹೊರಟಿರುವುದು ಮಾತು ಮತ್ತು ಕೃತಿಯ ನಡುವೆ ತಾಳಮೇಳ ತಪ್ಪಿರುವುದಕ್ಕೆ ಉದಾಹರಣೆಯಂತಿದೆ.

ಮುಖ್ಯಮಂತ್ರಿ ಪ್ರಕಟಿಸಿರುವ 'ಕನ್ನಡ ಕಾಯಕ ವರ್ಷ'ದ ಪರಿಕಲ್ಪನೆ ಆಕರ್ಷಕವಾಗಿದೆ. ನಮ್ಮ ಬದುಕನ್ನು ಆವರಿಸಿಕೊಂಡಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಕನ್ನಡವನ್ನು ಅಭಿವೃದ್ಧಿಪಡಿಸುವುದು ಅನಿವಾರ್ಯ ಎಂದು ಹೇಳಿದ್ದ ಮುಖ್ಯಮಂತ್ರಿ, ಕನ್ನಡದ ಕೆಲಸ ವರ್ಷಪೂರ್ತಿ ಸಾಗುವಂತಾಗಲು ಸ್ಪಷ್ಟವಾದ ಕಾರ್ಯಸೂಚಿ ಅಗತ್ಯ ಎಂದು ಹೇಳಿದ್ದರು. ಆದರೆ, ಮಾರ್ಚ್ 8ರಂದು ಅವರು ಮಂಡಿಸಿದ ಬಜೆಟ್‌ನಲ್ಲಿ ಕನ್ನಡದ ನಾಳೆಗಳನ್ನು ಭವ್ಯವಾಗಿ ಕಟ್ಟುವ ಕಾರ್ಯಸೂಚಿಯ ಮಾತಿರಲಿ, ಯಥಾಸ್ಥಿತಿ ಕಾಪಾಡಿಕೊಂಡು ಹೋಗುವ ಉದ್ದೇಶವೂ ಇದ್ದಂತೆ ಕಾಣುತ್ತಿಲ್ಲ. 2020-21ರ ಬಜೆಟ್‌ನಲ್ಲಿ ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ವಲಯಕ್ಕೆ ₹ 4,552 ಕೋಟಿ ಮೀಸಲಿರಿಸಲಾಗಿತ್ತು. ಈ ಬಾರಿ ಆ ಪ್ರಮಾಣ ₹ 2,645 ಕೋಟಿಗೆ ಇಳಿದಿರುವುದು ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಬಗೆಗಿನ ಸರ್ಕಾರದ ಕಾಳಜಿಯ ಬಗ್ಗೆ ಅನುಮಾನ ಮೂಡಿಸುವಂತಿದೆ. ಕನ್ನಡಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವ ಉದ್ದೇಶದ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಅನುದಾನ ಕಡಿತಗೊಳಿಸಿದ್ದ ಸರ್ಕಾರದ ನಿರ್ಧಾರವೂ ಇತ್ತೀಚೆಗೆ ಕನ್ನಡ ಪ್ರೇಮಿಗಳ ಅಸಮಾಧಾನಕ್ಕೆ ಗುರಿಯಾಗಿತ್ತು. ಕೊರೊನಾ ಕಾರಣದಿಂದಾಗಿ ಎದುರಾಗಿರುವ ಹಣಕಾಸಿನ ಬಿಕ್ಕಟ್ಟಿನ ಬಗ್ಗೆ ಸರ್ಕಾರದ ಪ್ರತಿನಿಧಿಗಳು ಸಾರ್ವಜನಿಕವಾಗಿ ಆಗಾಗ ಅಳಲು ತೋಡಿಕೊಳ್ಳುತ್ತಿದ್ದಾರೆ. ಆದರೆ, ಈ ಬಿಕ್ಕಟ್ಟು ಜಾತಿ ನಿಗಮಗಳು ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಹಣ ನೀಡುವ ಸಂದರ್ಭದಲ್ಲಿ ಸರ್ಕಾರಕ್ಕೆ ಎದುರಾದಂತೆ ಕಾಣಿಸುತ್ತಿಲ್ಲ. ಜಾತಿ-ಧರ್ಮದ ವಿಷಯದಲ್ಲಿ ಕೊಡುಗೈಯಾಗಿರುವ ಸರ್ಕಾರಕ್ಕೆ, ಭಾಷೆಯ ಸಂದರ್ಭದಲ್ಲಿ ಮಾತ್ರ ಆರ್ಥಿಕ ಬಿಕ್ಕಟ್ಟು ನೆನಪಾಗುತ್ತದೆ. ಈ ವೈರುಧ್ಯದಿಂದ ಸರ್ಕಾರ ಹೊರಬರಬೇಕು ಹಾಗೂ ಸಾಂಸ್ಕೃತಿಕ ವಲಯಕ್ಕೆ ಅನುದಾನ ನೀಡುವಲ್ಲಿ ಚೌಕಾಸಿ ಮಾಡಬಾರದು.

ನಾನಾ ಕಾರಣಗಳಿಂದ ಕೊರಗುತ್ತಿದ್ದ ರೈತ ಸಂಕುಲ ಈಗ ಒಗ್ಗಟ್ಟಿನ ಮಾತನಾಡುತ್ತಿದೆ

ಚಳವಳಿ ಮಣ್ಣಿನಲಿ ರೈತರ ಬಿತ್ತನೆ

ಗತಿಬಿಂಬ

ವೈ.ಗ.ಜಗದೀಶ್

'ಕರಿಯರದೊ ಬಿಳಿಯರದೊ ಯಾರಾದರೆ ಏನು?/ ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ/ ವಿಜಯನಗರವೋ? ಮೊಗಲ್ವರಾಳಿಕೆಯೋ? ಇಂಗ್ಲೀಷರೋ/ ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ/ ಕತ್ತಿ ಪರದೇಶಿಯಾದರೆ ಮಾತ್ರ ನೋವೇ/ ನಮ್ಮವರೆ ಹದಹಾಕಿ ತಿವಿದರದು ಹೂವೆ?. . .'

ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಿದ ಆರೇಳು ವರ್ಷಗಳ ಆಸುಪಾಸಿನಲ್ಲಿ ಕುವೆಂಪು ಬರೆದ 'ರೈತನ ದೃಷ್ಟಿ' (ಕೋಗಿಲೆ ಮತ್ತು ಸೋವಿಯಟ್ ರಷ್ಯ-1954) ಕವಿತೆಯ ಸಾಲುಗಳಿವು. ಕವಿತೆ ಬರೆದು ದಶಕಗಳೇ ಸವೆದು ಹೋದರೂ ದೇಶಕ್ಕೆ ಅನ್ನ ಕೊಡುವವರ ಬದುಕಿನಲ್ಲಿ ಗಮನಾರ್ಹ ಬದಲಾವಣೆಗಳೇನೂ ಆಗಿಲ್ಲ. 'ಬೇಸಾಯ- ನೀ ಸಾಯ, ಮನೆಮಂದಿಯೆಲ್ಲ ಸಾಯ' ಎಂಬ ದೈನೇಸಿ ಸ್ಥಿತಿಯಲ್ಲೇ ರೈತರು ಏದುಸಿರು ಬಿಡುತ್ತಿದ್ದಾರೆ. ರೈತೋದ್ಧಾರಕ್ಕಾಗಿ ಆಧುನಿಕ ಕೃಷಿ ಪದ್ಧತಿ ಜಾರಿಗೆ ತರುವುದು ಸರ್ಕಾರದ ಕರ್ತವ್ಯ. ಉದ್ಯಮಿಗಳ ವಕಾಲತ್ತಿಗೆ ನಿಂತಂತಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಮಣ್ಣು ಹಿಂಡಿದರೆ ಧಾನ್ಯ ಉದುರುವಂತಹ ಕೃಷಿಭೂಮಿಯನ್ನು ಉದ್ಯಮಿಗಳಿಗೆ ಧಾರೆ ಎರೆದು ರೈತರನ್ನು ಕಾಯಂ ಕೂಲಿಗಳಾಗಿಸುವತ್ತ ಮುಂದಡಿ ಇಟ್ಟಂತಿದೆ.

ಎಚ್ಚೆತ್ತುಕೊಂಡ ರೈತ ಸಮುದಾಯ ಬೀದಿಗೆ ಇಳಿದಿದ್ದು, ವಿಶ್ವದ ಗಮನ ಸೆಳೆಯುವಲ್ಲಿಯೂ ಯಶಸ್ವಿಯಾಗಿದೆ. ಉತ್ತರದ ನೆಲದಲ್ಲಿ ಚಳವಳಿ ಬಿರುಸುಗೊಳಿಸಿರುವ ರೈತರು ಈ ಹೋರಾಟದ ಕಾವನ್ನು ದಕ್ಷಿಣಕ್ಕೂ ಬಿತ್ತರಿಸುವ ಕಾಯಕಕ್ಕೆ ಮುಂದಾಗಿದ್ದಾರೆ.

ಹೋರಾಟದ ದಕ್ಷಿಣಾ ಪಥ ಸಂಚಲನಕ್ಕೆ ಶಿವಮೊಗ್ಗ-ಯಲ್ಲಿ ಮುನ್ನುಡಿ ಬರೆಯಲು ರೈತರು ಅಣಿಯಾಗಿದ್ದಾರೆ. ಶಿವಮೊಗ್ಗ-ಭದ್ರಾವತಿ ಅವಳಿ ನಗರಗಳ ಮಗ್ಗುಲಿನಲ್ಲಿ ಹರಿವ ತುಂಗೆ-ಭದ್ರೆಗಳು ಕೂಡಲಿಯಲ್ಲಿ ಸಂಗಮವಾಗಿ ತುಂಗಭದ್ರಾ ನದಿಯಾಗಿ ಉತ್ತರಕ್ಕೆ ಹರಿಯುತ್ತವೆ. ಬೇರೆಯೇ ಆಗಿದ್ದ ತುಂಗೆ-ಭದ್ರೆ ಕೂಡಿಕೊಂಡಂತೆ ರೈತ ಹೋರಾಟವೂ ಹಲವು ತೊರೆಗಳಾಗಿ ಹರಿದು, ಮತ್ತೆ ಕೂಡಿ ಹರಿಯುವ ಜಾಯಮಾನಕ್ಕೆ ಒಗ್ಗಿಕೊಂಡಿದೆ. ರಾಜ್ಯ ರೈತ ಸಂಘದ ಸಂಸ್ಥಾಪಕರಲ್ಲಿ ಒಬ್ಬರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ನಿಧನದ ಬಳಿಕ ಛಿದ್ರವಾಗಿದ್ದ ರೈತ ಸಂಘವು ತುಂಗ-ಭದ್ರೆಯ ಸಂಗಮದಂತೆ ಒಗ್ಗೂಡಿರುವುದು ಹೊಸ ಪರಿವರ್ತನೆ.

ನಾಡಿನಲ್ಲಿ ಅನೇಕ ಪರಿವರ್ತನೆಗಳನ್ನು ತಂದ ಹಲವು ಹೋರಾಟಗಳಿಗೆ ಶಿವಮೊಗ್ಗದ ನೆಲವೇ ಗರ್ಭಭೂಮಿ.

ಜಮೀನು ಹೊಂದಿದ್ದ ಭೂಮಾಲೀಕರು ತಾವು ಉಳುಮೆ ಮಾಡದೇ ಅದನ್ನು ಗೇಣಿ ರೂಪದಲ್ಲಿ ರೈತರಿಗೆ ಕೊಡುವ ಪದ್ಧತಿ ಚಾಲ್ತಿಯಲ್ಲಿದೆ. ಸರ್ಕಾರದ ಮಾಪನದಂತೆ ಭತ್ತ ಅಳೆಯಲು ಬಳಸುತ್ತಿದ್ದ ಕೊಳಗದ-ಲ್ಲಿದ್ದ ವ್ಯತ್ಯಾಸ, ಗೇಣಿ ಪಾವತಿಸಿದ್ದಕ್ಕೆ ರಶೀದಿ ಕೊಡದೇ ಮೋಸ ಮಾಡುತ್ತಿದ್ದುದು, ಭೂಮಾಲೀಕರ ಜಮೀನಿನಲ್ಲಿ ಬಿಟ್ಟಿ ದುಡಿಮೆ... ಇವನ್ನೆಲ್ಲ ಪ್ರತಿರೋಧಿಸಿ 1951ರಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕಾಗೋಡು ಎಂಬ ಹಳ್ಳಿಯಲ್ಲಿ ಶುರುವಾದ ಹೋರಾಟ ದೇಶದಲ್ಲೇ ಹೆಸರು ಮಾಡಿತು. ಸಮಾಜವಾದಿ ಚಳವಳಿ ನೇತಾರರಾದ ರಾಮಮನೋಹರ ಲೋಹಿಯಾ ಅವರು ಚಳವಳಿಯಲ್ಲಿ ಭಾಗಿಯಾಗಿದ್ದರಿಂದ ದೇಶದಲ್ಲೇ ಸಂಚಲನ ಉಂಟಾಯಿತು. ಉಳುವವನೇ ಭೂ ಒಡೆಯ ಆಶಯದ ಭೂಸುಧಾರಣೆ ಕಾಯ್ದೆ ಕರ್ನಾಟಕದಲ್ಲಿ ಮಾತ್ರವಲ್ಲದೆ, ದೇಶದಲ್ಲೇ ಜಾರಿಯಾಗಲು ಈ ಹೋರಾಟ ಪ್ರೇರಣೆ ನೀಡಿತು. ಭವಿಷ್ಯದಲ್ಲಿ ಕರ್ನಾಟಕವನ್ನು ರಾಜಕೀಯವಾಗಿ ಹಾಗೂ ಸಾಹಿತ್ಯಕವಾಗಿ ಆಳಿದ ಅನೇಕರು ಕಾಗೋಡು ಸತ್ಯಾಗ್ರಹ ಮತ್ತು ಈ ಹೋರಾಟಕ್ಕೆ ಸೈದ್ಧಾಂತಿಕ ಬೆನ್ನೆಲುಬು ಒದಗಿಸಿದ್ದ ಸಮಾಜವಾದಿ ಚಳವಳಿಯಲ್ಲೇ ಪಳಗಿದವರು ಎಂಬುದು ಇತಿಹಾಸ.

ತುಳಿತಕ್ಕೆ ಒಳಗಾದವರ ನೋವಿಗೆ ಧ್ವನಿಯಾಗಲು ಸಮರ್ಥ ಸಂಘಟನೆ ಇರಲಿಲ್ಲ. ಭದ್ರಾವತಿಯಲ್ಲಿ ಅಧ್ಯಾಪಕರಾಗಿದ್ದ ಪ್ರೊ.ಬಿ.ಕೃಷ್ಣಪ್ಪನವರು ಇದಕ್ಕೊಂದು ಸಂಘಟನೆಯ ಆಸರೆ ಕಲ್ಪಿಸಿದರು. ಹೀಗೆ ರೂಪುಗೊಂಡ ದಲಿತ ಸಂಘರ್ಷ ಸಮಿತಿಯು ಪರಿಶಿಷ್ಟ ಸಮುದಾಯದವರ ಸ್ವಾಭಿಮಾನ, ಅಸ್ಮಿತೆ ಮತ್ತು ಪ್ರತಿಭಟನೆಗೆ ಧ್ವನಿಯಾಯಿತು. ನೋವನ್ನೇ ಉಂಡು, ನೋವನ್ನೇ ಹೊದ್ದು ಮಲಗುತ್ತಿದ್ದ ಪರಿಶಿಷ್ಟ ಸಮುದಾಯದವರಲ್ಲಿ ಹೊಸ ಚೈತನ್ಯವನ್ನು ದಸಂಸ ಮೂಡಿಸಿತು. ದಲಿತ ಚಳವಳಿಗೆ ಮಾತ್ರವಲ್ಲದೇ, ಅಲ್ಲಿಯವರೆಗೆ ಸಾಹಿತ್ಯ ಕ್ಷೇತ್ರದಲ್ಲಿ 'ಅಸ್ಪೃಶ್ಯ'ರಾಗಿಯೇ ಇದ್ದ, ಅಕ್ಷರಲೋಕವನ್ನೇ ಕಾಣದಿದ್ದ ಪರಿಶಿಷ್ಟ ಸಮುದಾಯದವರ ಸಾಹಿತ್ಯ ಸೃಷ್ಟಿಗೂ ಈ ಚಳವಳಿ ಕಾರಣವಾಯಿತು.

ಕಾಗೋಡು ಚಳವಳಿಯ ತವರಾದ ಶಿವಮೊಗ್ಗ, ಕರ್ನಾಟಕ ರಾಜ್ಯ ರೈತ ಸಂಘದ ಹುಟ್ಟಿನ ನೆಲೆ ಕೂಡ.

1980ರಲ್ಲಿ ನವಲಗುಂದ-ನರಗುಂದ ರೈತರ ಹೋರಾಟ ಆರಂಭವಾಗಿತ್ತು. ಈ ಹೋರಾಟಕ್ಕೆ ಬೆಂಬಲವಾಗಿ ಶಿವಮೊಗ್ಗದಲ್ಲಿ ಎಚ್.ಎಸ್.ರುದ್ರಪ್ಪ, ಎನ್.ಡಿ. ಸುಂದರೇಶ್ ಮತ್ತು ಎಂ.ಡಿ. ನಂಜುಂಡಸ್ವಾಮಿ ನೇತೃತ್ವದಲ್ಲಿ ನಡೆದ ಚಟುವಟಿಕೆಗಳು ರೈತ ಸಂಘಕ್ಕೆ ಸಂಘಟನಾತ್ಮಕ ಸ್ವರೂಪ ನೀಡಿದವು. ಈ ಸಮಾವೇಶದ ಫಲಿತವಾಗಿ ಭದ್ರಾವತಿಯಲ್ಲಿ ರೈತರು ಸರಣಿ ಹೋರಾಟ ನಡೆಸಿ, ಜೈಲ್ ಭರೋ ಶುರು ಮಾಡಿದರು. ಇದು ರಾಜ್ಯವ್ಯಾಪಿ ಹರಡಿಕೊಂಡು ರೈತ ಸಂಘಕ್ಕೆ ಭದ್ರ ನೆಲೆ ಸಿಕ್ಕಿತು.

ರೈತ ಸಂಘಕ್ಕೆ ತಾತ್ವಿಕ ತಳಹದಿ ಹಾಕಿಕೊಟ್ಟು, ಅದಕ್ಕೆ ರಾಷ್ಟ್ರ- ಅಂತರರಾಷ್ಟ್ರೀಯ ಮನ್ನಣೆ ತಂದುಕೊಟ್ಟವರು ನಂಜುಂಡಸ್ವಾಮಿ. ರೈತ ಸಂಘ ಚುನಾವಣಾ ರಾಜಕಾರಣ ಮಾಡಲು ಹೊರಟಾಗ ಅದಕ್ಕೆ ವಿರೋಧ ವ್ಯಕ್ತಪಡಿಸಿ ಒಂದು ಗುಂಪು ಹೊರಗುಳಿದಿದ್ದು ಬಿಟ್ಟರೆ, ಎಂಡಿಎನ್ ಇರುವವರೆಗೂ ರೈತ ಸಂಘವು ನಾಡಿನ ರೈತರ ಕೊರಳ-ಧ್ವನಿಯಾಗಿಯೇ ಇತ್ತು.

ಹೀಗಾಗಿ, ವಿದೇಶಿ ಕಂಪನಿಗಳು ಕೃಷಿ ಕ್ಷೇತ್ರಕ್ಕೆ ಕಾಲಿಡತೊಡಗಿದಾಗ ರೈತ ಸಂಘ ತೀವ್ರ ರೀತಿಯ ಹೋರಾಟ ನಡೆಸಿತು. ಬಿತ್ತನೆ ಬೀಜದ ಮಾಫಿಯಾ, ಕೆಂಟುಕಿ ಚಿಕನ್, ಗೊಬ್ಬರ-ಕೀಟನಾಶಕಗಳಿಗೆ ದುಬಾರಿ ಬೆಲೆ ಹಾಗೂ ಕೃಷಿ ಉತ್ಪನ್ನಗಳಿಗೆ ಬೆಲೆ ಸಿಗದ ವಿಷಯಗಳಲ್ಲಿ ರೈತ ಸಂಘ ಹೋರಾಟದ ಮುಂಚೂಣಿಯಲ್ಲಿತ್ತು. ದಕ್ಷಿಣ-ಉತ್ತರ ಹೋರಾಟವನ್ನು ಏಕೀಭವಿಸಿ ರೈತರ ಐಕ್ಯ ಹೋರಾಟ ರೂಪಿಸಬೇಕೆಂಬ ಸಂಕಲ್ಪ ಮಾಡಿದವರು ಎಂಡಿಎನ್ ಮತ್ತು ಉತ್ತರದಲ್ಲಿ ಮಹೇಂದ್ರ ಸಿಂಗ್ ಟಿಕಾಯತ್.

ಈಗ ಮಹೇಂದ್ರ ಸಿಂಗ್ ಟಿಕಾಯತ್ ಮಗ, ರಾಕೇಶ್ ಹೋರಾಟದ ಮುಂಚೂಣಿಯಲ್ಲಿದ್ದಾರೆ. ಎಂಡಿಎನ್ ಪುತ್ರಿ ಚುಕ್ಕಿ ನಂಜುಂಡಸ್ವಾಮಿ ಮತ್ತೆ ಅಖಾಡಕ್ಕೆ ಇಳಿದಿದ್ದಾರೆ. ಕವಲುಗಳಾಗಿ ಹರಡಿದ್ದ ರೈತ ಸಂಘದ ಕೊಂಡಿಗಳು ಈಗ ನದಿಗಳೆಲ್ಲ ಸಮುದ್ರ ಸೇರುವಂತೆ ಮಹಾ ಪಂಚಾಯತ್ ಹೆಸರಿನಲ್ಲಿ ಒಂದಾಗುತ್ತಿವೆ. ಎಲ್ಲವೂ ಕೂಡಿಕೊಂಡು ದಕ್ಷಿಣದಲ್ಲಿ ರೈತ ಹೋರಾಟವನ್ನು ಮತ್ತೆ ಪ್ರಜ್ವಲಿಸುವಂತೆ ಮಾಡುವತ್ತ ಮುನ್ನಡೆಯುತ್ತಿವೆ.

ಸಂಘಟನೆಯ ಆಸರೆ, ಕೊರಳಿಗೆ ಧ್ವನಿಯಾಗು-ವವರಿಲ್ಲದೇ ಕೊರಗುತ್ತಿದ್ದ ರೈತ ಸಂಕುಲ ಒಗ್ಗಟ್ಟಿನ ಮಾತನಾಡುತ್ತಿದೆ. ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳನ್ನು ಸಂಘಟಿಸುವಲ್ಲಿ ತೊಡಗಿದ್ದ ಸಂಘಟನೆಗಳ ಪ್ರಮುಖರು ಈಗ ರೈತರಿಗೆ ಹೆಗಲು ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಹೊಸ ಮನ್ವಂತರದ ಹಾದಿಗಳ ಹೊಳಹು ಕಾಣುತ್ತಿದೆ. ಉತ್ತರದ ರೈತರ ಮನೋಬಲ ದಕ್ಷಿಣದ ರೈತರನ್ನು ಹುರಿದುಂಬಿಸಿದೆ. ರೈತರ ಏಳ್ಗೆಯನ್ನೇ ಮುಂದಿಟ್ಟು ನಡೆಯುತ್ತಿರುವ ಶಿವಮೊಗ್ಗೆಯ ಮಹಾಪಂಚಾಯತ್, ರೈತರ ಹೋರಾಟಕ್ಕೆ ಹೊಸ ಚೈತನ್ಯ ನೀಡಬೇಕು ಎಂಬ ಅಪೇಕ್ಷೆ ಸಂಘಟಕರದ್ದು. ಅದು ಕರ್ನಾಟಕಕ್ಕೆ ಸೀಮಿತವಾಗದೇ ನೆರೆಯ ರಾಜ್ಯಗಳಿಗೂ ಹರಡಿ ಅನ್ನದಾತರ ಅಳಲನ್ನು ಆಳುವವರ ಕೆಪ್ಪುಕಿವಿಗೆ ಮುಟ್ಟಿಸುವಂತಾದರೆ ಶಿವಮೊಗ್ಗೆಯ ಸಮಾವೇಶ ಸಾರ್ಥಕವಾದೀತು.

ಈ ಹೊತ್ತಿನೊಳಗೆ, 'ಹೆಸರನು ಬಯಸದೆ ಅತಿ-ಸುಖಕೆಳಸದೆ ದುಡಿವನು ಗೌರವಕಾಶಿಸದೆ' ಎಂಬ ಕುವೆಂಪು ಅವರ 'ನೇಗಿಲಯೋಗಿ'ಯ ಗೀತೆಯ ಸಾಲು ಅನುಕರಣೀಯವಾದರೆ ದೇಶಕ್ಕೆ ಒಳಿತಾದೀತು.

ಚುರುಮುರಿ

ಸಂಪತ್ತಿನ ಸಾದಿಲ್ವಾರು

• ಲಿಂಗರಾಜು ಡಿ.ಎಸ್.

'ಸಾ, ಸ್ಟೇಟು- ಸೆಂಟ್ರಲ್ ಬಜೆಟ್ಟು ಜನಕೆ ಏನೇನೋ ಕೊಟ್ಟೇವು ಅಂತ ಆಸೆ ಹುಟ್ಟಿಸವಲ್ಲ, ನಮ್ಮಗಂಟಾ ಬಂದಾವೇ ಅಂತ!' ನನ್ನ ಅನುಮಾನವನ್ನ ತುರೇಮಣೆಗೆ ಹೇಳಿಕೊಂಡೆ.

'ನೋಡ್ಲಾ, ನಮ್ಮ ಬಜೆಟ್ಟು ದೊಡ್ಡೋರ ಮನೆ ಊಟ-ಸಂಪತ್ತಿದ್ದಂಗೆ ಕೇಳಕಷ್ಟೇ ಚಂದ!' ಅಂದ್ರು.

'ದೊಡ್ಡೋರ್ ಮನೆ ಊಟ ಹ್ಯಂಗಿದ್ದ ದಯ್ಯಾ?' ಅಂತು ಯಂಟಪ್ಪಣ್ಣ.

'ಒಬ್ಬರು ಬಡ ರಾಜಕಾರಣಿ 40 ಕ್ವಾಣೆ ಮನೆಗೋಗಿದ್ರೋ. ಅವುರೆಂಡ್ರು ಬಂದು ಉಪಚಾರ ಮಾಡಿದ್ರು 'ಅಣ್ಣೆ ಚೀನಾ ಟೀ ಕುಡದೀರಾ?' ಅಂದ್ರು. ನಾವು 'ಚೀನಾ ಟೀ ಕುಡುದ್ರೆ ಕೊರೊನಾ ಬತ್ತದೆ, ಕಾಪಿ ಕೊಡಿ' ಅಂದೋ. 'ಅಣ್ಣೆ, ಕಾಪೀಗೆ ಎಮ್ಮ ಹಾಲಾಕನೋ, ಹಸೀನ ಹಾಲಾಕನೋ?' ಅಂತ ಕೇಳ್ತು. 'ಹಸಿಂದೇ ಹಾಕಿ ಕಾಪಿ ಚೆನ್ನಾಗಿರತದೆ' ಅಂದೋ ಕಲಾ' ಅಂದ್ರು.

'ಕಾಪಿ ಚೆನ್ನಾಗಿತ್ತೇನೋ?' ಅಂದೆ ನಾನು. 'ಕಾಪಿಗೆ ನಂದಿನಿ ಹಾಲೋ, ಇಲ್ಲಾ ನಾಟ ಹಸಿಂದಾ?' ಅಂತಂದ್ರು. 'ನಂದಿನಿ ಹಾಲೇ ಹಾಕವ್ವ' ಅಂದೋ. 'ಯಣ್ಣ ಸಕ್ಕರೆ ಹಾಕ್ಲಾ, ಮಂಡೇದ ಬೆಲ್ಲ ಹಾಕ್ಲಾ' ಅಂತ ಕೇಳಿದ್ರು. 'ನಮಗೇನು ಸಕ್ಕರೆ ಕಾಯಿಲೆ ಇಲ್ಲ. ಕಾಪಿ ಬ್ಯಾಡಿ ಬಸ್ಸಿಗೆ ಲೇಟಾತದೆ. ಒಂದ್ಲೋಟ ನೀರು ಕೊಡಿ ಸಾಕು' ಅಂದುದ್ಕೆ 'ನೀವು ನಮ್ಮ ಕಳ್ಳು-ಬಳ್ಳಿ ಇದ್ದಂಗೆ. ಯಾವ ನೀರು ಕುಡದೀರಿ ತುರೇಮಣ್ಣ, ಹಿಮಾಲಯದ ಮಿನರಲ್ ವಾಟರ್ ಕೊಡನಾ, ಕೆಂಗೇರಿ ಪೆಸಲ್ ವಾಟರ್ ಆತದ' ಅಂದ್ರು.

'ಬಾಯಾರಿ ಸಾಯತಿವ್ನಿ ಕನಕ್ಕಾ' ಅಂದೆ ಸಿಟ್ಟಲ್ಲಿ. 'ಸಿಟ್ಟಬ್ಯಾಡಿ, ಸರ್ಕಾರಿ ಆಸ್ಪತ್ರೆನಾಗೆ ಸತ್ತೀರಾ ಇಲ್ಲಾ ಮನೇಗೋಗಿ ಸತ್ತೀರಾ?' ಅಂದ್ರು. ನಾವು ಅಲ್ಲಿಂದ ಎದ್ದು ವಾಟ ಕಿತ್ತೋರು ಊರಿಗೆ ಬಂದೇ ನೀರು ಕುಡಿದಿದ್ದು ಕನೋ! ನಮ್ಮ ಬಜೆಟ್ಟೂ ಹಿಂಗೀಯೆ. ಬರೂದು ಗೊತ್ತಾಯ್ತದೆ, ಹೋದದ್ದು ಕಾಣಕ್ಕೇ ಇಲ್ಲ. ಸಂಪತ್ತೆಲ್ಲಾ ಬಿಲಿಯನೇರುಗಳ ಬಿಲ ಸೇರಿಕ್ಯಂಡಮೇಲೆ, ನಮಗೆ ಹರಿದೋಗಿರ ಹಳೇ ಚಡ್ಡಿನೇ ಗತಿ ಕಾ ಮೂದೇಯ್!' ಅಂದು ಮಾತು ಮುಗಿಸಿದರು.

ದಿನದ ಟ್ವೀಟ್

ಮಾಡಬೇಕಾದ ಕೆಲಸವೆಂದರೆ...

ಸಾಮಾಜಿಕ ಜಾಲತಾಣಗಳಲ್ಲಿ ದಿನಕ್ಕೆ 2-3 ಗಂಟೆ ಕೆಲಸಕ್ಕೆ ಬಾರದ ಎಡ-ಬಲ ಕಿತ್ತಾಟದಲ್ಲಿ ಪಾಲ್ಗೊಳ್ಳುವ ಕನ್ನಡಿಗರು, ಅದರಲ್ಲಿನ ಶೇಕಡ 10ರಷ್ಟು ಸಮಯವನ್ನು ಕನ್ನಡ ಕೇಂದ್ರಿತ ಗ್ರಾಹಕ ಚಳವಳಿಗೆ ಕೊಟ್ಟರೆ, ಕಳೆದ 10 ವರ್ಷಗಳಲ್ಲಿ ಮಾರುಕಟ್ಟೆಯಲ್ಲಿ ಕನ್ನಡದ ಸುತ್ತ ಆಗಿರುವ ಕೆಲಸಗಳ ಎರಡು ಪಟ್ಟು ಹೆಚ್ಚು ಕೆಲಸವನ್ನು ಸಾಧ್ಯವಾಗಿಸಬಹುದು.

ವಸಂತ್ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಶನಿವಾರ, 16-3-1996

• **ಗ್ರಾಮೀಣ ಅಭ್ಯರ್ಥಿಗೆ 50 ಕೃಪಾಂಕ ನೀಡಲು ನಿರ್ಧಾರ**

ಬೆಂಗಳೂರು, ಮಾರ್ಚ್ 15- ಸಿಂಕೋನಾ, ಕಾಫಿ, ಟೀ, ರಬ್ಬರ್ ತೋಟಗಳ ಕಾರ್ಮಿಕರಿಗೆ ತುಟ್ಟಿಭತ್ಯೆ ಸೇರಿ ಕನಿಷ್ಠ ವೇತನ ದಿನಕ್ಕೆ 40 ರೂಪಾಯಿಗಳಿಗೆ ಹೆಚ್ಚಳ, ಸರ್ಕಾರಿ ಸೇವೆಯಲ್ಲಿದ್ದು ಮೃತಪಟ್ಟ ಕುಟುಂಬದಲ್ಲಿ ಒಬ್ಬರಿಗೆ ಅನುಕಂಪದ ಆಧಾರದ ಮೇಲೆ ನೌಕರಿ, ಸರ್ಕಾರಿ ಹುದ್ದೆಗಳಿಗೆ ಸಂದರ್ಶನಕ್ಕೆ ಬರುವ ಗ್ರಾಮೀಣ ಪ್ರದೇಶಗಳ ಅಭ್ಯರ್ಥಿಗಳಿಗೆ 50 ಕೃಪಾಂಕ, ಮೈಸೂರಿನಲ್ಲಿ ಆರೋಗ್ಯ ವಿಶ್ವವಿದ್ಯಾಲಯ ಸ್ಥಾಪನೆ, ಸಕಾಲದಲ್ಲಿ ಸಾಲ ತೀರಿಸುವ ರೈತರಿಗೆ ಪ್ರೋತ್ಸಾಹ ಸೇರಿದಂತೆ ಇನ್ನೂ ಕೆಲವು ಯೋಜನೆಗಳಿಗೆ ಸಚಿವ ಸಂಪುಟ ಇಂದು ಒಪ್ಪಿಗೆ ನೀಡಿತು.

ಕೈಗಾರಿಕೆ ಸರ್ವತೋಮುಖ ಬೆಳವಣಿಗೆಯ ಹಿನ್ನೆಲೆಯಲ್ಲಿ, ಸಚಿವ ಸಂಪುಟ ನೂತನ ಕೈಗಾರಿಕಾ ನೀತಿಯನ್ನು ಅಂಗೀಕರಿಸಿತು.

• **ಐಆರ್‌ಎಸ್- ಪಿ3 ಉಡಾವಣೆಗೆ ಎಲ್ಲ ಸಿದ್ಧತೆ**

ಶ್ರೀಹರಿಕೋಟ, ಮಾರ್ಚ್ 15- ದೇಶದ ನಾಲ್ಕನೆಯ ದೂರಸಂವೇದಿ ಉಪಗ್ರಹ ಐಆರ್‌ಎಸ್-ಪಿ3 ಮತ್ತು ಸಂಪೂರ್ಣ ಸ್ವದೇಶಿ ನಿರ್ಮಿತ ಉಪಗ್ರಹ ವಾಹಕ ಐಎಸ್‌ಎಲ್‌ವಿ- ಡಿ3 ಈ ತಿಂಗಳ 18ರಂದು ಸೋಮವಾರ ಬೆಳಿಗ್ಗೆ 10.10ಕ್ಕೆ ಉಡಾವಣೆಯಾಗಲಿದ್ದು, ಆಂಧ್ರ ಪ್ರದೇಶದ ಪೂರ್ವ ಕರಾವಳಿಯಲ್ಲಿನ ಈ ಉಡ್ಡಯನ ತಾಣದಲ್ಲಿ ಇಂದು 'ಅಂತಿಮ ಕಾಲಗಣನೆ' ಮೊದಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 16-3-1971

• **ಪ್ರತಿಭಟನೆ, ಗದ್ದಲ, ಅಧ್ಯಕ್ಷ ವೇದಿಕೆಗೆ ನುಗ್ಗಾಟದ ನಡುವೆ ಬಜೆಟ್ ಮಂಡನೆ**

ಬೆಂಗಳೂರು, ಮಾರ್ಚ್ 15- ಆಡಳಿತ ಕಾಂಗ್ರೆಸ್ ಸದಸ್ಯರ ತೀವ್ರ ಪ್ರತಿಭಟನೆ, ಕೂಗಾಟ, ಅಧ್ಯಕ್ಷರ ವೇದಿಕೆಗೆ ನುಗ್ಗಿ ಮಾಡಲೆತ್ನಿಸಿದ ಅಡ್ಡಿಗಳ ನಡುವೆ ಇಂದು ವಿಧಾನಸಭೆಯಲ್ಲಿ ಹಣಕಾಸು ಸಚಿವ ಶ್ರೀ ರಾಮಕೃಷ್ಣ ಹೆಗಡೆ ಅವರು ಮಂದಿನ ಸಾಲಿನ ಆಯವ್ಯಯವನ್ನು ಮಂಡಿಸಿದರು.

ಮೈಸೂರು ವಿಧಾನಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಹಣಕಾಸು ಸಚಿವರು ತಮ್ಮ ಭಾಷಣವನ್ನು ಪೂರ್ಣವಾಗಿ ಓದಲಾಗದೆ, ಅದನ್ನು ಓದಿದಂತೆ ಪರಿಗಣಿಸಬೇಕೆಂದು ಕೋರುವ ಪರಿಸ್ಥಿತಿ ಬಂದೊದಗಿತು.

ಇಂದು ಆಯವ್ಯಯ ಮಂಡನೆಗೆ ಅವಕಾಶ ನೀಡದಂತೆ ಮಾಡಲು ಹಕ್ಕಿನ ಲೋಪ, ನಿಲುವಳಿ ಸೂಚನೆ, ಲೆಕ್ಕವಿಲ್ಲ-ದಷ್ಟು ಕ್ರಿಯಾಲೋಪಗಳನ್ನು ಎತ್ತಿ ಹೆಜ್ಜೆ ಹೆಜ್ಜೆಗೂ ಅಡ್ಡಿ ತರಲು ಯತ್ನಿಸಿದ ವಿರೋಧ ಪಕ್ಷದ, ಮುಖ್ಯವಾಗಿ ಆಡಳಿತ ಕಾಂಗ್ರೆಸ್ಸಿನ ಸದಸ್ಯರ ಗದ್ದಲದ ನಡುವೆ, ಅಧ್ಯಕ್ಷರ ಅನುಮತಿಯ ಪ್ರಕಾರ ಸಚಿವ ಶ್ರೀ ಹೆಗಡೆ ಅವರು ಆಯವ್ಯಯ ಮಂಡಿಸಲು ಸಭೆಯ ಅನುಮತಿ ಕೋರಿದರು. ಪ್ರತಿಭಟನೆಯ ನಡುವೆ ಆಡಳಿತ ಕಾಂಗ್ರೆಸ್ ಸದಸ್ಯರು 'ನಾಚಿಕೆಗೇಡು' ಎಂದು ಸತತವಾಗಿ ಕೂಗ-ಲಾರಂಭಿಸಿದರು.

• **ಕಾರು ಕಳ್ಳ ಶ್ರೀಮಂತ ತರುಣರ ಪತ್ತೆ**

ಬೆಂಗಳೂರು, ಮಾರ್ಚ್ 15- ಕಾಲೇಜುಗಳಲ್ಲಿ ಓದುತ್ತಿರುವ ಯುವಕರೇ ಹೆಚ್ಚಾಗಿರುವ ಅಂತರರಾಜ್ಯ ವಾಹನ ಕಳ್ಳರ ತಂಡವೊಂದನ್ನು ರಾಜ್ಯದ ಸಿ.ಐ.ಡಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಈ ತಂಡಕ್ಕೆ ಸೇರಿದವರೆಲ್ಲ 19-21 ವರ್ಷ ವಯಸ್ಸಿನ ಯುವಕರಾಗಿದ್ದು, ಅವರಲ್ಲಿ ಹೆಚ್ಚು ಮಂದಿ ಸಿರಿವಂತರ ಪುತ್ರರೇ ಆಗಿದ್ದಾರೆ.

ಸಂಗತ

ಜಾನುವಾರಿಗೂ ಮೌಢ್ಯದ ಜಾಡ್ಯ

ಕೊಟ್ಟಿಗೆಯಲ್ಲಿನ ಕಂದಾಚಾರಗಳಿಂದ ಎಲ್ಲ ರೀತಿಯಲ್ಲಿ ಪೆಟ್ಟು ತಿನ್ನುವವರು ದುರ್ಬಲರೆ

• ಡಾ. ಮುರಳೀಧರ ಕಿರಣಕೆರೆ

ಆ ರೈತನಿಗೆ ನನ್ನ ಬಗ್ಗೆ ಖಂಡಿತಾ ಅಸಮಾಧಾನ ಇದ್ದಿರಬೇಕು. ಬಾಯಿ ಬಿಟ್ಟು ಹೇಳದಿದ್ದರೂ ಆತನ ವರ್ತನೆಯಿಂದಲೇ ಅದು ಸ್ಪಷ್ಟವಾಗಿತ್ತು. ಅಮಾವಾಸ್ಯೆಯಂದು ಅವನ ಹಸು ಹೆತ್ತದ್ದೇ ಎಲ್ಲಾ ಸಮಸ್ಯೆಗೂ ಮೂಲ! ಆ ದಿನ ದನ ಕರು ಹಾಕಿದರೆ ಮನೆಗೆ ಕೆಡುಕು ಎಂಬುದೊಂದು ನಂಬಿಕೆ.

ಮುಚ್ಚಟೆಯಿಂದ ಸಾಕಿದ್ದ ಹಸುವನ್ನು ಮಾರಲೇಬೇಕಾದ ಅನಿವಾರ್ಯದಿಂದ ಕುಗ್ಗಿ ಹೋಗಿದ್ದ. ಆ ಮುಗ್ಧ ಪ್ರಾಣಿ ಜೊತೆಗೆ ಮತ್ತೊಂದು ಮಹಾಪರಾಧ ಮಾಡಿತ್ತು. ಕರು ಹಾಕಿ ಎರಡು-ಮೂರು ಗಂಟೆಗಳಲ್ಲೇ ತನ್ನ ಕಂದನ ಮೇಲೆ ಮಲಗಿತ್ತು. ಆ ಕರು ಸತ್ತುಹೋಗಿತ್ತು. ಇಂಥ ದೋಷಿ ಹಸುವನ್ನು ಮಾರಲು ಹೊರಟವನನ್ನು ತಡೆದಿದ್ದೆ.

ಕರು ಹಾಕಿದಾಗ ತಿಥಿ, ನಕ್ಷತ್ರ ನೋಡುವುದೇ ಒಂದು ಮೂಢನಂಬಿಕೆ. ಮನೆಯೊಳಗೆ ಮಗು ಹುಟ್ಟಿದಾಗ ಪರಿಗಣನೆಗೆ ಬಾರದ ಹುಣ್ಣಿಮೆ, ಅಮಾವಾಸ್ಯೆಯ ಲೆಕ್ಕ ಕೊಟ್ಟಿಗೆಯಲ್ಲಿ ಮಾತ್ರ ಯಾಕೆ ಎಂದೆಲ್ಲಾ ಅವನನ್ನು ಪ್ರಶ್ನಿಸುತ್ತಾ ಮನವರಿಕೆ ಮಾಡಿದ್ದೆ. ಹೆರಿಗೆ ನಂತರದ ಸುಸ್ತು, ಹೊಟ್ಟೆಯ ಬಾಧಕದಿಂದ ತಿಳಿಯದೇ ಕರು ಮೇಲೆ ಮಲಗಿಬಿಟ್ಟಿದೆ. ಹೀಗಾಗುವುದು ತುಂಬಾ ಅಪರೂಪವಾದರೂ ಆಗಲೇಬಾರದು ಎಂದೇನಿಲ್ಲ. ಇಷ್ಟಕ್ಕೆಲ್ಲ ಯಾವ ಕಂಟಕವೂ ಬಾರದು ಎಂದೆಲ್ಲಾ ವಿವರಿಸಿದ ನಂತರ ಒಲ್ಲದ ಮನಸ್ಸಿನಿಂದಲೇ ಮಾರುವ ಯೋಚನೆಯನ್ನು ಕೈಬಿಟ್ಟಿದ್ದ.

ಇದಾಗಿ ಒಂದೇ ವಾರಕ್ಕೆ ಹಸುವಿನ ಮೈಮೇಲೆಲ್ಲಾ ಸಿಡುಬಿನ ತರಹದ ಗುಳ್ಳೆಗಳೆದ್ದವು. ಅವನ ದೃಷ್ಟಿಯಲ್ಲಿ ಇದು ಮಾರಿಯ ಕೆಂಗಣ್ಣಿನಿಂದ ಬಂದ 'ಅಮ್ಮ'. ವೈರಾಣುಗಳು ಹುಟ್ಟುಹಾಕುವ ಚರ್ಮ ಗಂಟು ರೋಗವೆಂಬ ಈ ಹೊಸ ಕಾಯಿಲೆ ಕಳೆದ ಎಂಟ್ಹತ್ತು ತಿಂಗಳುಗಳಿಂದ ಎಲ್ಲೆಡೆ ವ್ಯಾಪಕವಾಗಿ ಹರಡಿದೆ. ಆರಂಭದಲ್ಲೇ ಸೂಕ್ತ ಚಿಕಿತ್ಸೆ ನೀಡಿದ್ದರಿಂದ ನಿಗ್ರಹ ಸಾಧ್ಯವಾಗಿತ್ತು. ಐದಾರು ದಿನಗಳಲ್ಲೇ ಮತ್ತೊಮ್ಮೆ ಹಸುವಿಗೆ ಜ್ವರ. ವಾತಾವರಣದಲ್ಲಿ ಹಠಾತ್ ಬದಲಾವಣೆ-ಯಾದಾಗ ವೈರಲ್ ಜ್ವರ ಸಾಮಾನ್ಯ. ಆದರೆ ಇದೆಲ್ಲಾ 'ಅಮಾವಾಸ್ಯೆ' ಪರಿಣಾಮವೆಂಬುದು ಅವನ ಖಚಿತ ನಿಲುವು. ನನ್ನ ಮಾತು ಕೇಳಿ ಈ ಹಸುವನ್ನು ಇಟ್ಟು-ಕೊಂಡಿದ್ದಕ್ಕೇ ಹೀಗೆಲ್ಲಾ ತೊಂದರೆಗಳ ಸರಮಾಲೆ ಶುರುವಾಗಿದೆ ಎಂಬ ಅಸಮಾಧಾನ ಅವನ ಚರ್ಯೆಯಲ್ಲಿ ಎದ್ದು ಕಾಣುತ್ತಿತ್ತು. ಪುನಃ ನನ್ನ ಸಲಹೆ ಕೇಳುವ ತಪ್ಪು ಮಾಡದೆ ದನವನ್ನು ಮಾರಿ ಕೈತೊಳೆದುಕೊಂಡ!

ಎಮ್ಮೆ ಹುಣ್ಣಿಮೆ ದಿನ, ಹಸು ಅಮಾವಾಸ್ಯೆಯಂದು ಹೆತ್ತರೆ ಅವನ್ನು ಇಟ್ಟುಕೊಳ್ಳಬಾರದೆಂಬುದು ಕೆಲವು ಹೈನುಗಾರರ ಮನದೊಳಗೆ ಬೇರೂರಿರುವ ಮೌಢ್ಯ. ಹಿಂದೆಲ್ಲಾ ದೊಡ್ಡ ಭೂಮಾಲೀಕರ ಕೊಟ್ಟಿಗೆ ತುಂಬಾ ನೂರಾರು ಸಂಖ್ಯೆಯಲ್ಲಿ ಹಸುಕರುಗಳು ಇರುತ್ತಿದ್ದವು. ಪಶು ಸಂಪತ್ತಿನ ಮೇಲೆಯೇ ಶ್ರೀಮಂತಿಕೆ ನಿರ್ಧಾರ-ವಾಗುತ್ತಿತ್ತು. ಈ ಹುಣ್ಣಿಮೆ- ಅಮಾವಾಸ್ಯೆಯ ಕಾರಣ-ದಿಂದಲಾದರೂ ಬಲ್ಲಿದರು ಬಡವರಿಗೆ ನೀಡಲಿ ಎಂಬ ಸದುದ್ದೇಶದಿಂದ ಹೀಗೊಂದು ಶಾಸ್ತ್ರ ಶುರುವಾಗಿರಬ-ಹುದು. ಆದರೀಗ ಹಸು ಕರುಗಳಿರುವುದೇ ಬಡವರು, ಮಧ್ಯಮವರ್ಗದವರ ಕೊಟ್ಟಿಗೆಯಲ್ಲಿ. ಅದೂ ಒಂದೆರಡರ ಸಂಖ್ಯೆಯಲ್ಲಿ. ಸಂಪ್ರದಾಯದ ಹಣೆಪಟ್ಟಿ ಹೊತ್ತ ಇಂಥ ಮೌಢ್ಯದಿಂದಾಗಿ ಮಾನಸಿಕವಾಗಿ, ಆರ್ಥಿಕವಾಗಿ ಪೆಟ್ಟು ತಿನ್ನುವವರು ದುರ್ಬಲರೇ!

'ಅಮ್ಮ ಬಿದ್ದು ಕೈ ಮುರ್ಕೊಂಡ್ರು. ಕೊಟ್ಗೇಲೂ ದನಕರುಗಳಿಗೆ ಒಂದಲ್ಲಾ ಒಂದು ತೊಂದ್ರೆ. ಪ್ರಶ್ನೆ ಕೇಳ್ಸಿದ್ರೆ ನಾಗನ ದೋಷ ಅಂದ್ರು. ಮತ್ತೆ ಪ್ರತಿಷ್ಠೆ ಆಗ್ಬೇಕಂತೆ. ಎಷ್ಟೇ ಸಣ್ಣಕೆ ಮಾಡೋದಾದ್ರೂ ಲಕ್ಷದ ಮೇಲೆ ಬೇಕು. ಮಂಡೆನೇ ಕೆಟ್ಟು ಹೋಗಿದೆ' ಎಂದು ಸುಶಿಕ್ಷಿತ ಮಹಿಳೆಯೊಬ್ಬರು ಅಲವತ್ತುಕೊಂಡಾಗ, ಸಲಹೆ ನೀಡುವುದು ವ್ಯರ್ಥವೆಂದು ಸುಮ್ಮನಾಗಿದ್ದೆ. 'ಸಮಸ್ಯೆ ಯಾರ ಮನೆಯಲ್ಲಿಲ್ಲ ಹೇಳಿ. ಏನೂ ಆಗಲ್ಲ ಯೋಚ್ನೆ ಮಾಡ್ಬೇಡಿ' ಎಂದರೆ ತಲೆಯೊಳಗೆ ಹುಳ ಬಿಟ್ಕೊಂಡಿರೋರು ತೆಪ್ಪಗಿರುತ್ತಾರಾ?

ಮನೆಯೊಳಗಿನಂತೆ ಕೊಟ್ಟಿಗೆಯಲ್ಲೂ ಇಂತಹ ನೂರಾರು ಕಂದಾಚಾರಗಳಿವೆ. ಜಾನುವಾರುಗಳಿಗೆ ಕಾಲುಬಾಯಿ ಜ್ವರ ಬಂದರೆ ಮಾರಮ್ಮ ಸಿಟ್ಟಾಗಿದ್ದಾಳೆಂಬ ಭಯದಲ್ಲಿ ಮಾರಿಹಬ್ಬ ಮಾಡುವವರು, ಎಮ್ಮೆ, ದನಗಳಲ್ಲಿ ಗರ್ಭ ನಿಲ್ಲದಿದ್ದರೆ ನಾಗನೆಡೆಯೆಂದು ಕಟ್ಟಿದ ಕೊಟ್ಟಿಗೆಯನ್ನೇ ಬೀಳಿಸಿ ಬೇರೆಡೆ ಕಟ್ಟುವುದು, ಹಸುಕರುಗಳಿಗೆ ಜ್ವರ ಬಂದಾಗ ಕೆಟ್ಟ ರಕ್ತ ಹೊರ ಹೋಗಲು ಕಿವಿ ಕುಯ್ಯುವುದು, ಮೈಮೇಲೆ ಬರೆ ಹಾಕುವುದು, 'ನೀಲಿನಾಲಿಗೆ' ರೋಗದಿಂದ ಬಳಲುವ ಕುರಿಗಳನ್ನು ತಲೆಕೆಳಗಾಗಿ ಮರಕ್ಕೆ ನೇತಾಡಿಸುವುದು, ನಾಯಿಯ ಬಾಲ ಸುರುಳಿ ಸುತ್ತಿದ್ದರೆ ಬಾಲವನ್ನೇ ಕಡಿದು ಹಾಕುವುದು ಇಲ್ಲವೇ ರಬ್ಬರ್ ಬ್ಯಾಂಡ್ ಸುತ್ತಿ ಅದಾಗಿಯೇ ತುಂಡಾಗುವಂತೆ ಮಾಡುವುದು... ಮೌಢ್ಯದ ಜೊತೆಗೆ ಥರಾವರಿ ಕ್ರೌರ್ಯವೂ ಸೇರಿಕೊಂಡಿರುವುದನ್ನು ಕಂಡಾಗ ಮನಸ್ಸು ಅದುರುತ್ತದೆ.

ಜೀವನದಲ್ಲಿ ಸಹಜವಾಗಿ ಎದುರಾಗುವ ಆರೋಗ್ಯ, ಆರ್ಥಿಕ, ಸಾಂಸಾರಿಕ ಸಮಸ್ಯೆಗಳನ್ನೆಲ್ಲಾ ತಿಥಿ, ನಕ್ಷತ್ರ, ಜಾತಕಗಳ ದೋಷವೆಂದು ಟ್ಯಾಗ್ ಮಾಡುವ ಮಾನಸಿಕ ಅಸ್ವಾಸ್ಥ್ಯ ಏರುಗತಿಯಲ್ಲಿದೆ. ಚಿತ್ತದ ಆಳಕ್ಕೆ ತಳವೂರಿ ಬದುಕಿನ ಅಂಗದಂತಾಗಿರುವ ಈ ಅನಾರೋಗ್ಯಕರ ಅಂಧಾಚರ-ಣೆಗಳಿಗೂ ಸಾಕ್ಷರತೆಗೂ ಸಂಬಂಧವೇ ಇಲ್ಲದಿರುವುದು ನಿಜಕ್ಕೂ ದುರಂತ! ಜನರಲ್ಲಿ ವೈಜ್ಞಾನಿಕ, ವೈಚಾರಿಕ ಭಾವನೆಗಳನ್ನು ಬೆಳೆಸುವ ನಿರಂತರ ಪ್ರಯತ್ನವೊಂದೇ ಕಂದಾಚಾರವೆಂಬ ಸಾಮಾಜಿಕ ಕಳೆಯನ್ನು ತೊಲಗಿಸಲು ಏಕೈಕ ದಾರಿ. ಈ ದಿಸೆಯಲ್ಲಿ ಮಾಧ್ಯಮಗಳ ಪಾತ್ರ ತುಂಬಾ ಹಿರಿದಾದುದು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ, ಬಾಳೆಬೈಲು, ತೀರ್ಥಹಳ್ಳಿ

ವಾಚಕರ ವಾಣಿ

ಯೋಗ್ಯತೆಗೆ ತಕ್ಕ ಕೆಲಸ ದಕ್ಕಲಿ

ವೆಂಕಟೇಶ ಮಾಚಕನೂರ ಅವರ ಪತ್ರದಲ್ಲಿ (ವಾ.ವಾ., ಮಾರ್ಚ್ 15) ಬರುವ ರಿಕ್ಷಾ ಚಾಲಕ ಪಿಂಚಣಿ ಬಗ್ಗೆ ಹೇಳಿರುವುದರಲ್ಲಿ ತಪ್ಪಿಲ್ಲ. ಯಾವ ವ್ಯಕ್ತಿಗೆ ತಾನೇ ಸರ್ಕಾರಿ ಕೆಲಸ, ಜೀವನದ ಭದ್ರತೆ ಬೇಡ? ಆದರೆ ಸರಿಯಾದ ಓದು, ಓದಿಗೆ ಸರಿಯಾದ ಕೆಲಸ ನಮ್ಮ ದೇಶದಲ್ಲಿ ಇದೆಯೇ? ನಿರುದ್ಯೋಗ ತಾಂಡವವಾಡುತ್ತಿದೆ. ಕೆಲವರು ಲಕ್ಷಗಟ್ಟಲೆ ಸಂಬಳ ಪಡೆಯುತ್ತಾರೆ. ಇನ್ನು ಕೆಲವರು ₹ 10 ಸಾವಿರ, 20 ಸಾವಿರ ಮಾತ್ರ ತೆಗೆದುಕೊಂಡು ಲಕ್ಷಗಟ್ಟಲೆ ಸಂಬಳ ಪಡೆಯುವವರಿಗೆ ಸರಿಸಮನಾಗಿ ಕೆಲಸ ಮಾಡುವಂತಹ ಸ್ಥಿತಿ ಇದೆ. ವೆಂಕಟೇಶ ಅವರೇ ಹೇಳಿರುವಂತೆ, ಬೆವರಿಲ್ಲದ ದುಡಿಮೆ ಮುನ್ನೆಲೆಯಲ್ಲಿದೆ, ಜನಸಾಮಾನ್ಯರನ್ನು ಒಳಗೊಳ್ಳದ ಆರ್ಥಿಕತೆ ಚಾಲ್ತಿಯಲ್ಲಿದೆ. ಇದು ಅಪಾಯಕಾರಿ ಎಂದು ನಮ್ಮ ಹಿರಿಯರು ಎಚ್ಚರಿಸಿಲ್ಲವೇ?

ಎಲ್ಲರನ್ನೂ ಒಳಗೊಳ್ಳುವ ಆರ್ಥಿಕತೆ, ಅವರವರ ಯೋಗ್ಯತೆಗೆ ಅನುಗುಣವಾದ ಕೆಲಸ ದೊರಕಬೇಕು. ಜನರಿಗೆ ಯೋಗ್ಯವಾದ ಶಿಕ್ಷಣ, ಆರೋಗ್ಯ, ಉದ್ಯೋಗ ಒದಗಿಸಲೇ ಅಲ್ಲವೆ ಸರ್ಕಾರಗಳಿರುವುದು. ಸರ್ಕಾರವು ಸಂಪತ್ತನ್ನು ಸಮನಾಗಿ ಹಂಚಿಕೆ ಮಾಡಿದರೆ ದಾಸೋಹ ಮಾಡುವ ಸಂದರ್ಭ ಬರಲಾರದೇನೋ!

ಸರೋಜ ಎಂ.ಎಸ್., ಸಾಗರ

ಶರಣಸೇನೆಯೋ? ಶರಣರ ಸೇನೆಯೋ?

ಚಿತ್ರದುರ್ಗದ ಮುರುಘಾ ಮಠದ ಡಾ. ಶಿವಮೂರ್ತಿ ಮುರುಘಾ ಶರಣರು ಸೇನೆ ಕಟ್ಟುತ್ತಿದ್ದಾರೆ ಎಂದು ಪತ್ರಿಕಾ ವರದಿಗಳು ತಿಳಿಸಿವೆ. ಸಾಮಾನ್ಯವಾಗಿ ಮಠಗಳಲ್ಲಿ ಅಕ್ಕನ, ಅಣ್ಣನ ಬಳಗ ಇರುವುದು ಗೊತ್ತಿದೆ. ಸಂಘ, ಸೇವಾದಳಗಳೂ ಉಂಟು. ಹಿಂದಿದ್ದ ದೊರೆ, ಪಾಳೇಗಾರರು ಶತ್ರುಗಳ ವಿರುದ್ಧ ಸೇನೆ ಕಟ್ಟಿಕೊಂಡಿದ್ದರು. ಭಕ್ತರು ಕಟ್ಟಿದ ಮಠಗಳಿಗೆ ಸೇನೆಯ ಅಗತ್ಯವಿದೆಯೇ?! ಸಾಕ್ರೆಟಿಸ್, ಏಸು, ಬುದ್ಧ, ಬಸವ, ಗಾಂಧಿ ಅವರೆಲ್ಲರಿಗೂ ತಮ್ಮನ್ನು ಹೋಲಿಸಿಕೊಂಡ ಶರಣರು, ಅವರುಗಳು ವಿರೋಧಿಗಳನ್ನು ತಾತ್ವಿಕವಾಗಿ ಎದುರಿಸಿದರೇ ವಿನಾ ಸೇನೆ ಕಟ್ಟಲಿಲ್ಲವೆಂಬುದನ್ನು ಮರೆಯುತ್ತಾರೆ. ಸೇನೆ ಕಟ್ಟಿದವರ ವಿರುದ್ಧವೇ ಸೇನೆಗಳು ತಿರುಗಿಬಿದ್ದ ಇತಿಹಾಸವನ್ನೂ ನೆನೆಯುವುದಿಲ್ಲ!

ಜೈಕಾರ ಹಾಕಿಸಿಕೊಂಡ ಶರಣರು ನವ ಸೇನೆಯನ್ನು ರಾಜಕಾರಣಿ ಬಿ.ವೈ.ವಿಜಯೇಂದ್ರ ಅವರಿಂದ ಉದ್ಘಾಟಿಸಿದರು. ಅವರೋ ರಾಜ್ಯದಾದ್ಯಂತ ಕಟ್ಟೋಣ ಅಂದಿದ್ದಾರೆ. ಮಠ ಬೇಟೆಗಾಗಿ ಇದ್ದೀತೇನೋ. ಕೋಟಿಗಟ್ಟಲೆ ಅನುದಾನವನ್ನೂ ಕೊಟ್ಟಾರು. ಸೇನೆಯ ಅಧ್ಯಕ್ಷರಂತೂ ಮಠ ವಿರೋಧಿಸಿ ಕೊಡಲಿ ಬೀಸಿದರೆ ಕೊಡಲಿ ಎತ್ತುವೆವು ಎಂದು ಹ್ಗೂಂಕರಿಸಿದ್ದಾರೆ. ಸೇನೆ ಉದ್ಘಾಟಿಸಿದ ವಿಜಯೇಂದ್ರ, ಕಾಲು ಜಾರುವುದರಿಂದ ಆಗುವ ಅಪಾಯಗಳಿಗಿಂತ ನಾಲಿಗೆ ಜಾರಿದರೇ ಅಪಾಯ ಜಾಸ್ತಿಯೆಂದು ಮಾರ್ಮಿಕವಾಗಿ ಎಚ್ಚರಿಸಿದ್ದು ಸಮಯೋಚಿತ.

ಜಾತಿಗೊಬ್ಬ ಸ್ವಾಮಿಗಳನ್ನು ಮಾಡಿ ಶರಣರು ಪಟ್ಟ ಸಂತೋಷಕ್ಕಿಂತ ಉಂಡ ನೋವುಗಳೇ ಹೆಚ್ಚು. ಕೈ ಕೊಟ್ಟು ಹಗ್ಗ ಕಟ್ಟಿಸಿಕೊಳ್ಳುವ ಚಾಳಿಯ ಶರಣರಿಂದ ಸೇನೆಯಲ್ಲಿರುವ ಹುಡುಗಬಟ್ಟೆಗಳನ್ನು ನಿಯಂತ್ರಿಸಲು ಸಾಧ್ಯವೇ? ಮಠದ ಹಿತೈಷಿಯಾಗಿ ನನ್ನ ಕಳಕಳಿ ಇಷ್ಟೆ, ಮಠ ಇರುವ ಈಗಿನ ಸ್ಥಿತಿಯಲ್ಲಿ ಇದೆಲ್ಲಾ ಬೇಕಿತ್ತಾ?

ಡಾ. ಬಿ.ಎಲ್.ವೇಣು, ಚಿತ್ರದುರ್ಗ

ಬೆಂಕಿ

ಬೆಂಕಿ, ಬೆಂಕಿ-
ಎಲ್ಲೆಲ್ಲೂ ಪ(ನ)ರ್ತಿಸುತಿದೆ
ಕರುನಾಡಿನಲ್ಲಿ ಬೆಂಕಿ
ಊರಿನ ಬೆಂಕಿ
ಮನದ ಬೆಂಕಿ
ವನದ ಬೆಂಕಿ, ಅರ್ಥಾತ್
ಕಾಡಿನ ಬೆಂಕಿ
ಸಾಲದ್ದಕ್ಕೆ
'ಸೀಡಿ'(C.D)ಯಿಂದ ಬೆಂಕಿ
(ಕಾಮಾಗ್ನಿ?)-
ಊಹೆಗೆ ನಿಲುಕದು
ಹಾನಿಯ ಅಂಕಿ!

ಸಿ.ಪಿ.ಕೆ., ಮೈಸೂರು

ಬೇಕು ಸಮಾನ ಸ್ಥಾನಮಾನ

'ದೇವರ ದೇವರು ಜನರ ಬೆವರು' ಎಂಬ ಬರಗೂರು ರಾಮಚಂದ್ರಪ್ಪ ಅವರ ಲೇಖನ (ಪ್ರ.ವಾ., ಮಾರ್ಚ್ 10) ಬಹು ಪ್ರಸ್ತುತ ಮತ್ತು ಸಮಗ್ರವಾಗಿದೆ. 1950ರಿಂದ ಈಚೆಗೆ ಬುದ್ಧಿಗೆ ಸಾಮಾಜಿಕ ಏರುಪೇರು ಆಗುವಂತಹ ಬೆಲೆ ಬಂದು, ಬೆವರು ನಂಬಿದವರನ್ನು ನಿಕೃಷ್ಟವಾಗಿ ಕಾಣುವ ಪರಿಪಾಟ ಬೆಳೆಯಿತು. ಅವರಿಗೆ ಆರ್ಥಿಕ, ಸಾಮಾಜಿಕ ಸ್ಥಾನಮಾನಗಳು ಇಲ್ಲವಾದವು. ಹಿಂದೆ ಸಾಮಾಜಿಕ ಸ್ಥಾನಮಾನವಿಲ್ಲದಿದ್ದರೂ ಹೆಚ್ಚು ಕಡಿಮೆ ಎಲ್ಲರೂ ದುಡಿಯಲೇಬೇಕಾದ ಅನಿವಾರ್ಯ ಇತ್ತು. ವಿಜ್ಞಾನದ ತಾಂತ್ರಿಕ ಸೌಲಭ್ಯಗಳಿಂದ ಜಗತ್ತಿನಲ್ಲಿ ಆದ ಬದಲಾವಣೆಗಳು ವಿಪರೀತ ಅಲ್ಲೋಲ ಕಲ್ಲೋಲ ಉಂಟು ಮಾಡಿದವು. 'ಅನ್ನವಿದ್ದರೇ ಪ್ರಾಣ, ಪ್ರಾಣವಿದ್ದರೆ ಪರಾಕ್ರಮ' ಸಿಗುವ ಅನ್ನವನ್ನು ಬೆವರು ಸುರಿಸಿ ಉತ್ಪಾದಿಸುವ ರೈತ, ಕಾರ್ಮಿಕರಿಗೆ ಜೀವನ ನಿರ್ವಹಣೆಗೂ ಕಷ್ಟವಾಗುವ ರೀತಿಯ ಆದಾಯವಿದ್ದರೆ, ಐ.ಟಿ., ಬಿ.ಟಿ., ಸರ್ಕಾರಿ ಉದ್ಯೋಗದಂತಹವುಗಳಿಗೆ ಗರಿಷ್ಠ ಮಟ್ಟದ ಸಂಬಳ ಸವಲತ್ತುಗಳು ಸಿಗುತ್ತಿವೆ. ಎಂಥ ವಿಪರ್ಯಾಸ, ಎಂಥ ಅಸಮಾನತೆ!

ಕಲೆ, ಸಾಹಿತ್ಯ ಬೆವರಿನಿಂದ ಬಂದಿವೆ. ಇವುಗಳ ಸೃಷ್ಟಿಕರ್ತರಲ್ಲಿ ಹೆಚ್ಚಿನವರು ಬೆವರಿನ ಹಿನ್ನೆಲೆಯವರು. ಬುದ್ಧಿ, ಬೆವರು ಬೇರ್ಪಟ್ಟಿದ್ದರಿಂದ ಸಮಾಜಕ್ಕೆ ಸಂಕಷ್ಟಗಳ ಸರಮಾಲೆಯೇ ಬಂದಿತು. ಒಂದು ಜೆಸಿಬಿ ಯಂತ್ರ ನೂರಾರು ಬೆವರಿನ ಜನರ ಅನ್ನವನ್ನು ಕಿತ್ತುಕೊಂಡಿದೆ. ಟ್ರ್ಯಾಕ್ಟರ್‌ಗಳು ಎತ್ತುಗಳಿಗೆ ಪರ್ಯಾಯವಾಗಿದ್ದರಿಂದ ಸಗಣಿಗೊಬ್ಬರ ಇಲ್ಲದೆ ರಾಸಾಯನಿಕ ವಿಷದ ಆಹಾರವನ್ನು ನಾವೆಲ್ಲಾ ಉಣ್ಣುವಂತಾಗಿದೆ. ಹಳ್ಳಿಯ ಅಲ್ಪ ಸ್ವಲ್ಪ ವಿದ್ಯಾವಂತರು ಬೆವರಿನ ಸಹವಾಸ ಬೇಡವೆಂದು ನಗರಗಳಿಗೆ ವಲಸೆ ಹೋಗಿ ಅನಾರೋಗ್ಯಕರ ಕೊಳೆಗೇರಿಗಳಲ್ಲಿ ವಾಸಿಸುತ್ತಿರುವುದಲ್ಲದೆ, ನಗರಗಳಲ್ಲೂ ವಿಪರೀತ ಜನಸಂದಣಿ ಉಂಟುಮಾಡಿದ್ದಾರೆ. ಪರಿಶ್ರಮವಿಲ್ಲದ ಆರಾಮ ಜೀವನಶೈಲಿಯ ಸೋಮಾರಿತನಕ್ಕೆ ಶರಣಾಗಿರುವ ಜನ, ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯಾಘಾತಗಳಿಗೆ ಒಳಗಾಗಿ ಒಟ್ಟಾರೆ ರೋಗನಿರೋಧಕ ಶಕ್ತಿಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಬೆವರು ಮತ್ತು ಬುದ್ಧಿಯ ಜನರಿಗೆ ಸಮಾನತೆ ದೊರೆಯುವಂತಾಗಲಿ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಪ್ರೀಂ ಕೋರ್ಟ್ ಮಹಿಳಾ ನ್ಯಾಯಮೂರ್ತಿ ಒಬ್ಬರೇ!

ಇಂದಿರಾ ಬ್ಯಾನರ್ಜಿ

ಲಿಂಗ ತಾರತಮ್ಯ ಎಂಬುದು ದೊಡ್ಡ ಪಿಡುಗಿನಂತೆ ನಮ್ಮ ದೇಶವನ್ನು ಕಾಡುತ್ತಿದೆ. ಲಿಂಗ ಸಮಾನತೆಗಾಗಿ ನಡೆದ ಹೋರಾಟಗಳ ಪರಿಣಾಮವಾಗಿ ಸ್ವಲ್ಪ ಮಟ್ಟಿನ ಜಾಗೃತಿಯು ಇತ್ತೀಚಿನ ದಿನಗಳಲ್ಲಿ ಮೂಡಿದೆ. ಆದರೆ, ನಮ್ಮ ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿಯೇ ಮಹಿಳೆಯರಿಗೆ ಅತ್ಯಂತ ಕಡಿಮೆ ಪ್ರಾತಿನಿಧ್ಯ ಇದೆ ಎಂಬುದು ಕಹಿ ಸತ್ಯ. ನ್ಯಾಯಮೂರ್ತಿ ಇಂದೂ ಮಲ್ಹೋತ್ರಾ ಅವರು ಕಳೆದ ಶನಿವಾರ ನಿವೃತ್ತರಾಗುವುದರೊಂದಿಗೆ ಸುಪ್ರೀಂ ಕೋರ್ಟ್‌ನಲ್ಲಿ ಉಳಿದಿರುವ ಮಹಿಳಾ ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ಒಬ್ಬರೇ.

'ಇಂದೂ ಮಲ್ಹೋತ್ರಾ ಅವರ ನಿವೃತ್ತಿಯೊಂದಿಗೆ ಒಬ್ಬರು ಮಹಿಳಾ ನ್ಯಾಯಮೂರ್ತಿ ಮಾತ್ರ ಸುಪ್ರೀಂ ಕೋರ್ಟ್‌ನಲ್ಲಿ ಉಳಿಯುತ್ತಾರೆ. ಒಂದು ಸಂಸ್ಥೆಯಾಗಿ, ಸುಪ್ರೀಂ ಕೋರ್ಟ್‌ಗೆ ಇದು ಗಾಢ ಚಿಂತೆಯ ವಿಚಾರ. ಈ ವಿಚಾರದಲ್ಲಿ ಗಂಭೀರ ಆತ್ಮಾವಲೋಕನ, ಚಿಂತನೆ ನಡೆಯಬೇಕು. ಭಾರತದ ಸಾಮಾನ್ಯ ಜನರ ಜೀವನವನ್ನು ರೂಪಿಸುವ ಮತ್ತು ಜೀವನದ ಮೇಲೆ ಪರಿಣಾಮ ಬೀರುವ ಸಂಸ್ಥೆಯು ಇನ್ನಷ್ಟು ಉತ್ತಮವಾಗಿರಬೇಕಿದೆ. ನ್ಯಾಯಾಲಯದಲ್ಲಿಯೂ ದೇಶದ ವೈವಿಧ್ಯವು ಪ್ರತಿಫಲನಗೊಳ್ಳಬೇಕು' ಎಂದು ಇಂದೂ ಮಲ್ಹೋತ್ರಾ ಅವರಿಗೆ ವಿದಾಯ ಹೇಳುವ ಸಮಾರಂಭದಲ್ಲಿ ಮಾತನಾಡಿದ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಳವಾಗಬೇಕು ಎಂಬ ಕೂಗು ಈ ಹಿಂದೆಯೂ ಕೇಳಿ ಬಂದಿತ್ತು. 'ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳಲ್ಲಿ ನ್ಯಾಯಾಲಯಗಳು ಸಂವೇದನಾರಹಿತವಾಗಿ ವರ್ತಿಸುವುದು ಪೂರ್ಣವಾಗಿ ನಿವಾರಣೆ ಆಗಬೇಕಿದ್ದರೆ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಬೇಕು' ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು ಕಳೆದ ಡಿಸೆಂಬರ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಹೇಳಿದ್ದರು.

ಸುಪ್ರೀಂ ಕೋರ್ಟ್‌ನ 70 ವರ್ಷಗಳ ಇತಿಹಾಸದಲ್ಲಿ ಮಹಿಳಾ ಪ್ರಾತಿನಿಧ್ಯವು ಆರೋಗ್ಯಕರವಾಗಿ ಎಂದೂ ಇರಲೇ ಇಲ್ಲ. ಈವರೆಗೆ ಎಂಟು ಮಹಿಳೆಯರು ಮಾತ್ರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸ್ಥಾನಕ್ಕೆ ಏರಿದ್ದಾರೆ. ಮೊದಲ ಮಹಿಳಾ ನ್ಯಾಯಮೂರ್ತಿಯನ್ನು ಕಾಣಲು ಸುಪ್ರೀಂ ಕೋರ್ಟ್ ಸ್ಥಾಪನೆಯಾಗಿ 40 ವರ್ಷ ಬೇಕಾಗಿತ್ತು. ಫಾತಿಮಾ ಬೀವಿ ಅವರು 1989ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾದ ಮೊದಲ ಮಹಿಳೆ. ಅವರ ಬಳಿಕ ಏಳು ಮಂದಿ ಈ ಹುದ್ದೆಗೆ ಏರಿದ್ದಾರೆ. ನ್ಯಾಯಮೂರ್ತಿಗಳಾದ ಸುಜಾತಾ ಮನೋಹರ್, ರುಮಾ ಪಾಲ್, ಜ್ಞಾನಸುಧಾ ಮಿಶ್ರಾ, ರಂಜನಾ ಪ್ರಕಾಶ್ ದೇಸಾಯಿ, ಭಾನುಮತಿ, ಇಂದೂ ಮಲ್ಹೋತ್ರಾ ಮತ್ತು ಇಂದಿರಾ ಬ್ಯಾನರ್ಜಿ. ಇವರಲ್ಲಿ ಯಾರಿಗೂ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಏರುವ ಅವಕಾಶ ಸಿಕ್ಕಿಲ್ಲ. 2018ರಲ್ಲಿ ಇಂದಿರಾ ಬ್ಯಾನರ್ಜಿ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿದಾಗ ಸುಪ್ರೀಂ ಕೋರ್ಟ್‌ನ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ 3ಕ್ಕೆ ಏರಿತ್ತು. ಇದು ಈವರೆಗಿನ ಗರಿಷ್ಠ ಸಂಖ್ಯೆ.

ಇಂದೂ ಮಲ್ಹೋತ್ರಾ

ಹೈಕೋರ್ಟ್‌ಗಳ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ದೇಶದ 26 ಹೈಕೋರ್ಟ್‌ಗಳಲ್ಲಿ 1,079 ನ್ಯಾಯಮೂರ್ತಿಗಳಿದ್ದು ಅವರಲ್ಲಿ 82 ಮಂದಿ ಮಾತ್ರ ಮಹಿಳೆಯರು. ಹಿಮಾ ಕೊಹ್ಲಿ ಅವರು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಈಗ ಇರುವ ಏಕೈಕ ಮಹಿಳೆ. ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಜನವರಿ 7ರಂದು ಅವರು ಅಧಿಕಾರ ವಹಿಸಿಕೊಂಡರು.

ಸುಪ್ರೀಂ ಕೋರ್ಟ್‌ಗೆ ಮಂಜೂರಾಗಿರುವ ನ್ಯಾಯಮೂರ್ತಿಗಳ ಸಂಖ್ಯೆ 34. ಈಗ 29 ನ್ಯಾಯಮೂರ್ತಿಗಳಿದ್ದಾರೆ. ಹಾಗಾಗಿ, ಮಹಿಳಾ ಪ್ರಾತಿನಿಧ್ಯವನ್ನು ಅಲ್ಪವಾದರೂ ಹೆಚ್ಚಿಸಲು ಈಗ ಅವಕಾಶ ಇದೆ.

ಸಮಾನ ಪ್ರಾತಿನಿಧ್ಯ ಹಳೆಯ ಬೇಡಿಕೆ

ಸುಪ್ರೀಂ ಕೋರ್ಟ್‌ನಲ್ಲಿ 1922ರಿಂದಲೇ ಮಹಿಳಾ ವಕೀಲರು ಕೆಲಸ ಮಾಡುತ್ತಿದ್ದಾರೆ. ಆರಂಭದಲ್ಲಿ ಮಹಿಳಾ ವಕೀಲರ ಸಂಖ್ಯೆ ಕಡಿಮೆ ಇತ್ತಾದರೂ ಇತ್ತೀಚಿನ ವರ್ಷಗಳಲ್ಲಿ ಪುರುಷ ವಕೀಲರ ಸಂಖ್ಯೆಗೆ ಸರಿಸಮನಾಗಿ ಮಹಿಳಾ ವಕೀಲರಿದ್ದಾರೆ. ಆದರೆ, ನ್ಯಾಯಮೂರ್ತಿಗಳ ನೇಮಕ ವಿಚಾರದಲ್ಲಿ ಯಾಕೆ ಈ ವ್ಯತ್ಯಾಸವಾಗಿದೆ ಎಂಬ ಪ್ರಶ್ನೆ ಇತ್ತೀಚಿನದ್ದೇನೂ ಅಲ್ಲ.

'ನ್ಯಾಯಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯದ ಕೊರತೆಯು, ನ್ಯಾಯದೇಗುಲದಲ್ಲೇ ಲಿಂಗ ತಾರತಮ್ಯ ಹಾಸುಹೊಕ್ಕಾಗಿದೆ ಎಂಬ ಪ್ರಶ್ನೆ ಏಳುವಂತೆ ಮಾಡಬಹುದು. ಈ ಅಸಮಾನತೆಯನ್ನು ಸರಿಪಡಿಸಬೇಕು' ಎಂದು ಸುಪ್ರೀಂ ಕೋರ್ಟ್‌ನ ಮಹಿಳಾ ವಕೀಲರ ಸಂಘದ ಮೂಲಕ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠಕ್ಕೆ 2015ರಲ್ಲಿ ಮನವಿ ಸಲ್ಲಿಸಲಾಗಿತ್ತು.

ಮಹಿಳಾ ವಕೀಲರ ಈ ವಾದವನ್ನು 2015ರಲ್ಲಿಯೇ ಸಂವಿಧಾನ ಪೀಠವು ಒಪ್ಪಿತ್ತು. 'ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ದಶಕಗಳಿಂದ ಅಸಮಾನತೆ ನಡೆದುಕೊಂಡು ಬಂದಿದೆ. ಪುರುಷ ಮತ್ತು ಮಹಿಳಾ ನ್ಯಾಯಮೂರ್ತಿಗಳ ಅನುಪಾತವು ಸಮಾನವಾಗಿರಬೇಕು' ಎಂದು ಸಂವಿಧಾನ ಪೀಠದ ಮುಖ್ಯಸ್ಥರಾಗಿದ್ದ ಜೆ.ಎಸ್. ಖೇಹರ್ ಹೇಳಿದ್ದರು.

ಸಂವೇದನೆಯ ಕೊರತೆ

ಮಹಿಳಾ ಪ್ರಾತಿನಿಧ್ಯದ ಕೊರತೆಯ ಕೆಟ್ಟ ಪರಿಣಾಮವು ನ್ಯಾಯಾಧೀಶರು ನೀಡುವ ತೀರ್ಪುಗಳಲ್ಲಿಯೂ ಪ್ರತಿಫಲಿಸುತ್ತದೆ. ಉದಾಹರಣೆಗೆ, ಮಧ್ಯಪ್ರದೇಶದ ನ್ಯಾಯಾಧೀಶರೊಬ್ಬರು ಲೈಂಗಿಕ ಕಿರುಕುಳ ಪ್ರಕರಣದ ಆರೋಪಿಯ ಕೈಗೆ ಸಂತ್ರಸ್ತ ಮಹಿಳೆ ರಾಖಿ ಕಟ್ಟಬೇಕು ಎಂದು ಆದೇಶಿಸಿ, ಆರೋಪಿಗೆ ಜಾಮೀನು ನೀಡಿದ್ದರು. ಈ ಆದೇಶ ಸಾಕಷ್ಟು ಟೀಕೆಗೂ ಒಳಗಾಯಿತು. ಭಾರತದ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಅವರು ಈ ವಿಷಯದ ಬಗ್ಗೆ ಪ್ರತಿಕ್ರಿಯಿಸಿ, ನ್ಯಾಯಾಧೀಶರಿಗೆ ಲಿಂಗ ಸಂವೇದನೆಯ ಶಿಕ್ಷಣ ನೀಡುವ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟಿದ್ದರು.

'ದುರದೃಷ್ಟವಶಾತ್, ಸಂತ್ರಸ್ತ ಮಹಿಳೆಯರ ಬಗ್ಗೆ ನ್ಯಾಯಾಧೀಶರು ಅಸೂಕ್ಷ್ಮತೆ ಪ್ರದರ್ಶಿಸಿದ ಹಲವಾರು ಉದಾಹರಣೆಗಳಿವೆ. ಇಲ್ಲಿ ಮಹಿಳಾ ಸಂವೇದನೆಯ ಕೊರತೆ ಎದ್ದುಕಾಣುತ್ತದೆ. ಸಾಮಾನ್ಯವಾಗಿ, ನ್ಯಾಯಾಧೀಶರು ಅತ್ಯಾಚಾರಕ್ಕೊಳಗಾದವರ ಬಗ್ಗೆ ರೂಢಿಗತ ಗ್ರಹಿಕೆಯನ್ನೇ ಹೊಂದಿರುತ್ತಾರೆ' ಎಂದು ದೆಹಲಿಯ ನ್ಯಾಷನಲ್ ಲಾ ಯುನಿವರ್ಸಿಟಿ ನಡೆಸಿದ ಅಧ್ಯಯನ ಹೇಳಿದೆ.

ಪ್ರಾತಿನಿಧ್ಯ ಕೊರತೆಯಿಂದ ಆಗುವ ಸಮಸ್ಯೆಗಳು: ನ್ಯಾಯಾಧೀಶರ ಹುದ್ದೆಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಕೊರತೆಯಿಂದ ಹಲವು ಸಮಸ್ಯೆಗಳು ಎದುರಾಗುತ್ತವೆ. ಕೋರ್ಟ್‌ಗಳ ಮೇಲೆ ಜನರ ವಿಶ್ವಾಸ ಕಡಿಮೆಯಾಗಲು ಮಹಿಳೆಯರ ಪ್ರಾತಿನಿಧ್ಯ ಅಗತ್ಯ ಪ್ರಮಾಣದಲ್ಲಿ ಇಲ್ಲದಿರುವುದು ಮುಖ್ಯ ಕಾರಣ ಎಂದು ಹೇಳಲಾಗುತ್ತಿದೆ. ತಮಗೆ ಏನೇ ಅನ್ಯಾಯವಾದರೂ ಕೋರ್ಟ್‌ಗೆ ಹೋಗಿ ನ್ಯಾಯ ಕೇಳಲು ದೇಶದ ಮಹಿಳೆಯರು ಹಿಂದೇಟು ಹಾಕುತ್ತಾರೆ. ಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಾಧೀಶರು ಇಲ್ಲ ಎಂಬುದೂ ಇದಕ್ಕೊಂದು ಕಾರಣ. ಆದರೆ ಕೋರ್ಟ್‌ಗಳಲ್ಲಿ ತಮ್ಮ ಕಷ್ಟ ಆಲಿಸಬಲ್ಲ ಮಹಿಳೆಯೊಬ್ಬರು ಇದ್ದಾರೆ ಎಂಬುದೇ ಎಷ್ಟೋ ಮಹಿಳೆಯರಿಗೆ ನ್ಯಾಯ ಸಿಗುವ ವಿಶ್ವಾಸ ಮೂಡಿಸಬಲ್ಲದು. ಆಗ ನ್ಯಾಯಾಲಯಗಳಿಗೆ ನ್ಯಾಯಕೋರಿ ಬರುವ ಮಹಿಳೆಯರ ಸಂಖ್ಯೆಯೂ ಹೆಚ್ಚಾಗುತ್ತದೆ.

ಮೀಸಲಾತಿ ಸಾಧ್ಯವೇ?

ಸಂವಿಧಾನದ 124 ಹಾಗೂ 217ನೇ ವಿಧಿಯ ಅನ್ವಯ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗೆ ಕೊಲೀಜಿಯಂ ಮೂಲಕ ನ್ಯಾಯಮೂರ್ತಿಗಳ ನೇಮಕ ಆಗುತ್ತದೆ. ಯಾವುದೇ ಜಾತಿ ಅಥವಾ ಪಂಗಡಗಳಿಗೆ ನೇಮಕಾತಿಯಲ್ಲಿ ಮೀಸಲಾತಿ ನೀಡಬೇಕು ಎಂದು ಈ ವಿಧಿಗಳು ಹೇಳುವುದಿಲ್ಲ. ಆದರೆ ಕೆಳಹಂತದ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದಂತೆ ಕೆಲವು ರಾಜ್ಯಗಳಲ್ಲಿ ಮೀಸಲಾತಿ ಜಾರಿಯಲ್ಲಿದೆ. ಆಯಾ ಹೈಕೋರ್ಟ್‌ಗಳ ಜೊತೆ ಸಮಾಲೋಚಿಸಿ ಕೆಲವು ರಾಜ್ಯಗಳು ಮೀಸಲಾತಿ ನೀಡಿ ನ್ಯಾಯಾಧೀಶರ ನೇಮಕಾತಿಗೆ ಅನುವು ಮಾಡಿಕೊಟ್ಟಿವೆ.

'ಆಯ್ಕೆ ಪ್ರಕ್ರಿಯೆ, ಕುಟುಂಬದ ಹೊಣೆ ಕಾರಣ'

ಉನ್ನತ ನ್ಯಾಯಾಲಯಗಳಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಇರಲು ಆಯ್ಕೆ ಪ್ರಕ್ರಿಯೆಯೇ ಕಾರಣ ಎನ್ನುತ್ತವೆ ಹಲವು ಅಧ್ಯಯನ ವರದಿಗಳು. ಜತೆಗೆ ಭಾರತದ ಕೌಟುಂಬಿಕ ವ್ಯವಸ್ಥೆಯೂ ಇದಕ್ಕೆ ಒಂದು ಪ್ರಮುಖ ಕಾರಣ ಎಂದು ಈ ವರದಿಗಳು ವಿವರಿಸಿವೆ.

ಭಾರತದಲ್ಲಿ ಕಾನೂನು ಪದವಿ ಅಧ್ಯಯನದಲ್ಲಿ ಮಹಿಳೆಯರ ಪ್ರಾತಿನಿಧ್ಯವು ಪುರುಷರಿಗೆ ಸಮಾನವಾಗಿ ಇಲ್ಲದಿದ್ದರೂ, ತೀರಾ ಕಡಿಮೆಯೇನೂ ಅಲ್ಲ. 2019ರಲ್ಲಿ ದೇಶದಾದ್ಯಂತ ಕಾನೂನು ಪದವಿಗೆ ನೋಂದಣಿ ಮಾಡಿಸಿದವರಲ್ಲಿ ಮಹಿಳೆಯರ ಪ್ರಮಾಣ ಶೇ 44ರಷ್ಟು. ಆದರೆ ಅದೇ ವರ್ಷ ವಕೀಲರಾಗಿ ನೋಂದಣಿ ಮಾಡಿಸಿದವರಲ್ಲಿ ಮಹಿಳೆಯರ ಪ್ರಮಾಣ ಶೇ 15ರಷ್ಟು ಮಾತ್ರ. ಆದರೆ, ಕೆಳಹಂತದ ನ್ಯಾಯಾಲಯಗಳಿಗೆ ನ್ಯಾಯಾಧೀಶರಾಗಿ ಆಯ್ಕೆಯಾದ ಮಹಿಳೆಯರ ಪ್ರಮಾಣವು ಇದಕ್ಕಿಂತಲೂ ಹೆಚ್ಚು. 2007ರಿಂದ 2017ರ ಅವಧಿಯಲ್ಲಿ ದೇಶದಾದ್ಯಂತ ಕೆಳಹಂತದ ನ್ಯಾಯಾಲಯಗಳಲ್ಲಿ ಇದ್ದ ಮಹಿಳಾ ನ್ಯಾಯಾಧೀಶರ ಪ್ರಮಾಣ ಶೇ 36ರಷ್ಟು. ಇದಕ್ಕೆ ಆಯ್ಕೆ ಪ್ರಕ್ರಿಯೆಯೇ ಪ್ರಮುಖ ಕಾರಣ ಎನ್ನಲಾಗಿದೆ.

ಭಾರತದಲ್ಲಿ ಕೆಳಹಂತದ ನ್ಯಾಯಾಲಯಗಳಿಗೆ ನ್ಯಾಯಾಧೀಶರ ನೇಮಕಾತಿಯು, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಡೆಯುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಮಹಿಳೆಯರು ಈ ಹುದ್ದೆಗಳಿಗೆ ಗಣನೀಯ ಪ್ರಮಾಣದಲ್ಲಿ ಆಯ್ಕೆಯಾಗಿ ಬರುತ್ತಿದ್ದಾರೆ. ಆದರೆ, ರಾಜ್ಯ ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗೆ ಕೊಲೀಜಿಯಂ ವ್ಯವಸ್ಥೆ ಮೂಲಕ ನೇಮಕಾತಿ ನಡೆಯುತ್ತದೆ. ಕೊಲೀಜಿಯಂ ಆಯ್ಕೆ ಮಾಡುವ, ನ್ಯಾಯಾಧೀಶರುಗಳೇ ಉನ್ನತ ನ್ಯಾಯಾಲಯಗಳ ನ್ಯಾಯಮೂರ್ತಿಗಳಾಗಿ ಆಯ್ಕೆಯಾಗುತ್ತಾರೆ. ಕೊಲೀಜಿಯಂ ವ್ಯವಸ್ಥೆಯಲ್ಲಿ ಯಾವುದೇ ಸ್ಪರ್ಧೆಯ ಪ್ರಕ್ರಿಯೆ ಇರುವುದಿಲ್ಲ. ಹೀಗಾಗಿ ಸ್ಪರ್ಧಾತ್ಮಕ ವಿಧಾನದ ಮೂಲಕ ಮಹಿಳೆಯರು ಈ ಹುದ್ದೆಗಳಿಗೆ ಪೈಪೋಟಿ ನಡೆಸುವ ಅವಕಾಶವೇ ಇಲ್ಲ. ಹೀಗಾಗಿಯೇ ಈ ಹಂತದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗದೇ ಹೋಗುತ್ತದೆ. ಅದರ ಪರಿಣಾಮವಾಗಿ ಉನ್ನತ ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಅತ್ಯಂತ ಕಡಿಮೆ ಇದೆ. ಉನ್ನತ ನ್ಯಾಯಾಲಯಗಳಿಗೆ ನ್ಯಾಯಮೂರ್ತಿಗಳ ನೇಮಕದಲ್ಲಿ ಕೊಲೀಜಿಯಂ ಪದ್ಧತಿಗೆ ಬದಲಾಗಿ, ಸ್ಪರ್ಧಾತ್ಮಕ ಪರೀಕ್ಷೆ ವ್ಯವಸ್ಥೆ ಜಾರಿಗೆ ಬಂದರೆ ಮಹಿಳೆಯರ ಪ್ರಾತಿನಿಧ್ಯ ಹೆಚ್ಚುತ್ತದೆ ಎನ್ನುತ್ತದೆ ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ.

ಮಹಿಳಾ ವಕೀಲರು ಜಿಲ್ಲಾ ನ್ಯಾಯಾಲಯಗಳಿಗೆ ನ್ಯಾಯಾಧೀಶರಾಗಿ ಆಯ್ಕೆಯಾಗಲು ಅವಕಾಶವಿದೆ. ಆದರೆ, ಕನಿಷ್ಠ ಸತತ ಏಳು ವರ್ಷ ವಕೀಲರಾಗಿ ಸೇವೆ ಸಲ್ಲಿಸಿದ ಮಹಿಳೆಯರಷ್ಟೇ ನೇರವಾಗಿ ಜಿಲ್ಲಾ ನ್ಯಾಯಾಲಯಗಳ ನ್ಯಾಯಾಧೀಶರಾಗಬಹುದು. ಇದು ಅತ್ಯಂತ ದೊಡ್ಡ ತೊಡಕು. ಕೌಟುಂಬಿಕ ಜವಾಬ್ದಾರಿಗಳ ಕಾರಣಕ್ಕೆ ಮಹಿಳೆಯರು ಸತತ ಏಳು ವರ್ಷ ವಕೀಲರಾಗಿ ಸೇವೆ ಸಲ್ಲಿಸುವುದು ಕಷ್ಟವಾಗುತ್ತದೆ. ಈ ಹಂತದಲ್ಲೂ ಸಾಕಷ್ಟು ಮಹಿಳಾ ವಕೀಲರು ಜಿಲ್ಲಾ ನ್ಯಾಯಾಧೀಶರಾಗುವ ಅವಕಾಶ ಕಳೆದುಕೊಳ್ಳುತ್ತಾರೆ. ಜಿಲ್ಲಾ ನ್ಯಾಯಾಧೀಶರಾಗುವಲ್ಲಿ ಇರುವ ಈ ತೊಡಕು, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗುವವರೆಗೆ ಮುಂದುವರಿಯುತ್ತದೆ. ಜತೆಗೆ ಕೌಟುಂಬಿಕ ಜವಾಬ್ದಾರಿಯ ಕಾರಣಕ್ಕೆ ಹಲವು ಮಹಿಳೆಯರು ಅರ್ಧದಲ್ಲಿಯೇ ವೃತ್ತಿಯನ್ನು ತ್ಯಜಿಸುತ್ತಾರೆ. ಬಹುತೇಕ ಸಂದರ್ಭದಲ್ಲಿ ಮಹಿಳೆಯರು ಜಿಲ್ಲಾ ನ್ಯಾಯಾಧೀಶರ ಹುದ್ದೆಗೆ ಬರುವುಷ್ಟರಲ್ಲೇ ಸಾಕಷ್ಟು ವಯಸ್ಸಾಗಿರುತ್ತದೆ. ಹೈಕೋರ್ಟ್ ನ್ಯಾಯಮೂರ್ತಿಗಳಾಗಲು ಅರ್ಹತೆ ಪಡೆಯುವ ಮುನ್ನವೇ ವೃತ್ತಿಜೀವನ ಮುಗಿದಿರುತ್ತದೆ. ಹೀಗಾಗಿ ಉನ್ನತ ನ್ಯಾಯಪೀಠಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಬೆರಳೆಣಿಕೆಯಷ್ಟು ಮಾತ್ರ ಎಂದು ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ ವಿಶ್ಲೇಷಿಸಿದೆ.

ಆಧಾರ: ಸುಪ್ರೀಂ ಕೋರ್ಟ್ ವೆಬ್‌ಸೈಟ್, ಕೇಂದ್ರ ಕಾನೂನು ಸಚಿವಾಲಯದ ವೆಬ್‌ಸೈಟ್, ಪಿಟಿಐ, ಆರ್ಟಿಕಲ್14.ಕಾಂ

ಪೋಕ್ಸೊ ತಿದ್ದುಪಡಿ ಸಮಿತಿ ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ವಿಚಾರಣೆಗೆ ಒಳಪಡಿಸುವ ಆರೋಪಿಗಳ ವಯಸ್ಸಿನ ಮಿತಿಯನ್ನು 18 ವರ್ಷದಿಂದ 16 ವರ್ಷಕ್ಕೆ ಇಳಿಸುವ ಸಾಧ್ಯತೆಯ ಬಗ್ಗೆ ಸರ್ಕಾರ ಆಲೋಚಿಸಬೇಕು ಎಂದು ಸಂಸದೀಯ ಸಮಿತಿ ಹೇಳಿದೆ. ಆಪ್ತಸಮಾಲೋಚನೆ (ಕೌನ್ಸೆಲಿಂಗ್) ನಡೆಸಿ ಮನಪರಿವರ್ತನೆ ಮಾಡದೇ ಕೈಬಿಟ್ಟಲ್ಲಿ, ಈ ವಯಸ್ಸಿನವರು ಗಂಭೀರ ಸ್ವರೂಪದ ಲೈಂಗಿಕ ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಅಪಾಯ ಇದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಮಕ್ಕಳು ಮತ್ತು ಮಹಿಳೆಯರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿಕೊಳ್ಳುವ ಪೊಲೀಸರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಅಗತ್ಯವಿದ್ದಲ್ಲಿ, ಕಠಿಣ ನಿಬಂಧನೆಗಳನ್ನು ಸೇರಿಸಲು ಕಾನೂನಿಗೆ ತಿದ್ದುಪಡಿ ಮಾಡಬೇಕೆಂದು ಸೂಚಿಸಿತು.

ಹೆಚ್ಚೆಚ್ಚು ಬಾಲಕರು ಇಂತಹ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವ ಕಾರಣ, ಪೋಕ್ಸೊವನ್ನು ಮರುಪರಿಶೀಲಿಸಬೇಕಾದ ಅಗತ್ಯವಿದೆ ಎಂದು ಕಾಂಗ್ರೆಸ್ ಮುಖಂಡ ಆನಂದ್ ಶರ್ಮಾ ಅಧ್ಯಕ್ಷತೆಯ ಗೃಹವ್ಯವಹಾರ ಕುರಿತ ಸಂಸತ್ತಿನ ಸ್ಥಾಯಿಸಮಿತಿ ತಿಳಿಸಿದೆ.

ಪ್ರಸ್ತುತ, 16 ವರ್ಷಕ್ಕಿಂತ ಮೇಲ್ಪಟ್ಟವರನ್ನು ಮಾತ್ರ ಕೊಲೆ ಅಥವಾ ಅತ್ಯಾಚಾರದಂತಹ ಗಂಭೀರ ಅಪರಾಧಗಳಲ್ಲಿ ತೊಡಗಿದ್ದರೆ ವಿಚಾರಣೆಗೆ ಗುರಿಪಡಿಸಬಹುದಾಗಿದೆ.

ಸರ್ಕಾರದ ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಪೋಕ್ಸೊ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. 2017ರಲ್ಲಿ 32,608, 2018ರಲ್ಲಿ 39,827 ಹಾಗೂ 2019ರಲ್ಲಿ 47,325 ಪ್ರಕರಣಗಳು ದಾಖಲಾಗಿವೆ. 2018ಕ್ಕೆ ಹೋಲಿಸಿದರೆ, 2019ರಲ್ಲಿ ಶೇ 18ರಷ್ಟು ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಗೃಹಸಚಿವಾಲಯವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಜೊತೆಗೂಡಿ ಪೋಕ್ಸೊ ಕಾಯ್ದೆ 2012ರ ಅನ್ವಯ 18 ವರ್ಷ ವಯಸ್ಸಿನ ಮಿತಿಯನ್ನು 16 ವರ್ಷಕ್ಕೆ ಇಳಿಸಬಹುದೇ ಎಂದು ಪರಿಶೀಲಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ. 'ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ' ಎಂಬ ವರದಿಯಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೆಲವು ಪ್ರಕರಣಗಳಲ್ಲಿ ಪೋಕ್ಸೊ ಕಾಯ್ದೆಯನ್ನು ಜಾರಿ ಮಾಡಲು ಇರುವ ತೊಂದರೆಗಳನ್ನು ತಮಿಳುನಾಡು ಸರ್ಕಾರ ಮುಂದಿರಿಸಿದೆ ಎಂದು ವರದಿ ಹೇಳಿದೆ. '18 ವರ್ಷದೊಳಗಿನ ಹುಡುಗಿ ಮತ್ತು 18 ವರ್ಷ ದಾಟಿದ ಹುಡುಗ ಪರಸ್ಪರ ಒಪ್ಪಿಗೆಯ ಮೇಲೆ ವಿವಾಹವಾಗಿರುತ್ತಾರೆ. ಹುಡುಗಿಯ ಪೋಷಕರು ದೂರು ನೀಡಿದಾಗ, ಹುಡುಗನನ್ನು ಬಾಲ್ಯವಿವಾಹ ಮತ್ತು ಪೋಕ್ಸೊ ಕಾಯ್ದೆಯಡಿ ಬಂಧಿಸಲಾಗುತ್ತದೆ. ಇಂತಹ ಸಂಕೀರ್ಣ ಪ್ರಕರಣಗಳು ಅತಿಹೆಚ್ಚಾಗಿ ದಾಖಲಾಗುತ್ತಿವೆ. ಇವುಗಳ ಪಾಲು ಶೇ 40ರಷ್ಟಿದೆ' ಎಂದು ವರದಿ ಉದಾಹರಣೆ ನೀಡಿದೆ.

ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧ ಪ್ರಕರಣಗಳನ್ನು ನೋಂದಾಯಿಸದಿರುವ ಬಗ್ಗೆಯೂ ಸಮಿತಿ ಕಳವಳ ವ್ಯಕ್ತಪಡಿಸಿದೆ. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ವಿಳಂಬಕ್ಕೆ ಇದೂ ಒಂದು ಪ್ರಮುಖ ಕಾರಣವಾಗಿದೆ ಎಂದು ಹೇಳಿದೆ. ಈ ವಿಚಾರದಲ್ಲಿ ರಾಜಸ್ಥಾನ ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ ಸಮಿತಿ ಮೆಚ್ಚುಗೆ ವ್ಯಕ್ತಪಡಿಸಿದೆ. ಈ ರೀತಿಯ ಪ್ರಕರಣಗಳಲ್ಲಿ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಾಗಿದೆಯೇ ಅಥವಾ ಇಲ್ಲವೇ ಎಂದು ಪರಿಶೀಲನೆ ನಡೆಸುವ ವಿಧಾನವನ್ನು ಎಲ್ಲ ರಾಜ್ಯಗಳೂ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಲಾಗಿದೆ.

'ಇಂತಹ ಕಾರ್ಯಾಚರಣೆ ನಡೆಸುವುದರಿಂದ ಕೆಳಹಂತದ ಪೊಲೀಸ್ ಅಧಿಕಾರಿಗಳಲ್ಲಿ ಜಾಗೃತಿ ಮೂಡಿ, ಪ್ರಕರಣಗಳು ದಾಖಲಾಗುತ್ತವೆ. ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳೂ ಸೇರಿದಂತೆ ವಿವಿಧ ದೂರುಗಳು ಬಂದಾಗ, ಆನ್‌ಲೈನ್‌ನಲ್ಲಿ ಎಫ್‌ಐಆರ್ ದಾಖಲಿಸಲು ಸಮಿತಿ ಶಿಫಾರಸು ಮಾಡಿದೆ' ಎಂದು ವರದಿ ತಿಳಿಸಿದೆ.

ಸುಳ್ಳು ಪ್ರಕರಣಗಳಿಗೆ ಶಾಸ್ತಿ: ಸಮಿತಿ ಶಿಫಾರಸು

ಸುಳ್ಳು ಪ್ರಕರಣ ದಾಖಲು ಮತ್ತು ಕಾನೂನು ದುರುಪಯೋಗದ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಮಿತಿ, ಸುಳ್ಳು ಪ್ರಕರಣಗಳನ್ನು ದಾಖಲಿಸಿದ ಪೊಲೀಸ್ ಸಿಬ್ಬಂದಿಯನ್ನೇ ಅದಕ್ಕೆ ಹೊಣೆಗಾರರನ್ನಾಗಿ ಮಾಡಿ, ಕ್ರಮ ಕೈಗೊಳ್ಳಬೇಕು ಎಂದಿದೆ. ಇದೇ ವೇಳೆ ಸುಳ್ಳು ಪ್ರಕರಣಗಳನ್ನು ದಾಖಲಿಸುವ ವ್ಯಕ್ತಿಗಳ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದೆ. ಸುಳ್ಳು ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳುವ ಕುರಿತಂತೆ ಎಲ್ಲ ರಾಜ್ಯಗಳಿಗೆ ಗೃಹಸಚಿವಾಲಯವು ಸೂಚನೆ ನೀಡಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಗೃಹಸಚಿವಾಲಯವು ಈ ವಿಷಯದಲ್ಲಿ ಕಾನೂನು ಸಚಿವಾಲಯವನ್ನು ಸಂಪರ್ಕಿಸಿ, ಸುಳ್ಳು ಪ್ರಕರಣಗಳ ವಿರುದ್ಧ ಕಠಿಣ ನಿಬಂಧನೆಗಳನ್ನು ಸೇರಿಸಲು ಅಗತ್ಯ ಕಾನೂನು ತಿದ್ದುಪಡಿ ಮಾಡಬೇಕು ಎಂದು ಸ್ಥಾಯಿ ಸಮಿತಿ ಶಿಫಾರಸು ಮಾಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕೋವಿಡ್ ಬಾಧಿಸುತ್ತಿರುವ ಜಗತ್ತಿನ ಬಹುತೇಕ ದೇಶಗಳು ಲಸಿಕೆಯ ಮೇಲೆ ಭಾರಿ ನಿರೀಕ್ಷೆ ಇಟ್ಟುಕೊಂಡಿವೆ. ಭಾರತವೂ ಸೇರಿದಂತೆ ಕೆಲವೇ ದೇಶಗಳು ಕೋವಿಡ್ ಲಸಿಕೆಯನ್ನು ಈಗಾಗಲೇ ಜನರಿಗೆ ನೀಡಲು ಆರಂಭಿಸಿವೆ. ಲಸಿಕೆಯ ದರ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆ ನಡೆಯುತ್ತಿದೆ. ಜಗತ್ತಿನಲ್ಲಿ ಭಾರತವೇ ಅತಿಕಡಿಮೆ ಬೆಲೆಗೆ ಲಸಿಕೆ ನೀಡುತ್ತಿದೆ ಎಂದು ಮಾಧ್ಯಮ ಸಂಸ್ಥೆಯೊಂದು ವರದಿ ಮಾಡಿದೆ. ಇದನ್ನೇ ಆಧರಿಸಿ ಬಿಜೆಪಿ ಘಟಕವು ಟ್ವೀಟ್ ಮಾಡಿದೆ.



ವಿವಿಧ ದೇಶಗಳಲ್ಲಿರುವ ಲಸಿಕೆ ದರ ಕುರಿತು ಆಲ್ಟ್ ನ್ಯೂಸ್ ಪರಾಮರ್ಶೆ ನಡೆಸಿದೆ. ಯುನಿಸೆಫ್ ವರದಿ ಆಧರಿಸಿ ಮಾಧ್ಯಮಸಂಸ್ಥೆಯು ತಪ್ಪಾಗಿ ವರದಿ ಮಾಡಿದೆ ಎಂದು ವೆಬ್‌ಸೈಟ್ ತಿಳಿಸಿದೆ. ಯುನಿಸೆಫ್ ವರದಿಯಲ್ಲಿರುವುದು ಆಯಾ ದೇಶಗಳು ಪ್ರತಿ ಡೋಸ್ ಲಸಿಕೆ ತಯಾರಿಸಲು ಮಾಡಿದ ವೆಚ್ಚವೇ ಹೊರತು ಮಾರಾಟ ದರವಲ್ಲ. ವರದಿಯಲ್ಲಿ ಭಾರತದ ಲಸಿಕೆಯ ಪ್ರತ್ಯೇಕ ವಿಭಾಗವಿದ್ದು, ಇದರಲ್ಲಿ ಸರ್ಕಾರ ಖರೀದಿ ಮಾಡುವ ವೆಚ್ಚ ಹಾಗೂ ಖಾಸಗಿ ಮಾರಾಟದ ವಿವರಗಳಿವೆ. ಭಾರತದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ 30 ಕೋಟಿ ಜನರಿಗೆ ಉಚಿತ ಲಸಿಕೆ ನೀಡುವ ವಾಗ್ದಾನವನ್ನು ಸರ್ಕಾರ ನೀಡಿದೆ. ರಷ್ಯಾ, ಅಮೆರಿಕ, ಐರೋಪ್ಯ ಒಕ್ಕೂಟ, ಚೀನಾ ಮೊದಲಾದ ದೇಶಗಳ ವೆಬ್‌ಸೈಟ್ ಪರಿಶೀಲಿಸಿದಾಗ, ಎಲ್ಲ ಕಡೆಯೂ ಲಸಿಕೆ ಉಚಿತ ಎಂಬ ಮಾಹಿತಿ ಇದೆಯೇ ಹೊರತು ಮಾರಾಟ ದರದ ಮಾಹಿತಿ ಇಲ್ಲ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ 16 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ತೃತೀಯ ಗಂ. 31-2 (ಸಾ. 6-58) ಮಂಗಳವಾರ ನಿತ್ಯ ನಕ್ಷತ್ರ ಅಶ್ವಿನಿ ಗಂ. 57-47 (ಬೆ.ಝಾ. 5-40) ಬ್ರಹ್ಮ ನಾಮ ಯೋಗ ಗಂ. 0-59 ಗರಜ ಕರಣ ಗಂ. 31-2 ವಿಷ ಗಂ. 46-58 ಅಮೃತ ಗಂ. 38-9 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-31 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 7, 9

ಮೇಷ: ಆರ್ಥಿಕ ಸಹಾಯ ದೊರಕಿ ಆಸ್ತಿ ವ್ಯವಹಾರದಲ್ಲಿ ಕೈಹಾಕುವ ಸಾಧ್ಯತೆ. ದಲ್ಲಾಳಿ ವ್ಯವಹಾರದಿಂದ ಉತ್ತಮ ಆದಾಯ. ಗಣಕಯಂತ್ರ ಮುಂತಾದ ಆಧುನಿಕ ಯಂತ್ರಗಳ ವ್ಯವಹಾರ ನಿಮಗೆ ಉತ್ತಮ ಆದಾಯ ತರಲಿದೆ.

ವೃಷಭ: ಸರ್ಕಾರಿ ಉದ್ಯೋಗದಲ್ಲಿರುವವರಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ಹಿಂದಿನ ವರ್ಷದ ಕೆಲವು ಕಹಿ ಘಟನೆಗಳಿಗೆ ಇಂದು ಉತ್ತರ ದೊರಕಿಸಿಕೊಳ್ಳಲಿದ್ದೀರಿ. ಮನೆಯಲ್ಲಿ ಸಹೋದರರ ವಿರೋಧವನ್ನು ಎದುರಿಸಬೇಕಾಗಬಹುದು.

ಮಿಥುನ: ಗಣಕಯಂತ್ರ ಮುಂತಾದ ತಾಂತ್ರಿಕ ಉಪಕರಣಗಳ ಮಾರಾಟಗಾರರಿಗೆ ಉತ್ತಮ ಲಾಭ. ಬಂಧುಗಳ ಸಹಕಾರದಿಂದ ಆಸ್ತಿ ಖರೀದಿ ಸಾಧ್ಯತೆ. ಸಂಗಾತಿಯ ಆಸೆಯಂತೆ ದೂರದ ಪ್ರಯಾಣ ಮಾಡಲಿದ್ದೀರಿ.

ಕರ್ಕಾಟಕ: ಸ್ತ್ರೀಯರಿಗೆ ಅತಿಯಾದ ಕೆಲಸದಿಂದಾಗಿ ದೇಹಾಲಸ್ಯ. ಆಸ್ತಿ ಹಸ್ತಾಂತರ ಮಾಡುವ ಸಾಧ್ಯತೆ. ಸಾಲ ಮುಂಗಡ ಇತ್ಯಾದಿ ವ್ಯವಹಾರದಿಂದ ದಿನದ ಮಟ್ಟಿಗೆ ದೂರವಿರುವುದು ಒಳ್ಳೆಯದು. ಮಕ್ಕಳ ವಿಷಯದಲ್ಲಿ ಸಂತಸ.

ಸಿಂಹ: ಉದ್ಯಮವೊಂದರ ಸ್ಥಾಪನೆಗೆ ಅನುಕೂಲ ದೊರಕಿಸಿಕೊಳ್ಳಲಿದ್ದೀರಿ. ದಕ್ಷತೆಯ ಕಾರ್ಯನಿರ್ವಹಣೆಯಿಂದ ಉದ್ಯಮದಲ್ಲಿ ಯಶಸ್ಸು. ಆರೋಗ್ಯದಲ್ಲಿ ಏರುಪೇರುಗಳನ್ನು ನಿರೀಕ್ಷಿಸಬಹುದು.

ಕನ್ಯಾ: ಕೈಗಾರಿಕೋದ್ಯಮಿಗಳಿಗೆ ಅತ್ಯಂತ ಪ್ರಶಸ್ತವಾದ ದಿನ. ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ. ಸಾರ್ವಜನಿಕ ಸಭೆ ಸಮಾರಂಭದಲ್ಲಿ ಭಾಗವಹಿಸಿ ಗೌರವ ಹೊಂದಲಿದ್ದೀರಿ.

ತುಲಾ: ಹೆಣ್ಣುಮಕ್ಕಳಿಗೆ ಕಂಕಣ ಭಾಗ್ಯ ದೊರೆಯಲಿದೆ. ನೌಕರಿಯಲ್ಲಿರುವವರಿಗೆ ಕಿರಿಕಿರಿ ಸಾಧ್ಯತೆ. ಬಂಧುಗಳಿಂದ ಆರ್ಥಿಕ ಸಹಾಯದ ಭರವಸೆ ಪಡೆಯಲಿದ್ದೀರಿ. ಮನಸ್ಸಿಗೆ ಉಲ್ಲಾಸ ತರುವಂತಹ ವಾರ್ತೆಯೊಂದನ್ನು ಕೇಳಲಿದ್ದೀರಿ.

ವೃಶ್ಚಿಕ: ಹಣಕಾಸು ವ್ಯವಹಾರ ನಡೆಸುವವರಿಗೆ ಹೆಚ್ಚಿನ ಆದಾಯ. ಮಹಿಳಾ ರಾಜಕಾರಣಿಗಳಿಂದ ಕಿರುಕುಳ ಉಂಟಾಗುವ ಸಾಧ್ಯತೆ. ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ಹೆಸರಿನೊಂದಿಗೆ ಆದಾಯ ತರಲಿದೆ.

ಧನು: ಸಂಶೋಧನಾ ಕೆಲಸದಲ್ಲಿರುವವರಿಗೆ ಹೊಸ ಸಂಶೋಧನೆಯ ಗರಿ ಮುಡಿಗೇರಲಿದೆ. ಆಸ್ತಿ ಖರೀದಿ ಸಾಧ್ಯತೆ. ಮನೆಯಲ್ಲಿ ಆಧುನಿಕ ವಿಶೇಷ ಬದಲಾವಣೆಯೊಂದನ್ನು ನಿರೀಕ್ಷಿಸಬಹುದು. ಆರೋಗ್ಯದಲ್ಲಿ ಗಮನ ಅವಶ್ಯ.

ಮಕರ: ಆಸ್ತಿ ನೋಂದಣಿ ಮುಂತಾದ ಕೆಲಸಗಳು ಸುಗಮವಾಗಿ ನಡೆಯಲಿದೆ. ವ್ಯಾಪಾರ ವ್ಯವಹಾರದಲ್ಲಿ ಮುನ್ನಡೆ. ವ್ಯವಸಾಯ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಉತ್ತಮ ದಿನವಾಗಲಿದೆ. ಆರೋಗ್ಯದಲ್ಲಿ ಸುಧಾರಣೆ.

ಕುಂಭ: ಕೋರ್ಟು ಕಛೇರಿ ಕೆಲಸಗಳಲ್ಲಿ ಯಶಸ್ಸು. ಸ್ವಯಂ ಉದ್ಯೋಗಿಗಳಿಗೆ ಹೆಚ್ಚಿನ ಆದಾಯ. ಸಗಟು ವ್ಯಾಪಾರಿಗಳಿಗೆ ಉತ್ತಮ ವ್ಯವಹಾರವನ್ನು ನಿರೀಕ್ಷಿಸಬಹುದು. ಮಕ್ಕಳಿಂದ ಕಿರಿಕಿರಿ ಅನುಭವಿಸಬೇಕಾದೀತು.

ಮೀನ: ಜಲ ಸಂಬಂಧಿ ಕೆಲಸಗಳಲ್ಲಿ ತೊಡಗಿರುವವರಿಗೆ ಉತ್ತಮ ಭವಿಷ್ಯ. ಹೊಸ ವ್ಯಕ್ತಿಗಳ ಪರಿಚಯದಿಂದಾಗಿ ಕಾರ್ಯಾನುಕೂಲ. ಕ್ರೀಡಾಪಟುಗಳಿಗೆ ಸ್ಪರ್ಧೆಯಲ್ಲಿ ಉತ್ತಮ ಸಾಧನೆಯ ಲಕ್ಷಣ ಕಂಡುಬರುತ್ತಿದೆ.

ನಿಮ್ಮ ಜನ್ಮದಿನ 16-ಮಾರ್ಚ್ ಈ ದಿನ ಅತ್ಯಂತ ಶುಭಕರ. ಸದೃಢರೂ ಸುಂದರಕಾಯವನ್ನು ಹೊಂದಿದವರಾಗಿದ್ದು, ಆರೋಗ್ಯಭಾಗ್ಯ ನಿಮ್ಮದಾಗಲಿದೆ. ಎಣ್ಣೆ, ಪೆಟ್ರೋಲ್ ಮುಂತಾದ ದ್ರವ ವಸ್ತುಗಳ ವ್ಯವಹಾರದಿಂದಾಗಿ ಕೈ ಸುಟ್ಟುಕೊಳ್ಳುವ ಸಾಧ್ಯತೆ. ಅನುರೂಪ ದಾಂಪತ್ಯ ಜೀವನದಿಂದಾಗಿ ಸಂತೋಷ ಅನುಭವಿಸುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಕುದುರೆ –ರಾವುತರ ತಿಳಿವಳಿಕೆ

ದೇಹವೆಂಬುದು ಕುದುರೆಯಾತ್ಮನದರಾರೋಹಿ |
ವಾಹನವನುಪವಾಸವಿರಿಸೆ ನಡೆದೀತೆ ? ||
ರೋಹಿ ಜಾಗ್ರತೆದಪ್ಪೆ ಯಾತ್ರೆ ಸುಖ ಸಾಗೀತೆ ? |
ಸ್ನೇಹವೆರಡಕಮುಚಿತ – ಮಂಕುತಿಮ್ಮ || 397 ||

ಪದ-ಅರ್ಥ: ಕುದುರೆಯಾತ್ಮನದರಾರೋಹಿ = ಕುದುರೆ + ಆತ್ಮ + ಅದರ + ಆರೋಹಿ (ಸವಾರ), ವಾಹನವನುಪವಾಸವಿರಿಸೆ = ವಾಹನವನು + ಉಪವಾಸ + ಇರಿಸೆ, ರೋಹಿ = ಸವಾರ, ಜಾಗ್ರತೆದಪ್ಪೆ = ಜಾಗ್ರತೆ + ತಪ್ಪೆ, ಸ್ನೇಹವೆರಡಕಮುಚಿತ = ಸ್ನೇಹ + ಎರಡಕ್ಕೂ + ಉಚಿತ(ಸರಿಯಾದದ್ದು)

ವಾಚ್ಯಾರ್ಥ: ದೇಹವೆಂಬುದು ಕುದುರೆ ಇದ್ದ ಹಾಗೆ. ಆತ್ಮ ಅದರ ಸವಾರ. ವಾಹನವನ್ನು ಉಪವಾಸ ಇರಿಸಿದರೆ ನಡೆಯುತ್ತದೆಯೆ? ಸವಾರ ಎಚ್ಚರ ತಪ್ಪಿದರೆ ಯಾತ್ರೆ ಸುಖಕರವಾದೀತೆ? ವಾಹನ ಮತ್ತು ಸವಾರರ ನಡುವೆ ಸ್ನೇಹವಿರುವುದು ಅವಶ್ಯಕ.

ವಿವರಣೆ: ಕಗ್ಗದ ಈ ಚೌಪದಿ ಕಠೋಪನಿಷತ್ತಿನ ಒಂದು ಮುಖ್ಯ ಜ್ಞಾನಭಾಗವನ್ನು ವಿವರಿಸುತ್ತದೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ಚ |
ಬುದ್ಧಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವತು ||
ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರಾನ್ |
ಆತ್ಮೇಂದ್ರಿಯಂ ಮನೋಯುಕ್ತಂ ಭೋಕ್ತೇತ್ಯಾಹರ್ ಮನೀಷಿಣಃ ||

'ದೇಹವೆಂಬ ವಾಹನದಲ್ಲಿ ವ್ಯಕ್ತಿ ಪ್ರಯಾಣಿಕ. ಬುದ್ಧಿ ಚಾಲಕ. ಮನಸ್ಸು ಚಲನೆಯನ್ನು ನಿಯಂತ್ರಿಸುವ ಸಾಧನ. ಇಂದ್ರಿಯಗಳು ಕುದುರೆಗಳು. ಈ ರೀತಿಯಲ್ಲಿ ಆತ್ಮನು ಮನಸ್ಸು ಮತ್ತು ಇಂದ್ರಿಯಗಳ ಸಹವಾಸದಲ್ಲಿ ಸುಖಪಡುತ್ತಾನೆ ಇಲ್ಲವೆ ಕಷ್ಟಪಡುತ್ತಾನೆ'.

ದೇಹ ಎಂಬುದು ಒಂದು ವಾಹನ. ಮನಸ್ಸು ಅದರ ಚಲನೆಯನ್ನು ನಿಯಂತ್ರಿಸುತ್ತದೆ. ಎಲ್ಲೆಂದರಲ್ಲಿ ಎಳೆದು ಹೋಗುವ ಇಂದ್ರಿಯಗಳೇ ಕುದುರೆಗಳು. ಆತ್ಮ ಈ ರಥದ ಚಾಲಕ. ಕುದುರೆಗಳು ಮೂಲತಃ ಸ್ವಚ್ಛಂದ ಪ್ರವೃತ್ತಿಯವು. ಅವು ನಿಗ್ರಹವನ್ನು ಇಷ್ಟಪಡುವುದಿಲ್ಲ. ಸ್ವಲ್ಪ ಸಡಿಲ ಬಿಟ್ಟರೆ ಸಾಕು ದಿಕ್ಕು ದಿಕ್ಕಿಗೆ ಓಡಿ ಬಿಡುತ್ತವೆ. ಅವುಗಳನ್ನು ನಿಗ್ರಹಿಸುವುದು ಕಷ್ಟ ಎಂದು ಬಿಡುವುದು ಸರಿಯಲ್ಲ ಅಥವಾ ಅವುಗಳನ್ನು ಬಿಟ್ಟು ಇಳಿದು ಹೋಗುವುದೂ ಸರಿಯಾದದ್ದಲ್ಲ.

ದೇಹವನ್ನು ಕುದುರೆಯೆಂದೂ, ಆತ್ಮವನ್ನು ಅದರ ಸವಾರನೆಂದೂ ಭಾವಿಸಿದರೆ, ನಮ್ಮ ಯಾತ್ರೆ ಸುಖಕರವಾಗಬೇಕಾದರೆ ಎರಡನ್ನೂ ಸರಿಯಾಗಿ ಇಟ್ಟುಕೊಳ್ಳಬೇಕು. ಮೊದಲನೆಯದಾಗಿ ಕುದುರೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಅದಕ್ಕೆ ಸರಿಯಾದ ಆಹಾರ, ನೀರು, ನೀಡಿ ಸ್ವಚ್ಛವಾಗಿಟ್ಟುಕೊಂಡಾಗ ಅದು ಶಕ್ತಿಶಾಲಿಯಾಗುತ್ತದೆ. ಅದನ್ನು ಉಪವಾಸವಿಟ್ಟು ನಿರ್ಲಕ್ಷಿಸಿದರೆ, ಅದು ಪ್ರಯಾಣ ಮಾಡಲು ಅಶಕ್ತವಾಗುತ್ತದೆ. ಎರಡನೆಯದು ರಾವುತನ ಎಚ್ಚರ. ಹೇಗೆಂದರೆ ಹಾಗೆ ಹಾರುವ ಕುದುರೆಯನ್ನು ನಿಯಂತ್ರಣದಲ್ಲಿ ತೆಗೆದುಕೊಂಡು, ಸದಾಕಾಲದ ಎಚ್ಚರಿಕೆಯಿಂದ ನಡೆಸಬೇಕು. ಸ್ವಲ್ಪ ಮೈಮರೆತರೆ ಅಪಘಾತ ತಪ್ಪಿದ್ದಲ್ಲ.

ಆದ್ದರಿಂದ ಜಾಗರೂಕನಾದ ರಾವುತ, ಆರೋಗ್ಯಪೂರ್ಣವಾದ, ಶಕ್ತಿಶಾಲಿಯಾದ ಕುದುರೆ ಇವುಗಳ ನಡುವೆ ಸ್ನೇಹ, ತಿಳಿವಳಿಕೆ ಬಹಳ ಮುಖ್ಯ. ❖

ಪದಬಂಧ 4538 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಭಾವಚಿತ್ರವನ್ನು ತೆಗೆಯುವವನು (4)
3.ಈ ಪರಿ ಎಲ್ಲವನ್ನೂ ಬಿಟ್ಟು ಬಿಡುವಿಕೆ! (4)
5.ಕಾರಿನಲ್ಲಿ ಕುಳಿತು ಆಡಿರುವ ಬೇಟೆ! (3)
6.ಬೀಜ ಬಿತ್ತಲು ಮಾಡಿರುವ ಮಡಿ (2)
7.ನೆನಪಲ್ಲೇ ಇರುವ ಕಾರಣ (2)
9.ರಜತಕ್ಕಂಟಿದ ಧೂಳು! (2)
11.ಭೂಮಿ ಅಥವಾ ಪ್ರದೇಶ (2)
12.ಗ್ರಂಥದ ಮೂಲಪ್ರತಿ (3)
14.ತಂದೆ ಇಲ್ಲಿದ್ದಾನೆ (4)
15.ಮಾನ ನಡುವಿದ್ದಾಗ ಸರಿಸಮವಾಗಿರುವಿಕೆ! (4)

ಮೇಲಿಂದ ಕೆಳಕ್ಕೆ
1.ಅಚ್ಚು ಮಾಡುವ ಸ್ಥಳ (4)
2.ಹಿತಚಿಂತಕ ಇಲ್ಲಿದ್ದಾನೆ (3)
3.ಈ ಪರಿ ಓಡಿ ಹೋಗುವಿಕೆ! (3)
4.ಎಣಿಕೆಯನ್ನು ಹೀಗೆನ್ನಿ (3)
6.ಟಪಾಲು ಹಿಡಿದಿರುವ ಭಾಗಸ್ಥ! (4)
8. ಅಧಿಕಾರ ಕಳೆದುಕೊಳ್ಳುವಿಕೆ (4)
10.ಬಳ್ಳಿ ಕೊನೆಗಿದ್ದಾಗಿನ ಸಂಕೀರ್ಣತೆ! (4)
11.ದಿಗಂತ ರೇಖೆಯಿದು (3)
12.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
13.ಕೆಲವರು ಮಾಡುವ ಕಾರ್ಯ (3)



4537ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಶ್ಚಾತ್ತಾಪ 3. ಬಡನಡು5.ಪಲ್ಲವಿ7.ಮಸಣ 8.ಜಾತಿಕಲಹ9.ಪಾವನ10.ತ್ವರಿತ 12.ಪಡಪೋಸಿ13.ಆರೋಪಣೆ
ಮೇಲಿಂದ ಕೆಳಕ್ಕೆ: 1.ಪರಿತಾಪ 2.ಕಡುಜಾಣ4.ಏಕೀಕರಣ 6.ವಿಜ್ಞಾನ7.ಮಹತ್ವ 9.ಪಾರುಪತ್ಯ11.ತಪಾಸಣೆ

ಸುಡೊಕು 4924

6				5		7		2
			6		7		8	1
		7		3		6		9
	6			1		8		7
7		9	5		3		1	
	8			9		3		5
	7		3		1			
5		6		2			7	
	3		9		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4923 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,030
ಇಂದಿನ ಅಂತ್ಯ	14,929
▼	101
ದಿನದ ಕನಿಷ್ಠ	14,745

ವಿನಿಮಯ ದರ

$ ಡಾಲರ್	72.46
£ ಪೌಂಡ್	101.12
€ ಯುರೊ	86.69
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹380
12 ಮೊಟ್ಟೆಗೆ	₹52
ಮೈಸೂರು	
100 ಮೊಟ್ಟೆಗೆ	₹383

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1540)
ಸೋಯಾ (ರಿಫೈನ್ಡ್)	₹1280 (1280)
ಸೂರ್ಯಕಾಂತಿ (ರಿಫೈನ್ಡ್)	₹1820 (1810)
ಪಾಮೋಲಿನ್	₹1235 (1235)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ಕೊಬ್ಬರಿ ಧಾರಣೆ

ಬೆಂಗಳೂರು	₹15500-19000
ಪುತ್ತೂರು	₹5000-14000
ತುರುವೇಕೆರೆ	₹15500-15700

ನಿಧನ

ಶ್ರೀಮತಿ ಕಾಮಾಕ್ಷಮ್ಮ ಆರ್

W/o ದಿವಂಗತ ಜಿ.ಸಿ. ಪಾಪಯ್ಯರೆಡ್ಡಿ
ಗರುಡಾಚಾರ್ ಪಾಳ್ಯ, ಬೆಂಗಳೂರು
ಇವರು ದಿನಾಂಕ 15-03-2021 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿನಾಂಕ 16-03-2021 ರಂದು ಮಧ್ಯಾಹ್ನ 12:30ಕ್ಕೆ ಪಣತೂರು ರುದ್ರಭೂಮಿಯಲ್ಲಿ ನಡೆಸಲಾಗುವುದು.

ದುಃಖತಪ್ತರು: ಹೆಣ್ಣು ಮಕ್ಕಳು, ಅಳಿಯಂದಿರು ಕುಟುಂಬದವರು ಹಾಗೂ ಬಂಧು -ಮಿತ್ರರು
ಫೋನ್: 9900317242 / 9845216909

12 x 365 DAYS PASSED



CHETAN B.E. MBA
18-4-80 16-3-09
'ಓ ನನ್ನ ಚೇತನ ಆಗು ನೀ ಅನಿಕೇತನ'
ಎಂ. ಮಹಾಲಕ್ಷ್ಮಿ ನಾಗರಾಜ್

ಸವಿನೆನಪು

ಶ್ರೀಮತಿ ಲಕ್ಷ್ಮಮ್ಮ ಶ್ರೀ ಚಿಕ್ಕಸಿದ್ದಪ್ಪ

ನೀವುಗಳು ನಮ್ಮನ್ನಗಲಿ ವರ್ಷಗಳೇ ಕಳೆದರೂ ನಿಮ್ಮ ಪ್ರೀತಿ, ತ್ಯಾಗಮಯಿ ಜೀವನ, ಆದರ್ಶಗಳೇ ನಮಗೆ ದಾರಿದೀಪ. ಅನುದಿನವೂ ಅನುಕ್ಷಣವು ನಿಮ್ಮ ನೆನಪಿನಲ್ಲಿರುವ

ಬಿ.ಸಿ. ರಾಜಗೋಪಾಲ ಮತ್ತು ಸಹೋದರರು ಹಾಗೂ ಕುಟುಂಬದವರು, ದೇವರಬೀಸಲಹಳ್ಳಿ

'2 ವರ್ಷದಿಂದ ₹ 2 ಸಾವಿರದ ನೋಟು ಮುದ್ರಣ ಆಗಿಲ್ಲ'

ನವದೆಹಲಿ (ಪಿಟಿಐ): ₹ 2 ಸಾವಿರ ಮುಖಬೆಲೆಯ ನೋಟುಗಳ ಪ್ರಮಾಣ ಕಡಿಮೆ ಆಗಿದ್ದರೂ ಕಳೆದ ಎರಡು ವರ್ಷಗಳಲ್ಲಿ ಈ ಮುಖಬೆಲೆಯ ನೋಟುಗಳನ್ನು ಮುದ್ರಿಸಿಲ್ಲ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಸಿಂಗ್ ಠಾಕೂರ್ ಲೋಕಸಭೆಗೆ ತಿಳಿಸಿದ್ದಾರೆ.

2018ರ ಮಾರ್ಚ್ 30ರ ವೇಳೆಗೆ ₹ 2 ಸಾವಿರ ಮುಖಬೆಲೆಯ 336.2 ಕೋಟಿ ಕರೆನ್ಸಿ ನೋಟುಗಳು ಚಲಾವಣೆಯಲ್ಲಿ ಇದ್ದವು. 2021ರ ಫೆಬ್ರುವರಿ 26ರ ವೇಳೆಗೆ ಅವುಗಳ ಸಂಖ್ಯೆ 249.9 ಕೋಟಿಗೆ ಇಳಿಕೆ ಆಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

2019–20 ಮತ್ತು 2020–21ರಲ್ಲಿ ₹ 2 ಸಾವಿರ ಮುಖಬೆಲೆಯ ನೋಟುಗಳನ್ನು ಮುದ್ರಿಸಲು ಮುದ್ರಣಾಲಯಗಳಿಗೆ ಕೋರಿಕೆ ಕಳುಹಿಸಿಲ್ಲ ಎಂದು ಅವರು ತಿಳಿಸಿದ್ದಾರೆ.

ಜಿಎಸ್‌ಟಿ ಪರಿಹಾರ: ₹ 3 ಲಕ್ಷ ಕೋಟಿ ಕೊರತೆ ಸಾಧ್ಯತೆ

ಮುಂಬೈ (ಪಿಟಿಐ): ಮುಂದಿನ ಹಣಕಾಸು ವರ್ಷದಲ್ಲಿ ಕೇಂದ್ರವು ರಾಜ್ಯಗಳಿಗೆ ನೀಡಬೇಕಿರುವ ಜಿಎಸ್‌ಟಿ ಪರಿಹಾರ ಮೊತ್ತದ ಕೊರತೆ ₹ 3 ಲಕ್ಷ ಕೋಟಿಗಳಷ್ಟಾಗುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಅಂದಾಜು ಮಾಡಿದೆ.

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಕಡಿಮೆ ಖರ್ಚಿನ 'ಇಟಿಎಫ್'

• ಬಸವರಾಜ ತೋನಗಟ್ಟಿ

'**ಈಕ್ವಿಟಿ** ಮ್ಯೂಚುವಲ್ ಫಂಡ್ಸ್ ಹೂಡಿಕೆದಾರರ ಎರಡು ದೊಡ್ಡ ಶತ್ರುಗಳೆಂದರೆ ಹೂಡಿಕೆಗೆ ಮಾಡಬೇಕಿರುವ ವೆಚ್ಚಗಳು ಹಾಗೂ ನಡವಳಿಕೆ' ಎಂದು ಹೇಳಿದ್ದಾನೆ ಮೊದಲ ಇಂಡೆಕ್ಸ್ ಮ್ಯೂಚುವಲ್ ಫಂಡ್ ಜನಕ ಜಾನ್ ಸಿ. ಬೋಗಲೆ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಾಗ ಬಹಳಷ್ಟು ಜನ ಆ ಫಂಡ್ ಎಷ್ಟು ಆದಾಯ ತಂದುಕೊಟ್ಟದೆ ಎಂಬುದರ ಬಗ್ಗೆ ಮಾತ್ರ ಗಮನ ಕೊಡುತ್ತಾರೆ. ಆದರೆ, ಮ್ಯೂಚುವಲ್ ಫಂಡ್ ಕಂಪನಿಗಳು ತಮ್ಮ ಮೇಲೆ ಹೇರುವ ವೆಚ್ಚಗಳ ಬಗ್ಗೆ ಗಮನ ಕೊಡುವುದೇ ಇಲ್ಲ.

ಒಂದು ಅಂದಾಜಿನ ಪ್ರಕಾರ ವರುಷಕ್ಕೆ ಶೇಕಡ 1ರಷ್ಟು ವೆಚ್ಚ ಉಳಿತಾಯ ಮಾಡಿದರೆ, 30 ವರುಷಗಳಲ್ಲಿ ಹೂಡಿಕೆಯ ಮೇಲೆ ಶೇ 26ರಷ್ಟು ಉಳಿಸಬಹುದು. ಇಂತಹ ಸಣ್ಣ ಸಣ್ಣ ಸಂಗತಿಗಳು ಹೂಡಿಕೆ ಮಾಡುವಾಗ ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶಗಳಾಗುತ್ತವೆ.

ಇಟಿಎಫ್ ಎಂದರೇನು?

ನಮ್ಮಲ್ಲಿ ಹಲವರಿಗೆ ಮ್ಯೂಚುವಲ್ ಫಂಡ್ಸ್ ಬಗ್ಗೆ ಗೊತ್ತಿದೆ. ಇಟಿಎಫ್ (ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್) ಕೂಡ ಒಂದು ಬಗೆಯ ಮ್ಯೂಚುವಲ್ ಫಂಡ್. ಇಟಿಎಫ್ ಮೂಲಕ ನಮಗೆ ಷೇರು ಮಾರುಕಟ್ಟೆಯ ನಿರ್ದಿಷ್ಟ ಸೂಚ್ಯಂಕದಲ್ಲಿನ, ಎಲ್ಲ ಕಂಪನಿಗಳ ಷೇರುಗಳನ್ನು ಖರೀದಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ, ನಿಫ್ಟಿ ಅಥವಾ ಸೆನ್ಸೆಕ್ಸ್ ತರಹದ ಸೂಚ್ಯಂಕಗಳಲ್ಲಿ ಇರುವ ಕಂಪನಿಗಳ ಷೇರುಗಳನ್ನು, ಆಯಾ ಕಂಪನಿಗಳ ಷೇರು ಮೌಲ್ಯದ ಅನುಪಾತಕ್ಕೆ ತಕ್ಕಂತೆ ಇಟಿಎಫ್ ಮೂಲಕ ಖರೀದಿಸಬಹುದು.

ಇಲ್ಲಿ ಫಂಡ್ ಮ್ಯಾನೇಜರ್‌ಗೆ ಯಾವುದೇ ಪಾತ್ರ ಇರುವುದಿಲ್ಲ. ಉದಾಹರಣೆಗೆ, ನೀವು ನಿಫ್ಟಿ ಇಟಿಎಫ್‌ನಲ್ಲಿ ಹೂಡಿಕೆ ಮಾಡಿದರೆ ಮ್ಯೂಚುವಲ್ ಫಂಡ್ ಕಂಪನಿಗಳು ನಿಮ್ಮ ಹೂಡಿಕೆಯನ್ನು ನಿಫ್ಟಿ 50 ಷೇರುಗಳಲ್ಲಿ, ಸೂಚ್ಯಂಕದಲ್ಲಿ ಆಯಾ ಷೇರುಗಳ ಪ್ರಮಾಣಕ್ಕೆ ತಕ್ಕಂತೆ ತೊಡಗಿಸುತ್ತವೆ. ಫಂಡ್ ಮ್ಯಾನೇಜರ್‌ಗಳ ಪಾತ್ರ ಇಲ್ಲಿ ತೀರಾ ನಗಣ್ಯವಾಗಿರುವ ಕಾರಣ, ಹೂಡಿಕೆಗಳ ಮೇಲಿನ ವೆಚ್ಚ ಕೂಡ ಇಲ್ಲಿ ಬಹಳ ಕಡಿಮೆ. ಹಾಗಾಗಿ, ಇಟಿಎಫ್‌ಗಳಿಗೆ ಅತ್ಯಂತ ಕಡಿಮೆ ಬೆಲೆಗೆ ಲಭ್ಯವಾಗುವ ಹೂಡಿಕೆ ಉತ್ಪನ್ನಗಳು ಎಂಬ ಹೆಗ್ಗಳಿಕೆಯೂ ಇದೆ.

ಆ್ಯಕ್ಟಿವ್ ಮ್ಯೂಚುವಲ್ ಫಂಡ್‌ಗಳಲ್ಲಿನ ನಮ್ಮ ಹೂಡಿಕೆಯ ಹಣವನ್ನು ಫಂಡ್ ಮ್ಯಾನೇಜರ್‌ಗಳು ತಮ್ಮ ಅನುಭವದ ಆಧಾರದ ಮೇಲೆ ಹಾಗೂ ಮಾರುಕಟ್ಟೆ ಯಾವ ರೀತಿ ಮುಂದೆ ಸಾಗಬಹುದು ಎಂಬುದನ್ನು ಆಧರಿಸಿ ಎಲ್ಲಿ ತೊಡಗಿಸಬೇಕು ಎಂಬುದನ್ನು ತೀರ್ಮಾನಿಸುತ್ತಾರೆ. ಆದರೆ ಇಟಿಎಫ್‌ಗಳಲ್ಲಿ ಅಂತಹ ಸ್ವಾತಂತ್ರ್ಯವು ಫಂಡ್ ಕಂಪನಿಗಳಿಗೆ ಇರುವುದಿಲ್ಲ.

ಮ್ಯೂಚುವಲ್ ಫಂಡ್‌ಗಳನ್ನು ನಿರ್ವಹಿಸುವ ಮ್ಯಾನೇಜರ್‌ಗಳು ಎಷ್ಟು ದಿನಗಳವರೆಗೆ ಹೂಡಿಕೆದಾರರಿಗೆ, ನಿರ್ದಿಷ್ಟ ಸೂಚ್ಯಂಕ ತಂದುಕೊಡುವ ಲಾಭಕ್ಕಿಂತ ಹೆಚ್ಚಿನ ಲಾಭವನ್ನು ತಂದುಕೊಡುತ್ತಾರೆ ಎಂದು ಹೇಳಲು ಆಗದು. ಮ್ಯೂಚುವಲ್ ಫಂಡ್‌ಗಳಲ್ಲಿ ಹೆಚ್ಚು ವೆಚ್ಚವೂ ಇರುತ್ತದೆ. ಜೊತೆಗೆ ಒಂದಿಷ್ಟು ಅನಿಶ್ಚಿತತೆ ಕೂಡ ಇರುತ್ತದೆ. ಹಾಗಾಗಿ, ಈಚಿನ ದಿನಗಳಲ್ಲಿ ಭಾರತದಲ್ಲಿ ಪ್ಯಾಸಿವ್ ಫಂಡ್‌ಗಳು – ಅಥವಾ ಇಟಿಎಫ್ – ಮತ್ತು ಇಂಡೆಕ್ಸ್ ಫಂಡ್‌ಗಳು ಜನಪ್ರಿಯತೆ ಪಡೆದುಕೊಳ್ಳುತ್ತಿವೆ.

ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಲು ನೀವು ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸಿರಬೇಕು. ಹಾಗೆಯೇ, ಇಟಿಎಫ್ ಹೂಡಿಕೆಗೆ ಡಿಮ್ಯಾಟ್ ಖಾತೆ ಅವಶ್ಯಕ.

ಅನುಕೂಲಗಳು

• **ಸರಳ:** ಇಟಿಎಫ್‌ಗಳು ಒಂದು ಸೂಚ್ಯಂಕವನ್ನು ತಮ್ಮ ಮಾನದಂಡವಾಗಿ ಇಟ್ಟುಕೊಂಡು, ಆ ಸೂಚ್ಯಂಕದಲ್ಲಿನ ಷೇರುಗಳಲ್ಲಿ ಅವುಗಳ ಅನುಪಾತಕ್ಕೆ ಅನುಗುಣವಾಗಿ ಹೂಡಿಕೆ ಮಾಡುವದರಿಂದ, ನಿಮಗೆ ಫಂಡ್ ಬಗ್ಗೆ ಯಾವುದೇ ಅನುಭವ ಇಲ್ಲದಿದ್ದರೂ ಸರಳವಾಗಿ ಹೂಡಿಕೆ ಮಾಡಬಹುದು.

• **ವೆಚ್ಚ ಕಡಿಮೆ:** ಮೊದಲೇ ಹೇಳಿದಂತೆ, ಇಟಿಎಫ್ ಫಂಡ್‌ಗಳ ಮೂಲಕ ಮಾಡುವ ಹೂಡಿಕೆಗಳಿಗೆ ಪಾವತಿ ಮಾಡಬೇಕಿರುವ ವೆಚ್ಚ ತುಂಬಾ ಕಡಿಮೆ. ಉದಾಹರಣೆಗೆ, ಎಚ್‌ಡಿಎಫ್‌ಸಿ ಸೆನ್ಸೆಕ್ಸ್ ಇಟಿಎಫ್ ವೆಚ್ಚ ಶೇ 0.05. ಆದರೆ, ಬ್ಲ್ಯೂಚಿಪ್ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡುವ ಒಂದು ಜನಪ್ರಿಯ ಮ್ಯೂಚುವಲ್ ಫಂಡ್‌ನ ವೆಚ್ಚ ಶೇ 0.5ರಷ್ಟು. ಎಚ್‌ಡಿಎಫ್‌ಸಿ ಇಟಿಎಫ್‌ನಲ್ಲಿ ಹೂಡಿಕೆ ಮಾಡುವ ಮೂಲಕ ವಾರ್ಷಿಕ ಶೇ 0.45ರಷ್ಟು ಹಣ ಉಳಿಸಬಹುದು.

• **ಫಂಡ್ ಮ್ಯಾನೇಜರ್ ಮೇಲಿನ ಅವಲಂಬನೆ ಇಲ್ಲ:** ಇಟಿಎಫ್ ಮ್ಯೂಚುವಲ್ ಫಂಡ್‌ಗಳಲ್ಲಿ ಫಂಡ್ ಮ್ಯಾನೇಜರ್‌ಗೆ ಹೆಚ್ಚಿನ ಪಾತ್ರ ಇರುವುದಿಲ್ಲ. ಆದ್ದರಿಂದ ಫಂಡ್ ಮ್ಯಾನೇಜರ್ ಬದಲಾವಣೆ ಆದರೂ ಹೂಡಿಕೆಗೆ ಯಾವುದೇ ತೊಂದರೆ ಇಲ್ಲ.

• **ಸರಳವಾಗಿ ಖರೀದಿ, ಮಾರಾಟ:** ಡಿಮ್ಯಾಟ್ ಖಾತೆ ಮುಖಾಂತರ ಇಟಿಎಫ್ ಖರೀದಿಯನ್ನು ನೀವು ಷೇರು ಖರೀದಿ ಮಾಡಿದಷ್ಟೇ ಸುಲಭವಾಗಿ ಮಾಡಬಹುದು. ಮಾರುವುದು ಕೂಡ ಷೇರು ಮಾರಿದಷ್ಟೇ ಸುಲಭ.

ಅನಾನುಕೂಲಗಳೂ ಇವೆ

• **ಡಿಮ್ಯಾಟ್ ಖಾತೆ ಅಗತ್ಯ:** ಇಟಿಎಫ್ ಹೂಡಿಕೆಗೆ ಡಿಮ್ಯಾಟ್ ಖಾತೆ ಹೊಂದುವುದು ಕಡ್ಡಾಯ. ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಡಿಮ್ಯಾಟ್ ಖಾತೆಯ ಅವಶ್ಯಕತೆ ಇಲ್ಲ. ಆದ್ದರಿಂದ, ಇಟಿಎಫ್‌ನಲ್ಲಿ ಹೂಡಿಕೆ ಮಾಡುವವರು ಡಿಮ್ಯಾಟ್ ಖಾತೆ ನಿರ್ವಹಣೆಯ ಖರ್ಚನ್ನೂ ನಿಭಾಯಿಸಬೇಕು.

• **ಖರೀದಿ ಮತ್ತು ಮಾರಾಟ:** ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ಮಾರಾಟ ಮಾಡಬೇಕಾದರೆ, ಆ ಮಾರಾಟವು ಮ್ಯೂಚುವಲ್ ಫಂಡ್ ಕಂಪನಿಗಳ ಜೊತೆ ನಡೆಯುತ್ತದೆ. ಆದರೆ, ಇಟಿಎಫ್ ಖರೀದಿ ಹಾಗೂ ಮಾರಾಟ ಆ ರೀತಿಯದ್ದಲ್ಲ. ಷೇರನ್ನು ಖರೀದಿ ಹಾಗೂ ಮಾರಾಟ ಮಾಡುವ ಹಾಗೆ ಷೇರು ವಿನಿಮಯ ಕೇಂದ್ರದ ಮೂಲಕ ಮಾಡಬೇಕಾಗುತ್ತದೆ. ಇಲ್ಲಿ ಖರೀದಿ ಹಾಗೂ ಮಾರಾಟ ದರ ನಿರ್ಧಾರ ಆಗುವುದು ಬೇಡಿಕೆ ಮತ್ತು ಪೂರೈಕೆ ಆಧಾರದ ಮೇಲೆ. ಹಾಗಾಗಿ, ಕೆಲವು ಸಂದರ್ಭಗಳಲ್ಲಿ ಹೂಡಿಕೆದಾರರಿಗೆ ನಿರೀಕ್ಷಿತ ಲಾಭ ಸಿಗದಿರಬಹುದು.

• **ವ್ಯಾಪಾರದ ಪ್ರಮಾಣ:** ಭಾರತದಲ್ಲಿ ಇಟಿಎಫ್‌ಗಳು ಇನ್ನೂ ಪೂರ್ತಿ ಪ್ರಮಾಣದಲ್ಲಿ ಜನಪ್ರಿಯತೆ ಪಡೆದಿಲ್ಲ. ಹಾಗಾಗಿ, ಇಟಿಎಫ್‌ಗಳಲ್ಲಿ ವಹಿವಾಟು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಇಲ್ಲ. ಹೀಗಾಗಿ ಇಟಿಎಫ್‌ನಲ್ಲಿ ಹೂಡಿಕೆ ಹಿಂತೆಗೆಯುವವರಿಗೆ, ಫಂಡ್ ಖರೀದಿ ಮಾಡುವವರು ಸರಿಯಾದ ಸಮಯಕ್ಕೆ ಸಿಗದಿರುವ ಸಾಧ್ಯತೆಯೂ ಇದೆ.

• **ಮಾರುಕಟ್ಟೆ ಕುಸಿದಾಗ:** ಮ್ಯೂಚುವಲ್ ಫಂಡ್ ಮ್ಯಾನೇಜರ್‌ಗಳು ಮಾರುಕಟ್ಟೆ ಕುಸಿತದ ಲಕ್ಷಣ ಕಂಡುಬಂದರೆ ಅಥವಾ ಯಾವುದೇ ಕಂಪನಿಯ ಷೇರು ಮೌಲ್ಯ ಬಹಳ ಕುಸಿಯಲಾರಂಭಿಸಿದರೆ, ಆದರದಿಂದ ಬೇಗನೆ ಹೊರಗೆ ಬಂದು, ಹೂಡಿಕೆ ಹಣವನ್ನು ನಗದು ರೂಪದಲ್ಲಿಯೇ ಇರಿಸಿಕೊಳ್ಳುತ್ತಾರೆ. ಹೂಡಿಕೆದಾರರಿಗೆ ಹೆಚ್ಚು ನಷ್ಟವಾಗದಂತೆ ನೋಡಿಕೊಳ್ಳುವ ಕೆಲಸವನ್ನು ಮ್ಯಾನೇಜರ್‌ಗಳು ಮಾಡುತ್ತಾರೆ. ಆದರೆ, ಇಟಿಎಫ್‌ನಲ್ಲಿ ಫಂಡ್ ಮ್ಯಾನೇಜರ್‌ಗಳಿಗೆ ಈ ಬಗೆಯ ಸ್ವಾತಂತ್ರ್ಯ ಇಲ್ಲದಿರುವ ಕಾರಣ, ಮಾರುಕಟ್ಟೆ ಕುಸಿಯಲಾರಂಭಿಸಿದರೆ, ಇಟಿಎಫ್ ಬೆಲೆ ಕೂಡ ಅದೇ ವೇಗದಲ್ಲಿ ಕುಸಿಯುತ್ತದೆ.

(ಲೇಖಕ: ಹಣಕಾಸು ಸಲಹೆಗಾರ)

ಸಂಕ್ಷಿಪ್ತ ಸುದ್ದಿ

ಪವನ್ ಹುಂಡೈಗೆ ಮಾನ್ಯತೆ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಕಂಪನಿಯು ತುಮಕೂರಿನ 'ಪವನ್ ಹುಂಡೈ'ಗೆ ಗ್ರಾಹಕರ ಸಂತೃಪ್ತಿ ವಿಭಾಗದಲ್ಲಿ 'ದಕ್ಷಿಣ ಭಾರತದಲ್ಲಿ ನಂ.1' ಎಂಬ ಮಾನ್ಯತೆ ನೀಡಿದೆ. 2020ರಲ್ಲಿ ನಡೆಸಿದ ಗ್ರಾಹಕರ ಅನುಭವ ಕುರಿತ ಸಮೀಕ್ಷೆಯಲ್ಲಿ ಪವನ್ ಹುಂಡೈಗೆ ಈ ಸ್ಥಾನ ದಕ್ಕಿದೆ.

ಸಮೀಕ್ಷೆಯನ್ನು 2020ರ ಜನವರಿಯಿಂದ ಡಿಸೆಂಬರ್‌ವರೆಗೆ ನಡೆಸಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ. ಹುಂಡೈ ಕಂಪನಿಯು ತನ್ನ ಕಾರುಗಳ ಮಾರಾಟ ಹಾಗೂ ಸೇವೆಗಳ ವಿಭಾಗಗಳಲ್ಲಿ ಗ್ರಾಹಕರಿಗೆ ಉತ್ತಮ ಅನುಭವ ಒದಗಿಸಲು ತರಬೇಕಿರುವ ಬದಲಾವಣೆಗಳು ಏನು ಎಂಬ ಬಗ್ಗೆ ನಿರಂತರವಾಗಿ ಗಮನಿಸುತ್ತ ಇರುತ್ತದೆ ಎಂದು ಕೂಡ ಪ್ರಕಟಣೆಯಲ್ಲಿ ಹೇಳಲಾಗಿದೆ.

ಸಾಲದ ಬಡ್ಡಿದರ ತಗ್ಗಿಸಿದ ಬಿಒಬಿ

ಮುಂಬೈ (ಪಿಟಿಐ): ಬ್ಯಾಂಕ್ ಆಫ್ ಬರೋಡಾ ರೆಪೊ ದರದ ಜೊತೆ ಜೋಡಣೆ ಆಗಿರುವ ಸಾಲದ ಮೇಲಿನ ಬಡ್ಡಿದರವನ್ನು ಶೇ 0.10ರಷ್ಟು ಇಳಿಕೆ ಮಾಡಿದೆ. ಇದರಿಂದಾಗಿ, ಗ್ರಾಹಕರಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರವು ಶೇ 6.85ರಷ್ಟು ಇದ್ದಿದ್ದು, ಶೇ 6.75ಕ್ಕೆ ಇಳಿಕೆಯಾಗಿದೆ. ಇದು ಸೋಮವಾರದಿಂದಲೇ ಜಾರಿಗೆ ಬಂದಿದೆ.

ಬಡ್ಡಿದರ ಇಳಿಕೆಯಿಂದಾಗಿ ಗೃಹ ಸಾಲದ ಬಡ್ಡಿದರವು ಶೇ 6.75ರಿಂದ, ಕಾರು ಸಾಲದ ಬಡ್ಡಿದರವು ಶೇ 7ರಿಂದ ಹಾಗೂ ಶಿಕ್ಷಣ ಸಾಲ ಶೇ 6.75ರಿಂದ ಆರಂಭವಾಗಲಿದೆ ಆರಂಭವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಗಟು ಹಣದುಬ್ಬರ ಹೆಚ್ಚಳ

ನವದೆಹಲಿ (ಪಿಟಿಐ): ಸಗಟು ಬೆಲೆ ಆಧರಿಸಿದ ಹಣದುಬ್ಬರ ಪ್ರಮಾಣ ಫೆಬ್ರುವರಿಯಲ್ಲಿ ಶೇ 4.17ಕ್ಕೆ ಏರಿಕೆ ಕಂಡಿದೆ. ಆಹಾರ ವಸ್ತುಗಳು ಹಾಗೂ ಇಂಧನದ ಬೆಲೆಯಲ್ಲಿ ಆಗಿರುವ ಹೆಚ್ಚಳವು ಹಣದುಬ್ಬರದ ಏರಿಕೆಗೆ ಕಾರಣ.

ಸಗಟು ಹಣದುಬ್ಬರ ಜನವರಿಯಲ್ಲಿ ಶೇ 2.03ರಷ್ಟು ಇತ್ತು. ಕಳೆದ ವರ್ಷದ ಫೆಬ್ರುವರಿಯಲ್ಲಿ ಇದು ಶೇ 2.26ರಷ್ಟು ಇತ್ತು. ಧಾನ್ಯಗಳ ಬೆಲೆಯಲ್ಲಿನ ಹೆಚ್ಚಳ ಫೆಬ್ರುವರಿಯಲ್ಲಿ ಶೇ 10.25ರಷ್ಟಾಗಿತ್ತು. ಫೆಬ್ರುವರಿಯಲ್ಲಿ ಹಣ್ಣುಗಳ ಹಣದುಬ್ಬರ ಶೇ 9.48ರಷ್ಟು, ತೈಲ ಮತ್ತು ಇಂಧನ ಹಣದುಬ್ಬರ ಶೇ 0.58ರಷ್ಟು ಆಗಿತ್ತು.

ಷೇರುಪೇಟೆಯಲ್ಲಿ ಮಾರಾಟದ ಒತ್ತಡ

ಮುಂಬೈ (ಪಿಟಿಐ): ಕೋವಿಡ್–19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು, ಚಿಲ್ಲರೆ ಹಣದುಬ್ಬರ ಏರಿಕೆ ಮತ್ತು ಕೈಗಾರಿಕಾ ಬೆಳವಣಿಗೆ ಇಳಿಕೆ ಆಗಿರುವ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಂಡಿದೆ.

ಸೋಮವಾರದ ವಹಿವಾಟಿನ ಒಂದು ಹಂತದಲ್ಲಿ 1,036 ಅಂಶಗಳ ವರೆಗೆ ಇಳಿಕೆ ಕಂಡಿದ್ದ ಬಿಎಸ್‌ಇ ಸೆನ್ಸೆಕ್ಸ್ ನಂತರ ತುಸು ಚೇತರಿಸಿಕೊಂಡಿತು. ವಹಿವಾಟಿನ ಅಂತ್ಯದ ವೇಳೆಗೆ 397 ಅಂಶಗಳ ಇಳಿಕೆಯೊಂದಿಗೆ 50,395 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ರೂಪಾಯಿ ಮೌಲ್ಯ ವೃದ್ಧಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 33 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 72.46ರಂತೆ ವಿನಿಮಯಗೊಂಡಿತು. ಇದು ಎರಡು ವಾರಗಳ ಗರಿಷ್ಠ ಮಟ್ಟವಾಗಿದೆ.

ಬ್ಯಾಂಕಿಂಗ್ ಸೇವೆಗಳಿಗೆ ಅಡ್ಡಿ

ಒಂದನೇ ಪುಟದಿಂದ

'ಕೇಂದ್ರ ಸರ್ಕಾರವು ಮುಷ್ಕರಕ್ಕೆ ಯಾವ ರೀತಿ ಸ್ಪಂದಿಸಲಿದೆ ಎನ್ನುವುದನ್ನು ಆಧರಿಸಿ ಮುಂದಿನ ಹೆಜ್ಜೆ ಇಡಲಾಗುವುದು. ಸರ್ಕಾರವು ಖಾಸಗೀಕರಣದ ನಿರ್ಧಾರದಿಂದ ಹಿಂದೆ ಸರಿಯದೇ ಇದ್ದರೆ ಮುಷ್ಕರ ತೀವ್ರಗೊಳಿಸುವ, ಅನಿರ್ದಿಷ್ಟಾವಧಿ ಮುಷ್ಕರ ನಡೆಸುವ ಸಾಧ್ಯತೆಯೂ ಇದೆ' ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘಟನೆಯ (ಐಎನ್‌ಬಿಇಎಫ್) ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಕೆ. ನರಸಿಂಹಮೂರ್ತಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಖಾಸಗೀಕರಣದ ಪರಿಣಾಮವಾಗಿ ಬ್ಯಾಂಕ್ ಸೇವೆಗಳು ನಗರ ಕೇಂದ್ರಿತ ಆಗಬಹುದು. ಗ್ರಾಮೀಣ ಪ್ರದೇಶದ ಶಾಖೆಗಳು ಮುಚ್ಚುವ ಸಾಧ್ಯತೆ ಇದೆ. ಇಷ್ಟೇ ಅಲ್ಲದೆ ಕೃಷಿ, ಎಂಎಸ್‌ಎಂಇ ವಲಯಗಳಿಗೆ ಸಾಲ ಪಡೆಯಲು ಕಷ್ಟವಾಗಬಹುದು. ದುರ್ಬಲ ವರ್ಗಗಳಿಗೆ ಶೇ 4ರ ಬಡ್ಡಿದರದಲ್ಲಿ ಅಂದಾಜು ₹ 15 ಸಾವಿರದಷ್ಟು ಕಡಿಮೆ ಮೊತ್ತದ ಸಾಲ ನೀಡುವ ಸೌಲಭ್ಯ ಇಲ್ಲವಾಗಬಹುದು' ಎಂದು ಅವರು ಹೇಳಿದರು.

ಸರ್ಕಾರಿ ವಲಯದ ಎಲ್ಲಾ ಬ್ಯಾಂಕ್‌ಗಳು ಹಾಗೂ ತಮ್ಮ ಒಕ್ಕೂಟಗಳು ಇರುವ ಕೆಲವು ಹಳೆಯ ಖಾಸಗಿ ಬ್ಯಾಂಕ್‌ಗಳ ಸಿಬ್ಬಂದಿ ಈ ಮುಷ್ಕರದಲ್ಲಿ ಭಾಗಿಯಾಗಿದ್ದಾರೆ ಎಂದು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್.ನಾಗರಾಜನ್ ತಿಳಿಸಿದ್ದಾರೆ.

ಉದ್ಯೋಗ ರಕ್ಷಣೆ: ಠಾಕೂರ್ ಭರವಸೆ

ನವದೆಹಲಿ (ಪಿಟಿಐ): ಪ್ರಮುಖ ರಂಗಗಳಲ್ಲಿನ, ಕೇಂದ್ರ ಸರ್ಕಾರದ ಮಾಲೀಕತ್ವದಲ್ಲಿನ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡಿದಾಗ ಉದ್ಯೋಗಿಗಳನ್ನು ಕೆಲಸದಿಂದ ತೆಗೆಯದಂತೆ ನೋಡಿಕೊಳ್ಳಲಾಗುವುದು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಸಿಂಗ್ ಠಾಕೂರ್ ರಾಜ್ಯಸಭೆಗೆ ತಿಳಿಸಿದ್ದಾರೆ.

ಬಂಡವಾಳ ಹಿಂತೆಗೆತಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಸ್ಪಷ್ಟ ಹಾಗೂ ಪಾರದರ್ಶಕವಾದ ನೀತಿಯನ್ನು ಹೊಂದಿದೆ ಎಂದು ಠಾಕೂರ್ ಅವರು ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ತಿಳಿಸಿದ್ದಾರೆ. ಅಣುಶಕ್ತಿ, ಬಾಹ್ಯಾಕಾಶ ಮತ್ತು ರಕ್ಷಣೆ, ಸಾರಿಗೆ ಮತ್ತು ದೂರಸಂಪರ್ಕ, ವಿದ್ಯುತ್, ಪೆಟ್ರೋಲಿಯಂ, ಕಲ್ಲಿದ್ದಲು ಮತ್ತು ಇತರ ಖನಿಜಗಳು, ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ಸೇವೆಗಳು ಕೇಂದ್ರದ ಪಾಲಿಗೆ ಮಹತ್ವದ ವಲಯಗಳು ಎಂದು ಅವರು ಹೇಳಿದ್ದಾರೆ.

'ಕೇಂದ್ರ ಸರ್ಕಾರದ ಮಾಲೀಕತ್ವದಲ್ಲಿನ ಕಂಪನಿಯನ್ನು ಮಾರಾಟ ಮಾಡಿದಾಗ ಅಥವಾ ಅದರಲ್ಲಿನ ಒಂದಷ್ಟು ಷೇರುಪಾಲನ್ನು ಮಾರಿದಾಗ, ನೌಕರರನ್ನು ಕೆಲಸದಿಂದ ತೆಗೆಯಬಾರದು, ಸೌಲಭ್ಯಗಳನ್ನೆಲ್ಲ ನೀಡಬೇಕು ಎಂಬುದನ್ನೆಲ್ಲ ಮಾರಾಟ–ಖರೀದಿಯ ಒಪ್ಪಂದದಲ್ಲೇ ನಿರ್ಧರಿಸಲಾಗುವುದು' ಎಂದು ಠಾಕೂರ್ ಅವರು ವಿವರಿಸಿದ್ದಾರೆ.

ಬಂಡವಾಳ ಹಿಂತೆಗೆತದಿಂದಾಗಿ ಹೂಡಿಕೆಗಳು ಹರಿದುಬರುತ್ತವೆ, ಹೊಸ ತಂತ್ರಜ್ಞಾನ ಬರುತ್ತದೆ ಹಾಗೂ ಹೊಸ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತವೆ ಎಂಬುದು ತಮ್ಮ ವೈಯಕ್ತಿಕ ನಂಬಿಕೆ ಎಂದರು. ಈ ಮಾತು ಬಂಡವಾಳ ಹಿಂತೆಗೆತಕ್ಕೆ ಸಂಬಂಧಿಸಿದ ನೀತಿಯಲ್ಲೂ ಅಡಕವಾಗಿದೆ ಎಂದರು.

'ಒಟ್ಟಾರೆಯಾಗಿ ಉದ್ಯೋಗ ಅವಕಾಶಗಳು ಹೆಚ್ಚಲಿವೆ' ಎಂದು ಸ್ಪಷ್ಟಪಡಿಸಿದರು. 'ಮಹತ್ವದ ರಂಗಗಳಲ್ಲಿ ಕೇಂದ್ರವು ಒಂದಾದರೂ ಕಂಪನಿಯನ್ನು ತನ್ನ ಮಾಲೀಕತ್ವದಲ್ಲಿ ಉಳಿಸಿಕೊಳ್ಳಲಿದೆ' ಎಂದು ತಿಳಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	900-950
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	340

ಅಡಿಕೆ

ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಚಿತ್ರದುರ್ಗ	
ಆಪಿ	42300-42709
ಬೆಟ್ಟೆ	33449-33889
ಕೆಂಪುಗೋಟು	29529-29900
ರಾಶಿ	41839-42269
ಕುಮಟ	
ಚಿಪ್ಪು	25569-29569
ಕೋಕ	18069-27609
ಫ್ಯಾಕ್ಟರಿ	14099-17729
ಹಳೆಚಾಲಿ	37089-40099
ಹೊಸಚಾಲಿ	33569-36599
ಸಿದ್ದಾಪುರ	
ಬಿಳಿಗೋಟು	21699-29099
ಚಾಲಿ	34299-35499
ಕೋಕ	19890-27108
ಕೆಂಪುಗೋಟು	22099-29369
ರಾಶಿ	39099-41609
ತಟ್ಟಿಬೆಟ್ಟೆ	34109-39379
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	40019-43340
ಗೊರಬಲು	15160-31110
ರಾಶಿ	38099-42499
ಸರಕು	48299-73696
ಚನ್ನಗಿರಿ ತುಮ್ಕೋಸ್	
ರಾಶಿ	41199-43039

ರಾಮನಗರ ರೇಷ್ಮೆ

ಮಿಶ್ರತಳಿ (ಸಿ.ಬಿ)	200-362
ದ್ವಿತಳಿ (ಬಿ.ವಿ)	280-440

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10000	10000	9950	133.50 ಸೆಂಟ್ಸ್
ಎಸಿ	3975	3900	3925	
ಆರ್‌ಪಿ	5250	5200	5200	
ಆರ್‌ಸಿ	3000	3050	2950	1403 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

15-3-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1550)
ಒಂದು ವಾರದ ಡೆಲಿವರಿ	1555 (1545)
ಸೋಯಾ ಕಚ್ಚಾ	1260 (1260)
ಪಾಮ್ ವಾರದ ಡೆಲಿವರಿ	1233 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1780 (1770)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,675 (44,700)
ಬೆಳ್ಳಿ ಕೆ.ಜಿ 67,000 (66,500)

ಆವರಣದಲ್ಲಿ ಶನಿವಾರದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

ಸಾರ್ವಜನಿಕ ಪ್ರಕಟಣೆ

BEFORE THE ARBITRAL TRIBUNAL OF SRI D. KRISHNAPPA SOLE ARBITRATOR AT ARBITRATION & CONCILIATION CENTRE AT BENGALURU (DOMESTIC & INTERNATIONAL)
A.C. NO, 122 OF 2020
(CMP 88/2019)
BETWEEN:
M/s Azvasa Education Pvt Ltd. ....CLAIMANT
AND:
Om Eshwari Vidya Samsthe Trust, And another ...RESPONDENTS
SUMMONS TO RESPONDENT NO. 2
Respondent No.2
Mr Lokeshwarappa.S, S/o Sri Siddappa, Aged about 47 years. No 450, 3rd Cross. 3rd Main. R R Layout, Jnanabharati Post, Nagadevanahalli. Bengaluru-560056
... RESPONDENT N0.2
Whereas the claimant has filed the above Arbitration case for an award against the respondents U/s 23(1) of The Arbitration and Conciliation Act 1996. The Sole Arbitrator has ordered notice to the above said respondent on 12.03.2021
The above case is posted on 29/03/2021 at 11.30 AM for your appearance
Therefore you are hereby requested to appear on that date before the said Sole Arbitrator at Arbitration and Conciliation Centre at Bengaluru, in person or through an Advocate, failing which the matter will be decided in your absence.
Given under my hand and the seal of the Arbitral Tribunal on this the 12th day of March 2021 at Bengaluru.
By Hon'ble Tribunal order
Advocate for the Claimant
M. KESHAVA REDDY, ADVOCATE
No.18/7, 1st Cross, Behind Janardhan Hotel, Near Shivananda Circle, BENGALURU - 560 001.

ಭವಿಷ್ಯ

Astrology

★॥ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು॥★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ಕೊಳ್ಳೇಗಾಲದಿಂದ★ ನೇರಪರಿಹಾರ.ಕೊಳ್ಳೇಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರಿಪುರುಷ ಪ್ರೇಮ,ಸಂತಾನ,ವಿವಾಹ, ಶತ್ರದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

★॥ಶ್ರೀಪ್ರಸಿದ್ಧ ರಕ್ತಕಾಂಡೇಶ್ವರಿಯ॥★ ಮಾಟಮಂತ್ರ, ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ ಹಣಕಾಸಿನ ತೊಂದರೆ ಕೊಳ್ಳೆಗಾಲದ ಮೋಡಿ ಪೂಜಾಶಕ್ತಿಯಿಂದ ಶಾಶ್ವತ ಪರಿಹಾರ. ಪಂಡಿತ್.ಕಾಶಿನಾಥಭಟ್ 8050018724

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳನೆಯಿರಲಿ 2ದಿನದಲ್ಲಿ ಪರಿಹಾರ.9886755306

★॥ಶ್ರೀಚಾಮುಂಡೇಶ್ವರಿದೇವಿ ಆರಾಧಕರು॥★ ಕೇರಳದ ಅಘೋರಿ ನಾಗಸಾಧು ಮೋಡಿಮಾಂತ್ರಿಕರು ಮಾಟಮಂತ್ರ,ಸಂಭೋಗ ವಶೀಕರಣ ಇನ್ಯಾವುದೇ ಕಠಿಣಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ. ಶ್ರೀರಾಘವೇಂದ್ರ ಆಚಾರ್ಯರು. 8050061378

ವಿಶೇಷ ವ್ಯಕ್ತಿಯಾಗಬೇಕಾ? ಪರಿಹರಿಸುವ ವಿದ್ಯೆಗಳನ್ನು, ವಶೀಕರಣದ ವ್ಯಂಜನವನ್ನು ಮನೆಯಲ್ಲಿದ್ದುಕೊಂಡೇ ಕಲಿತುಕೊಳ್ಳಿ. ಸಮಸ್ಯೆಗಳಿಗೂ, ರೋಗಕ್ಕೂ, ವ್ಯಾಪಾರಕ್ಕೂ, ಪರಿಹಾರಕ್ಕಾಗಿ ಹಣಕಾಸಿನ ಸಹಾಯವಿದೆ. 8884826120

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ಉದ್ಯೋಗಾವಕಾಶ

General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

✓ ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Wanted

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9916016092, 9739993386,

✓ ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಪ್ರವಾಸ

Travel

ಸಸ್ಯಾಹಾರಿ ಊಟ, ವಸತಿಯೊಂದಿಗೆ 22.04.2021,25/35 ದಿನಗಳ ಕಾಶಿ,ಗಯಾ, ನೇಪಾಳ,ಬದರಿನಾಥ್, ಕೇದಾರನಾಥ್, ಗಂಗೋತ್ರಿ, ವೈಷ್ಣೋದೇವಿ.18.05.2021 ರಿಂದ 18 ದಿನಗಳ ಚಾರ್‌ಧಾಮ್ ಯಾತ್ರೆ 20.06.2021 ರಿಂದ 18 ದಿನಗಳ ಅಮರನಾಥ ಯಾತ್ರೆಗಳಿಗೆ ಏಷ್ಯನ್ ಟ್ರಾವಲ್ ಏಜೆನ್ಸಿ 080-26574131, 26573421, 9448522551

ರಿಯಾಯಿತಿ ದರದಲ್ಲಿ ಮಾರ್ಚ್:24 ರಿಂದ 5 ದಿನಗಳ ಅಂಡಮಾನ್ ನಿಕೋಬಾರ್ ದ್ವೀಪ, ಪ್ರವಾಸ(ಕೆಲವೇ ಸೀಟುಗಳಿವೆ) ಸಂಪರ್ಕಿಸಿ:Travel Comfort: 08041664646/ 9731001111

ವಾಹನ

Four Wheelers Selling

Others

ಮಾರ್ಚ್ ತಿಂಗಳ ಭರ್ಜರಿ ಕೊಡುಗೆಗಳು
ACE Gold ಪೆಟ್ರೋಲ್ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ACE GOLD BS6
1.99%* ಬಡ್ಡಿದರದಲ್ಲಿ ಸಾಲ ಸೌಲಭ್ಯ
ಹೆಚ್ಚುವರಿ ಎಕ್ಸ್‌ಚೇಂಜ್ ಬೋನಸ್ ₹15,000/-* ದವರೆಗೆ
ತ್ವರೆಮಾಡಿ! ಈ ಕೊಡುಗೆಗಳು 25ನೇ ಮಾರ್ಚ್ 2021 ರವರೆಗೆ ಮಾತ್ರ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

ವೈಯಕ್ತಿಕ

Lost

LOST
I, George Cherian, Neelam Rubbers India Pvt. Ltd. No 31A, Kempaigh Garden, 4th Phase, Peenya Industrial Area, Bangalore have lost Plot registered document No 1461 dated 14/06/2011. This document is related to Plot No.204, Sompura 1st Stage, Hobli, Thyamaguondlu, Taluk Nelmangala, Bangalore Rural. Finders Pls contact 9845388876

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಟೆನಿಸ್ ರ್‍ಯಾಂಕಿಂಗ್: ಮಹಿಳಾ ವಿಭಾಗದಲ್ಲಿ ಸ್ಪೇನ್‌ನ ಗಾರ್ಬೈನ್ ಮುಗುರುಜಾಗೆ ಬಡ್ತಿ

ನಡಾಲ್ ಹಿಂದಿಕ್ಕಿ 2ನೇ ಸ್ಥಾನಕ್ಕೆ ಮೆಡ್ವೆಡೆವ್

ಪ್ಯಾರಿಸ್ (ಎಎಫ್‌ಪಿ): ಸ್ಪೇನ್‌ನ ರಫೆಲ್ ನಡಾಲ್ ಅವರನ್ನು ಹಿಂದಿಕ್ಕಿದ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್, ಎಟಿಪಿ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ. ಸರ್ಬಿಯಾದ ನೊವಾಕ್ ಜೊಕೊವಿಚ್ ಮೊದಲ ಸ್ಥಾನದಲ್ಲೇ ಉಳಿದಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಮೊದಲ ಸ್ಥಾನ ಅಬಾಧಿತವಾಗಿದ್ದು ಸ್ಪೇನ್‌ನ ಗಾರ್ಬೈನ್ ಮುಗುರುಜಾ ಬಡ್ತಿ ಹೊಂದಿದ್ದಾರೆ.

25 ವರ್ಷದ ಮೆಡ್ವೆಡೆವ್ ಈ ವರ್ಷದ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್‌ಗೆ ಮಣಿದಿದ್ದರು. ನಂತರವೂ ವಿವಿಧ ಟೂರ್ನಿಗಳಲ್ಲಿ ಅಮೋಘ ಆಟವಾಡಿದ್ದರು. ಭಾನುವಾರ ಮುಕ್ತಾಯಗೊಂಡ ಮಾರ್ಸೆಲಿ ಟೂರ್ನಿಯಲ್ಲಿ ಪೀರಿ ಹ್ಯೂಗ್ಸ್ ರಾಬರ್ಟ್ ವಿರುದ್ಧ 6-4, 6-7 (4/7), 6-4ರಲ್ಲಿ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದರು.

ರ್‍ಯಾಂಕಿಂಗ್ ಪಟ್ಟಿಯ ಎರಡನೇ ಸ್ಥಾನದಲ್ಲಿ ಕಾಣಿಸಿಕೊಳ್ಳುವುದರೊಂದಿಗೆ ಮೆಡ್ವೆಡೆವ್ 16 ವರ್ಷಗಳಲ್ಲಿ ಈ ಸ್ಥಾನಕ್ಕೇರಿದ ಹೊಸ ಆಟಗಾರ ಎನಿಸಿಕೊಂಡರು. 2005ರಿಂದ ಇಲ್ಲಿಯ ವರೆಗೆ ರೋಜರ್ ಫೆಡರರ್, ರಫೆಲ್ ನಡಾಲ್, ನೊವಾಕ್ ಜೊಕೊವಿಚ್ ಮತ್ತು ಆ್ಯಂಡಿ ಮರೆ ಮಾತ್ರ ಈ ಸ್ಥಾನದಲ್ಲಿ ಇದ್ದರು. ಅಗ್ರ ಸ್ಥಾನದಲ್ಲಿ ಅತಿ ಹೆಚ್ಚು ಕಾಲ ಉಳಿದಿದ್ದ ಫೆಡರರ್ ಅವರ ದಾಖಲೆಯನ್ನು ನೊವಾಕ್ ಜೊಕೊವಿಚ್ ಕಳೆದ ವಾರವಷ್ಟೆ ಹಿಂದಿಕ್ಕಿದ್ದರು.

ಮುಗುರುಜಾಗೆ ಬಡ್ತಿ: ಮಹಿಳೆಯರ ವಿಭಾಗದಲ್ಲಿ ಗಾರ್ಬೈನ್ ಮುಗುರುಜಾ ಮೂರು ಸ್ಥಾನಗಳ ಏರಿಕೆಯೊಂದಿಗೆ 13ನೇ ಸ್ಥಾನಕ್ಕೆ ತಲುಪಿದ್ದಾರೆ. ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಟೂರ್ನಿಯ ಮಾಜಿ ಚಾಂಪಿಯನ್ ಮುಗುರುಜಾ ಶನಿವಾರ ಮುಕ್ತಾಯಗೊಂಡ ದುಬೈ ಓಪನ್ ಟೂರ್ನಿಯ ಪ್ರಶಸ್ತಿ ಗೆಲ್ಲುವುದರೊಂದಿಗೆ ಎರಡು ವರ್ಷಗಳ ಪ್ರಶಸ್ತಿ ಬರವನ್ನು ನೀಗಿಸಿಕೊಂಡಿದ್ದರು. ಫೈನಲ್‌ನಲ್ಲಿ ಅವರು ಶ್ರೇಯಾಂಕ ರಹಿತ ಆಟಗಾರ್ತಿ ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಜಿಕೋವಾ ಎದುರು ಜಯ ಸಾಧಿಸಿದ್ದರು.

ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಅಗ್ರ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ. ಅಮೆರಿಕದ ಜೆನಿಫರ್ ಬಾರ್ಡಿ, ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಒಂದು ಸ್ಥಾನ ಕಳೆದುಕೊಂಡಿದ್ದಾರೆ.

ರ್‍ಯಾಂಕಿಂಗ್‌ನಲ್ಲಿ ಮೊದಲ ಸ್ಥಾನ ಉಳಿಸಿಕೊಂಡಿರುವ ನೊವಾಕ್ ಜೊಕೊವಿಚ್ (ಬಲ) ಮತ್ತು ಎರಡನೇ ಸ್ಥಾನಕ್ಕೇರಿರುವ ಡ್ಯಾನಿಯಲ್ ಮೆಡ್ವೆಡೆವ್ –ಎಎಫ್‌ಪಿ ಚಿತ್ರ

ಪುರುಷರ ವಿಭಾಗದ ಅಗ್ರ 10 ಆಟಗಾರರು

ರ್‍ಯಾಂಕ್	ಆಟಗಾರ	ದೇಶ	ಪಾಯಿಂಟ್ಸ್
1	ನೊವಾಕ್ ಜೊಕೊವಿಚ್	ಸರ್ಬಿಯಾ	12008
2	ಡ್ಯಾನಿಯಲ್ ಮೆಡ್ವೆಡೆವ್	ರಷ್ಯಾ	9940
3	ರಫೆಲ್ ನಡಾಲ್	ಸ್ಪೇನ್	9670
4	ಡೊಮಿನಿಕ್ ಥೀಮ್	ಆಸ್ಟ್ರಿಯಾ	8625
5	ಸ್ಟೆಫನೋಸ್ ಸಿಸಿಪಸ್	ಗ್ರೀಸ್	6765
6	ರೋಜರ್ ಫೆಡರರ್	ಸ್ವಿಟ್ಜರ್ಲೆಂಡ್	6375
7	ಅಲೆಕ್ಸಾಂಡರ್ ಜ್ವೆರೆವ್	ಜರ್ಮನಿ	5635
8	ಆ್ಯಂಡ್ರೆ ರುಬ್ಲೆವ್	ರಷ್ಯಾ	5011
9	ಡೀಗೊ ಸ್ವಾರ್ಟ್ಸ್‌ಮನ್	ಅರ್ಜೆಂಟೀನಾ	3640
10	ಮಟಿಯೊ ಬೆರೆಟಿನಿ	ಇಟಲಿ	3453

ಮಹಿಳಾ ವಿಭಾಗದ ಅಗ್ರ 10 ಆಟಗಾರ್ತಿಯರು

ರ್‍ಯಾಂಕ್	ಆಟಗಾರ್ತಿ	ದೇಶ	ಪಾಯಿಂಟ್ಸ್
1	ಆ್ಯಶ್ಲಿ ಬಾರ್ಟಿ	ಆಸ್ಟ್ರೇಲಿಯಾ	9186
2	ನವೊಮಿ ಒಸಾಕ	ಜಪಾನ್	7835
3	ಸಿಮೋನ ಹಲೆಪ್	ರೊಮೇಮಿಯಾ	7255
4	ಸೋಫಿಯಾ ಕೆನಿನ್	ಅಮೆರಿಕ	5760
5	ಎಲಿನಾ ಸ್ವಿಟೋಲಿನಾ	ಉಕ್ರೇನ್	5370
6	ಕರೊಲಿನಾ ಪ್ಲಿಸ್ಕೋವ	ಜೆಕ್ ಗಣರಾಜ್ಯ	5205
7	ಸೆರೆನಾ ವಿಲಿಯಮ್ಸ್	ಅಮೆರಿಕ	4915
8	ಆರ್ಯಾ ಸಬಲೆಂಕಾ	ಬೆಲಾರಸ್	4815
9	ಬಿಯಾಂಕ ಆ್ಯಂಡ್ರೆಸ್ಕು	ಕೆನಡಾ	4735
10	ಪೆಟ್ರಾ ಕ್ವಿಟೋವ	ಜೆಕ್ ಗಣರಾಜ್ಯ	4571

ಟಿಟಿ: ಸೆಮಿಫೈನಲ್‌ಗೆ ಯಶಸ್ವಿನಿ

ರಾಷ್ಟ್ರೀಯ ಟೂರ್ನಿ: ಕರ್ನಾಟಕದ ಖುಷಿ, ಅನರ್ಘ್ಯಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ, ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಯೂತ್ ಬಾಲಕಿಯರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು. ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಯಶಸ್ವಿನಿ ಜಿ ನಿರಾಸೆ ಅನುಭವಿಸಿದರು.

ಸೋಮವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಯಶಸ್ವಿನಿ ಘೋರ್ಪಡೆ ಮಧ್ಯಪ್ರದೇಶದ ಅನುಷಾ ವಿರುದ್ಧ ಜಯ ಸಾಧಿಸಿದರು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಅವರು ತಮಿಳುನಾಡಿನ ಯಾಶಿನಿ ಶಿವಶಂಕರ್ ಎದುರು ಗೆಲುವು ಸಾಧಿಸಿದರು. ಎರಡನೇ ಸುತ್ತಿನಲ್ಲಿ ಮಹಾರಾಷ್ಟ್ರದ ಸ್ವಸ್ತಿಕಾ ಘೋಷ್ ವಿರುದ್ಧ ಜಯ ಗಳಿಸಿದ್ದರು.

ಯಶಸ್ವಿನಿ ಘೋರ್ಪಡೆ –ಪ್ರಜಾವಾಣಿ ಸಂಗ್ರಹ ಚಿತ್ರ

ಇದೇ ವಿಭಾಗದಲ್ಲಿ ಕರ್ನಾಟಕದ ಖುಷಿ ಬಂಗಾಳದ ಪೊಯ್ಮಂತಿ ಬೈಸ್ಯ ವಿರುದ್ಧ ಎರಡನೇ ಸುತ್ತಿನಲ್ಲಿ ಸೋತು ಹೊರಬಿದ್ದರು. ಅನರ್ಘ್ಯ ತಮಿಳುನಾಡಿನ ಶ್ರುತಿ ರಾಮ್‌ಕುಮಾರ್‌ಗೆ ಮಣಿದು ಮೊದಲ ಸುತ್ತಿನಲ್ಲೇ ಹೊರ ಬಿದ್ದರು.

ಜೂನಿಯರ್ ವಿಭಾಗದಲ್ಲಿ ಯಶಸ್ವಿನಿಗೆ ನಿರಾಸೆ: ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಯಶಸ್ವಿನಿ ಜಿ. ನಿರಾಸೆ ಅನುಭವಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಹರಿಯಾಣದ ಸುಹಾನ ಸೈನಿ ವಿರುದ್ಧ ಸೋತರು. ಅನರ್ಘ್ಯ ಕೂಡ ಕ್ವಾರ್ಟರ್ ಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು. ಮಹಾರಾಷ್ಟ್ರದ ಸ್ವಸ್ತಿಕಾ ಘೋಷ್‌ಗೆ ಅವರು ಮಣಿದರು.

ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಯಶಸ್ವಿನಿ ಬಂಗಾಳದ ಮೌಳಿ ಎಂ ವಿರುದ್ಧ ಮತ್ತು ಅನರ್ಘ್ಯ ಟಿಟಿಎಫ್‌ಐನ ತ್ರಿಶಾ ವಿರುದ್ಧ ಗೆಲುವು ಸಾಧಿಸಿದರು. ಅದಿತಿ ಜೋಶಿ ಮತ್ತು ಕರುಣಾ ಕ್ರಮವಾಗಿ ದೆಹಲಿಯ ಲಕ್ಷಿತ್ ಮತ್ತು ಮಹಾರಾಷ್ಟ್ರದ ಸ್ವಸ್ತಿಕಾ ಎದುರು ಸೋತರು.

ಎರಡನೇ ಸುತ್ತಿನಲ್ಲಿ ಯಶಸ್ವಿನಿ ಮಹಾರಾಷ್ಟ್ರದ ಸಂಪದ ವಿರುದ್ಧ, ಅನರ್ಘ್ಯ ತಮಿಳುನಾಡಿನ ಶರ್ಮಿತಾ ವಿರುದ್ಧ, ಕರುಣಾ ಬಂಗಾಳದ ಸಮೃದ್ಧಿ ವಿರುದ್ಧ ಮತ್ತು ಅದಿತಿ ತೆಲಂಗಾಣದ ಇಕ್ಷಿತಾ ವಿರುದ್ಧ ಜಯ ಗಳಿಸಿದರು.

ಆಸಿಫ್ ಹ್ಯಾಟ್ರಿಕ್: ಎಂಇಜಿಗೆ ಗೆಲುವು

ಬೆಂಗಳೂರು: ಆಸಿಫ್ ಖಾನ್ ಹ್ಯಾಟ್ರಿಕ್ ಹಾಗೂ ನಿತಿನ್ ಗಳಿಸಿದ ಎರಡು ಗೋಲುಗಳು ಎಂಇಜಿ ಸೆಂಟರ್ ಎಫ್‌ಸಿ ತಂಡದ ಗೆಲುವಿಗೆ ಕಾರಣವಾದವು. ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಎಂಇಜಿ ಸೆಂಟರ್ ತಂಡವು 7–2 ಗೋಲುಗಳಿಂದ ಇನ್‌ಕಮ್ ಟ್ಯಾಕ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಆಸಿಫ್ 61, 68 ಹಾಗೂ 86ನೇ ನಿಮಿಷದಲ್ಲಿ, ನಿತಿನ್ (9 ಹಾಗೂ 65ನೇ ನಿ.), ಅಕ್ಬರ್ ಸಿದ್ದೀಕ್ (71ನೇ ನಿ.) ಹಾಗೂ ರಾಹುಲ್ ರಾಮಕೃಷ್ಣ (85ನೇ ನಿ.) ಗೋಲು ದಾಖಲಿಸಿದರು. ಇನ್‌ಕಮ್ ಟ್ಯಾಕ್ಸ್ ತಂಡದ ಅಸ್ವಿನ್ ಚುಕ್ಕುಕಾ (21ನೇ ನಿ.) ಹಾಗೂ ಮೊಹಮ್ಮದ್ ರಯಾನ್ (24ನೇ ನಿ.) ತಲಾ ಗೋಲು ಹೊಡೆದರು.

ಬೆಂಕಿಯಿಂದ ಪಾರಾಗಿ ಪದಕಕ್ಕೆ ಗುರಿ ಇಟ್ಟರು!

ಕೋಲ್ಕತ್ತ (ಪಿಟಿಐ): ಬೆಂಕಿಯಲ್ಲಿ ಉರಿದ ರೈಲಿನಲ್ಲಿ ಪ್ರಾಣ ಉಳಿಸಿಕೊಂಡ ಅವರು ಉಪಕರಣಗಳೆಲ್ಲವನ್ನೂ ಕಳೆದುಕೊಂಡಿದ್ದರು. ಆದರೂ ಛಲ ಬಿಡದೆ ಸ್ಪರ್ಧೆಯಲ್ಲಿ ಪಾಲ್ಗೊಂಡು ಪದಕಗಳನ್ನು ಗೆದ್ದುಕೊಂಡರು. ಅವರ ಧೈರ್ಯ ಮತ್ತು ಸಾಹಸವನ್ನು ಮೆಚ್ಚಿರುವ ಕ್ರೀಡಾಪ್ರೇಮಿಗಳು ಅಭಿನಂದನೆಯ ಮಳೆ ಸುರಿದಿದ್ದಾರೆ.

ಮಧ್ಯಪ್ರದೇಶದ ಜೂನಿಯರ್ ಆರ್ಚರಿಪಟುಗಳ ಯಶೋಗಾಥೆ ಇದು. ಕಳೆದ ವಾರ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಸಂಭವಿಸಿದ ಬೆಂಕಿ ದುರಂತದಲ್ಲಿ ಈ ಕ್ರೀಡಾಪಟುಗಳ ಉಪಕರಣಗಳು ಸುಟ್ಟುಹೋಗಿದ್ದವು. ಆದರೆ ಡೆಹ್ರಾಡೂನ್‌ನಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಪದಕಗಳನ್ನು ಗೆದ್ದು ಸಂಭ್ರಮಿಸಿದ್ದಾರೆ.

ಡೆಹ್ರಾಡೂನ್ ತಲುಪಲು ಒಂದು ತಾಸು ಇರುತ್ತಿದ್ದಂತೆ ರೈಲಿನ ಬೋಗಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಆತಂಕಗೊಂಡ ಕ್ರೀಡಾಪಟುಗಳು ಪಕ್ಕದ ಬೋಗಿಗೆ ತೆರಳಿದ್ದರು. ಆದರೆ ಜೊತೆಗೆ ತೆಗೆದುಕೊಂಡು ಬಂದಿದ್ದ ವಸ್ತುಗಳೆಲ್ಲ ಸುಟ್ಟು ಕರಕಲಾದವು. ಆಧಾರ್ ಕಾರ್ಡ್ ಒಳಗೊಂಡಂತೆ ಎಲ್ಲ ಪ್ರಮಾಣಪತ್ರಗಳೂ ಬೆಂಕಿಗೆ ಆಹುತಿಯಾಗಿದ್ದವು.

ಭಾನುವಾರ ನಡೆದ ಸ್ಪರ್ಧೆಗಾಗಿ ಹೊಸ ಉಪಕರಣಗಳನ್ನು ಖರೀದಿಸಲಾಯಿತು. ಹಿಂದಿನ ದಿನ ಯಾವ ಅಭ್ಯಾಸವೂ ಮಾಡಲು ಸಾಧ್ಯವಾಗಲಿಲ್ಲ. ಆದರೂ ರಿಕರ್ವ್ ವಿಭಾಗದಲ್ಲಿ ಎರಡು ಬೆಳ್ಳಿ ಮತ್ತು ಒಂದು ಕಂಚಿನ ಪದಕ, ಕಾಂಪೌಂಡ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಗೆದ್ದುಕೊಂಡರು.

ಹತ್ತನೇ ತರಗತಿಯಲ್ಲಿ ಓದುತ್ತಿರುವ ಸೋನಿಯಾ ಠಾಕೂರ್ ಮತ್ತು ಟ್ರಕ್ ಚಾಲಕನ ಮಗ ಅಮಿತ್ ಕುಮಾರ್ ಕೂಡ ತಂಡದಲ್ಲಿದ್ದರು.

ಲೋಕಸಭೆಯಲ್ಲೂ ಶಿವಸೇನಾ 'ಗಡಿ' ತಕರಾರು: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಶಿವಸೇನೆಯ ಸಾವಂತ್
- ಕರ್ನಾಟಕ ಸಂಸದರಿಂದ ತೀವ್ರ ವಿರೋಧ

ನವದೆಹಲಿ: 'ಬೆಳಗಾವಿಯಲ್ಲಿರುವ ಮರಾಠಿಗರ ರಕ್ಷಣೆಗಾಗಿ ಅಲ್ಲಿಗೆ ಸರ್ವಪಕ್ಷ ನಿಯೋಗ ತೆರಳುವ ಅಗತ್ಯವಿದೆ' ಎಂದು ಇತ್ತೀಚೆಗಷ್ಟೇ ಹೇಳಿದ್ದ ಶಿವಸೇನಾ, ಸೋಮವಾರ ಲೋಕಸಭೆಯಲ್ಲೂ ಅದೇ ವಿಷಯ ಪ್ರಸ್ತಾಪಿಸಿದ್ದು ರಾಜ್ಯದ ಸಂಸದರ ಆಕ್ರೋಶಕ್ಕೆ ಕಾರಣವಾಯಿತು.

ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಶಿವಸೇನೆಯ ಅರವಿಂದ ಸಾವಂತ್, ಬೆಳಗಾವಿಯಲ್ಲಿ ಮಾರ್ಚ್ 12ರಂದು ಪಕ್ಷದ ಜಿಲ್ಲಾ ಪ್ರಮುಖರ ಮೇಲೆ ಹಲ್ಲೆ ನಡೆದಿದೆ. ಈ ಬೆಳವಣಿಗೆಯಿಂದ ಅಲ್ಲಿನ ಮರಾಠಿಗರು ಭಯದಲ್ಲಿ ವಾಸಿಸುವಂತಾಗಿದೆ ಎಂದರು. ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯದ ಬಿಜೆಪಿ ಸದಸ್ಯರಾದ ಶಿವಕುಮಾರ ಉದಾಸಿ, ಪ್ರತಾಪಸಿಂಹ, ದೇವೇಂದ್ರಪ್ಪ ಹಾಗೂ ಸಂಗಣ್ಣ ಕರಡಿ ತೀವ್ರ ಪ್ರತಿಭಟನೆ ನಡೆಸಿದರು.

ಈಗಾಗಲೇ ಇತ್ಯರ್ಥಗೊಂಡಿರುವ ಗಡಿ ವಿಷಯ ಪ್ರಸ್ತಾಪಕ್ಕೆ ಅವಕಾಶ ನೀಡಕೂಡದು ಎಂದು ಸ್ಪೀಕರ್ ಸ್ಥಾನದಲ್ಲಿದ್ದ ಮೀನಾಕ್ಷಿ ಲೇಖಿ ಅವರನ್ನು ಆಗ್ರಹಿಸಿದರು.

ಭಾಷಾವಾರು ಪ್ರಾಂತ್ಯ ರಚನೆಗೆ ಸಂವಿಧಾನದಲ್ಲೇ ಅವಕಾಶವಿದೆ. ಅಂತೆಯೇ ಸಂಯುಕ್ತ ಮಹಾರಾಷ್ಟ್ರ ರಚನೆ ಕೋರಿ ನಡೆದ ಹೋರಾಟದಲ್ಲಿ 106 ಜನ ಮರಾಠಿ ಹೋರಾಟಗಾರರು ಪ್ರಾಣ ತ್ಯಾಗ ಮಾಡಿದ್ದಾರೆ. ಆದರೂ, ಮರಾಠಿ ಭಾಷಿಕರೇ ಬಹುಸಂಖ್ಯೆಯಲ್ಲಿರುವ ಬೆಳಗಾವಿ, ನಿಪ್ಪಾಣಿ, ಕಾರವಾರ, ಭಾಲ್ಕಿ ಮತ್ತು ಬೀದರ್‌ಗಳು ಮಹಾರಾಷ್ಟ್ರದೊಂದಿಗೆ ವಿಲೀನಗೊಂಡಿಲ್ಲ ಎಂದು ಸಾವಂತ್ ಮತ್ತೆ ದೂರಿದರು.

ಈ ವೇಳೆ ರಾಜ್ಯದ ಸದಸ್ಯರು ಪ್ರತಿಭಟನೆ ಮುಂದುವರಿಸಿದ್ದರಿಂದ ಭಾಷಣ ಮೊಟಕುಗೊಳಿಸುವಂತೆ ಸಾವಂತ್ ಅವರಿಗೆ ಸೂಚಿಸಿದ ಸ್ಪೀಕರ್, 'ನಿಮ್ಮ ಹೇಳಿಕೆ ಕಡತದಲ್ಲಿ ಸೇರಲಿದೆ. ಕರ್ನಾಟಕದ ಸದಸ್ಯರ ಹೇಳಿಕೆ ದಾಖಲಾಗುವುದಿಲ್ಲ' ಎಂದು ತಿಳಿಸಿದರು.

ಇದರಿಂದ ಕುಪಿತರಾದ ರಾಜ್ಯದ ಸದಸ್ಯರು, ಪ್ರತಿಭಟನೆಯನ್ನು ಮತ್ತಷ್ಟು ತೀವ್ರಗೊಳಿಸಿ ಘೋಷಣೆ ಕೂಗಲಾರಂಭಿಸಿದರು.

ಮಹಾಜನ್ ಆಯೋಗ ನೀಡಿರುವ ವರದಿ ಆಧರಿಸಿ 1964ರಲ್ಲೇ ಗಡಿ ಸಮಸ್ಯೆ ಇತ್ಯರ್ಥಪಡಿಸಲಾಗಿದೆ. ಆದರೂ, ಮಹಾರಾಷ್ಟ್ರದಲ್ಲಿ ದುರಾಡಳಿತ ನಡೆಸುತ್ತಿರುವ ಶಿವಸೇನಾ ನೇತೃತ್ವದ ಮೈತ್ರಿ ಸರ್ಕಾರ, ಭಾವನಾತ್ಮಕ ವಿಷಯ ಕೆದಕಿ ಜನರ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದೆ ಎಂದು ಶಿವಕುಮಾರ್ ಉದಾಸಿ ಆಕ್ರೋಶ ವ್ಯಕ್ತಪಡಿಸಿದರು.

ಬೆಳಗಾವಿಯಲ್ಲಿ ಶಿವಸೇನಾ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ ಎಂಬ ಆರೋಪದಲ್ಲಿ ಹುರುಳಿಲ್ಲ. ಒಂದೊಮ್ಮೆ ಕಾನೂನು, ಸುವ್ಯವಸ್ಥೆ ಹದಗೆಟ್ಟರೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದರು.

ಒಲಿಂಪಿಕ್ ಜ್ಯೋತಿ ಯಾತ್ರೆ 25ರಂದು ಆರಂಭ

ಟೋಕಿಯೊ (ಎಎಫ್‌ಪಿ): ಈ ವರ್ಷ ನಡೆಯಲಿರುವ ಟೋಕಿಯೊ ಒಲಿಂಪಿಕ್ಸ್‌ನ ಜ್ಯೋತಿ ಯಾತ್ರೆ ಇದೇ ತಿಂಗಳ 25ರಂದು ಫುಕುಶಿಮಾದಿಂದ ಆರಂಭಗೊಳ್ಳಲಿದೆ. ಆದರೆ ಇದರ ಉದ್ಘಾಟನಾ ಸಮಾರಂಭಕ್ಕೆ ಪ್ರೇಕ್ಷಕರಿಗೆ ಪ್ರವೇಶಾವಕಾಶ ಇಲ್ಲ ಎಂದು ಸಂಘಟಕರು ಸೋಮವಾರ ತಿಳಿಸಿದ್ದಾರೆ.

ಕಳೆದ ವರ್ಷ ನಡೆಯಬೇಕಾಗಿದ್ದ ಒಲಿಂಪಿಕ್ಸ್ ಕೂಟವನ್ನು ಕೋವಿಡ್–19ರಿಂದಾಗಿ ಈ ವರ್ಷಕ್ಕೆ ಮುಂದೂಡಲಾಗಿತ್ತು. ಜುಲೈ 23ರಂದು ಕೂಟ ಆರಂಭಗೊಳ್ಳಲಿದೆ. ಇನ್ನು ಕೂಡ ಕೋವಿಡ್ ಆತಂಕ ಇರುವುದರಿಂದ ಕೂಟದ ಸಂದರ್ಭದಲ್ಲಿ ವಿದೇಶಿ ಪ್ರೇಕ್ಷಕರಿಗೆ ಜಪಾನ್‌ಗೆ ಪ್ರವೇಶ ನೀಡಬೇಕೇ ಬೇಡವೇ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ.

1203-2021

ಸಂಕ್ಷಿಪ್ತ ಸುದ್ದಿ

ಮಾಸ್ಕ್ ಧರಿಸಲು ನಿರಾಕರಣೆ: ಬಂಧನ ವಾರಂಟ್ ಜಾರಿ

ಗಾಲ್ವೆಸ್ಟನ್ (ಅಮೆರಿಕ): ಟೆಕ್ಸಾಸ್‌ನ ಬ್ಯಾಂಕಿನಲ್ಲಿ ಮಾಸ್ಕ್ ಹಾಕಲು ನಿರಾಕರಿಸಿದ ಮಹಿಳೆಯೊಬ್ಬರ ವಿರುದ್ಧ ಪೊಲೀಸರು ಬಂಧನ ವಾರಂಟ್ ಜಾರಿ ಮಾಡಿದ್ದಾರೆ.

ಗುರುವಾರ ಗಾಲ್ವೆಸ್ಟನ್‌ನ ಬ್ಯಾಂಕ್ ಆಫ್ ಅಮೆರಿಕದಲ್ಲಿ ಮಹಿಳೆಯೊಬ್ಬರಿಗೆ ಮಾಸ್ಕ್ ಧರಿಸುವಂತೆ ಪೊಲೀಸರು ಸೂಚಿಸಿದ್ದಾರೆ. ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿದ ಮಹಿಳೆ,' ಮಾಸ್ಕ್ ಧರಿಸದಿದ್ದರೆ ಏನು ಮಾಡುತ್ತೀರಿ? ಬಂಧಿಸುತ್ತೀರಾ? ಎಂದು ಸವಾಲೆಸೆದಿದ್ದಾರೆ. ಈ ಸಂಬಂಧ ಒರೆಗಾನ್‌ನ ಗ್ರ್ಯಾಟ್ ಪಾಸ್ ನಿವಾಸಿ ಟೆರಿ ರೈಟ್ ವಿರುದ್ಧ ಬಂಧನದ ವಾರಂಟ್ ಜಾರಿ ಮಾಡಲಾಗಿದೆ. ಈ ದೃಶ್ಯ ಪೊಲೀಸರ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಬ್ಯಾಂಕ್‌ನ ವ್ಯವಸ್ಥಾಪಕ, ಮಹಿಳೆಗೆ ಮಾಸ್ಕ್ ಧರಿಸುವಂತೆ ಹೇಳಲು ಪೊಲೀಸರಿಗೆ ಸೂಚಿಸಿದ್ದರು.

ಬಿರುಗಾಳಿ: 400ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದು

ಬೀಜಿಂಗ್: ಚೀನಾದ ಉತ್ತರ ಭಾಗ ಮತ್ತು ರಾಜಧಾನಿ ಬೀಜಿಂಗ್‌ನಲ್ಲಿ ಮರಳು, ಧೂಳು ತುಂಬಿದ ಬಿರುಗಾಳಿ ಬೀಸುತ್ತಿದೆ. ಹತ್ತು ವರ್ಷಗಳಿಂದ ಈಚೆಗೆ ಈ ರೀತಿಯ ಬಿರುಗಾಳಿ ಎದ್ದಿರುವುದು ಇದೇ ಮೊದಲು. ಇದರಿಂದಾಗಿ 400ಕ್ಕೂ ಹೆಚ್ಚು ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ.

ನಗರದ ಕೇಂದ್ರ ಭಾಗದಲ್ಲಿರುವ ಎತ್ತರವಾದ ಕಟ್ಟಡಗಳಲ್ಲಿ ಧೂಳು ಮತ್ತು ಮರಳು ತುಂಬಿದೆ. ಸಂಚಾರ ದಟ್ಟಣೆಯು ಉಂಟಾಗಿತ್ತು. 'ಈ ಬಿರುಗಾಳಿಯಿಂದ 12 ಪ್ರಾಂತ್ಯಗಳ ಮೇಲೆ ಪರಿಣಾಮ ಬೀರಲಿದೆ' ಎಂದು ರಾಷ್ಟ್ರೀಯ ಹವಾಮಾನ ಕೇಂದ್ರ ಮುನ್ನೆಚ್ಚರಿಕೆ ನೀಡಿದೆ.

ಇಂಗ್ಲೆಂಡ್ ಎದುರಿನ ಟಿ20 ಸರಣಿಯ ಮೂರನೇ ಪಂದ್ಯ: ಪಂತ್, ಪಾಂಡ್ಯ ಮೇಲೆ ಕಣ್ಣು

ಭರವಸೆಯ ಭಾರತಕ್ಕೆ ಜಯದ ನಿರೀಕ್ಷೆ

ಅಹಮದಾಬಾದ್ (ಪಿಟಿಐ): ಮೊದಲ ಪಂದ್ಯದಲ್ಲಿ ಸೋಲಿನ ಆಘಾತ ಅನುಭವಿಸಿದರೂ ನಂತರ ಪುಟಿದೆದ್ದು ಗೆಲುವಿನ ಸೌಧ ಕಟ್ಟಿದ ಭಾರತ ತಂಡ ಇಂಗ್ಲೆಂಡ್ ಎದುರಿನ ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ಭರವಸೆಯಿಂದ ಕಣಕ್ಕೆ ಇಳಿಯಲಿದೆ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಭಾರತದ ಬ್ಯಾಟಿಂಗ್ ವೈಭವ ಮರುಕಳಿಸುವ ನಿರೀಕ್ಷೆ ಇದೆ.

ಮೊದಲ ಪಂದ್ಯದಲ್ಲಿ ಎಲ್ಲ ವಿಭಾಗಗಳಲ್ಲೂ ವೈಫಲ್ಯ ಕಂಡಿದ್ದ ಭಾರತ ಎಂಟು ವಿಕೆಟ್‌ಗಳಿಂದ ಸೋತಿತ್ತು. ಆದರೆ ಎರಡನೇ ಪಂದ್ಯದಲ್ಲಿ ತಿರುಗೇಟು ನೀಡಿ ಏಳು ವಿಕೆಟ್‌ಗಳ ಜಯ ಸಾಧಿಸಿತ್ತು. ಸವಾಲಿನ ಗುರಿ ಬೆನ್ನತ್ತಿದ್ದ ತಂಡಕ್ಕೆ ಪದಾರ್ಪಣೆಯಲ್ಲೇ ಮಿಂಚಿದ್ದ ಇಶಾನ್ ಕಿಶನ್ ಸುಲಭ ಗೆಲುವ ಗಳಿಸಿಕೊಟ್ಟಿದ್ದರು. ನಾಯಕ ವಿರಾಟ್ ಕೊಹ್ಲಿ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಂಡಿರುವುದರಿಂದ ತಂಡ ನಿಟ್ಟುಸಿರು ಬಿಡುವಂತಾಗಿದೆ.

ಖಾತೆ ತೆರೆಯುವ ಮೊದಲೇ ಕೆ.ಎಲ್.ರಾಹುಲ್ ಅವರ ವಿಕೆಟ್ ಕಳೆದುಕೊಂಡರೂ ಇಶಾನ್ ಕಿಶನ್ ಮತ್ತು ವಿರಾಟ್ ಕೊಹ್ಲಿ ಭರ್ಜರಿ ಜೊತೆಯಾಟದ ಮೂಲಕ ಎದುರಾಳಿ ಬೌಲರ್‌ಗಳನ್ನು ಕಂಗೆಡಿಸಿದ್ದರು. ನಿರಾಯಾಸವಾಗಿ ಬ್ಯಾಟ್ ಬೀಸಿದ ಇಶಾನ್ 32 ಎಸೆತಗಳಲ್ಲಿ 56 ರನ್ ಕಲೆ ಹಾಕಿದ್ದರು. ವಿರಾಟ್ ಕೊಹ್ಲಿ, ಅಜೇಯವಾಗಿ ಉಳಿದು ತಂಡವನ್ನು ಗೆಲುವಿನ ದಡ ಸೇರಿಸಿದ್ದರು.

ಮೊದಲ ಪಂದ್ಯದಲ್ಲಿ ಧಾರಾಳತನ ಮೆರೆದಿದ್ದ ಬೌಲರ್‌ಗಳು ಎರಡನೇ ಪಂದ್ಯದಲ್ಲಿ ಇಂಗ್ಲೆಂಡ್ ಬ್ಯಾಟ್ಸ್‌ಮನ್‌ಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದರು. 164 ರನ್‌ಗಳಿಗೆ ತಂಡವನ್ನು ಕಟ್ಟಿಹಾಕಿದ್ದರು. ಅದೇ ಸಾಮರ್ಥ್ಯವನ್ನು ಮತ್ತೊಮ್ಮೆ ಪ್ರದರ್ಶಿಸಲು

ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಬೌಲರ್‌ಗಳು ಪ್ರಯತ್ನಿಸಲಿದ್ದಾರೆ. ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಲಯ ಕಂಡುಕೊಂಡಿರುವುದು ತಂಡದ ಭರವಸೆಯನ್ನು ಇಮ್ಮಡಿಗೊಳಿಸಿದೆ.

ಶ್ರೇಯಸ್ ಅಯ್ಯರ್ ಬದಲಿಗೆ ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ಪಡೆದಿರುವ ರಿಷಭ್ ಪಂತ್ ಬ್ಯಾಟಿಂಗ್ ಇನ್ನಷ್ಟು ಕಳೆಗಟ್ಟಬೇಕಾಗಿದೆ. ಭರ್ಜರಿ ಹೊಡೆತಗಳ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಪಂತ್ ಎರಡೂ ಪಂದ್ಯಗಳಲ್ಲಿ ಉತ್ತಮ ಆರಂಭ ಕಂಡಿದ್ದಾರೆ. ಆದರೆ ದೊಡ್ಡ ಇನಿಂಗ್ಸ್ ಕಟ್ಟಲು ಸಾಧ್ಯವಾಗಲಿಲ್ಲ.

ಎರಡು ಪಂದ್ಯಗಳಲ್ಲಿ ವಿಶ್ರಾಂತಿ ನೀಡಲಾಗಿದ್ದ ರೋಹಿತ್ ಶರ್ಮಾ ಈ ಪಂದ್ಯದಲ್ಲಿ ಸ್ಥಾನ ಪಡೆಯುವ ನಿರೀಕ್ಷೆ ಇದೆ. ಇಶಾನ್ ಕಿಶನ್ ಮಿಂಚಿನ ಬ್ಯಾಟಿಂಗ್ ಮಾಡಿರುವುದರಿಂದ ರೋಹಿತ್ ಶರ್ಮಾ ಅವರಿಗಾಗಿ ಕೆ.ಎಲ್. ರಾಹುಲ್ ಬೆಂಚು ಕಾಯಬೇಕಾದೀತು. ಅವರು ಹಿಂದಿನ ಎರಡೂ ಪಂದ್ಯಗಳಲ್ಲಿ ವೈಫಲ್ಯ ಕಂಡಿದ್ದಾರೆ. ಅಕ್ಟೋಬರ್‌ನಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗೆ ಬಲಿಷ್ಠ ತಂಡ ಕಟ್ಟುವುದು ಭಾರತ ತಂಡದ ಪ್ರಮುಖ ಗುರಿಯಾಗಿರುವುದರಿಂದ ಹೆಚ್ಚಿನ ಪ್ರಯೋಗಗಳಿಗೆ ಕೈಹಾಕಲು ತಂಡದ ಆಡಳಿತ ಮುಂದಾಗಲಾರದು ಎಂದು ನಿರೀಕ್ಷಿಸಲಾಗಿದೆ.

ಇಂಗ್ಲೆಂಡ್ ಪರವಾಗಿ ಮೊದಲೆರಡು ಪಂದ್ಯಗಳಲ್ಲಿ ವಿಫಲರಾಗಿದ್ದ ಜೇಸನ್ ರಾಯ್ ಪುಟಿದೆದ್ದರೆ ಭಾರತಕ್ಕೆ ಸ್ವಲ್ಪ ಸಂಕಷ್ಟವಾಗಲಿದೆ. ಸ್ಪಿನ್ನರ್‌ಗಳಿಗೆ ಪಿಚ್ ಅನುಕೂಲ ಆಗುವ ನಿರೀಕ್ಷೆ ಇರುವುದರಿಂದ ಪಂದ್ಯ ರೋಚಕ ಕ್ಷಣಗಳಿಗೆ ಸಾಕ್ಷಿಯಾಗಲಿದೆ ಎಂಬುದು ಕ್ರಿಕೆಟ್ ಅಭಿಮಾನಿಗಳ ಅಂಬೋಣ.

ಭಾರತ ತಂಡಕ್ಕೆ ದಂಡ: ಎರಡನೇ ಟಿ20 ಪಂದ್ಯದಲ್ಲಿ ನಿಗದಿಯ ಓವರ್‌ಗಳನ್ನು ನಿರ್ಧರಿತ ಸಮಯದಲ್ಲಿ ಪೂರೈಸದ ಕಾರಣ ಭಾರತ ತಂಡಕ್ಕೆ ಐಸಿಸಿ ದಂಡ ವಿಧಿಸಿದೆ. ಆಟಗಾರರಿಗೆ ಪಂದ್ಯದ ಸಂಭಾವನೆಯಲ್ಲಿ ಶೇ. 20 ರಷ್ಟು ದಂಡ ವಿಧಿಸಲಾಗಿದೆ.

ಐಸಿಸಿ ಎಲೀಟ್ ಪ್ಯಾನೆಲ್ ಮ್ಯಾಚ್ ರೆಫರಿ ಜಾವಗಲ್ ಶ್ರೀನಾಥ್ ಈ ಶಿಕ್ಷೆ ನೀಡಿದ್ದಾರೆ. ಪಂದ್ಯ ನಿಗದಿತ ಸಮಯ ಕೊನೆಗೊಂಡಾಗ ಭಾರತ ಇನ್ನೂ ಒಂದು ಓವರ್ ಎಸೆಯುವುದು ಬಾಕಿ ಇತ್ತು.

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್.ರಾಹುಲ್, ಶಿಖರ್ ಧವನ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಯಜುವೇಂದ್ರ ಚಾಹಲ್, ಭುವನೇಶ್ವರ ಕುಮಾರ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ನವದೀಪ್ ಸೈನಿ, ದೀಪಕ್ ಚಾಹರ್, ರಾಹುಲ್ ತೆವಾಟಿಯಾ, ಇಶಾನ್ ಕಿಶನ್.

ಇಂಗ್ಲೆಂಡ್: ಏಯಾನ್ ಮಾರ್ಗನ್ (ನಾಯಕ), ಜೋಸ್ ಬಟ್ಲರ್, ಜೇಸನ್ ರಾಯ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಮೋಯಿನ್ ಅಲಿ, ಆದಿಲ್ ರಶೀದ್, ರೀಸಿ ಟೋಪ್ಲಿ, ಕ್ರಿಸ್ ಜೋರ್ಡಾನ್, ಮಾರ್ಕ್ ವುಡ್, ಸ್ಯಾಮ್ ಕರನ್, ಟಾಮ್ ಕರನ್, ಸ್ಯಾಮ್ ಬಿಲಿಂಗ್ಸ್, ಜಾನಿ ಬೆಸ್ಟೊ, ಜೋಫ್ರಾ ಆರ್ಚರ್.

ಆರಂಭ: ಸಂಜೆ 7.00

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಐಪಿಎಲ್ ಅನುಭವ ಕೈ ಹಿಡಿಯಿತು: ಕಿಶನ್

ಇಶಾನ್ ಕಿಶನ್

ಭಾನುವಾರ ರಾತ್ರಿ ನಡೆದ ಎರಡನೇ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಲು ಐಪಿಎಲ್‌ನಲ್ಲಿ ಪಡೆದಿದ್ದ ಅನುಭವ ನೆರವಾಯಿತು ಎಂದು ಇಶಾನ್ ಕಿಶನ್ ತಿಳಿಸಿದರು.

ಪಂದ್ಯಗಳಲ್ಲಿ ಸಿಕ್ಕಿದ ಅನುಭವದ ಜೊತೆಯಲ್ಲಿ, ನೆಟ್ಸ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಸಹ ಆಟಗಾರರಾದ ಟ್ರೆಂಟ್ ಬೌಲ್ಟ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರಂಥ ಅನುಭವಿಗಳ ಎಸೆತಗಳನ್ನು ಎದುರಿಸಿದ್ದರಿಂದ್ದ ಆತ್ಮಸ್ಥೈರ್ಯ ಹೆಚ್ಚಿತ್ತು. ಬೌಲ್ಟ್ ಮತ್ತು ಬೂಮ್ರಾ ಅವರ ಶಾರ್ಟ್ ಎಸೆತಗಳು ನನ್ನ ಸಾಮರ್ಥ್ಯ ಬೆಳಗಲು ನೆರವಾಗಿದ್ದವು' ಎಂದು ಕಿಶನ್ ಹೇಳಿದರು.

ಮುಂದಿನ ಪಂದ್ಯಗಳಿಗೆ ಪ್ರೇಕ್ಷಕರಿಲ್ಲ

ಅಹಮದಾಬಾದ್: ಕೋವಿಡ್–19 ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಭಾರತ ಮತ್ತು ಇಂಗ್ಲೆಂಡ್ ನಡುವಿನ ಉಳಿದ ಟಿ20 ಪಂದ್ಯಗಳಿಗೆ ಪ್ರೇಕ್ಷಕರನ್ನು ಬಿಡದೇ ಇರಲು ಗುಜರಾತ್ ಕ್ರಿಕೆಟ್ ಸಂಸ್ಥೆ ನಿರ್ಧರಿಸಿದೆ. ಸಂಸ್ಥೆಯ ಉಪಾಧ್ಯಕ್ಷ ಧನರಾಜ್ ನತ್ವಾನಿ ಸೋಮವಾರ ಈ ವಿಷಯ ತಿಳಿಸಿದ್ದಾರೆ.

'ಮಾರ್ಚ್ 16, 18 ಮತ್ತು 20ರಂದು ನಡೆಯಲಿರುವ ಪಂದ್ಯಗಳಿಗೆ ಪ್ರೇಕ್ಷಕರಿಗೆ ಪ್ರವೇಶವಿಲ್ಲ. ಈಗಾಗಲೇ ಟಿಕೆಟ್ ಖರೀದಿಸಿರುವವರಿಗೆ ಅದರ ಮೊತ್ತವನ್ನು ವಾಪಸ್ ನೀಡಲಾಗುವುದು. ಕೋವಿಡ್ ಹರಡುವುದನ್ನು ತಡೆಯಲು ಬೇಕಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದು' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ರಾಮೇಶ್ವರಿ ಮಿಂಚು: ಕರ್ನಾಟಕಕ್ಕೆ ಜಯ

ಚೆನ್ನೈ: ರಾಮೇಶ್ವರಿ ಗಾಯಕವಾಡ್ (11ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ಮಹಿಳೆಯರು ಭರ್ಜರಿ ಜಯ ಗಳಿಸಿದರು. ಇಲ್ಲಿಯ ಎಸ್‌ಆರ್‌ಎಮ್ ಕಾಲೇಜು ಕ್ರೀಡಾಂಗಣದಲ್ಲಿ ನಡೆದ ಬಿಸಿಸಿಐ ಏಕದಿನ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಸೋಮವಾರ ಮೇಘಾಲಯ ತಂಡವನ್ನು 9 ವಿಕೆಟ್‌ಗಳಿಂದ ಸೋಲಿಸಿದರು.

ರಾಮೇಶ್ವರಿ

ಸಂಕ್ಷಿಪ್ತ ಸ್ಕೋರು: ಮೇಘಾಲಯ: 33.4 ಓವರ್‌ಗಳಲ್ಲಿ 49 (ಎಲ್.ತಮಾಂಗ್ 18, ದಿಯಾಕಾ ಔಟಾಗದೆ 13; ರಾಮೇಶ್ವರಿ ಗಾಯಕವಾಡ್ 11ಕ್ಕೆ 4, ಚಂದು ವಿ. 17ಕ್ಕೆ 2, ಶುಭಾ ಎಸ್. 3ಕ್ಕೆ 1). ಕರ್ನಾಟಕ: 6 ಓವರ್‌ಗಳಲ್ಲಿ 1 ವಿಕೆಟ್‌ಗೆ 53 (ವನಿತಾ ವಿ.ಆರ್. 28, ಶುಭಾ ಎಸ್. ಔಟಾಗದೆ 21). ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ.

ರಾಷ್ಟ್ರೀಯ ಅಥ್ಲೆಟಿಕ್ಸ್: ಅನುರಾಣಿ ದಾಖಲೆ; ಪೂವಮ್ಮ ಫೈನಲ್‌ಗೆ

ಪಟಿಯಾಲ (ಪಿಟಿಐ): ಜಾವೆಲಿನ್ ಥ್ರೋ ಪಟು ಅನು ರಾಣಿ ಇಲ್ಲಿ ಸೋಮವಾರ ಆರಂಭಗೊಂಡ ಫೆಡರೇಷನ್ ಕಪ್ ರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ತಮ್ಮದೇ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಆದರೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾದರು. ಕರ್ನಾಟಕದ ಎಂ.ಆರ್. ಪೂವಮ್ಮ 400 ಮೀಟರ್ಸ್ ಓಟದಲ್ಲಿ ಫೈನಲ್ ಪ್ರವೇಶಿಸಿದರು.

63.24 ಮೀಟರ್ಸ್ ದೂರದ ಸಾಧನೆ ಮಾಡಿದ ಅನು ರಾಣಿ ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ದೋಹಾದಲ್ಲಿ 2019ರಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 62.43 ಮೀಟರ್ಸ್ ದೂರ ಎಸೆದು ಮಾಡಿದ್ದ ರಾಷ್ಟ್ರೀಯ ದಾಖಲೆಯನ್ನು ಮುರಿದರು. 64 ಮೀಟರ್ಸ್ ದೂರದ ಸಾಧನೆ ಮಾಡಿದ್ದರೆ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುತ್ತಿದ್ದರು.

ರಾಜಸ್ಥಾನದ ಸಂಜನಾ ಚೌಧರಿ (54.55 ಮೀ) ಮತ್ತು ಹರಿಯಾಣದ

ಅನು ರಾಣಿ –ರಾಯಿಟರ್ಸ್ ಚಿತ್ರ

ಕುಮಾರಿ ಶರ್ಮಿಳಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು. ರಾಣಿ ಅವರ ಅಮೋಘ ಸಾಧನೆಯ ಮೂಲಕ ಉತ್ತರ ಪ್ರದೇಶ ಮೂರು ಚಿನ್ನದ ಪದಕ ಗಳಿಸಿತು.

ಮಹಿಳೆಯರ 400 ಮೀಟರ್ಸ್ ಓಟದಲ್ಲಿ 54.34 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಎಂ.ಆರ್.ಪೂವಮ್ಮ ಎಂಟು ಮಂದಿಯನ್ನು ಒಳಗೊಂಡ ಫೈನಲ್‌ಗೆ ಲಗ್ಗೆ ಇರಿಸಿದರು.

ಗೋವಾದಲ್ಲಿ ಸೋಮವಾರ ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಟಿವಿ ನಿರೂಪಕಿ ಸಂಜನಾ ಗಣೇಶನ್ ಜೊತೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು – ಟ್ವಿಟರ್ ಚಿತ್ರ

ಟಿಟಿ: ಮಣಿಕಾ ಪರಾಭವ

ದೋಹಾ (ಪಿಟಿಐ): ಭಾರತದ ಮಣಿಕಾ ಬಾತ್ರಾ ಅವರು ವಿಶ್ವ ಸಿಂಗಲ್ಸ್ ಒಲಿಂಪಿಕ್ ಅರ್ಹತಾ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಸೋಮವಾರ ಸೋಲು ಅನುಭವಿಸಿದರು. ನಾಕೌಟ್ ಮೊದಲ ಹಂತದ ಸೆಮಿಫೈನಲ್ ಪಂದ್ಯದಲ್ಲಿ ಅವರು 11-9, 11-4, 8-11, 11-4, 11-9ರಿಂದ ಮೊನಾಕೊದ ಕ್ಸಿಯಾಂಗ್ ಯಾಂಗ್ ಎದುರು ಎಡವಿದರು.

ಅಚಂತ ಶರತ್ ಕಮಲ್ ಹಾಗೂ ಜಿ.ಸತ್ಯನ್ ಅವರು ಭಾನುವಾರ ಎರಡನೇ ಸುತ್ತಿನಲ್ಲೇ ಸೋತಿದ್ದರು. ಭಾರತದ ಟಿಟಿ ಆಟಗಾರರು ದೋಹಾದಲ್ಲಿ ಮಾರ್ಚ್ 18ರಿಂದ ನಡೆಯಲಿರುವ ಏಷ್ಯನ್ ಒಲಿಂಪಿಕ್ ಅರ್ಹತಾ ಟೂರ್ನಿಯೆಡೆಗೆ ತಮ್ಮ ಗಮನಹರಿಸಲಿದ್ದಾರೆ.

ಕೋಲ್ಕತ್ತ ರೇಸ್

'ಟಾಸ್ಚ್' ಗೆಲ್ಲುವ ನಿರೀಕ್ಷೆ

'ಗುಡ್ ಫೆಲ್ಲಾಸ್ ಹ್ಯಾಂಡಿಕ್ಯಾಪ್' ಮಂಗಳವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು 'ಟಾಸ್ಚ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬಲೇರಿಯನ್ 1, ಬಡ್ಡಿಹೋಲ್ಲಿ 6, ಜೋಡಿಯಾಕ್ ಪ್ರಿನ್ಸ್ 3
2ನೇ ರೇಸ್: ಎಂಬರ್ ಗ್ಲೋ 4, ವಾಂಡರಿಂಗ್ ಏಂಜಲ್ 5, ಗೋಲ್ಡ್ ರೇ 8
3ನೇ ರೇಸ್: ಅಪ್ರಿಸಿಯೇಟ್ 4, ಯುವಿ 3, ಅನೀಸ್ ಬಾಯ್ 1
4ನೇ ರೇಸ್: ಬಿಯೊವುಲ್ಫ್ 8, ಸಿರೊನಾ 6, ನಂದಿನೀಸ್ ಪೆಟ್ 4
5ನೇ ರೇಸ್: ಗೌರೀಶ್ 3, ಶಿಮ್ಮರಿಂಗ್ ಸ್ಟಾರ್ 4, ನಮಕ್ ಹಲಾಲ್ 2
6ನೇ ರೇಸ್: ಟಾಸ್ಚ್ 3, ಕೋರ್ಟ್ ಜೆಸ್ಟರ್ 2, ಆಟಮ್ 4
7ನೇ ರೇಸ್: ಪೋರ್ಟ್ ಆಫ್ ಸ್ಪೇನ್ 3, ಕಮ್ಯೂನಿಕ್ 2, ಈಸ್ಟರ್ನ್ ಕ್ರೌನ್ 6

ಉತ್ತಮ ಬೆಟ್: ಪೋರ್ಟ್ ಆಫ್ ಸ್ಪೇನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್‌ಗೆ
3,4,5,6,7	2,3,4	5,6,7